ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಲಾದ ಮಹಾಪ್ರಬಂಧ)

ಸಂಶೋಧಕರು
ಗೋಪಾಲಕೃಷ್ಣ ಡಿ. ರಾಯ್ಕರ

ಮಾರ್ಗದರ್ಶಕರು
ಡಾ॥ ಕೆ.ಜಿ.ಖರ್ಸೂರಿ
ಸಹಪ್ರಾಧ್ಯಾಪಕರು (ನಿವೃತ್ತ)

ಸಮಾಜ ವಿಜ್ಞಾನಗಳ ನಿಕಾಯ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೭

ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಗೋಪಾಲಕೃಷ್ಣ ಡಿ. ರಾಯ್ಕರ

ಮಾರ್ಗದರ್ಶಕರು

ಡಾ|| ಕೆ.ಜಿ.ಭಟ್‌ಸೂರಿ

ಸಹಪ್ರಾಧ್ಯಾಪಕರು (ನಿವೃತ್ತ)

ಸಮಾಜ ವಿಜ್ಞಾನಗಳ ನಿಕಾಯ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩೨೭೬

೨೦೧೨

ಪ್ರಮಾಣಪತ್ರ

ಗೋಪಾಲಕೃಷ್ಣ ಡಿ. ರಾಯ್ಕರ ಅವರ **"ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು"** ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಪಿಎಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಹಂಪಿ, ವಿದ್ಯಾರಣ್ಯ
ದಿನಾಂಕ:

ಕೆ. ಜಿ. ಭಟ್‌ಸೂರಿ
(ಮಾರ್ಗದರ್ಶಕರು)
ಸಹ ಪ್ರಾಧ್ಯಾಪಕರು (ನಿವೃತ್ತ)
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

ಘೋಷಣಾ ಪ್ರಮಾಣ ಪತ್ರ

"ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು" ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ ಪದವಿಗಾಗಿ ಡಾ॥ಕೆ.ಜಿ.ಭಟ್‌ಸೂರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನುಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಹಂಪಿ, ವಿದ್ಯಾರಣ್ಯ
ದಿನಾಂಕ: 31-08-2017

ಗೋಪಾಲಕೃಷ್ಣ ಡಿ. ರಾಯ್ಕರ
ಸಂಶೋಧನಾ ವಿದ್ಯಾರ್ಥಿ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – ೫೮೩೨೭೬

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

೧.೧ ಪೀಠಿಕೆ

ಭಾರತದ ಇತಿಹಾಸದಲ್ಲಿ ಕರ್ನಾಟಕದ ಸಂಸ್ಕೃತಿಗೆ ವಿಶಿಷ್ಟ ಸ್ಥಾನ ಇದೆ. ಕರ್ನಾಟಕ ರಾಜ್ಯದ ೩೦ ಜಿಲ್ಲೆಗಳಲ್ಲಿ ಉತ್ತರಕನ್ನಡ ಜಿಲ್ಲೆಯೂ ಒಂದು. ಈ ಜಿಲ್ಲೆ ೧೧ ತಾಲೂಕುಗಳನ್ನು ಒಳಗೊಂಡಿದ್ದು ಅದರಲ್ಲಿ ಐದು ಕರಾವಳಿ, ಆರು ಘಟ್ಟದ ಮೇಲಿನ ತಾಲೂಕುಗಳಾಗಿವೆ. ಉತ್ತರಕನ್ನಡಜಿಲ್ಲೆಯ ಭೌಗೋಳಿಕ ಪರಿಸರವುಸಹ್ಯಾದ್ರಿಯ ದಟ್ಟಕಾಡುಗಳು, ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ನದಿಗಳು, ಹಾಗೂ ಕಡಲತೀರಗಳಿಂದ ಕೂಡಿದೆ. ಪಶ್ಚಿಮಘಟ್ಟದ ಮಲೆನಾಡಿನ ದಟ್ಟಕಾಡುಗಳು ಜೀವ ವೈವಿಧ್ಯಕ್ಕೆ, ವೃಕ್ಷ ವಿಶೇಷಗಳಿಗೆ ತವರಾದರೆ, ಇಲ್ಲಿಯ ನದಿಗಳಾದ ಅಘನಾಶಿನಿ, ವರದಾ, ಧರ್ಮಾ ನದಿಗಳಬಯಲುಗಳು ಫಲವತ್ತಾದ ಪ್ರದೇಶಗಳಾಗಿವೆ. ಕಾಳಿ ನದಿ ಜಲವಿದ್ಯುತ್ ಯೋಜನೆಗೆ ಹೆಸರಾಗಿದೆ. ಪಶ್ಚಿಮ ಕರಾವಳಿಯ ತೀರವು ನೈಸರ್ಗಿಕ ಬಂದರುಗಳಿಂದ ಕೂಡಿದ್ದು ಮತ್ಸ್ಯ ಉಪ್ಪು ಉದ್ಯಮಗಳಿಗೆ ಹೆಸರಾಗಿದೆ. ಭತ್ತ ತೆಂಗು, ಬಾಳೆ, ಅಡಿಕೆ ಯಾಲಕ್ಕಿ, ಕಾಳುಮೆಣಸು, ಗೊಡಂಬಿ ಇಲ್ಲಿಯ ಪ್ರಮುಖ ಆರ್ಥಿಕ ಹಾಗೂ ಆಹಾರ ಬೆಳೆಗಳಾಗಿವೆ.

ಉತ್ತರ ಕನ್ನಡ ಜಿಲ್ಲೆಯು ಉತ್ತರಕ್ಕೆ ಬೆಳಗಾಂ ಜಿಲ್ಲೆ ಮತ್ತು ಗೋವಾರಾಜ್ಯ, ಪೂರ್ವಕ್ಕೆ ಧಾರವಾಡ ಜಿಲ್ಲೆ, ದಕ್ಷಿಣದಲ್ಲಿ ದಕ್ಷಿಣಕನ್ನಡ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆ ಮತ್ತು ಅರಬ್ಬಿಸಮುದ್ರದಿಂದ ಸುತ್ತುವರಿದಿದೆ. ಈ ಜಿಲ್ಲೆಯ ಘಟ್ಟದ ಮೇಲಿನ ತಾಲೂಕುಗಳೆಂದರೆ ಶಿರಸಿ ಸಿದ್ಧಾಪುರ, ಯಲ್ಲಾಪುರ, ಮುಂಡಗೋಡ, ಹಳಿಯಾಳ, ಮತ್ತು ಸುಪಾ (ಜೋಯಿಡಾ)ಗಳಾದರೆ, ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಹಾಗೂ ಭಟ್ಕಳ ತಾಲೂಕುಗಳು ಕರಾವಳಿ ಪ್ರದೇಶದ ತಾಲೂಕುಗಳಾಗಿವೆ.

ಉತ್ತರಕನ್ನಡ ಜಿಲ್ಲೆಯ ಇತಿಹಾಸ ಗಮನಿಸಿದಾಗ ಇಲ್ಲಿ ನವಶಿಲಾಯುಗದ ಅವಶೇಷಗಳು ದೊರೆತಿವೆ. ಅಂಕೋಲಾ ತಾಲೂಕಿನ ಕಂಚಿನಬೈಲ, ಬೇಲೆಕೇರಿ, ಬೋಳೆ, ಬಾವಿಕೇರಿ, ಪ್ರದೇಶಗಳಲ್ಲಿ ಶಿಲೋಪಕರಣಗಳು ದೊರೆತಿದ್ದು ಇವುಗಳನ್ನು ಹಾಲ್ಗಲ್ಲಿನಲ್ಲಿ ರೂಪಿಸಲಾಗಿದೆ. ಇವು ನೀಳಚೆಕ್ಕೆ. ಹೆರಚೆಕ್ಕೆ ಮತ್ತು ಮೊನೆ ಮಾದರಿಯಲ್ಲಿವೆ.[೧] ಕುಮಟಾ ತಾಲೂಕಿನ ನೀಲಕೋಡ[೨], ಮಿರ್ಜಾನ[೩], ಹರ್ನೀತ್[೪]ದಲ್ಲಿ ನವಶಿಲಾಯುಗದ ಅವಶೇಷಗಳು ಕಂಡು ಬಂದಿದ್ದು ನೀಳಚೆಕ್ಕೆ, ಹೆರೆಚೆಕ್ಕೆ ಹಾಗೂ ಮೊನೆ ಮಾದರಿಗಳಾಗಿವೆ. ನೂತನ ಶಿಲಾಯುಗದ ಸಂಸ್ಕೃತಿಯ ಮೃತ್ ಪಾತ್ರೆಗಳು ಗೋಕರ್ಣದ ಪರಶುರಾಮ ತೀರ್ಥದ ಶಿಲಾಗವಿ ರಾಮತೀರ್ಥದ ಬಳಿ ಕಂಡು ಬಂದಿವೆ.[೫] ಕಾರವಾರ ತಾಲೂಕಿನ ಅಸ್ನದಲ್ಲಿ ನೂತನ

ಶಿಲಾಯುಗದ ಅವಶೇಷಗಳು ದೊರೆತಿವೆ.[೬] ಸುಂಕೇರಿಯಲ್ಲಿ ಹಳೆಯ, ಆದಿ ಶಿಲಾಯುಗದ ಅವಶೇಷಗಳು ದೊರೆತಿವೆ.[೭] ಮುಂಡಗೋಡ ತಾಲೂಕಿನ ಇಂದೂರನಲ್ಲಿ[೮] ಇತಿಹಾಸ ಆರಂಭಯುಗ ಮತ್ತು ಸಿದ್ಧಾಪುರ ತಾಲೂಕಿನ ಕಿಲಾರ ಮತ್ತು ಶಿರಳಿಗೆಯಲ್ಲಿ ಬೃಹತ ಶಿಲಾಯುಗದ ಅವಶೇಷಗಳು ದೊರೆತಿವೆ.[೯] ಶಿರಸಿ ತಾಲೂಕಿನ ಕಡಗೋಡ ಇತಿಹಾಸ ಆರಂಭಯುಗ, ಕಂತ್ರಾಜಿಯಲ್ಲಿ[೧೦] ಬೃಹತ ಶಿಲಾಯುಗ, ಗುಡ್ನಾಪುರ, ನರೂರ, ಬನವಾಸಿಗಳಲ್ಲಿ[೧೧], ಇತಿಹಾಸ ಆರಂಭಯುಗ ಮುತ್ತಲ್‌ಕೊಪ್ಪಿಯಲ್ಲಿ[೧೨] ಬೃಹತ ಶಿಲಾಯುಗ, ಮುಂಡಗೆಹಳ್ಳಿಗಳಲ್ಲಿ[೧೩] ಸೂಕ್ಷ್ಮ ಶಿಲಾಯುಗ, ಶಿರಸಿಯಲ್ಲಿ[೧೪] ಬೃಹತ ಶಿಲಾಯುಗ ಅವಶೇಷಗಳು ದೊರೆತಿವೆ. ಸೂಪಾ ತಾಲೂಕಿನ ಅನಮೋಡ[೧೫] ಶಿರಪುರದಲ್ಲಿ ನೂತನ ಶಿಲಾಯುಗದ ಅವಶೇಷಗಳು ದೊರೆತಿವೆ[೧೬] ಹಳಿಯಾಳ ತಾಲೂಕಿನ ದಾಂಡೇಲಿಯಲ್ಲಿ ಬೃಹತ ಶಿಲಾಯುಗದ ಅವಶೇಷಗಳು ದೊರೆತಿವೆ[೧೭] ಹೊನ್ನಾವರ ತಾಲೂಕಿನಲ್ಲೂ ನೂತನ ಶಿಲಾಯುಗ ಅವಶೇಷಗಳು ದೊರೆತಿವೆ[೧೮]. ಇದನ್ನು ಗಮನಿಸಿದಾಗ ಕುಮಟಾ ತಾಲೂಕಿನ ಸುತ್ತಲಿನ ತಾಲೂಕುಗಳಲ್ಲಿ ಅಂದರೆ ಒಟ್ಟಾರೆ ಉತ್ತರಕನ್ನಡ ಜಿಲ್ಲೆಯಲ್ಲಿ ಸುಮಾರು ೫೦,೦೦೦ ವರ್ಷದ ಹಿಂದೆ ಮಾನವ ಸಂಸ್ಕೃತಿಯು ಆರಂಭಗೊಂಡಿತ್ತೆಂದು ತಿಳಿಯುತ್ತದೆ.

ಬನವಾಸಿಯ ಪ್ರಾಚೀನ ಕೋಟೆ ಕ್ರಿಸ್ತಶಕದ ಆರಂಭದ ಕಾಲದಲ್ಲಿನ ರಕ್ಷಣಾ ವಾಸ್ತುಶಿಲ್ಪಕ್ಕೆ ಮಾದರಿಯಾಗಿದೆ. ನಿಖರವಾಗಿ ಜಿಲ್ಲೆಯ ಐತಿಹಾಸಿಕ ಕಾಲವು ಮೌರ್ಯರ ಕಾಲದಲ್ಲಿ ಧರ್ಮ ಪ್ರಚಾರದ ಮೂಲಕ ಆರಂಭವಾದಂತೆ ಅನಿಸುತ್ತದೆ. ಅಶೋಕನು ಬೌದ್ಧಧರ್ಮ ಪ್ರಸಾರಕ್ಕಾಗಿ ಥೇರಮಹಾದೇವ ಮತ್ತು ಥೇರರಖ್ಖಿತ (ರಕ್ಷಿತ)ರನ್ನು ಬನವಾಸಿಗೆ ಕಳುಹಿಸಿದನು.[೧೯] ಅಂದು ಬನವಾಸಿ ಬೌದ್ಧಕೇಂದ್ರವಾಗಿತ್ತು. ಬನವಾಸಿಯಲ್ಲಿ ಸಿಗುತ್ತಿರುವ ಸಿಕ್ಕಿರುವ ಬೌದ್ಧ ಅವಶೇಷಗಳು, ಸ್ತೂಪಗಳೂ, ಅದೊಂದು ಪ್ರಮುಖ ಬೌದ್ಧ ಕೇಂದ್ರವಾಗಿರುವದನ್ನು ಧೃಡಪಡಿಸುತ್ತವೆ. ಘಟ್ಟದ ಕೆಳಗಿನ ಕಾರವಾರ, ಕುಮಟಾ, ಹೊನ್ನಾವರ, ಭಟ್ಕಳ ತಾಲೂಕುಗಳು ಸಹ ಪ್ರಾಚೀನ ಇತಿಹಾಸವನ್ನು ಹೊಂದಿವೆ. ಗೋಕರ್ಣ ಮತ್ತು ಇಡಗುಂಜಿಯ ದ್ವಿಭುಜ ಗಣಪತಿ ಮೂರ್ತಿಗಳು ಕ್ರಿ.ಶ ೨-೩ನೇ ಶತಮಾನಕ್ಕೆ ಸೇರಿದ್ದವೆಂದು ಅ. ಸುಂದರರವರು ಅಭಿಪ್ರಾಯಪಟ್ಟಿದ್ದಾರೆ[೨೦]. ಗೋಕರ್ಣದ ಮಹಾಬಲೇಶ್ವರ ದೇವಾಲಯ ಪ್ರಾಚೀನ ಐತಿಹ್ಯಗಳನ್ನು ಹೊಂದಿದೆ. ಬಾಡಾ, ಹೆಗಡೆ, ಕುಮಟಾ, ಸಂಡಳ್ಳಿ, ಕತಗಾಲ, ದೇವಾಲಯಗಳಲ್ಲಿರುವ ಮಹಿಷಾಸುರ ಮರ್ದಿನಿಯ ಮೂರ್ತಿಗಳು ವಿಜಯನಗರ ಕಾಲಕ್ಕೆ ಸೇರುತ್ತವೆ. ಕಾರವಾರ ತಾಲೂಕಿನ ಸಿದ್ದರದಲ್ಲಿನ ನರಸಿಂಹ ವನದಲ್ಲಿ ಸ್ಥಾಪಿತವಾಗಿರುವ ದ್ವಿಭುಜ ನರಸಿಂಹ, ಮತ್ತು ಭಟ್ಕಳ ತಾಲೂಕಿನ ಶಿರಾಲಿ ಗ್ರಾಮದ ಚಿತ್ರಾಪುರ ಮಠದ ವಸ್ತು ಸಂಗ್ರಹಾಲಯದಲ್ಲಿರುವ ದ್ವಿಭುಜ ಕೊಂತಪಾಲ ವಿಷ್ಣು, ಕ್ರಿ.ಶಕ ೫-೬ನೇ ಶತಮಾನಕ್ಕೆ ಸೇರುತ್ತವೆ[೨೧] ವೈಷ್ಣವ ಶಿಲ್ಪಗಳ ಲಭ್ಯತೆಯಿಂದ ಈ ಪ್ರದೇಶದಲ್ಲಿ ಈ ಕಾಲದಲ್ಲಿ ವೈಷ್ಣವ ಮತವು ಪ್ರಾಚೀನ ಕಾಲದಲ್ಲೂ ಇತ್ತೆಂಬುದು ಸ್ಪಷ್ಟವಾಗುತ್ತದೆ.

ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಪುರಾಣಕಾಲದಿಂದಲೂ ಈ ಪ್ರದೇಶ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ರಾಮಾಯಣದಲ್ಲಿ ಉಲ್ಲೇಖಿಸಿದಂತೆ ರಾವಣನು ಈ ಪ್ರದೇಶದ ಮೂಲಕ ಲಂಕೆಗೆ ಹೋಗಿದ್ದನೆಂಬ ಪ್ರತೀತಿ ಇದೆ. ಮಹಾಭಾರತದಲ್ಲಿ ಗೋಕರ್ಣವನ್ನು ವಿಖ್ಯಾತವಾದ ಕ್ಷೇತ್ರವೆಂದು ಹೇಳಲಾಗಿದೆ. ಜನಸಾಮಾನ್ಯರು, ಸಾಮಂತಾಧಿಕಾರಿಗಳು, ಆಡಳಿತ ಹಿರಿಯ ಅಧಿಕಾರಿಗಳು, ಮುಂದಾಳುಗಳು, ಒಂದಿಲ್ಲೊಂದು ತೆರನಾಗಿ ಪ್ರಾಂತ್ಯದ ಆರ್ಥಿಕ ಏಳಿಗೆಗಾಗಿ ಶ್ರಮಿಸಿದರು. ಇದಕ್ಕೆ ಸಾಕ್ಷಿಯೆಂಬಂತೆ ಅಂದಿನ ಕಾಲದ ಅನೇಕ ದೇವಾಲಯಗಳು ಹಾಗೂ ಅವುಗಳ ಭಗ್ನಾವಶೇಷಗಳು ಇಂದಿಗೂ ಇರುವುದು ಕಂಡು ಬರುತ್ತವೆ. ಗಾಣಪತ್ಯ ಪಂಥದ ಅತೀ ಪ್ರಾಚೀನ ಕುರುಹು ಗೋಕರ್ಣದಲ್ಲಿಯ (ದ್ವಿಬಾಹು) ಗಣೇಶ ಶಿಲ್ಪವಾಗಿದೆ.[೨೨] ವೈಷ್ಣವ, ಶೈವ, ಮತಗಳೊಂದಿಗೆ ಬೌದ್ಧ, ಜೈನ, ಮತವು ಕೂಡ ಈ ಪರಿಸರದಲ್ಲಿ ಇಲ್ಲಿ ಸಾಕಷ್ಟು ಪ್ರಾಬಲ್ಯಪಡೆದಿತ್ತು.

೧.೨ ಪೂರ್ವಾಧ್ಯಯನಗಳ ಸಮೀಕ್ಷೆ

ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಯಬೇಕಾದರೆ ಆ ಪ್ರದೇಶದಲ್ಲಿ ನಡೆದಿರುವ ಪೂರ್ವಾಧ್ಯಯನಗಳಸಮೀಕ್ಷೆ ನಡೆಸುವುದು ಅವಶ್ಯಕ. ಪೂರ್ವಾಧ್ಯಯನಗಳನ್ನು ಪೂರಕವಾಗಿಟ್ಟುಕೊಂಡು ಅವುಗಳ ಆಧಾರದಲ್ಲಿ ಕ್ಷೇತ್ರ ಕಾರ್ಯ ಮಾಡಿ ಪ್ರಕಟಿತ, ಅಪ್ರಕಟಿತ ಮಾಹಿತಿಗಳನ್ನು ಒಂದೆಡೆ ಸೆರೆಹಿಡಿಯಲಾಗಿದೆ. ಈ ಹಿನ್ನೆಲೆಯಲ್ಲಿ ಕುಮಟಾ ತಾಲೂಕಿಗೆ ಸೀಮಿತವಾಗಿರುವ ಈಗಾಗಲೇ ಪ್ರಕಟವಾಗಿರುವ ಸಂಶೋಧನಾ ಕೃತಿಗಳು, ಪ್ರಬಂಧಗಳು, ಮತ್ತು ಲೇಖನಗಳನ್ನು ಅವಲೋಕನ ಮಾಡುವ ಪ್ರಯತ್ನ ಮಾಡಲಾಗಿದೆ.

೧.೨.೧ ಸಂಶೋಧನಾ ಕೃತಿಗಳು

ವೆಂಕಟರಂಗೊ ಕಟ್ಟಿರವರ[೨೩] 'ಇಂಪಿರಿಯಲ್ ಗ್ಯಾಜಿಟಿಯರ ಆಫ್ ಬಾಂಬೆ ಪ್ರಾವಿನ್ಸ್ ಕೆನರ' ಸಂಪುಟ ಎರಡು ಪ್ರಕಟವಾಯಿತು. ಇದರಲ್ಲಿ ಕೆನರಾ ಪ್ರದೇಶದ ಇತಿಹಾಸದ ಕುರಿತಿದೆ. ಸದಾನಂದ ನಾಯಕರವರ[೨೪] ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆಕೃತಿ ಈ ಪ್ರದೇಶದ ಇತಿಹಾಸ ತಿಳಿಸುತ್ತದೆ. ಸೂರ್ಯನಾಥ ಕಾಮತರವರ[೨೫] ಉತ್ತರ ಕನ್ನಡ ಡಿಸ್ಟ್ರಿಕ್ಟ ಗ್ಯಾಜಿಟಿಯರನಲ್ಲಿ ಈ ಪ್ರದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಪರಿಸ್ಥಿತಿಯನ್ನು ದಾಖಲಿಸಲಾಗಿದೆ. ಆರ್.ಎನ್.ಗುರವರವರ[೨೬] "ಕಾರವಾರ ಜಿಲ್ಲೆಯ ಶಾಸನಗಳು" ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯ ರಾಜಮನೆತನ, ಮತ್ತು ಶಾಸನಗಳ ಬಗ್ಗೆ ಕಿರುಚಿತ್ರಣವಿದೆ. ಶಾನಭಾಗ ಎಂ. ಆರ್ ರವರ[೨೭] ಉತ್ತರ ಕನ್ನಡದ ಜಿಲ್ಲಾ ದೇವಾಲಯಗಳು ಕೃತಿಯಲ್ಲಿ ಉತ್ತರಕನ್ನಡ ಜಿಲ್ಲೆಯ ದೇವಾಲಯಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಇದೆ. ಕೆ.ಜಿ. ಭಟಸೂರಿ[೨೮] ರವರ ಧಾರನಾಥ ದೇವಾಲಯ ಧಾರೇಶ್ವರ ಕೃತಿಯಲ್ಲಿ, ಆದಿಧಾರೇಶ್ವರ ಮತ್ತು ಧಾರೇಶ್ವರ ದೇವಾಲಯಗಳ ವಾಸ್ತು ಮೂರ್ತಿಶಿಲ್ಪ ಅಲ್ಲಿಯ ಶಾಸನಗಳ ಪತ್ಯ ಮತ್ತು

ಸಾರಾಂಶ ಅಳವಡಿಸಿದೆ. ಕೆಳದಿ ಗುಂಡಾಜೋಯಿಸ ಮತ್ತು ವೆಂಕಟೇಶ ಜೋಯಿಸರವರ[೨೯] ಕೆಳದಿ ವಸ್ತು ಸಂಗ್ರಾಹಾಲಯದಲ್ಲಿರುವ ಗೋಕರ್ಣ ಇತಿಹಾಸ ಶಾಸನ ಭಾಗ–೧ ಕೃತಿಯಲ್ಲಿ (೧ರಿಂದ ೧೦೦) ಮತ್ತು ಕೆಳದಿ ವಸ್ತು ಸಂಗ್ರಾಹಾಲಯದಲ್ಲಿರುವ ಗೋಕರ್ಣ ಇತಿಹಾಸ ಶಾಸನ ಭಾಗ–೨, ಇದರಲ್ಲಿ (೧೦೧ ರಿಂದ ೨೦೫) ಗೋಕರ್ಣದ (ಮೆಕೆಂಜಿ ಸಂಗ್ರಹ) ಶಾಸನಗಳನ್ನು ಪ್ರಕಟಿಸಿದ್ದಾರೆ. ಗಣಪತಿ ಗೌಡ ಎಸ್‌ರವರ[೩೦] ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರ ಕೃತಿ ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು ಇತಿಹಾಸ ತಿಳಿದುಕೊಳ್ಳಲು ಸಹಾಯಕವಾಗಿದೆ.

ಕರ್ನಾಟಕ ಇನ್ಸ್‌ಕ್ರಿಪಶನ್ಸ ಸಂ. VI, ಇದರಲ್ಲಿ ಗೋಕರ್ಣದಲ್ಲಿ ರಘುನಾಥ ದೇವಾಲಯ, ಮಠ ಕಟ್ಟಿದ ಬಗ್ಗೆ ನಂದಾದೀಪ ಅಮೃತಪಡಿಗೆ ದಾನ ನೀಡಿದ್ದನ್ನು ಶಾಸನದಲ್ಲಿ ಉಲ್ಲೇಖಿಸಿದೆ. ಕರ್ನಾಟಕ ಭಾರತಿ VIII/3 ಇದರಲ್ಲೂ ಕುಮಟಾ ತಾಲೂಕಿನ ಗಣಪತಿ ಮೂರ್ತಿಶಿಲ್ಪದ ವಿವರಣೆ ಇದೆ.[೩೧]

೧.೨.೨ ಐತಿಹ್ಯಗಳು

ವಿ.ಎಸ್ ಕಾಮತರವರ[೩೨] "ಕಾಂಚಿಕಾಂಬ ಸ್ಥಳ" ಪುರಾಣ ಕೃತಿಯಲ್ಲಿ ಸಹಸ್ರಾರು ವರ್ಷಗಳ ಪೂರ್ವದಲ್ಲಿ ಗೋಕರ್ಣ ಮಂಡಲದ ಅರಸನಾದ ಕಲಭ, ಚಾಕ್ರಯಾಣಿ ಋಷಿಗಳ ಆದೇಶದಂತೆ ಮಹಿಷಮರ್ದಿನಿಯ ಮೂರ್ತಿಯನ್ನು ಕಂಚಿ ದೇಶದಿಂದ ತಂದು ಪ್ರತಿಷ್ಠಾಪಿಸಿದ ಪ್ರಯುಕ್ತ ಕಾಂಚಿಕಾಂಬಾ ಹೆಸರು ಬಂದಿತೆಂದಿದೆ. ಈ ಕೃತಿಯು ಕಾಂಚಿಕಾ ಪರಮೇಶ್ವರಿ ಮೂರ್ತಿ ಪ್ರತಿಷ್ಠಾಪನೆ, ದೇವಾಲಯ ನಿರ್ಮಾಣದ ಕುರಿತು ಮಾಹಿತಿ ನೀಡುತ್ತದೆ. ಗಣಪತಿ ದತ್ತಾತ್ರಯ ಭಟ್‌ರವರು[೩೩] ರಚಿಸಿದ ಕೃತಿ "ಕುಂಭೇಶ್ವರ ಪುರಾಣ"ದಲ್ಲಿ ಈ ಪ್ರದೇಶವನ್ನು ಹುಂಡ ದೈತನ ಮಗನಾದ ಕುಂಭಾಸುರನು ಆಳುತ್ತಿದ್ದು ಬ್ರಹ್ಮನಿಂದ ಪಡೆದ ವರಬಲದಿಂದಾಗಿ ದೇವತೆಗಳನ್ನು ಪೀಡಿಸಿದನು ಆಗ ದೇವತೆಗಳು ಉದ್ದಾಲಕ ಋಷಿಯ ಮಾರ್ಗದರ್ಶನದಂತೆ ಲಿಂಗರೂಪಿಯಾದ ದೇವಿಯನ್ನು ಸ್ತುತಿಸಿದರು. ದೇವಿಯು ಪ್ರತ್ಯಕ್ಷಗೊಂಡು ಕುಂಭಾಸುರನನ್ನು ವಧಿಸಿ ಲಿಂಗದಲ್ಲಿ ಲೀನಳಾದಳು ಅಂದಿನಿಂದ ಆಲಿಂಗವೇ ಕುಂಭೇಶ್ವರ ಊರಾಗಿ "ಕುಂಬಾಪುರವಾಗಿ" ಎಂದು ಪ್ರಸಿದ್ಧಿ ಹೊಂದಿತು. ಅಚ್ಯುತ ಶ್ರೀಧರ ಕಾಮತರವರ[೩೪] "ಶ್ರೀ ದೇವಕಿಕೃಷ್ಣ ಸಂಸ್ಥಾನದ ಚರಿತ್ರೆ", ಗ್ರಂಥದಲ್ಲಿ ದೇವಕಿಕೃಷ್ಣ ದೇವರು ಮತ್ತು ಪರಿವಾರ ದೇವರುಗಳ ಪ್ರತಿಷ್ಠಾಪನೆ ಬಗ್ಗೆ ಮಾಹಿತಿ ನೀಡಿದ್ದಾರೆ. ಮಂಜುನಾಥ ಭಾಗವತ ಹೊಸ್ತೋಟರವರು[೩೫] ರಚಿಸಿದ "ಭೈರವ ಕ್ಷೇತ್ರ ಯಾಣ" ಕೃತಿಯಲ್ಲಿ ಮಾಯವತಿಯ ಮಕ್ಕಳಾದ ಕೃಷ್ಣಾಕ್ಷ ಮತ್ತು ರಕ್ತಾಕ್ಷರು ಬ್ರಹ್ಮದೇವನನ್ನು ಭಜಿಸಿ ವರವನ್ನು ಪಡೆದರು. ಕೃಷ್ಣಾಕ್ಷನು ತನ್ನಂತೆಯೆ ಇರುವ ವೀರ ಹುಟ್ಟಿ ಬರಲಿ ಎಂಬ ವರವನ್ನು, ರಕ್ತಾಕ್ಷನು ತನಗೆ ಪುರುಷರಿಂದ ಮರಣ ಬರದಿರಲಿ ಎಂಬ ವರವನ್ನು ಪಡೆದನು. ನಂತರ ಅವರಿಬ್ಬರೂ ಕೌಸ್ತುಭರತ್ನವನ್ನು ಪಡೆಯಬೇಕೆಂದು ವೈಕುಂಠಕ್ಕೆ ಹೋಗಿ ಅಲ್ಲಿ ದೇವತೆಗಳಿಗೂ ಋಷಿಗಳಿಗೂ

ತೊಂದರೆಯನ್ನು ನೀಡಿದರು. ನಂತರ ಕೃಷ್ಣಾಕ್ಷನು ಭೂಮಿಗೆ ಧುಮುಕಿ ರುದ್ರನ ಮೇಲೆ ಗಧಾಪ್ರಹಾರ ಮಾಡಿದನು. ಆಗ ಶಿವನು ಭೈರವಾಕಾರ ತಾಳಿ ರಾಕ್ಷಸನನ್ನು ವಧಿಸಿದ. ಹೀಗೆ ಯಾಣದಲ್ಲಿ ಭೈರವ ಮೂರ್ತಿ ಉದ್ಭವಾಯಿತೆಂಬ ಕಥೆಯಿದೆ. ಗೆಳೆಯರ ಬಳಗ–ಸಂಪಾದನ ಪ್ರಕಾಶನರವರು[೩೬] ಪ್ರಕಟಿಸಿದ "ಗೋಕರ್ಣ ಸ್ಥಳ ಪುರಾಣ ಕೃತಿ"ಯಲ್ಲಿ ಗೋಕರ್ಣದ ಐತಿಹಾಸಿಕ ಹಿನ್ನಲೆ, ಆತ್ಮಲಿಂಗ ಸ್ಥಾಪನೆಯ ಕುರಿತಿದೆ. ಪರಮೇಶ್ವರ ವಿಷ್ಣು ಶಾನಭಾಗರವರ[೩೭] "ದೇವರು ನಿಂತನೆಲೆ ಚೆಲ್ಲುವ ಬೆಳಕು" ಕೃತಿಯಲ್ಲಿ ಮಾಂಧಾತರಾಜನ ಸಲಹೆಯ ಪ್ರಕಾರ ವಿಷ್ಣುಮೂರ್ತಿಯನ್ನು ನಹುಷನು ಉಂಚಗಿಯಲ್ಲಿ ಪ್ರತಿಷ್ಠೆ ಮಾಡಿದನೆಂದಿದೆ. ಜಿ.ಜಿ ಶಾಸ್ತ್ರಿರವರ[೩೮] "ಶ್ರೀ ಸ್ವಯಂಭೂ ವಿನಾಯಕ ದೇವರು" ಕೃತಿಯಲ್ಲಿ ವಿನಾಯಕ ದೇವರ ಸ್ಥಾಪನೆಯ ಬಗ್ಗೆ ನಂತರ ತಲಗೋಡ, ಉಂಚಗಿಗಳಲ್ಲಿ ಮೂರ್ತಿ ಸ್ಥಾಪನೆ ಮಾಡಿದ ಕುರಿತಿದೆ.

೧.೨.೩ ಸಂಶೋಧನಾ ಪ್ರಬಂಧಗಳು

ಎಂ.ಫಿಲ್ ಪ್ರಬಂಧ

ಮಮತಾ ಮಚಗುಪ್ಪಿರವರ[೩೯] "ಕುಮಟಾ ತಾಲೂಕಿನ ಶಾಸನಗಳ ಒಂದು ಸಾಂಸ್ಕೃತಿಕ ಅಧ್ಯಯನ ಪ್ರಬಂಧದಲ್ಲಿ ಕುಮಟಾ ತಾಲೂಕಿನ ಐತಿಹಾಸಿಕ ಹಿನ್ನಲೆ, ಆಳ್ವಿಕೆ ನಡೆಸಿದ ವಿವಿಧ ರಾಜಮನೆತನಗಳು, ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗತಿ, ಮತ್ತು ದೇವಾಲಯಗಳ ಕುರಿತಿದೆ.

ಸ್ನಾತಕೋತ್ತರ ಪದವಿಯ ಸಂಪ್ರಬಂಧಗಳು

ಕುಮಾರಿ ರಂಜನಾ ನಾಯ್ಕರವರ[೪೦] "ಗೋಕರ್ಣ ಒಂದು ಸಾಂಸ್ಕೃತಿಕ ಅಧ್ಯಯನ" ಪ್ರಬಂಧದಲ್ಲಿ ಗೋಕರ್ಣದ ಪೌರಾಣಿಕ ಹಿನ್ನಲೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳು, ಹಾಗೂ ಗೋಕರ್ಣದಲ್ಲಿಯ ಪ್ರಮುಖ ದೇವಾಲಯಗಳ ವಿವರಣೆ ನೀಡಿದ್ದಾರೆ. ಕುಮಾರಿ ರೇಖಾ ಕೃಷ್ಣ ಶೆಟ್ಟಿಯವರು[೪೧] ಮಿರ್ಜಾನ ಕೋಟೆ ಕಿರು ಪ್ರಬಂಧದಲ್ಲಿ ಮಿರ್ಜಾನ ಕೋಟೆ ಸ್ಥಾಪನೆಯಬಗ್ಗೆ ಅದಕ್ಕೆ ಮಿರ್ಜಾನ ಕೋಟೆ ಹೆಸರಿಡಲು ಕಾರಣ ಅಲ್ಲಿರುವ ಮಹಿಷಾಸುರಮರ್ದಿನಿ ಶಿಲ್ಪದ ಕುರಿತು ವಿವರಿಸಿದ್ದಾರೆ.

ಪಿಎಚ್.ಡಿ ಮಹಾಪ್ರಬಂಧಗಳು

ಗಣಪತಿಗೌಡ ಎಸ್‌ರವರ[೪೨] "ಮೈನರ ಡೈನಾಸ್ಟಿಸ್ ಆಫ್ ಉತ್ತರ ಕನ್ನಡ ರೀಜನ" ಮಹಾಪ್ರಬಂಧ ಈ ಪ್ರದೇಶವನ್ನಾಳಿದ ಶಿಸುಗಲಿ ಪಾಂಡ್ಯರು ಮತ್ತು ಚಂದಾವರ ಕದಂಬರ ಕುರಿತು ಮಾಹಿತಿಯನ್ನು ಒಳಗೊಂಡಿದೆ. ಎಚ್.ಎಚ್. ಭಟ್ಟರವರ[೪೩] "ಕರಾವಳಿ ಕರ್ನಾಟಕದ ಉತ್ತರ ಭಾಗದ ದೇವಾಲಯಗಳು ಮತ್ತು ಶಾಸನಗಳು" ಮಹಾಪ್ರಬಂಧದಲ್ಲಿ ರಾಜಕಿಯ, ಸಾಮಾಜಿಕ, ಧಾರ್ಮಿಕ, ಮತ್ತು ಆರ್ಥಿಕ ಪರಿಸ್ಥಿತಿಗಳ ಶಾಸನೋಕ್ತ ವಿವರಣೆ ನೀಡಿದ್ದಾರೆ.

ಬಿ.ಸಿ. ಪಾಟೀಲರವರು[೪೪] "ಉತ್ತರ ಕರ್ನಾಟಕದ ಗ್ರಾಮ ದೇವತೆಗಳ ಒಂದು ಅಧ್ಯಯನ" ದಲ್ಲಿ ಕುಮಟಾ ತಾಲೂಕಿನ ದೇವಾಲಯ ಮತ್ತು ಮೂರ್ತಿಶಿಲ್ಪವನ್ನುದಾಖಲಿಸಿದ್ದಾರೆ.

೧.೨.೪ ಸಂಶೋಧನಾ ಲೇಖನಗಳು

ಜಯಶ್ರೀ ಬಿ ದೇಶಮಾನ್ಯರವರ[೪೫] "ಹಿರೇಗುತ್ತಿಯ ಹೊಸ ಶಾಸನ ಶಿಲ್ಪಗಳು" ಲೇಖನವುಅಲ್ಲಿನ ವೀರಸತಿಗಲ್ಲಿನ ಕುರಿತಿದೆ. ಗೋಕರ್ಣ ಸ್ಮರಣ ಸಂಚಿಕೆ[೪೬] (ಉತ್ತರ ಕನ್ನಡ ಜಿಲ್ಲಾ ೭ನೇಯ ಕನ್ನಡ ಸಾಹಿತ್ಯ ಸಮ್ಮೇಳನ) ಯಲ್ಲಿ ಗೋಕರ್ಣದ ಪ್ರಮುಖ ದೇವಾಲಯ ಅಲ್ಲಿನ ಶಾಸನಗಳ ಮಾಹಿತಿ ಒಳಗೊಂಡಿದೆ. ಕದಂಬ ಸ್ಮರಣ ಸಂಚಿಕೆ[೪೭] ಇದರಲ್ಲಿ ಕದಂಬರ ಇತಿಹಾಸಇದೆ. ಜಿ.ಡಿ.ಶಾನಬಾಗರವರ[೪೮] "ಹಬ್ಬದ ಸಂಬ್ರಮ" ಲೇಖನದಲ್ಲಿ ಮಿರ್ಜಾನ ಕೋಟೆ ಮತ್ತು ಮಿರ್ಜಾನದಲ್ಲಿ ಜರಗುವ ಉತ್ಸವಗಳ ಮಾಹಿತಿ ನೀಡಿದ್ದಾರೆ. ಗಣಪತಿಗೌಡ ಎಸ್‌ರವರ[೪೯] "ಪಟ್ಟಣ ತೈಲವರ್ಮನ ಅಡತಾರೆಯ ಶಿಲಾಶಾಸನಗಳು" ಲೇಖನದಲ್ಲಿ ಪಟ್ಟಣ ತೈಲವರ್ಮನು ಶಿಶುಗಲಿ ಪಾಂಡ್ಯರ ಕೊನೆಯ ದೊರೆಯೆಂದು ಮತ್ತು ಹಂಪಾದೇವಿಯನ್ನು ಮದುವೆಯಾದ ಮಲ್ಲಿಕಾರ್ಜುನ ಹಾನಗಲ್ಲ ಕಾದಂಬರ ಮಲ್ಲಿದೇವನಾಗಿರಬೇಕೆಂದು ಇವರಿಗೆ ಹುಟ್ಟಿದ ವೀರದೇವನೆ ಚಂದಾವರ ಕಾದಂಬರ ಸ್ಥಾಪಕನೆಂದಿದೆ. ಗಣಪತಿಗೌಡ ಎಸ್‌ರವರ[೫೦] ಚಂದಾವರ ಕಾದಂಬ ವೀರಕಾವದೇವರಸನ ಕಬ್ಬರ್ಗಿ ಶಾಸನ, ಗೋಕರ್ಣ ತಾಮ್ರ ಪಟಶಾಸನ, ಹಾಗೂ ಕತಗಾಲ ಶಿಲಾಶಾಸನದಲ್ಲಿ ಉಲ್ಲೇಖಿಸಿದ ಬೀರದೇವನು ಅಡತಾರೆ ಶಾಸನದಲ್ಲಿನ ವೀರದೇವನು ಒಂದೇ ವ್ಯಕ್ತಿಯಾಗಿರುವನೆಂದು ಸ್ಪಷ್ಟವಾಗುತ್ತದೆ. ಎಸ್.ವಿ ಪಾಡಿಗಾರ[೫೧] ಮತ್ತು ಗಣಪತಿ ಗೌಡ ಎಸ್‌ರವರು ಚಂದಾವರ ಕಾದಂಬರಿಗೆ ಸೇರಿದ ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳನೆಲ್ಲ ಸಂಗ್ರಹಿಸಿ ಪರಿಶೀಲಿಸಿಈ ಶಾಸನಗಳು ಎರಡು ಸ್ವತಂತ್ರ ರಾಜಮನೆತನಗಳಾದ ಶಿಶುಗಲಿಯ ಪಾಂಡ್ಯರು ಮತ್ತು ಚಂದಾವರ ಕಾದಂಬರಿಗೆ ಸೇರುತ್ತವೆ ಎಂದಿದ್ದಾರೆ. ಸುಂದರ ಅ. ರವರು[೫೨] "ಉಪ್ಪಿನ ಪಟ್ಟಣದ ಮೂರು ಗಮನಾರ್ಹ ಶಿಲ್ಪಗಳು" ಲೇಖನದಲ್ಲಿ ಉಪ್ಪಿನಪಟ್ಟಣದ ದೇವಾಲಯದಲ್ಲಿನ ಗಣಪತಿ ಮೂರ್ತಿ ಮತ್ತು ಮಹಿಷಾಸುರ ಮರ್ದಿನಿ ಶಿಲ್ಪದ ಕುರಿತು ವಿವರಿಸಿದ್ದಾರೆ. ಎಚ್. ಆರ. ರಘುನಾಥ ಭಟ್ಟರವರ[೫೩] ಗೋಕರ್ಣದಲ್ಲಿನ "ಉಮಾಮಹೇಶ್ವರಿ ಪ್ರಭಾವಳಿ ಶಾಸನ" ತ್ರಿಭುವನಮಲ್ಲ ಕಾವದೇವರಸನು ಕುಂಭೇಶ್ವರ ದೇವರಿಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

೧.೩ ಅಧ್ಯಯನದ ಉದ್ದೇಶ

ಕುಮಟಾ ತಾಲೂಕಿಗೆ ಸಂಬಂಧಿಸಿದಂತೆ ಅಲ್ಲಲ್ಲಿ ಲೇಖನಗಳು, ಕೃತಿಗಳು ಪ್ರಕಟವಾಗಿದ್ದರೂ, ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳಿಗೆ ಸಂಬಂಧಿಸಿದಂತೆ ವ್ಯವಸ್ಥಿತವಾದ ಅಧ್ಯಯನ ನಡೆದಿಲ್ಲ. ತೆರೆಮರೆಯಲ್ಲಿ ಅಡಗಿದ್ದ ಶಾಸನಗಳು ಮತ್ತು ದೇವಾಲಯಗಳ ಬಗ್ಗೆ ಎಲ್ಲರಿಗೂ ತಿಳಿಯಲಿ ಎನ್ನುವ ಉದ್ದೇಶದಿಂದ ಮಾಡಿದ ಪ್ರಯತ್ನ ಇದಾಗಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಒಂದಾದ ಕುಮಟಾ ತಾಲೂಕು ೧೨೦

ಗ್ರಾಮಗಳನ್ನು ಒಳಗೊಂಡಿದ್ದು, ಪ್ರಕಟಿತ ಲೇಖನಗಳು, ಕೃತಿಗಳನ್ನು ಪೂರಕವಾಗಿಟ್ಟುಕೊಂಡು ಗ್ರಾಮ ಗ್ರಾಮಗಳ ಕ್ಷೇತ್ರಕಾರ್ಯ ಮಾಡಿ ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳ ಇತಿಹಾಸವನ್ನು ಕಟ್ಟಿಕೊಡುವುದೇ ಈ ಮಹಾಪ್ರಬಂಧದ ಉದ್ದೇಶವಾಗಿದೆ.

ಕೆ.ಜಿ.ಭಟಸೂರಿಯವರ "ಧಾರಾನಾಥ ದೇವಾಲಯ ಧಾರೇಶ್ವರ", ಕೆಳದಿ ಗುಂಡಾ ಜೋಯಿಸ್ ಮತ್ತು ವೆಂಕಟೇಶ ಜೋಯಿಸ್‌ರವರ "ಗೋಕರ್ಣ ಇತಿಹಾಸ ಶಾಸನ" ಭಾಗ ೧ ಮತ್ತು ೨, ವೆಂಕಟರಂಗೋಕಟ್ಟಿರವರ "ಇಂಪಿರಿಯಲ್ ಗ್ಯಾಜಿಟಿಯರ್ ಆಫ ಬಾಂಬೆ ಪ್ರಾವಿನ್ಸ ಕೆನರಾ" ಸಂಪುಟ–೨, ಸೂರ್ಯನಾಥ ಕಾಮತ್‌ರವರ "ಉತ್ತರಕನ್ನಡ ಡಿಸ್ಟ್ರಿಕ್ಟ ಗ್ಯಾಜಿಟಿಯರ್", ಗಣಪತಿ ಗೌಡಾರವರ "ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು" ಹೀಗೆ ಮುಂತಾದ ಕೃತಿಗಳು, ಸಂಶೋಧನಾ ಲೇಖನಗಳು, ಪ್ರಬಂಧಗಳು ಪ್ರಸ್ತುತ ಅಧ್ಯಯನಕ್ಕೆ ಪೂರಕ ಮಾಹಿತಿಗಳನ್ನು ನೀಡಿದರೂ ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಅಧ್ಯಯನ ನಡೆದಿಲ್ಲ. ಪ್ರಕಟಿತ ಮತ್ತು ಅಪ್ರಕಟಿತ ಮಾಹಿತಿಯ ಜೊತೆಗೆ ಕ್ಷೇತ್ರಕಾರ್ಯ ಮಾಡಿ ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳಿಗೆ ಸಂಬಂಧಿಸಿದಂತೆ ವ್ಯವಸ್ಥಿತ ಅಧ್ಯಯನ ಮಾಡುವುದು ಈ ಅಧ್ಯಯನದ ಉದ್ದೇಶವಾಗಿದೆ.

೧.೪ ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಸಂಶೋಧನ ಅಧ್ಯಯನದ ವ್ಯಾಪ್ತಿಯು ಕುಮಟಾ ತಾಲೂಕಿನ ಗ್ರಾಮಗಳಲ್ಲಿ ಪ್ರಾದೇಶಿಕ ಅನ್ವೇಷಣೆ ಮಾಡುವುದಾಗಿದೆ. ಶಾಸನೀಯ ಉಲ್ಲೇಖಗಳ ಪ್ರಕಾರ ಮತ್ತು ಪೌರಾಣಿಕ ಹಿನ್ನೆಲೆಗೆ ಅನುಗುಣವಾಗಿ ಕುಮಟಾ ಪ್ರದೇಶವು ಕೊಂಕಣ ವೊಂಬೈನೂರು, ಹೈವೆ ಐನೂರು ಮತ್ತು ಸಾಂತಳಿಗೆ ತೊಂಬತ್ತು ಎಂಬ ಪ್ರಾಚೀನ ಭೌಗೋಳಿಕ ವ್ಯಾಪ್ತಿಗೆ ಒಳಪಡುತ್ತದೆ. ಈ ಪ್ರದೇಶವು ಸಹ್ಯಾದ್ರಿ ಪರ್ವತದ ಶ್ರೇಣಿಗಳಿಂದ ಹಾಗೂ ಪಶ್ಚಿಮಕ್ಕೆ ಅರಬ್ಬಿ ಸಮುದ್ರ ಮತ್ತು ದಕ್ಷಿಣಕ್ಕೆ ಬೇಡ್ತಿ ನದಿಯವರೆಗೆ ವಿಶಾಲವಾಗಿ ಹರಡಿದೆ. ಇಂತಹ ಪೌರಾಣಿಕ ಮತ್ತು ಐತಿಹಾಸಿಕ ವೈವಿಧ್ಯತೆಯನ್ನು ಹೊಂದಿರುವ ಈ ಪ್ರದೇಶದಲ್ಲಿ ರಾಜಕೀಯ ಏರುಪೇರುಗಳಿಗೆ ಅನುಗುಣವಾಗಿ ಕಲೆ, ಸಾಂಸ್ಕೃತಿಕ ಕ್ಷೇತ್ರಗಳು ಪರೋಕ್ಷವಾಗಿ ಮತ್ತು ಅಪರೋಕ್ಷವಾಗಿ ಅಭಿವೃದ್ಧಿಗೊಂಡು ತನ್ನದೇ ಆದ ವೈಶಿಷ್ಟ್ಯವನ್ನು ಮೆರೆದಿದೆ. ಕುಮಟಾ ತಾಲೂಕಿನ ಇಂತಹ ವೈಶಿಷ್ಟ್ಯಪೂರ್ಣ ಸಾಂಸ್ಕೃತಿಕತೆಯನ್ನು ಒಂದೆಡೆಗೆ ತಂದು ಅಧ್ಯಯನ ಮಾಡುವುದು ಈ ಸಂಶೋಧನೆಯ ಪ್ರಧಾನ ಅಂಶವಾಗಿದೆ. ಕ್ರಿ.ಪೂ. ೩ನೇ ಶತಮಾನದಿಂದ ಈ ತಾಲೂಕಿನಲ್ಲಿ ಈವರೆಗೆ ದೊರೆತ ಐತಿಹಾಸಿಕ ಪುರಾವೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ, ಒಂದೆಡೆ ಸೇರಿಸಿಡಿದಲ್ಲಿ ಈ ಸಂಶೋಧನಾ ಕಾರ್ಯವು ಸ್ವಲ್ಪಮಟ್ಟಿಗೆ ಕೊಡುಗೆಯಾಗಿ ನಿಲ್ಲಬಹುದೆಂದು ಆಶಯ ನನ್ನದಾಗಿದೆ.

೧.೫ ಅಧ್ಯಯನದ ವಿಧಾನ

ಮೊದಲ ಹಂತದಲ್ಲಿ ಕುಮಟಾ ತಾಲೂಕು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಒಳಗೊಂಡ ಮತ್ತು ಅವುಗಳಿಗೆ ಸಂಬಂಧಿಸಿದ ಐತಿಹಾಸಿಕ ಮಾಹಿತಿಗಳನ್ನು ಸಂಗ್ರಹಿಸುವುದು. ಅದರಲ್ಲಿ ಈಗಾಗಲೇ ಪ್ರಕಟಿತ ಮತ್ತು ಅಪ್ರಕಟಿತ ಲೇಖನಗಳನ್ನು, ವಿವಿಧ ಸಂಶೋಧಕರು ಮಂಡಿಸಿದ ಪ್ರಬಂಧಗಳು ಮತ್ತು ಪ್ರಕಟಿತಅಪ್ರಕಟಿತ ಕೃತಿಗಳನ್ನು ಪರಿಶೀಲಿಸಿ ಆಕಾರಾದಿಯಾಗಿ ಗ್ರಂಥಗಳ ಸೂಚಿಯನ್ನು ತಯಾರಿಸಿಕೊಳ್ಳಲಾಗಿದೆ.

ಅಪ್ರಕಟಿತ ಮತ್ತು ಪ್ರಕಟಿತ ಶಾಸನಗಳನ್ನು ಓದಿ ವಿಶ್ಲೇಷಣೆ ಮಾಡುವುದರ ಜೊತೆಗೆ ಅವುಗಳನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸುವುದು ಮತ್ತು ಅವುಗಳ ಮಾಹಿತಿಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಆಯಾ ವಿಷಯಗಳನ್ನು ಪ್ರತ್ಯೇಕವಾದ ಪಠ್ಯದಲ್ಲಿ ದಾಖಲಿಸುವದು ಶಾಸನೋಕ್ತ ದೇವಾಲಯಗಳ ವಾಸ್ತುರಚನೆ ಅಧ್ಯಯನ ಮಾಡುವುದರ ಜೊತೆಗೆ ಅವುಗಳ ವಿನ್ಯಾಸ, ಮಾದರಿ ವಿಶ್ಲೇಷಿಸುವುದು ಇಲ್ಲಿನ ಇನ್ನೊಂದು ಅಂಶವಾಗಿದೆ.

ಅಧ್ಯಯನದ ಸ್ವರೂಪ

ಅಧ್ಯಯನದ ವಿಧಾನವನ್ನು ಗಮನಿಸಿದಂತೆ ವಿಷಯಗಳ ಆಧಾರದಲ್ಲಿ ಪ್ರಸ್ತುತ ಅಧ್ಯಾಯವನ್ನು ಏಳು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲನೆ ಅಧ್ಯಾಯ: ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನವನ್ನು ಒಳಗೊಂಡಿದೆ ಈ ಅಧ್ಯಾಯದಲ್ಲಿ ಅಧ್ಯಯನದ ಅವಶ್ಯಕತೆ, ಉದ್ದೇಶ, ವ್ಯಾಪ್ತಿ, ಮತ್ತು ಪೂರ್ವಾಧ್ಯಯಗಳ ಸಮೀಕ್ಷೆ ಇದೆ.

ಎರಡನೇ ಅಧ್ಯಾಯ: ಕುಮಟಾ ತಾಲೂಕಿನ ಸಂಕ್ಷಿಪ್ತ ಇತಿಹಾಸ, ಮತ್ತು ಭೌಗೋಳಿಕ ಲಕ್ಷಣಗಳು ಪ್ರಾಕೃತಿಕ ಹಿನ್ನೆಲೆ ,ಕುಮಟಾ ತಾಲೂಕಿನ ಇತಿಹಾಸ ಹೆಸರು, ನಿಷ್ಪತ್ತಿ ,ವಿಸ್ತೀರ್ಣ, ಮತ್ತು ಮೇರೆಗಳು, ಐತಿಹಾಸಿಕ ಹಿನ್ನಲೆ ಪ್ರಾರಂಭದಿಂದ ಹಿಡಿದು ವಿಜಯನಗರದವರೆಗೆ ಆಳಿದ ರಾಜಮನೆತನಗಳ ಸಂಕ್ಷಿಪ್ತ ಚಾರಿತ್ರಿಕ ನೋಟವನ್ನೊಳಗೊಂಡಿದೆ.

ಮೂರನೇ ಅಧ್ಯಾಯ: ಶಾಸನಗಳ ವೈವಿಧ್ಯತೆ –ದಾನಶಾಸನಗಳು, ವೀರಗಲ್ಲುಗಳು, ಮಾಸ್ತಿಗಲ್ಲುಗಳ ವಿಷಯವನ್ನುಈ ಅಧ್ಯಾಯದಲ್ಲಿಚರ್ಚಿಸಲಾಗಿದೆ.

ನಾಲ್ಕನೇ ಅಧ್ಯಾಯ: ದೇವಾಲಯಗಳು– ಅಧ್ಯಾಯದಲ್ಲಿ ದೇವಾಲಯಗಳ ನಿರ್ಮಾಣ, ಪ್ರಾರಂಭದ ಬೆಳವಣಿಗೆ, ಗಾಣಪತ್ಯ, ಶೈವ, ಶಾಕ್ತ, ವೈಷ್ಣವ. ಜೈನ, ದೇವಾಲಯಗಳ ಪ್ರಸ್ತಾವನೆ ಇದೆ.

ಐದನೇ ಅಧ್ಯಾಯ: ಮೂರ್ತಿಶಿಲ್ಪ – ಈ ಅಧ್ಯಾಯದಲ್ಲಿ ಶಿಲ್ಪಗಳ ಉಗಮ ವಿಕಾಸದ ಪರಿಚಯದೊಂದಿಗೆ ಕುಮಟಾ ತಾಲೂಕಿನಲ್ಲಿ ಕಂಡುಬರುವ ಶೈವ, ಗಾಣಪತ್ಯ, ಶಾಕ್ತ, ವೈಷ್ಣವ, ಜೈನ ಶಿಲ್ಪಗಳ ವೈಶಿಷ್ಟ್ಯತೆಯನ್ನು ಹೇಳಲಾಗಿದೆ.

ಆರನೇ ಅಧ್ಯಾಯ: ಸಾಂಸ್ಕೃತಿಕ – ಸಾಮಾಜಿಕ ಆರ್ಥಿಕ ಧಾರ್ಮಿಕ ಸ್ಥಿತಿಗತಿಗಳು – ಕುಮಟಾ ತಾಲೂಕಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳನ್ನು ಶಾಸನಾಧಾರಿತವಾಗಿ ವಿಶ್ಲೇಷಿಸಲಾಗಿದೆ.

ಏಳನೇಯ ಅಧ್ಯಾಯ ಸಮಾರೋಪ – ಒಟ್ಟು ಅಧ್ಯಾಯದಿಂದ ಕಂಡುಕೊಂಡ ಫಲಿತಗಳನ್ನು ಅಧ್ಯಾಯದಲ್ಲಿ ಸೆರೆಹಿಡಿಯಲಾಗಿದೆ. ಪ್ರಬಂಧದ ಕೊನೆಯಲ್ಲಿ ಅನುಬಂಧವಿದೆ. ಅನುಬಂಧದಲ್ಲಿ ಕುಮಟಾ ತಾಲೂಕಿನ ನಕ್ಷೆ, ಆಕರ ಗ್ರಂಥಗಳು, ಛಾಯಾಚಿತ್ರಗಳು, ಅಪ್ರಕಟಿತ ಶಾಸನಗಳ ಪಟ್ಟಿಯ ಗ್ರಂಥಸೂಚಿನೀಡಲಾಗಿದೆ.ಗ್ರಂಥಸೂಚಿಯಲ್ಲಿ ಸಂಶೋಧನ ಕೃತಿಗಳನ್ನು ಸಂಶೋಧನ ಪ್ರಬಂಧಗಳನ್ನು ಅಂದರೆ ಎಂಫಿಲ್ ಸಂಪ್ರಬಂಧ, ಸ್ನಾತ್ತಕೋತ್ತರ ಪದವಿಯ ಸಂಪ್ರಬಂಧ, ಪಿಎಚ್,ಡಿ ಮಹಾಪ್ರಬಂಧಗಳು, ಸಂಶೋಧನಾ ಲೇಖನಗಳ ಆಕಾರಾದಿಯಲ್ಲಿ ನೀಡಲಾಗಿದೆ.

ಒಟ್ಟಾರೆ ಮೊದಲ ಅಧ್ಯಾಯದಲ್ಲಿ ಪೀಠಿಕಾ ಭಾಗವಾಗಿ ಕುಮಟಾ ತಾಲೂಕಿನ ಪರಿಸರದಲ್ಲಿ ದೊರೆತಿರುವ ಪ್ರಾಗೈತಿಹಾಸಿಕ ಅವಶೇಷಗಳನ್ನು ಪ್ರಸ್ತಾವನೆ ಮಾಡುವದರೊಂದಿಗೆ ಈವರೆಗಿನ ಪೂರ್ವಾಧ್ಯಯನಗಳ ಸಮೀಕ್ಷೆ ಮಾಡಲಾಗಿದೆ. ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳ ಪ್ರತ್ಯೇಕವಾದ ವ್ಯವಸ್ಥಿತ ಅಧ್ಯಯನ ಈವರೆಗೆ ನಡೆಯದೇ ಇರುವದರಿಂದ ಇದರ ಉದ್ದೇಶ ಹೇಳುವದರೊಂದಿಗೆ ಅಧ್ಯಯನದ ಸ್ವರೂಪವನ್ನು ಸಂಕ್ಷಿಪ್ತವಾಗಿ ದಾಖಲಿಸಲಾಗಿದೆ.

ಅಡಿಟಿಪ್ಪಣಿಗಳು

೧. ಕೆ.ಬಿ. ಶಿವತಾರಕ., ಕರ್ನಾಟಕದ ಪುರಾತತ್ವ ನೆಲೆಗಳು, –೨೦೦೧, ಪು. ೪೧–೪೨.

೨. ಅದೇ.

೩. ಅದೇ.

೪. ಅದೇ. ಪು. ೪೫.

೫. ಅದೇ. ಪು. ೪೪.

೬. ಅದೇ. ಪು. ೪೩.

೭. ಅದೇ.

೮. ಅದೇ. ಪು. ೪೫.

೯. ಅದೇ. ಪು. ೪೬.

೧೦. ಅದೇ.

೧೧. ಅದೇ. ಪು. ೪೭.

೧೨. ಅದೇ.

೧೩. ಅದೇ. ಪು. ೪೮.

೧೪. ಅದೇ.

೧೫. ಅದೇ.

೧೬. ಅದೇ,

೧೭. ಅದೇ. ಪು. ೪೯.

೧೮. ಅದೇ.

೧೯. ಮಹಾವಂಶ. ಪಾಠ XII, ಪು.೮೨ ಪ.

೨೦. ಸುಂದರ.ಅ., "ಕ್ಷೇತ್ರ ಗೋಕರ್ಣ ಮತ್ತು ಇಡಗುಂಜಿಯ ಶಿಲಾಗಣೇಶ ಶಿಲ್ಪದ ಪ್ರಾಚೀನತೆ" ಕರ್ನಾಟಕ ಭಾರತಿ ಸಂ.೮/೩, ೧೯೭೫.

೨೧. ಗಣಪತಿ ಗೌಡ ಎಸ್.,ರವರ "ಉತ್ತರ ಕನ್ನಡ ಜಿಲ್ಲೆಯಲ್ಲಿ ವೈಷ್ಣವ ಧರ್ಮ "ಇತಿಹಾಸ ದರ್ಶನ,
ಚಿ. ಸಂ.೨೨, ೨೦೦೫.

೨೨. ಸುಂದರ.ಅ., ಪೂರ್ವೋಕ್ತ ಸಂ.೮/೩, ೧೯೭೫.

೨೩. ವೆಂಕಟರಂಗೋ ಕಟ್ಟಿ., ಧಾರವಾಡ, ಬೆಳಗಾಂವ, ಬಿಜಾಪುರ, ಕಾನಡಾ ಜಿಲ್ಲೆಗಳ ಇಂಪಿರಿಯಲ್ ಗ್ಯಾಜೆಟಿಯರ ಏಶಿಯನ್ ಎಜ್ಯುಕೇಶನ ಸರ್ವಿಸಸ್, ೧೯೮೪.

೨೪. ಸದಾನಂದ ನಾಯಕ., "ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ", ೧೯೭೪.

೨೫. ಸೂರ್ಯನಾಥ ಕಾಮತ., "ಉತ್ತರ ಕನ್ನಡ ಡಿಸ್ಟ್ರಿಕ್ಟಗ್ಯಾಜೆಟಿಯರ", ೧೯೭೫.

೨೬. ಗುರುವಆರ್. ಎನ್., "ಕಾರವಾರ ಜಿಲ್ಲೆಯ ಶಾಸನಗಳು", ೧೯೭೫.

೨೭. ಶಾನಭಾಗ ಎಂ. ಆರ್., "ಉತ್ತರಕನ್ನಡ ಜಿಲ್ಲಾ ದೇವಾಲಯಗಳು", ೧೯೮೫.

೨೮. ಕೆ.ಜಿ ಭಟ್‌ಸೂರಿ., "ಧಾರನಾಥ ದೇವಾಲಯ ಧಾರೇಶ್ವರ", ೧೯೯೬.

೨೯. ಕೆಳದಿ ಗುಂಡಾಜೋಯಿಸ., ಮತ್ತು ಕೆಳದಿ ವಂಕಟೇಶ ಜೋಯಿಸ, "ಗೋಕರ್ಣ ಇತಿಹಾಸ ಶಾಸನಗಳು" ಭಾಗ ೧, ೨೦೦೮.

೩೦. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ೨೦೦೮.

೩೧. ಸುಂದರ.ಅ., ಪೂರ್ವೋಕ್ತ ಸಂ.೮/೩, ೧೯೭೫.

೩೨. ವಿ.ಎಸ್.ಕಾಮತ., "ಕಾಂಚಿಕಾಂಬಾ ಸ್ಥಳಪುರಾಣ", ೨೦೦೧.

೩೩. "ಕುಂಭೇಶ್ವರ ಪುರಾಣ", ಪ್ರಕಾಶಕರು ಗಣಪತಿ ದತ್ತಾತ್ರಯ ಭಟ್, ೧೯೯೮.

೩೪. ಅಚ್ಚುತ ಶ್ರೀಧರ ಕಾಮತ., ದೇವಕಿಕಷ್ಣ ಸಂಸ್ಥಾನದ ಚರಿತ್ರೆ, ೨೦೦೩.

೩೫. ಮಂಜುನಾಥ ಭಾಗವತ ಹೊಸ್ತೋಟ., "ಭೈರವ ಕ್ಷೇತ್ರ ಯಾಣ", ೨೦೧೧.

೩೬. ಗೆಳಯರ ಬಳಗ, "ಗೋಕರ್ಣ ಸ್ಥಳ ಪುರಾಣ", ೨೦೧೧.

೩೭. ಪರಮೇಶ್ವರ ವಿಷ್ಣು ಶಾನಭಾಗ, "ಉಂಚಗಿ ದೇವರು ನಿಂತನೆಲೆ", ಬೆಂಗಳೂರು ೨೦೧೦.

೩೮. ಜಿ. ಜಿ. ಶಾಸ್ತ್ರಿ., "ಸ್ವಯಂಭೂವಿನಾಯಕ ದೇವರು ಊರಕೇರಿ", ೨೦೧೨.

೩೯. ಮಮತಾ ಮಚಗುಪ್ಪಿ., "ಕುಮಟಾ ತಾಲೂಕಿನ ಶಾಸನಗಳು ಒಂದು ಸಾಂಸ್ಕೃತಿಕ ಅಧ್ಯಯನ", (ಕಿರುಪ್ರಬಂಧ) ೧೯೯೯.

೪೦. ಗಣಪತಿಗೌಡ ಎಸ್., "ಮೈನರ ಡೈನಾಸ್ಟಿಸ್ ಆಫ್ ಉತ್ತರ ಕನ್ನಡ ರೀಜನ" (ಅಪ್ರಕಟಿತ ಪಿಎಚ್ ಡಿ. ಮಹಾಪ್ರಬಂಧ) ೧೯೯೩.

೪೧. ಎಚ್.ಎಚ್. ಭಟ್ಟ., "ಕರಾವಳಿ ಕರ್ನಾಟಕದ ಉತ್ತರ ಭಾಗದ ದೇವಾಲಯಗಳು ಮತ್ತು ಶಾಸನಗಳ ಒಂದು ಅಧ್ಯಯನ" (ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ) ೨೦೦೩.

೪೨. ಬಿ.ಸಿ.ಪಾಟೀಲ., "ಉತ್ತರ ಕರ್ನಾಟಕದ ಗ್ರಾಮ ದೇವತೆಗಳ ಒಂದು ಅಧ್ಯಯನ", ೧೯೯೬.

೪೩. ರಂಜನಾ ನಾಯ್ಕ., "ಗೋಕರ್ಣದ ಒಂದು ಸಾಂಸ್ಕೃತಿಕ ಅಧ್ಯಯನ", (ಕಿರುಪ್ರಬಂಧ) ೨೦೧೧.

೪೪. ರೇಖಾ, ಕೃಷ್ಣಶೆಟ್ಟಿ., "ಮಿರ್ಜಾನ ಕೋಟೆ" (ಕಿರು ಪ್ರಬಂಧ) ೨೦೧೧-೧೨.

೪೫. ಜಯಶ್ರೀ, ಬಿ, ದೇಶಮಾನ್ಯ., "ಹಿರೇಗುತ್ತಿಯ ಹೊಸ ಶಾಸನ ಶಿಲ್ಪಗಳು", ಇತಿಹಾಸ ದರ್ಶನ, ಬೆಂಗಳೂರು ಸಂ, ೨೦/೨೦೦೫.

೪೬. ಗೋಕರ್ಣ ಸ್ಮರಣ ಸಂಚಿಕೆ., ಉತ್ತರಕನ್ನಡ ಜಿಲ್ಲಾ ೭ನೇ ಕನ್ನಡ ಸಾಹಿತ್ಯ ಸಮ್ಮೇಲನ, ಗೋಕರ್ಣ, ೧೯೯೧.

೪೭. ಕದಂಬ ಸ್ಮರಣ ಸಂಚಿಕೆ., ಅಖಿಲಭಾರತ ೫೫ನೇ ಕನ್ನಡ ಸಾಹಿತ್ಯ ಸಮ್ಮೇಳನ ಶಿರಸಿ,-೧೯೮೨.

೪೮. ಜಿ.ಡಿ. ಶಾನಭಾಗ., "ಮಿರ್ಜಾನ ಕೋಟೆಗೆ ಹಬ್ಬದ ಸಂಭ್ರಮ", ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟ-೪-೪-೨೦೦೪.

೪೯. ಗಣಪತಿಗೌಡ ಎಸ್., "ಪಟ್ಟಣ ತೈಲವರ್ಮನ ಅಡತಾರೆ ಶಿಲಾಶಾಸನ" ಕರ್ನಾಟಕ ಭಾರತಿ ಸ್ವಾತಂತ್ರೋತ್ಸವ ಸಂಚಿಕೆ, ಕ.ವಿ.ವಿ ಧಾರವಾಡ, ೧೯೯೪.

೫೦. ಗಣಪತಿಗೌಡ ಎಸ್., ಚಂದಾವರ ಕಾದಂಬ ವೀರಕಾವದೇವರಸನ ಕಬ್ಬರ್ಗಿ ಶಾಸನ, ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ, ಬೆಂಗಳೂರು.ಸಂ ೮,-೧೯೯೩.

೫೧. ಎಂ.ಎಲ್ ಶಿವಶಂಕರ., ಚನ್ನಬಸಪ್ಪ ಎಸ್ ಪಾಟೀಲ, ಕದಂಭೋತ್ಸವ ಸ್ಮರಣ ಸಂಚಿಕೆ, ಕರ್ನಾಟಕ ಸರಕಾರ ಬೆಂಗಳೂರು, ೧೯೯೬.

೫೨. ಸುಂದರ ಅ., ಉಪ್ಪಿನ ಪಟ್ಟಣದ ಮೂರು ಗಮನಾರ್ಹ ಶಿಲ್ಪಗಳು, ಮಾನವಿಕ ಭಾರತಿ, ಸಂ.೪. ಸಂಚಿಕೆ ೩-೪, ಕ.ವಿ.ವಿ ಧಾರವಾಡ.

೫೩. ಎಚ್.ಆರ. ರಘುನಾಥ ಭಟ್ಟ., "ಗೋಕರ್ಣದ ಉಮಾಮಹೇಶ್ವರಿ ಪ್ರಭಾವಳಿ ಇನ್ಸ್ಕ್ರಿಪಶನ್" ಜರ್ನಲ್ ಆಫ ಕರ್ನಾಟಕ ಯುನಿವರ್ಸಿಟಿ ಸೋಶಯಲ್ ಸಾಯನ್ಸ್ ಕ.ವಿ.ವಿ ಧಾರವಾಡ XXIII.

ಅಧ್ಯಾಯ – ಎರಡು

ಕುಮಟಾ ತಾಲೂಕಿನ ಸಂಕ್ಷಿಪ್ತ ಇತಿಹಾಸ ಮತ್ತು ಭೌಗೋಳಿಕ ಲಕ್ಷಣಗಳು

೨.೧ ಪ್ರಾಕೃತಿಕ ಹಿನ್ನೆಲೆ

ಪ್ರತಿಯೊಂದು ಪ್ರದೇಶದ ಇತಿಹಾಸ ಮತ್ತು ಅಲ್ಲಿನ ಜನಜೀವನ ತಿಳಿಯುವಲ್ಲಿ ಅಲ್ಲಿನ ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪತ್ತು ಮಹತ್ವವನ್ನು ಪಡೆದಿದೆ. ಪ್ರಾಚೀನ ಕಾಲಘಟ್ಟದಲ್ಲಿನ ಭೌಗೋಳಿಕ ಅಂಶಗಳು ಜನ ಜೀವನವನ್ನು ನಿರ್ಧರಿಸುವ ಪ್ರಮುಖ ಮುಖ್ಯಾಂಶ. ಜೊತೆಗೆ ಮಾನವನು ಅಲ್ಲಿ ದೊರೆಯುವ ಸಂಪನ್ಮೂಲಗಳನ್ನು ಅವಲಂಬಿಸಿದ್ದನು, ನೈಸರ್ಗಿಕ ಸಂಪನ್ಮೂಲಗಳಾದ ನದಿಗಳು, ಪರ್ವತಗಳು, ತೀರಪ್ರದೇಶ, ಅಲ್ಲಿನ ಉಡುಗೆ ತೊಡುಗೆ, ಕಸುಬು, ಆಚಾರ ವಿಚಾರ, ಧಾರ್ಮಿಕತೆಯ ಮೇಲೆ, ಇವು ಪ್ರಭಾವ ಬೀರಿವೆ. ಕುಮಟಾ ಉತ್ತರಕನ್ನಡ ಜಿಲ್ಲೆಯ ಒಂದು ತಾಲೂಕಾಗಿದ್ದು ಘಟ್ಟದ ಮೇಲಣ ಮತ್ತು ಕೊಂಕಣ, ತುಳು ಪ್ರದೇಶಗಳನ್ನು ಸಂಪರ್ಕಿಸುವ ಕೇಂದ್ರವಾಗಿದೆ.

೨.೨ ವಿಸ್ತೀರ್ಣ ಮತ್ತು ಮೇರೆಗಳು

ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿ ಅಧ್ಯಯನದಲ್ಲಿ ಆ ಪ್ರದೇಶದ ಭೌಗೋಳಿಕ ಅಂಶಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಕುಮಟಾ ತಾಲೂಕಿನ ಒಟ್ಟು ವಿಸ್ತೀರ್ಣ ೫೯೦.೪೫[೧] ಚ.ಕಿ.ಮೀಗಳಷ್ಟಿದ್ದು, ಭೌಗೋಳಿಕವಾಗಿ ಇದರ ವ್ಯಾಪ್ತಿ ೭೪° ೨೪° ೭೪° ೪೫° ಅಕ್ಷಾಂಶ ಮತ್ತು ೧೪° ೧೭° ೧೪° ೨೧°[೨] ರೇಖಾಂಶಗಳಲ್ಲಿ ಇರುತ್ತದೆ. ಉತ್ತರದಲ್ಲಿ ಅಂಕೋಲಾ, ಪೂರ್ವದಲ್ಲಿ ಶಿರಸಿ ಸಿದ್ದಾಪುರ, ದಕ್ಷಿಣದಲ್ಲಿ ಹೊನ್ನಾವರ ತಾಲೂಕು, ಮತ್ತು ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಇವು ಕುಮಟಾ ತಾಲೂಕಿನ ಮೇರೆಗಳಾಗಿವೆ.

೨.೨.೧ ಕುಮಟಾ ತಾಲೂಕಿನ ಸಂಕ್ಷಿಪ್ತ ಇತಿಹಾಸ

ಕುಮಟಾ ಹೆಸರು ನಿಷ್ಪತ್ತಿ

ಪ್ರಾಚೀನ ಕಾಲದಿಂದಲೂ ಕುಮಟಾ ತಾಲೂಕು ಪ್ರಮುಖ್ಯತೆಯನ್ನು ಹೊಂದಿದ ಪ್ರದೇಶ, ಕುಮಟಾವನ್ನು ವಿವಿಧ ಹೆಸರುಗಳಿಂದ ಕರೆಯುತ್ತಿದ್ದರು. ಕುಮಟಾದಲ್ಲಿನ ಕುಂಭೇಶ್ವರ ದೇವಾಲಯದಿಂದಾಗಿ ಇದನ್ನು "ಕುಂಬಟಂ" ಎಂದು ಕರೆಯಲಾಗುತ್ತಿತ್ತು. ಈ ಕುಂಬಟೆಯೇ ನಂತರದಲ್ಲಿ ಕುಮಟಾ ಎಂಬ ಹೆಸರು ಪಡೆದುಕೊಂಡಿದೆ ಎಂಬ ಅಭಿಪ್ರಾಯವಿದೆ.[೩] ಕ್ರಿ.ಶ. ೧೩೬೦ರ ವಿಜಯನಗರ ಅರಸರ ಕಾಲದ ಶಾಸನದಲ್ಲಿ[೪] ಇದನ್ನು ಕುಂಬಟೆಯನಾಡು ಎಂದೂ ಕರೆಯಲಾಗಿದೆ. ಪೋರ್ಚುಗೀಸರು ಇದನ್ನು ಕುಮಟೆಯೆಂದು ಕರೆದರೆ ಬ್ರಿಟಿಷ ದಾಖಲೆಗಳು[೫] "ಕುಮಟಾ" ಎಂದು ಉಲ್ಲೇಖಿಸಿವೆ. ವಿವಿಧ ಕಾಲಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟ ಈ ಪ್ರದೇಶವನ್ನು ಇಂದು ಕುಮಟಾ ಎಂಬ ಹೆಸರಿನಿಂದಲೇ ಕರೆಯಲಾಗುತ್ತಿದೆ. ಈ ತಾಲೂಕಿನ ಗೋಕರ್ಣವು ರಾಮಾಯಣ, ಮಹಾಭಾರತ,

ಕಾಲದಿಂದಲೂ 'ಪುಣ್ಯಕ್ಷೇತ್ರ'ವೆಂದು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಗೋಕರ್ಣವು ಕುಮಟಾದಿಂದ ಉತ್ತರಕ್ಕೆ ೩೧ಕಿ.ಮೀ ದೂರದಲ್ಲಿದೆ. ಇದು ಕಾಶಿ ಮತ್ತು ರಾಮೇಶ್ವರಗಳಿಗೆ ಸಮಾನವೆಂದು ಪ್ರತೀತಿ ಇದೆ. ದಕ್ಷಿಣ ಮತ್ತು ಪೂರ್ವದಲ್ಲಿ ಶೃತಶೃಂಗ ಪರ್ವತದ ಚಿಕ್ಕಗುಡ್ಡಗಳಿಂದ ಆವೃತವಾಗಿರುವ ಈ ಸ್ಥಳ ದೂರದಿಂದ ಗೋವಿನ ಕಿವಿಯಂತೆ ಕಂಡು ಬರುವುದರಿಂದ ಗೋಕರ್ಣವೆಂದು ಕರೆಯಲಾಗಿದೆ[೬] ಗೋಕರ್ಣದ ಮಹಾಬಲೇಶ್ವರ ದೇವಾಲಯಕ್ಕೆ ಬನವಾಸಿಯ ಕದಂಬ ಅರಸರಿಂದ ಹಿಡಿದು ವಿಜಯನಗರ ಆಡಳಿತ ಕೊನೆಯವರೆಗೆ ಅನೇಕ ಅರಸರು ದಾನನೀಡಿರುವುದು ಶಾಸನಗಳಿಂದ ತಿಳಿದು ಬರುತ್ತದೆ.[೭]

ಕುಮಟಾ ತಾಲೂಕಿನ ಪ್ರಾಗೈತಿಹಾಸಿಕ ಹಿನ್ನೆಲೆ

ನವಶಿಲಾಯುಗದ ಅವಶೇಷಗಳು ನೀಲಕೋಡ, ಮಿರ್ಜಾನದಲ್ಲಿ[೮] ದೊರೆತಿವೆ. ನೀಳಚೆಕ್ಕೆ, ಹೆರೆಚೆಕ್ಕೆ ಹಾಗೂ ಮೊನೆ ಮಾದರಿಗಳಾಗಿವೆ. ಗೋಕರ್ಣ ಪರಶುರಾಮ ತೀರ್ಥದ ಶಿಲಾಗವಿ ಹಾಗೂ ರಾಮತೀರ್ಥದ ಬಳಿನೂತನ ಶಿಲಾಯುಗ ಸಂಸ್ಕೃತಿಯ ಮೃತ ಪಾತ್ರೆಗಳು ಕಂಡುಬಂದಿವೆ.[೯] ಆದುದರಿಂದ ಇತಿಹಾಸ ಪೂರ್ವಕಾಲದ ಮಾನವ ಚಟುವಟಿಕೆಗಳ ಕುರುಹುಗಳು ಇಲ್ಲಿ ದೊರೆತಿರುವದರಿಂದ ಕುಮಟಾ ತಾಲೂಕಿನ ಪ್ರಾಚೀನತೆ ಸುಮಾರು ೩೦೦೦ ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ.

೨.೨.೨ ರಾಜಕೀಯ ಇತಿಹಾಸ

ಕರ್ನಾಟಕ ಇತಿಹಾಸ ಪ್ರಾರಂಭದ ಕಾಲ ಕ್ರಿ.ಪೂ ೩ನೇ ಶತಮಾನ ಪ್ರಸ್ತುತ ಕುಮಟಾ ತಾಲೂಕಿಗೆ ಸಂಬಂಧಿಸಿದಂತೆ ಪ್ರಾಗೈತಿಹಾಸಿಕ ಕುರುಹುಗಳು, ಶಿಲೋಪಕರಣಗಳು ಹೊರತುಪಡಿಸಿದರೆ ಇತರ ಯಾವ ಅವಶೇಷಗಳು ಈವರೆಗೆ ಕಂಡುಬಂದಿಲ್ಲ. ಇತಿಹಾಸ ಕಾಲಕ್ಕೆ ಸಂಬಂಧಿಸಿದಂತೆ ಶಾತವಾಹನ ಮತ್ತು ಬನವಾಸಿ ಕದಂಬರ ಕುರುಹುಗಳು ಕುಮಟಾದ ಪರಿಸರದ ತಾಲೂಕುಗಳಾದ ಶಿರಸಿ ತಾಲೂಕಿನ ಬನವಾಸಿಯಲ್ಲಿ ದೊರೆತಿವೆ. ಇದರಿಂದ ಈ ಭಾಗವು ಶಾತವಾಹನ, ಚುಟು ಮತ್ತು ಬನವಾಸಿ ಕದಂಬರ ಆಳ್ವಿಕೆಗೆ ಒಳಪಟ್ಟಿತೆಂಬುದು ಸ್ಪಷ್ಟವಾಗುತ್ತದೆ. ಬನವಾಸಿ ಕದಂಬರ ನಂತರ ಕುಮಟಾ ತಾಲೂಕಿಗೆ ಸಂಬಂಧಿಸಿದಂತೆ ಭೋಜರು, ಕೈಕೇಯರು, ಶಿಶುಗಲಿಯ ಪಾಂಡ್ಯರು, ಚಂದಾವರ ಕಾದಂಬರು, ಗೋಕರ್ಣದ ಮಂಡಲಿಕ ಅರಸರು, ವಿಜಯನಗರ ಕಾಲದವರೆಗೂ ಆಕರಗಳು ಲಭ್ಯವಾಗುತ್ತವೆ. ಹೀಗಾಗಿ ಪ್ರಸ್ತುತ ಕುಮಟಾ ತಾಲೂಕಿಗೆ ಸಂಬಂಧಿಸಿದ ಇವರ ಆಳ್ವಿಕೆಯ ಕಾಲದ ಇತಿಹಾಸದ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

ಭೋಜರು

ಉತ್ತರಕನ್ನಡ ಜಿಲ್ಲೆಯ ಕರಾವಳಿಯಲ್ಲಿನ ಕುಮಟಾ ತಾಲೂಕು ಭೋಜರ ಆಳ್ವಿಕೆಗೆ ಒಳಪಟ್ಟಿತ್ತು ಎನ್ನುವುದಕ್ಕೆ ಅಶಂಕಿತನ ಹಿರೇಗುತ್ತಿ ತಾಮ್ರಪಟ ಶಾಸನ ಸಾಕ್ಷಿಯಾಗಿದೆ.

ಅಧಿಕಾರಕ್ಕೆ ಬಂದ ನಾಲ್ಕನೇ ವರ್ಷದಲ್ಲಿ ಈ ಶಾಸನ ಬರೆಸಿದ್ದು ಇದು ನಂದಿಪಲ್ಲಿಯ ಕೈಕೇಯ ಕುಲದ ಕೊಟ್ಟಿಪೆಗ್ಗಿಲಿಯೆಂಬ ಸಾಮಂತನ ಕೋರಿಕೆಯಂತೆ ತಾನು ಕಟ್ಟಿಸಿದ ಬೌದ್ಧ ವಿಹಾರಕ್ಕೆ ದೀಪಕ ವಿಷಯದಲ್ಲಿ ಸುಂದರಿಕಾ ಗ್ರಾಮವನ್ನು ದತ್ತಿಯಾಗಿ ನೀಡಿದ್ದನೆಂದು ತಿಳಿಸುತ್ತದೆ. ಇದರಿಂದ ಕುಮಟಾ ತಾಲೂಕಿನಲ್ಲಿ ಭೋಜರ ಅಸ್ತಿತ್ವ ಇತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ.[೧೦]

ಕೈಕೇಯರು

ಉತ್ತರಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಆಳ್ವಿಕೆ ನಡೆಸಿದ ಚಿಕ್ಕ ರಾಜಮನೆತನಗಳಲ್ಲಿ ಕೈಕೇಯರು ಒಬ್ಬರಾಗಿದ್ದಾರೆ. ಅಶಂಕಿತ ರಾಜನ ಹಿರೇಗುತ್ತಿ ತಾಮ್ರಪಟ ಶಾಸನದಲ್ಲಿ ಕೊಟ್ಟಿ ಪೆಗ್ಗಿಲಿಯು ನಂದಿಪಲ್ಲಿಯ ಕೈಕೇಯ ವಂಶಕ್ಕೆ ಸೇರಿದ್ದು ಇತನ ಕೋರಿಕೆಯಂತೆ ತಾನೇ ನಿರ್ಮಿಸಿದ ಬೌದ್ಧ ವಿಹಾರಕ್ಕೆ ದೀಪಕ ವಿಷಯದಲ್ಲಿ ಸುಂದರಿಕಾ ಗ್ರಾಮವನ್ನು ದಾನ ನೀಡಿದ ಉಲ್ಲೇಖವಿದೆ.[೧೧] ಕೈಕೇಯರು ಭೋಜರ ಸಾಮಂತರಾಗಿಯೂ ನಂತರ ಕದಂಬರ ಜೊತೆ ವೈವಾಹಿಕ ಸಂಬಂಧ ಬೆಳೆಸಿ ಆಡಳಿತ ನಡೆಸಿದ್ದರು.[೧೨]

ಗೋಕರ್ಣದ ಮಾಂಡಲಿಕ ಅರಸರು

ಕ್ರಿ.ಶ. ೧೧ ನೇ ಶತಮಾನಕ್ಕೆ ಸೇರುವ ಕೆಕ್ಕಾರ[೧೩] ಹಳದಿಪುರ[೧೪] ಶಾಸನಗಳು ನಾಗವರ್ಮನನ್ನು ಗೋಕರ್ಣ ಪುರವರಾಧೀಶ್ವರ ಎಂದು ದಾಖಲಿಸಿವೆ. ಶಿಶುಗಲಿಯ ಪಾಂಡ್ಯ ಅರಸ ಎರಡನೇ ಕಾಮನ ಹಿಡಿತದಲ್ಲಿದ್ದ ಹೊನ್ನಾವರ ಕೋಟೆಯ ಮೇಲೆ ನಾಗವರ್ಮ ದಾಳಿ ಮಾಡಿದನು. ಈ ದಾಳಿಯಲ್ಲಿ ಪಡವಳ ನಂದಿ ಮತ್ತು ಪಡವಳ ಬುದ್ಧರು ಹೋರಾಡಿ ಮರಣಹೊಂದಿದರು. ನಾಗವರ್ಮನು ಕಾಮದೇವನ ಕಡೆಯ ಮಾರಸಿಂಗ ಹೆಗ್ಗಡೆಯನ್ನು ಕೊಂದು ಕೋಟೆ ಗೆದ್ದುಕೊಂಡನು[೧೫]. ಬಹುಶಃ ಈ ಕೋಟೆ ಗೋವೆಯ ಕದಂಬ ದೊರೆ ಜಯಕೇಶಿ (ಕ್ರಿ.ಶ. ೧೦೫೦–೧೦೭೮) ಕಟ್ಟಿಸಿದನು. ಈ ಶಾಸನದಿಂದ ಗೋಕರ್ಣದಲ್ಲಿ ಸಣ್ಣ ರಾಜವಂಶವೊಂದು ಅಸ್ತಿತ್ವದಲ್ಲಿ ಇತ್ತೆಂದು ತಿಳಿಯುತ್ತದೆ.

ಕೆಕ್ಕಾರ ಅಮ್ಮನವರ ಗುಡಿಯಲ್ಲಿನ ಶಾಸನ ಶಿಶುಗಲಿ ಪಾಂಡ್ಯದೊರೆ ಇಮ್ಮಡಿಕಾಮದೇವ ಮತ್ತು ಗೋಕರ್ಣದ ಅರಸ ನಾಗವರ್ಮರಸನ ನಡುವೆ ಬಲ್ಲಾಳ ಬಯಲಿನಲ್ಲಿ ಯುದ್ಧ ನಡೆದಾಗ ಜಳವಳಿಯ ಬಡಮ್ಮ ಹೋರಾಡಿ ಜಯಹೊಂದಿ ಸ್ವರ್ಗಸ್ಥಳಾದಳೆಂದು ತಿಳಿಸುತ್ತದೆ. ಇದರಿಂದ ನಾಗವರ್ಮರಸ ಹೊನ್ನಾವರ ಕೋಟೆ ಕಳೆದುಕೊಂಡನೆಂದು ತಿಳಿಯುತ್ತದೆ.[೧೬]

ಕ್ರಿ.ಶ.೧೦೮೦ ರ ಹಾವೇರಿ ತಾಲೂಕಿನ ಗಳಗನಾಥ ಶಾಸನ[೧೭] ಕಲ್ಯಾಣ ಚಾಲುಕ್ಯ ಅರಸ ಎರಡನೇ ಜಯಸಿಂಹನ ಆಜ್ಞೆಯ ಮೇರೆಗೆ ಮಹಾಮಂಡಳೇಶ್ವರ ಚೆನ್ನರಸನು ನಾಗವರ್ಮನ ಮೇಲೆ ದಾಳಿಮಾಡಿ ಸೋಲಿಸಿ ಕಪ್ಪಕಾಣಿಕೆಗಳನ್ನು ಪಡೆದುಕೊಂಡನೆಂದು

ತಿಳಿಸುತ್ತದೆ. ಕ್ರಿ.ಶ. ೧೧೧೨ ರ ಬಳ್ಳಿಗಾವೆ ಶಾಸನದಲ್ಲಿ[೧೮] ಎರಡನೇ ಕಾಮನನ್ನು ಗೋಕರ್ಣ ಪುರವರಾಧೀಶ್ವರ ಎಂದು ದಾಖಲಿಸಿದೆ. ಇದರಿಂದ ನಾಗವರ್ಮ ಈ ಪ್ರದೇಶದ ಅಸ್ತಿತ್ವ ಕಳೆದುಕೊಂಡನೆಂದು ಹೇಳಬಹುದು.

ಶಿಶುಗಲಿಯ ಪಾಂಡ್ಯರು

ಪಂಚಮುಖಿಯವರು ಚಂದಾವರ ಕಾದಂಬ ಅರಸ ಕಾಮದೇವನ ಮಗ ಮಲ್ಲಿದೇವ, ಮತ್ತು ತ್ರಿಭುವನಮಲ್ಲ, ಮಲ್ಲದೇವ, ಪ್ರತಾಪ ಬೀರದೇವನ ಕಾಲಕ್ಕೆ ಸೇರಿದ ೨೨ ಶಾಸನಗಳನ್ನು ಉಲ್ಲೇಖಿಸಿದ್ದಾರೆ. ಇವರಿಗೆ ಸೇರಿದ ಶಾಸನಗಳು ಕುಮಟಾ, ಕೋನಳ್ಳಿ, ಔಂಸಳ್ಳಿ, ಕತ್ತಗಾಲ, ಅಡತಾರೆ, ಗೋಕರ್ಣ, ಸ್ಥಳಗಳಲ್ಲಿ ದೊರೆತಿವೆ.

ಶಾಸನಗಳಲ್ಲಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರ ಬನವಾಸಿ ಪುರವರಾಧೀಶ್ವರ ಜಯಂತಿ ಮಧುಕೇಶ್ವರಲಬ್ಧ ವರಪ್ರಸಾದ ಗೋಕರ್ಣ ಮಹಾಬಲೇಶ್ವರ ದೇವರ ದಿವ್ಯ ಶ್ರೀಪಾದರಾಧಕಂ ಕಾದಂಬ ಚರ್ಕವರ್ತಿ ಎಂಬ ಬಿರುದುಗಳನ್ನು ಹೊಂದಿದ್ದರೆಂದು ತಿಳಿಯುತ್ತದೆ[೧೯]. ಪಂಚಮುಖಿಯವರು ಚಂದಾವರ ಕಾದಂಬ ಮನೆತನದ ವಂಶಾವಳಿಯನ್ನು ಈ ಕೆಳಗಿನಂತೆ ನೀಡಿದ್ದಾರೆ[೨೦].

ಮೊದಲನೇ ಚಂದ್ರ

↓

ಮೊದಲನೇ ಕಾಮ

↓

ಇಮ್ಮಡಿ ಚಂದ್ರ

↓

ಮಲ್ಲ ಅಥವಾ ತ್ರಿಭುವನಮಲ್ಲ

ಒಂದನೇ ಚಂದ್ರ ೯೫೫–೧೦೨೦ ಪಾಂಡ್ಯ ಸಿಂಹಾಸವನ್ನೇರಿದ ಪ್ರಥಮ ದೊರೆ. ಈತನ ನಂತರ ಒಂದನೇ ಕಾಮ ಕ್ರಿ.ಶ. ೧೦೨೦–೧೦೪೫ ರವರೆಗೆ ಆಳ್ವಿಕೆ ನಡೆಸಿದನು. ನಂತರ ಇಮ್ಮಡಿ ಚಂದ್ರ ಕ್ರಿ.ಶ. ೧೦೪೫–೧೦೭೦ ಅಧಿಕಾರ ನಡೆಸಿದನು. ನಂತರ ಇಮ್ಮಡಿಕಾಮದೇವ ಕ್ರಿ.ಶ. ೧೦೭೦–೧೧೩೦ ಅಧಿಕಾರಕ್ಕೆ ಬಂದನು.ಈತನ ಕಾಲಕ್ಕೆ ಸೇರಿದಕ್ರಿ.ಶ. ೧೦೭೮ರ ಕೆಕ್ಕಾರ ಅಮ್ಮನವರ ದೇವಾಲಯದ ಸ್ತಂಭಶಾಸನವು[೨೧] ಗೋಕರ್ಣದ ಬಳಿ ನಡೆದ ಯುದ್ದದಲ್ಲಿ ಪಡವಲ ನಂದಿ ಮತ್ತು ಅವನ ಮೊಮ್ಮಗ ಪಡವಲ ಬುದ್ದ ಸಾವನ್ನಪ್ಪಿದ್ದರೆಂದು ಹೇಳುತ್ತದೆ. ಪಡವಲ ಹಾಚ ಮತ್ತು ಬೋಗೋರಿಕ ಸೇರಿ ಹೈವೆ, ತೆಂಕಲು, ಕೊಂಕಣ, ಬನವಾಸಿ ಪ್ರದೇಶದ ವೈರಿಗಳನ್ನು ನಾಶಪಡಿಸಿದರೆಂದು ಶಾಸನ ತಿಳಿಸುತ್ತದೆ. ಕಾಲಮಾನದ ವಿವರಣೆ ಇಲ್ಲದ ಕೆಕ್ಕಾರ ಅಮ್ಮನವರ ದೇವಾಲಯದ

ಸ್ತಂಭಶಾಸನ[೨೨] ಪೊನ್ನಾವರ ಪುರವರಾಧೀಶ್ವರನಾದ ಕಾಮದೇವರಸನಿಗೂ ಗೋಕರ್ಣ ಪುರವರಾಧೀಶ್ವರನಾದ ನಾಗವರ್ಮನಿಗೂ ಹೊನ್ನಾವರ ಕೋಟೆ ವಶಪಡಿಸಿಕೊಳ್ಳಲು ಬಲ್ಲಾಳಬಯಲಿನಲ್ಲಿ ಯುದ್ಧವೇರ್ಪಟ್ಟು ಅದರಲ್ಲಿ ಜಲವಳ್ಳಿಯ ಬದಮ್ಮ ವೈರಿ ಸೈನಿಕರನ್ನು ಕೊಂದು ಜಯಹೊಂದಿ ಸ್ವರ್ಗಸ್ಥಳಾದಳೆಂದು ತಿಳಿಸುತ್ತದೆ. ಪೊನ್ನಾವರ ಪುರವರಾಧೀಶ್ವರ ಕಾಮದೇವರಸನು ಜಯಕೇಶಿ ಕಟ್ಟಿದ ಹೊನ್ನಾವರ ಕೋಟೆಯನ್ನು ನಾಗವರ್ಮನಿಂದ ವಶಪಡಿಸಿಕೊಂಡಿದ್ದನು.

ಹೊನ್ನಾವರ ಕೋಟೆಯನ್ನು ಗೋವೆಯ ಕದಂಬ ಅರಸ ಒಂದನೇ ಜಯಕೇಶಿ (ಕ್ರಿ.ಶ. ೧೦೫೦–೧೦೭೮) ಕಟ್ಟಿಸಿದನು. ೧೦೭೮ರಲ್ಲಿ ಗೋಕರ್ಣದ ನಾಗವರ್ಮ ಹೊನ್ನಾವರ ಕೋಟೆ ವಶಪಡಿಸಿಕೊಂಡಿದ್ದು ಇದನ್ನು ೧೦೭೯ರಲ್ಲಿ ಇಮ್ಮಡಿ ಕಾಮದೇವ ವಶಪಡಿಸಿಕೊಂಡಿದ್ದನು. ಅವನಿಗೆ ಹೊನ್ನಾವರ ಪುರವರಾಧೀಶ್ವರ ಬಿರುದು ಇತ್ತು. ಕಲ್ಯಾಣ ಚಾಲುಕ್ಯ ೬ನೇ ವಿಕ್ರಮಾದಿತ್ಯನ ಮಾಂಡಳಿಕನಾಗಿದ್ದ ಇಮ್ಮಡಿಕಾಮದೇವನು ಗೋಕರ್ಣಪುರವರಾಧೀಶ್ವರ ಎಂಬ ಬಿರುದು ಹೊಂದಿದ್ದನು.[೨೩] ಇದರಿಂದ ಗೋಕರ್ಣ ಇಮ್ಮಡಿ ಕಾಮದೇವನ ಇನ್ನೊಂದು ರಾಜಧಾನಿಯಾಗಿರುವ ಸಾಧ್ಯತೆ ಇದೆ.

ನಂತರ ಒಂದನೇ ಮಲ್ಲಿದೇವ ಕ್ರಿ.ಶ.೧೧೧೩–೧೧೧೯ ಆಳ್ವಿಕೆ ನಡೆಸಿದನು. ಈತನ ನಂತರ ಬೋಪ್ಪದೇವ ಅಥವಾ ವಿಕ್ರಮತೈಲ ಕ್ರಿ.ಶ. ೧೧೧೯–೧೧೨೫ ಅಧಿಕಾರಕ್ಕೆ ಬಂದನು. ಈತನಿಗೆ ಸಂಬಂಧಿಸಿದ ಯಾವುದೇ ಶಾಸನ ಈ ಪ್ರದೇಶದಲ್ಲಿ ದೊರೆಯುವದಿಲ್ಲ. ನಂತರ ಇಮ್ಮಡಿ ಮಲ್ಲಿದೇವ ಕ್ರಿ.ಶ. ೧೧೨೫–೧೧೪೫ ಆಳ್ವಿಕೆ ನಡೆಸಿದನು. ಈತನಿಗೆ ಸೇರಿದ್ದ ಐದು ಶಾಸನಗಳು ಈತನನ್ನು ಗೋಕರ್ಣ ಮಹಾಬಲೇಶ್ವರ ಪಾದ ಪದ್ಮಾರಾಧಕ ಮಹಾಮಂಡಳೇಶ್ವರ ಬಿರುದುಗಳಿಂದ ಬಣ್ಣಿಸಿವೆ. ತನಗೆ ಶರಣಾಗದ ಅರಸರ ಮೇಲೆ ದಾಳಿ ಮಾಡಿ ಸೋಲಿಸಿ ಅವರ ಸಂಪತ್ತನ್ನು ವಶಪಡಿಸಿಕೊಂಡನು. ನಂತರ ಪಟ್ಟಣದ ತೈಲವರ್ಮದೇವ ಕ್ರಿ.ಶ. ೧೧೪೫–೧೧೮೩ ಅಧಿಕಾರಕ್ಕೆ ಬಂದನು. ಕ್ರಿ.ಶ. ೧೧೬೭ರ ಅಡತಾರೆ ಶಾಸನ[೨೪] ಇವನನ್ನು ಶಿಶುಗಲಿಯ ಪಾಂಡ್ಯರ ಬಿರುದುಗಳಿಂದ ಉಲ್ಲೇಖಿಸುತ್ತದೆ. ಕ್ರಿ.ಶ. ೧೧೪೨ರ ಗುಂಡಬಾಳದ ಅಮ್ಮನವರ ದೇವಾಲಯದ ಶಾಸನದಲ್ಲಿ ಉಲ್ಲೇಖಿಸಿದ ಪಟ್ಟಣ ತೈಲ, ಅಡತಾರೆ ಶಾಸನದಲ್ಲಿ ಉಲ್ಲೇಖಿಸಿದ ಪಟ್ಟಣದ ತೈಲವರ್ಮ ಒಬ್ಬನೇ ಆಗಿದ್ದಾನೆ. ಇಮ್ಮಡಿ ಮಲ್ಲಿದೇವ ಸಿರಿಯೂರು (ಇಂದಿನ ಕುಮಟಾ ತಾಲೂಕಿನ ಶಿರೂರು) ನಿಂದ ಆಳ್ವಿಕೆ ಮಾಡುತ್ತಿದ್ದಾಗ ಕುಮಾರತೈಲನು ಪಟ್ಟಣ (ಇಂದಿನ ಕುಮಟಾ ತಾಲೂಕಿನ ಉಪ್ಪಿನ ಪಟ್ಟಣ)ದಿಂದ ಆಳ್ವಿಕೆ ಮಾಡುತ್ತಿದ್ದನು. ಇದರಿಂದ ಪಟ್ಟಣತೈಲ ಇಮ್ಮಡಿ ಮಲ್ಲಿದೇವನ ಸಹೋದರ ಸಂಬಂಧಿ ಆಗಿರಬೇಕು[೨೫].

ಶಿಸುಗಲಿ ಪಾಂಡ್ಯರ ವಂಶಾವಳಿ[೨೬]

ಮೊದಲನೇ ಚಂದ್ರ ಕ್ರಿ.ಶ. ಸು.೯೫–೧೦೨೦

ರಾಣಿ ಕಮಲಾದೇವಿ

↓

ಮೊದಲನೇ ಕಾಮ ಕ್ರಿ.ಶ. ೧೦೨೦–೧೦೪೫

↓

ರಾಣಿ ಭಾಗಲದೇವಿ

↓

ಇಮ್ಮಡಿಚಂದ್ರ ಕ್ರಿ.ಶ. ೧೦೪೫–೧೦೭೦

↓

ರಾಣಿ ಸಾವಲದೇವಿ

↓

ಇಮ್ಮಡಿಕಾಮ ಕ್ರಿ.ಶ. ೧೦೭೦–೧೧೧೩

↓

ರಾಣಿ ಕಾಳಲದೇವಿ

↓ ↓ ↓

ಮೊದಲನೇ ಮಲ್ಲಿದೇವ — ಕ್ರಿ.ಶ. ೧೧೧೩–೧೧೧೯

ಹೈವಲದೇವಿ ↓ ನಾಗಲದೇವಿ ↓ ಅನಾಮದೇಯ ಮಗ

ಬೊಪ್ಪದೇವ (ವಿಕ್ರಮತೈಲ) — ಕ್ರಿ.ಶ.೧೧೧೯–೧೧೨೫

ಅನಾಮದೇಯ ಮಗ

↓ ↓

ಇಮ್ಮಡಿಮಲ್ಲಿದೇವ
ಕ್ರಿ.ಶ. ೧೧೨೫–೧೧೪೫

ಕುಮಾರತೈಲ ಅಥವಾ ಪಟ್ಟಣದ ತೈಲ
ಕ್ರಿ.ಶ. ೧೧೪೫–೧೧೮೩
ಹಂಪಾದೇವಿ ಮಗಳು

↓

ಹಾನಗಲ್ಲು ಕದಂಬ
ಮಲ್ಲಿಕಾರ್ಜುನನ್ನು ವಿವಾಹವಾದಳು

ಚಂದಾವರದ ಕಾದಂಬರು

ಬನವಾಸಿ ಕದಂಬರ ಒಂದು ಶಾಖೆ ಚಂದಾವರದ ಕಾದಂಬರು ಇವರು ೧೧ರಿಂದ ೧೪ನೇ ಶತಮಾನದವರೆಗೆ ಕುಮಟಾ ತಾಲೂಕಿನಲ್ಲಿ ಆಳ್ವಿಕೆ ನಡೆಸಿದರು. ಆರಂಭದಲ್ಲಿ ಹೊನ್ನಾವರವನ್ನು ನಂತರ ಚಂದಾವರವನ್ನು ರಾಜಧಾನಿ ಮಾಡಿ ಆಳ್ವಿಕೆ ನಡೆಸಿದರು[೨೭]. ಇವರ ಶಾಸನಗಳು ಕುಮಟಾ ತಾಲೂಕಿನ ಗೋಕರ್ಣ, ಕತಗಾಲ, ಕಬ್ಬರ್ಗಿ, ಜೌಂಸಳ್ಳಿ, ಅಡತಾರೆ, ಮುಂತಾದ ಸ್ಥಳಗಳಲ್ಲಿ ದೊರೆತಿವೆ[೨೮]. ಹೈವೆ ೫೦೦, ಸಿದ್ದಾಪುರ. ಶಿರಸಿ, ಮತ್ತು ಶಿವಮೊಗ್ಗ ಜಿಲ್ಲೆಯ ಗಡಿ ಭಾಗಗಳು ಇವರ ಆಡಳಿತ ವ್ಯಾಪ್ತಿಗೆ ಸೇರಿತ್ತು. ಕ್ರಿ.ಶ. ೧೧೬೭ರ ಅಡತಾರೆ ಶಾಸನ[೨೯] ಶಿಶುಗಲಿ ಪಾಂಡ್ಯದೊರೆ ಪಟ್ಟಣ ತೈಲವರ್ಮನು ಅಡತಾರೆ ಗ್ರಾಮವನ್ನು ಕೆಚ್ಚು ಸೋಮಯಾಜಿಗೆ ಮತ್ತು ಮಹಾಜನರಿಗೆ ಅಗ್ರಹಾರವಾಗಿ ದಾನ ನೀಡಿದನ್ನು ಉಲ್ಲೇಖಿಸುತ್ತದೆ. ಈ ಶಿಲಾಶಾಸನವನ್ನು ತೈಲವರ್ಮನ ತಮ್ಮ ಮಾವುಲಿದೇವ ಮತ್ತು ಮೊಮ್ಮಗ ವೀರದೇವ ಈತನ ಮೊಮ್ಮಗ ಕಾಮದೇವರಸ ಹಾಗೂ ಮಹಾಪ್ರಧಾನ ಕೀರ್ತಿನಾರಾಯಣ ದಂಡನಾಯಕನನ್ನು ಉಲ್ಲೇಖಿಸಿದೆ.

ವೀರದೇವ/ಬೀರದೇವ ಕ್ರಿ.ಶ. ೧೧೮೩–೧೨೩೪ರವರೆಗೆ ಆಳ್ವಿಕೆ ನಡೆಸಿದನು. ಮಲ್ಲಿದೇವ ಮತ್ತು ಹಂಪಾದೇವಿ ಮಗನಾದ ವೀರದೇವನು ಚಂದಾವರ ಕಾದಂಬರ ಮೂಲಪುರುಷ. ಹೊನ್ನಾವರ ತಾಲೂಕಿನ ಚಂದಾವರವನ್ನು ರಾಜಧಾನಿಯನ್ನಾಗಿ ಮಾಡಿ ಆಳ್ವಿಕೆ ನಡೆಸಿದನು. ಈತ ಸಮರ್ಥ ಹೊರಾಟಗಾರನಾಗಿದ್ದನು. ವೈರಿಗಳ ಮೇಲೆ ದಾಳಿ ಮಾಡಿದನು ಶೂರತನ ಮತ್ತು ಶೌರ್ಯದಲ್ಲಿ ಈತನು ರವಿಯ ಮಗನಾದ ಕೇಚರಾಧಿಪತಿ, ಮತ್ತು ಭಾರ್ಗವನಿಗೆ ಸರಿಸಮಾನನಾಗಿದ್ದನೆಂದು ಶಾಸನ ತಿಳಿಸುತ್ತದೆ[೩೦].

ಕ್ರಿ.ಶ. ೧೨೫೬ರ ಗೋಕರ್ಣ ತಾಮ್ರಪಟ ಶಾಸನ[೩೧] ವೀರದೇವನ ಮಗ ತೈಲ ಮತ್ತು ಮೊಮ್ಮಗ ಕಾಮದೇವನೆಂದು ಹೇಳಿದೆ. ಕ್ರಿ.ಶ. ೧೨೫೬ರ ಕತಗಾಲ್ ವೀರಗಲ್ಲು ಶಾಸನವು[೩೨] ಕಾಮದೇವನನ್ನು ವೀರದೇವನ ಮೊಮ್ಮಗನೆಂದು ಉಲ್ಲೇಖಿಸಿದೆ. ಕ್ರಿ.ಶ. ೧೨೪೫ರ ಕಬ್ಬರ್ಗಿ ಶಾಸನವು[೩೩] ವೀರಕಾಮದೇವನು ಹೊಂದಿದ ಬಿರುದುಗಳನ್ನು ಪ್ರಸ್ತಾಪಿಸಿದೆ. ವೀರಕಾಮದೇವ ಮತ್ತು ದಂಡನಾಯಕ ಕೀರ್ತಿನಾರಾಯಣ ಸೇರಿ ಕಬ್ಬರ್ಗಿ ಗ್ರಾಮವನ್ನು ಗೋಕರ್ಣದ ಮಹಾಬಲೇಶ್ವರ ದೇವರಿಗೆ ಸಂಕಷ್ಟ ಪರಿಹಾರಕ್ಕಾಗಿ ದಾನ ನೀಡಿದ್ದರು. ಇದರಿಂದ ದಂಡನಾಯಕ ಕೀರ್ತಿನಾರಾಯಣ ಚಂದಾವರ ಕಾದಂಬ ಪ್ರಾರಂಭದ ಅರಸರಿಂದ ಹಿಡಿದು ಕಾಮದೇವನ ಆಳ್ವಿಕೆಯ ಅವಧಿಯಲ್ಲೂ ಅಧಿಕಾರದಲ್ಲಿದ್ದನು ಎಂದು ತಿಳಿದು ಬರುತ್ತದೆ. ಕ್ರಿ.ಶ. ೧೨೫೬ರ ಗೋಕರ್ಣ ತಾಮ್ರಪಟ ಶಾಸನ[೩೪] ಕಾಮದೇವನಿಗೆ ಪಶ್ಚಿಮ ಸಮುದ್ರಾಧಿಪತಿ ಎಂದಿದೆ. ಈತನು ರಾಜಧಾನಿ ಚಂದಾವರದಿಂದ ಆಳುತ್ತಿರುವಾಗ ಗೋಕರ್ಣದ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ, ವಿಶ್ವಾಮಿತ್ರ ಗೋತ್ರದ ಅಹಿತಾಗ್ನಿ ಮಹೇಶ್ವರ ಭಟ್ಟರಿಗೆ

ಹಾಗೂ ಇನ್ನಿತರ ಬ್ರಾಹ್ಮಣರಿಗೆ ಅಗ್ರಹಾರ ಮೂರೂರು ಗ್ರಾಮದೊಳಗಿನ ಭೂಮಿ ದಾನಕೊಟ್ಟನು ಎಂದು ಶಾಸನ ದಾಖಲಿಸಿದೆ.

ಕ್ರಿ.ಶ. ೧೨೫೬ರ ಕತಗಾಲ ವೀರಗಲ್ಲು ಶಾಸನವು[೩೫] ವೀರಕಾಮದೇವನು ಚಂದ್ರಪುರದಲ್ಲಿದ್ದಾಗ ಸಂಗಡಿ ಗ್ರಾಮವನ್ನು ಬ್ರಹ್ಮಪುರಿಯಾಗಿ ಮಾಡಿ ಶಂಕರ ಉಪಾದ್ಯಾಯರಿಗೆ ಮತ್ತು ಬ್ರಾಹ್ಮಣರಿಗೆ ದಾನ ನೀಡಿದ್ದನೆಂದು ತಿಳಿಸುತ್ತದೆ. ೧೩ನೇ ಶತಮಾನಕ್ಕೆ ಸೇರುವ ಹೊಸಾಡ ವೀರಗಲ್ಲು ಶಾಸನ[೩೬], ದಾಳ ಗೌಡ ಎನ್ನುವ ವೀರ ಬೊಂಥ ಪಾಳಗೌಡನೊಡನೆ ಹೋರಾಡಿ ಮರಣಹೊಂದಿದ್ದನ್ನು ದಾಖಲಿಸಿದೆ. ಆದರೆ ಬೋಂಥಪಾಳಗೌಡನೆಂಬ ವೀರ, ಯಾವ ರಾಜ್ಯಕ್ಕೆ ಸೇರಿದನೆಂಬುದು ಸ್ಪಷ್ಟತೆ ಇಲ್ಲ. ಕಾಲನಿರ್ದೇಶನವಿಲ್ಲದ ಶೋಧಿತ ಹಳಕಾರ ವೀರಗಲ್ಲು ಶಾಸನ[೩೭]ವೀರಕಾಮದೇವನ ಕಾಲಕ್ಕೆ ಸೇರಿದ್ದು ಸಕವಳಿಯ ಚಿಕ್ಕುನಾಯಕನ ಬಲಿದಾನವನ್ನು ತಿಳಿಸುತ್ತದೆ.

ಶಿವಚಿತ್ತ ಬಸವಿದೇವರಸ (ಕ್ರಿ.ಶ. ೧೨೮೮–೧೩೦೬)

ಒಂದನೇ ಕಾಮದೇವನ ನಂತರ ಶಿವಚಿತ್ತ ಬಸವಿದೇವರಸ ಅಧಿಕಾರಕ್ಕೆ ಬಂದಿದ್ದನು. ಕ್ರಿ.ಶ. ೧೩೪೦ಕ್ಕೆ ಅನ್ವಯಿಸಬಹುದಾದ ಗೋಕರ್ಣದ ಶಾಸನದಲ್ಲಿ[೩೮] ಶಿವಚಿತ್ತ ಬಸವಿದೇವರಸನ ಮಗ, ಇಮ್ಮಡಿ ಕಾಮನ ೧೪ನೇ ವರ್ಷದ ಉಲ್ಲೇಖವಿದೆ. ಇದರಿಂದ ಬಸವಿದೇವರಸನು ೧೩೦೫ರವರೆಗೆ ಚಂದಾವರದ ದೊರೆಯಾಗಿದ್ದನೆಂದು ಸ್ಪಷ್ಟವಾಗುತ್ತದೆ. ಈತನ ಆಳ್ವಿಕೆಯ ಅವಧಿಯಲ್ಲಿ ಹೊಯ್ಸಳ ವೀರಬಲ್ಲಾಳ ಚಂದಾವರ ಕಾದಂಬರ ಮೇಲೆ ಸಾರ್ವಭೌಮ ಅಧಿಕಾರ ಹೇರಲು ಪ್ರಯತ್ನಪಟ್ಟಿದ್ದು ಹನಗವಾಡಿ ಶಾಸನದಲ್ಲಿ ಹೇಳಿದೆ. ಬಸವಿದೇವನು ತನ್ನ ಆಳ್ವಿಕೆಯ ಕೊನೆಯ ಅವಧಿಯವರೆಗೂ ಸ್ವತಂತ್ರವಾಗಿ ಆಳಿದನು. ಬಸವಿದೇವನು ಶಿವಚಿತ್ತ ಎಂಬ ಬಿರುದು ಪಡೆದಿದ್ದನು. ಗೋವಾ ಕಾದಂಬರೂ ಶಿವಭಕ್ತರಾಗಿದ್ದರಿಂದ ಶಿವಚಿತ್ತ ಬಿರುದು ಹೊಂದಿದ್ದರು[೩೯] ಅದೇ ರೀತಿ ಬಸವಿದೇವರಸನು ಶಿವಭಕ್ತನಾಗಿದ್ದರಿಂದ ಶಿವಚಿತ್ತ ಎಂಬ ಬಿರುದು ಧರಿಸಿರಬಹುದು.

ಇಮ್ಮಡಿಕಾಮ (ಕ್ರಿ.ಶ. ೧೩೦೬–೧೩೫೪)

ಬಸವಿದೇವರಸನ ನಂತರ ಆತನ ಮಗ ಇಮ್ಮಡಿಕಾಮ ಅಧಿಕಾರಕ್ಕೆ ಬಂದನು. ಕ್ರಿ.ಶ. ೧೩೦೫ರ ಜೌಂಸಳ್ಳಿಯಲ್ಲಿ ದೊರೆತಿರುವ ಶಾಸನವು[೪೦] ರಕ್ತಾಕ್ಷಿ ಸಂವತ್ಸರವನ್ನು ಹೆಸರಿಸುತ್ತದೆ. ಇಮ್ಮಡಿ ಕಾಮದೇವನ ಆಳ್ವಿಕೆಯ ಮೊದಲನೇ ವರ್ಷಕ್ಕೆ ಸೇರಿದ ಚಂದಾವರ ಶಾಸನ ಕ್ರಿ.ಶ. ೧೩೦೬ಕ್ಕೆ ಸರಿ ಹೊಂದುತ್ತದೆ[೪೧]. ಇದರಿಂದ ಇಮ್ಮಡಿಕಾಮ ೧೩೦೬ರಲ್ಲಿ ಅಧಿಕಾರಕ್ಕೆ ಬಂದನೆಂಬುದು ಸ್ಪಷ್ಟವಾಗುತ್ತದೆ. ಕ್ರಿ.ಶ. ೧೩೦೫ರ ಜೌಂಸಳ್ಳಿಯಲ್ಲಿ ದೊರೆತಿರುವ ಶಾಸನವು[೪೨] ಸೋವಣ ಸಂಧಿವಿಗ್ರಹಿಯ ಹೆಂಡತಿಯಾದ ಕೋಟೆಯಬ್ಬೆ ಸಲ್ಲೇಖನ ವ್ರತವನ್ನು ಸ್ವಿಕರಿಸಿ ಮರಣಹೊಂದಿದಳೆಂದು ಉಲ್ಲೇಖಿಸಿದೆ. ಕ್ರಿ.ಶ. ೧೩೦೬ ರ ತ್ರುಟಿತ ಶಾಸನವು[೪೩]

ವೀರಕಾಮದೇವನ ಸೈನಿಕರು ಯುದ್ಧದಲ್ಲಿ ಮರಣ ಪಟ್ಟಿದ್ದನ್ನು ದಾಖಲಿಸುತ್ತದೆ. ಕ್ರಿ.ಶ. ೧೩೩೪ರ ಜೌಂಸಳ್ಳಿ ಶಾಸನ ಕಾಮದೇವನನ್ನು ಗೋಕರ್ಣ ಮಹಾಬಲೇಶ್ವರ ದೇವರ ಆರಾಧಕರಾಗಿದ್ದರೆಂದು ಹೇಳಲಾಗಿದೆ[೪೪]. ಕ್ರಿ.ಶ. ೧೩೪೦ರ ಗೋಕರ್ಣದ ಶಾಸನ[೪೫] ಇಮ್ಮಡಿ ಕಾಮದೇವನನ್ನು ಶಿವಚಿತ್ತ ವೀರಬಸವಿದೇವರಸನ ಮಗನಾಗಿದ್ದು ತಂದೆಯ ನಂತರ ಚಂದಾವರದಲ್ಲಿ ಸಿಂಹಾಸನವೇರಿದನೆಂದು ತಿಳಿಸುತ್ತದೆ. ಈ ಶಾಸನ ಗೋಕರ್ಣ, ಧಾರೇಶ್ವರ ಕ್ಷೇತ್ರದಲ್ಲಿ ಮಠವನ್ನು ಕಟ್ಟಿಸಿ ಪುರುಷೋತ್ತಮಪುರಿ ಶ್ರೀಪಾದರಿಗೆ ಮತ್ತು ಅವರ ಶಿಷ್ಯರಿಗೆ ಭೂಮಿ ದಾನ ನೀಡಿದ್ದನೆಂದು ಉಲ್ಲೇಖಿಸುತ್ತದೆ. ಕ್ರಿ.ಶ. ೧೩೫೦ರ ಕೋನಳ್ಳಿಯ ಕೋನೇಶ್ವರ ದೇವಾಲಯದಲ್ಲಿರುವ ವೀರಗಲ್ಲು ಶಾಸನ[೪೬] ಕಾಮದೇವನು ಕೋಟೆಯರಸನ ಮೇಲೆ ದಾಳಿ ಮಾಡಿದಾಗ ನಗಿರೆಯ ಕೋಟೆಯರಸ ಕೋನಳ್ಳಿಯ ಮೇಲೆ ಪ್ರತಿ ದಾಳಿ ಮಾಡಿದನೆಂದು ಈ ಯುದ್ಧದಲ್ಲಿ ತಿಮ್ಮನಾಯಕನೆಂಬ ಸೇನಾನಿ ಮಡಿದನೆಂದು ಹೇಳುತ್ತದೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ನಂತರ ಪಶ್ಚಿಮ ಕರಾವಳಿಯಲ್ಲಿ ಸಾಮ್ರಾಜ್ಯ ವಿಸ್ತರಿಸಲು ಪ್ರಯತ್ನಿಸಿದ ಹರಿಹರನ ಸಹೋದರ ಮಾರಪ್ಪ ಒಡೆಯರು ಚಂದ್ರಗುತ್ತಿಯ ಗೋಮಾಂತ ಶಾಲೆಯಿಂದ ಸೈನಿಕರೊಡಗೂಡಿ ದಂಡೆತ್ತಿ ಬಂದನು. ಅದನ್ನು ತಡೆದ ಕಾದಂಬ ಅರಸ ಇಮ್ಮಡಿಕಾಮನನ್ನು ಸೋಲಿಸಿ ಗೋಕರ್ಣಕ್ಕೆ ಹೋಗಿ ಶಿವನಿಗೆ ಪೂಜೆ ಸಲ್ಲಿಸಿ ಬ್ರಾಹ್ಮಣರಿಗೆ ಭೂಮಿ, ಬಂಗಾರ ಗೋವುಗಳನ್ನು ದಾನ ನೀಡಿದ್ದನ್ನು ಶಾಸನ ಉಲ್ಲೇಖಿಸುತ್ತದೆ[೪೭]. ಇದರಿಂದ ಚಂದಾವರ ಕಾದಂಬರು ಘಟ್ಟದ ಮೇಲಿನ ಪ್ರದೇಶದ ಹಿಡಿತ ಕಳೆದುಕೊಂಡರೆಂಬುದು ಸ್ಪಷ್ಟವಾಗುತ್ತದೆ. ನಂತರ ಅಧಿಕಾರಕ್ಕಾಗಿ ಕಾಮದೇವನು ಬಹಳ ಶ್ರಮಿಸಿದನು. ಹೊಯ್ಸಳ ೩ನೇ ಬಲ್ಲಾಳನ ಮಡದಿ ಅಳುಪರಾಜಕುಮಾರಿ ಕೃಷ್ಣಾತಾಯಿ ವಿಜಯನಗರ ಸಂಗಮ ಅರಸರ ಸಾರ್ವಭೌಮತ್ವ ಒಪ್ಪಿಕೊಂಡಳು[೪೮] ಆದರೆ ವಿಜಯನಗರ ಸಾಮಂತರಿಗೆ ಕಾಮದೇವನ ಮೇಲೆ ಸಾರ್ವಭೌಮ ಅಧಿಕಾರ ಹೇರಲು ಸಾಧ್ಯವಾಗಿರಲಿಲ್ಲ.

ನಂತರ ಶಿವಚಿತ್ತ ಇಮ್ಮಡಿ ವೀರಬಸವಿದೇವರಸನು (ಕ್ರಿ.ಶ. ೧೩೫೪–೧೩೬೫) ಆಳ್ವಿಕೆ ನಡೆಸಿದನು. ನಂತರ ಮೂರನೇ ಶಿವಚಿತ್ತ ವೀರಕಾಮದೇವ (ಕ್ರಿ.ಶ. ೧೩೬೫–೧೪೧೦) ಆಳ್ವಿಕೆ ನಡೆಸಿದನು. ಕ್ರಿ.ಶ. ೧೪೦೪ ನಾಗೂರಿನ ಶಾಸನವು[೪೯] ಕಾಮದೇವನ ಬಿರುದುಗಳನ್ನು ಮತ್ತು ಈತನ ಆಳ್ವಿಕೆಯ ಹತ್ತೊಂಬತ್ತನೇಯ ವರ್ಷವನ್ನು ಹೇಳಿದೆ. ಶಾಸನ ಬರೆಸುವ ಕಾಲಗಣನೆಯಿಂದ ಕ್ರಿ.ಶ. ೧೩೬೫ರಲ್ಲಿ ಅಧಿಕಾರಕ್ಕೆ ಬಂದಿರುವುದು ಸ್ಪಷ್ಟವಾಗುತ್ತದೆ. ಈತ ವಿನಾಯಕ ಮತ್ತು ವಿಷ್ಣುದೇವರ ಪೂಜಾ ಕಾರ್ಯಗಳಿಗಾಗಿ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದಲ್ಲಿ ಶ್ರೀ ಪ್ರಕಾಶತೀರ್ಥ ಶ್ರೀ ಪಾದರಿಗೆ ದತ್ತಿ ನೀಡಿದನು. ಮೂರನೇ ಶಿವಚಿತ್ತ ವೀರಕಾಮದೇವ ಈ ವಂಶದ ಕೊನೆಯ ಅರಸನಾಗಿದ್ದಾನೆ.

ಚಂದಾವರ ಕಾದಂಬರ ವಂಶಾವಳಿ[೫೦]

↓

ಪಟ್ಟಣ ತೈಲವರ್ಮನ ಮಗಳು ಹಂಪಾದೇವಿ

+

ಹಾನಗಲ್ಲು ಕಾದಂಬ ಮಲ್ಲಿದೇವ

↓

ವೀರದೇವ/ಬೀರದೇವ (ಕ್ರಿ.ಶ. ೧೧೮೩–೧೨೩೪)

↓

ತೈಲ

↓

ಕಾಮದೇವ (ಕ್ರಿ.ಶ. ೧೨೩೪–೧೨೮೮)

↓

ಶಿವಚಿತ್ತ ಬಸವಿದೇವರಸ (ಕ್ರಿ.ಶ. ೧೨೮೮–೧೩೨೬)

↓

ಇಮ್ಮಡಿ ಕಾಮದೇವ (ಕ್ರಿ.ಶ. ೧೩೨೬–೧೩೫೪)

↓

ಶಿವಚಿತ್ತ ಇಮ್ಮಡಿ ವೀರಬಸವಿದೇವರಸ (ಕ್ರಿ.ಶ. ೧೩೫೪–೧೩೫೮)

↓

ಮೂರನೇ ಶಿವಚಿತ್ತ ಕಾಮದೇವ (ಕ್ರಿ.ಶ. ೧೩೮೫–೧೪೧೦)

ವಿಜಯನಗರ ಅರಸರು ಮತ್ತು ಅವರ ಅಧಿಕಾರಿಗಳು

೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸಂಗಮನ ಮಕ್ಕಳಾದ ಹರಿಹರ ಮತ್ತು ಬುಕ್ಕರು ಸ್ಥಾಪಿಸಿದರು. ಈ ಸಾಮ್ರಾಜ್ಯದಲ್ಲಿ ಸಂಗಮ, ಸಾಳ್ವ, ತುಳುವ, ಅರವೀಡು ಎಂಬ ನಾಲ್ಕು ಅರಸುಮನೆತನಗಳು ಆಳ್ವಿಕೆಯನ್ನು ಮಾಡಿದವು. ಹೊಯ್ಸಳರ ಮೂರನೇ ಬಲ್ಲಾಳನ ರಾಣಿ ಕೃಷ್ಣಾಯಿತಾಯಿ ತನ್ನ ರಾಜ್ಯವನ್ನು ಹರಿಹರ–ಬುಕ್ಕರಿಗೆ ನೀಡಿದ್ದಳು[೫೧]. ಇದರಿಂದ ಹೊಯ್ಸಳ ಮತ್ತು ಅಳುಪರ ಅಂಕಿತದಲ್ಲಿದ್ದ ಕರಾವಳಿ ಪ್ರದೇಶ ವಿಜಯನಗರ ಸಾಮ್ರಾಜ್ಯಕ್ಕೆ ಸೇರ್ಪಡೆಯಾಯಿತು.

ಕ್ರಿ.ಶ. ೧೨೭೮ರ ಶಾಸನದಲ್ಲಿ[೫೨] ಬುಕ್ಕರಾಯನು ವಿಜಯನಗರದಲ್ಲಿ ಸ್ವತಂತ್ರವಾಗಿ ಆಳ್ವಿಕೆ ನಡೆಸುವುದಕ್ಕಿಂತ ಪೂರ್ವದಲ್ಲಿಯೇ ಮಲ್ಲಪ್ಪ ಒಡೆಯರು ಹೈವೆಯ ಮಂಡಲಾಧಿಪತಿಗಳಾಗಿ ಆಳ್ವಿಕೆ ನಡೆಸಿದರೆಂದು ಹೇಳಿದೆ. ಕ್ರಿ.ಶ. ೧೨೯೫ರ ಶಾಸನದ ಪ್ರಕಾರ[೫೩] ಬುಕ್ಕ ವಿಜಯನಗರ ಅರಸನಾಗಿ ಅಳ್ವಿಕೆ ನಡೆಸುವುದಕ್ಕಿಂತ ಪೂರ್ವದಲ್ಲಿ

ಮಹಾಪ್ರಧಾನ ಅನಂತರಸ ಒಡೆಯರು ಕಟ್ಟಿಸಿದ ಛತ್ರಕ್ಕೆ ದಾನ ನೀಡಿದರು. ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಹರಿಹರನ ಸಹೋದರ ಮಾರಪ್ಪನು ಉತ್ತರಕನ್ನಡದ ಮೇಲೆ ದಂಡೆತ್ತಿ ಬಂದು ಕ್ರಿ.ಶ. ೧೩೪೭ರಲ್ಲಿ ಚಂದಾವರ ಕಾದಂಬರ ಮೇಲೆ ದಾಳಿ ಮಾಡಿ ಸೋಲಿಸಿ ಇದೇ ವರ್ಷ ಗೋಕರ್ಣಕ್ಕೆಬಂದನು.[೫೪] ಕ್ರಿ.ಶ. ೧೩೬೧ರ ದೊಬ್ಬಡ ಶಾಸನವು[೫೫] ಮಹಾರಾಜಾಧಿರಾಜ ವೀರಬುಕ್ಕರಾಯನ ಆಳ್ವಿಕೆ ಕಾಲದಲ್ಲಿ ಮಹಾಪ್ರಧಾನ ಮಲ್ಲೆಯ ದಂಡನಾಯಕನು ತುಳು ರಾಜ್ಯವನ್ನು ತನ್ನ ರಾಜ್ಯದ ರಾಜಧಾನಿ ಬಾರಕೂರನಿಂದ ಆಳುತ್ತಿದ್ದನೆಂದು ತಿಳಿಸುತ್ತದೆ[೫೬]. ಕ್ರಿ.ಶ. ೧೩೬೮ರ ಶಾಸನ[೫೭] ವಿಜಯನಗರ ದೊರೆ ಬುಕ್ಕನ ಆಳ್ವಿಕೆಯ ಕಾಲದಲ್ಲಿ ಹೈವೆಯ ರಾಜ್ಯಪಾಲನಾಗಿ ಮಲ್ಲಪ್ಪ ಒಡೆಯರು ಅಧಿಕಾರ ನಡೆಸುತ್ತಿದ್ದಾಗ ಕರಣಿಕ ನರಸಿಂಹ ಗೋಕರ್ಣದ ಬ್ರಾಹ್ಮಣರ ಛತ್ರಕ್ಕೆ ಅಕ್ಕಿ ದಾನ ನೀಡಿದನ್ನು ತಿಳಿಸುತ್ತದೆ. ಕ್ರಿ.ಶ. ೧೩೬೮ರ ಇನ್ನೊಂದು ಶಾಸನ[೫೮] ದಲ್ಲಿ ವಿಜಯನಗರ ದೊರೆ ಬುಕ್ಕನ ಅಧಿಕಾರಾವಧಿಯಲ್ಲಿ ಮಲ್ಲಪ್ಪ ಒಡೆಯರು ಹೈವೆಯಲ್ಲಿ ಪ್ರಾಂತ್ಯಾಧಿಕಾರಿಯಾಗಿದ್ದಾಗ ಮಹಾಪ್ರಧಾನ ಅನಂತರಸ ಒಡೆಯರು ಗೋಕರ್ಣದ ಛತ್ರಕ್ಕೆ ಭೂದಾನ ನೀಡಿದ್ದನ್ನು ದಾಖಲಿಸಿದೆ. ವಿಜಯನಗರ ದೊರೆ ಬುಕ್ಕನು ದ್ವಾರ ಸಮುದ್ರದ ನೆಲವಿಡಿನಿಂದ ಅಧಿಕಾರ ನಡೆಸುತ್ತಿದ್ದಾಗ ಮಲ್ಲಪ್ಪ ಒಡೆಯರು ಹೊನ್ನಾವರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಹೈವೆಯನ್ನು ಆಳುತ್ತಿದ್ದಾಗ ಬುಕ್ಕನ ಧರ್ಮಪತ್ನಿ ಹೊನ್ನಲದೇವಿ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿನ ಛತ್ರಕ್ಕೆ ಭೂದಾನ ನೀಡಿದ್ದನ್ನು ಕ್ರಿ.ಶ. ೧೩೭೫ರ ಶಾಸನ[೫೯] ದಲ್ಲಿ ದಾಖಲಿಸಿದೆ.

ಕ್ರಿ.ಶ. ೧೩೮೮ರ ಗೋಕರ್ಣದ ಇನ್ನೊಂದು ಶಾಸನ[೬೦] ಇಮ್ಮಡಿ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೈವೆಯನ್ನು ಆಳುತ್ತಿದ್ದಾಗ ಹರಿಹರನ ಮಗಳು ವಿಜಯಲಕ್ಷ್ಮಿ ಗೋಕರ್ಣದಲ್ಲಿ ಮಾಡಿದ ಛತ್ರಕ್ಕೆ ಹಾಗೂ ಮಹಾಬಲದೇವರ ಅಮೃತಪಡಿಗೆ ಕುಂಬಳೆಯ ಹೆಬ್ಬಾರರು ಭೂದಾನ ಮಾಡಿದ್ದನ್ನು ದಾಖಲಿಸಿದೆ. ಕ್ರಿ.ಶ. ೧೩೮೮ರ ಇನ್ನೊಂದು ಶಾಸನ[೬೧] ವಿಜಯನಗರ ದೊರೆ ೨ನೇ ಹರಿಹರನ ಅಧಿಕಾರಾವಧಿಯಲ್ಲಿ ಮಗಳು ಗೌರಾದೇವಿಯು ಹೈವೆ ಪ್ರಾಂತ್ಯದ ಬಾಡದ ತುಂಬಲೆಯ ಹೆಬ್ಬಾರರಿಂದ ಭೂಮಿಯನ್ನು ಪಡೆದು ಶ್ರೀಮಹಾಸ್ವಾಮಲಾಕಾಚಾರ್ಯ ಸಂಪ್ರದಾಯ ಪ್ರವರ್ತಕ ರಾಜೇಂದ್ರ ಸರಸ್ವತಿ ಶ್ರೀ ಪಾದರಿಗೆ ಭಿಕ್ಷಾಸ್ವಾಸ್ಥೆಯಾಗಿ ಭೂಮಿ ದಾನ ಮಾಡಿದ್ದನ್ನು ಶಾಸನ ದಾಖಲಿಸಿದೆ. ಇದರಿಂದ ವಿಜಯನಗರದ ಅರಸರಂತೆ ಮಕ್ಕಳು ಕೂಡ ದಾನ ಮಾಡುವ ಕಾರ್ಯದಲ್ಲಿ ತೊಡಗಿದ್ದರೆಂದು ಮಾಹಿತಿ ಲಭ್ಯವಾಗುತ್ತದೆ. ಕ್ರಿ.ಶ. ೧೩೯೦ ರ ಗೋಕರ್ಣದ ಶಾಸನ[೬೨] ವಿಜಯನಗರ ದೊರೆ ಇಮ್ಮಡಿ ಹರಿಹರನ ಆಳ್ವಿಕೆಯ ಅವಧಿಯಲ್ಲಿ ಪತ್ನಿ ವಿಠಲದೇವಿ ಕೇತೆಯ ಸಾವಂತರಿಂದ ಭೂಮಿಯನ್ನು ಖರೀದಿಸಿ ಛತ್ರಕ್ಕೆ ಭೂದಾನ ಮಾಡಿದ್ದನ್ನು ಉಲ್ಲೇಖಿಸಿದೆ.

ಕ್ರಿ.ಶ. ೧೩೯೧ರ ಗೋಕರ್ಣದ ಶಾಸನದಲ್ಲಿ[೧೩] ವಿಜಯನಗರ ದೊರೆ ಇಮ್ಮಡಿ ಹರಿಹರನ ಕಾಲದಲ್ಲಿ ಹರಿಹರನ ಮಗಳು ಗೋಕರ್ಣದಲ್ಲಿನ ಛತ್ರಕ್ಕೆ ಭೂದಾನ ಮಾಡಿದ ವಿವರಣೆಯಿದೆ. ವಿಜಯನಗರ ದೊರೆ ಇಮ್ಮಡಿ ಹರಿಹರನ ಆಳ್ವಿಕೆಯ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರ ರಾಜಧಾನಿಯಲ್ಲಿ ಆಳುತ್ತಿದ್ದ ಅವಧಿಯಲ್ಲಿ ಚಿಕ್ಕ ಮಲ್ಲಪ್ಪ ಒಡೆಯರ ಕುಮಾರ ದಂಡಗಳು ಮಹಾಬಲೇಶ್ವರ ದೇವರ ಅಮೃತಪಡಿಗೆ ಭೂದಾನ ಮಾಡಿದನು.[೧೪]. ಕ್ರಿ.ಶ. ೧೩೯೩ರ ಇನ್ನೊಂದು ಶಾಸನ[೧೫] ವಿಜಯನಗರ ದೊರೆ ಇಮ್ಮಡಿ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರ ರಾಜಧಾನಿಯನ್ನಾಗಿ ಹೈವೆ, ತುಳು, ಕೊಂಕಣ ಆಳುತ್ತಿದ್ದ ಸಮಯದಲ್ಲಿ ೨ನೇ ಹರಿಹರನ ಪತ್ನಿ ವಿಠಲದೇವಿ ಗೋಕರ್ಣದಲ್ಲಿ ಮಾಡಿದ ಛತ್ರಕ್ಕೆ ಭೂದಾನ ಮಾಡಿದ್ದನ್ನು ದಾಖಲಿಸಿದೆ. ಕ್ರಿ.ಶ. ೧೩೯೩ರ ಗೋಕರ್ಣ ಶಾಸನ[೧೬] ವಿಜಯನಗರ ಚಕ್ರವರ್ತಿ ಇಮ್ಮಡಿ ಹರಿಹರನ ಕಾಲದಲ್ಲಿ ಮಹಾಪ್ರಧಾನ ಮಾದರಸ ಒಡೆಯನಿಗೆ, ಹನಿಹಳ್ಳಿಯ ಕರಿಯ ತಮ್ಮ ನಾಯ್ಕ ಗೋಕರ್ಣದ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ಇದ್ದಂತ ಛತ್ರಕ್ಕಾಗಿ ಭೂದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಕ್ರಿ.ಶ. ೧೩೯೪ ರ ಗೋಕರ್ಣ ಶಾಸನ[೧೭] ವಿಜಯನಗರ ಅರಸ ಇಮ್ಮಡಿ ಹರಿಹರನ ಕಾಲದಲ್ಲಿ ಬಾರಕೂರಿನ ಮಲ್ಲಪ್ಪ ಒಡೆಯರು ಗೋಕರ್ಣದ ಮಹಾಬಲೇಶ್ವರ ದೇವರ ಅಮೃತಪಡಿಗೆ, ನಂದಾದೀಪದ ಸಲುವಾಗಿ ಭೂದಾನಮಾಡಿದ್ದನ್ನು ದಾಖಲಿಸಿದೆ. ಕ್ರಿ.ಶ. ೧೩೯೫ರ ಗೋಕರ್ಣ ಶಾಸನ[೧೮] ವಿಜಯನಗರ ಅರಸ ಇಮ್ಮಡಿ ಹರಿಹರನ ಕಾಲದಲ್ಲಿ ಸಾಯಣ್ಣನ ಮಕ್ಕಳು ಗೋಕರ್ಣದ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಬ್ರಾಹ್ಮಣ ಭೋಜನ ಛತ್ರಕ್ಕೆ ಭೂದಾನಮಾಡಿದ್ದನ್ನು ಉಲ್ಲೇಖಿಸಿದೆ. ಇಮ್ಮಡಿ ಹರಿಹರ ವಿಜಯನಗರದಲ್ಲಿ ಆಳ್ವಿಕೆ ಮಾಡುತ್ತಿದ್ದ ಸಮಯದಲ್ಲಿ ಮಾಧವನು ಕೇಶವಭಟ್ಟರಿಗೆ ಗೋಕರ್ಣದಲ್ಲಿ ವಿಜಯನಗರ ದೊರೆ ಬುಕ್ಕ ಮಾಡಿದ ಛತ್ರದ ಸಲುವಾಗಿ ಭೂಮಿದಾನ ಮಾಡಿದ್ದನ್ನು ಶಾಸನ ಉಲ್ಲೇಖಿಸುತ್ತದೆ.[೧೯] ಕ್ರಿ.ಶ. ೧೩೯೬ರ ಗೋಕರ್ಣ ಶಾಸನದಲ್ಲಿ[೨೦] ಹರಿಯಣ್ಣ ಒಡೆಯರ ಉಲ್ಲೇಖ ಲಭ್ಯವಾಗಿರುವುದರಿಂದ ಬಹುಶಃ ಮಹಾಪ್ರಧಾನ ಮಲ್ಲಪ್ಪ ಒಡೆಯರ ಆಳ್ವಿಕೆ ಇಲ್ಲಿಗೆ ಅಂತ್ಯಗೊಂಡಿರಬೇಕು ಎಂದು ತಿಳಿದುಬರುತ್ತದೆ. ಕ್ರಿ.ಶ. ೧೪೦೨ ರ ಗೋಕರ್ಣದ ಶಾಸನದಲ್ಲಿ[೨೧] ಇಮ್ಮಡಿ ಹರಿಹರನ ಕಾಲದಲ್ಲಿ ಮಹಾಪ್ರಧಾನ ಗೋವಿಂದ ಒಡೆಯರು ಹೊನ್ನಾವರ ರಾಜಧಾನಿಯಲ್ಲಿದ್ದು ಹೈವೆ, ತುಳು, ಕೊಂಕಣ ಆಳುತ್ತಿದ್ದಾಗ ಸಾಯಣ್ಣನ ಮಕ್ಕಳು ಸಿಂಗಣ್ಣಯ್ಯ ಮಾಡಿದ ಛತ್ರಕ್ಕೆ ಭೂದಾನ ಮಾಡಿದ ವಿವರಣೆಯಿದೆ.

ಕಾಲ ಉಲ್ಲೇಖವಿಲ್ಲದ ಇನ್ನೊಂದು ಗೋಕರ್ಣ ಶಾಸನ[೨೨] ವಿಜಯನಗರದ ದೊರೆ ಇಮ್ಮಡಿ ಹರಿಹರನ ಕಾಲದಲ್ಲಿ ಗೋವಿಂದ ದೇವ ಒಡೆಯರು ಹೈವೆ, ತುಳು, ಕೊಂಕಣ ಆಳುತ್ತಿದ್ದಾಗ ಸರ್ವಜ್ಞಗಿರಿ ಶ್ರೀಪಾದರು ರಾಯರ ಬಳಿ ಹೋಗಿ ಮೈಲುಣ್ಣನ ಮಠ, ಛತ್ರ ತಮಗೆ ಕೊಡುವಂತೆ ಬೇಡಿಕೊಂಡಾಗ ರಾಯರು ಅದನ್ನು ಅವರಿಗೆ ಕೊಡುವಂತೆ ತನ್ನ

ಪ್ರಾಂತಾಧಿಕಾರಿಗೆ ತಿಳಿಸಿದ್ದನ್ನು ವಿವರಿಸುತ್ತದೆ. ಕ್ರಿ.ಶ. ೧೪೦೩ರ ಗೋಕರ್ಣ ಶಾಸನವು[೭೩] ಇಮ್ಮಡಿ ಹರಿಹರ ವಿಜಯನಗರದಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ವಿರುಪಣ್ಣ ಒಡೆಯರು ಹೈವೆ, ತುಳು, ಕೊಂಕಣವನ್ನು ಆಳುತ್ತಿದ್ದ ಸಮಯದಲ್ಲಿ ಹೊಯ್ಸಳನಾಡ ಸಾಳ್ವ ಅರಸು ಲಖ್ಖಣ್ಣಗಳು ಭೋಗವರ್ಧನ ವಾಳ ಪುರುಷಾದಿಷ್ಠಿತ ಸರ್ವಜ್ಞೇಶ್ವರ ಭಾರತಿ ಶ್ರೀಪಾದರಿಗೆ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೪೦೫ರ ಗೋಕರ್ಣ ಶಾಸನವು[೭೪] ವಿಜಯನಗರ ಅರಸ ಇಮ್ಮಡಿ ಹರಿಹರನ ಕಾಲದಲ್ಲಿ ಪ್ರಧಾನಿ ಗೋವಿಂದ ದೇವನ ಮಗ ಹೊನ್ನಾವರ ರಾಜಧಾನಿಯಲ್ಲಿದ್ದು ಹೈವೆ, ತುಳು, ಕೊಂಕಣವನ್ನು ಆಳುತ್ತಿದ್ದ ಸಮಯದಲ್ಲಿ ಹರಿಹರನ ಪಟ್ಟದ ರಾಣಿ ವಿಠ್ಠಲದೇವಿ ಹಾಗೂ ಮಗ ಕುಮಾರಬುಕ್ಕನು ಸೇರಿ ಗೋಕರ್ಣದಲ್ಲಿ ಯತಿಭಿಕ್ಷೆ, ಬ್ರಾಹ್ಮಣ ಭೋಜನಕ್ಕೆ ಸಾತಣ್ಣಶೆಟ್ಟಿ ಮೂಲಕ ಭೋಗವರ್ಧನವಾಳ ವಿಬುಧೇಂದ್ರ ಭಾರತಿಗಳಿಗೆ ಭೂದಾನ ಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೪೦೫ರ ಗೋಕರ್ಣ ಶಾಸನ[೭೫] ವಿಜಯನಗರ ದೊರೆ ೨ನೇ ಬುಕ್ಕನ ಕಾಲದಲ್ಲಿ ವಿರುಪಣ್ಣರು ಹೊನ್ನಾವರ ರಾಜಧಾನಿಯಲ್ಲಿದ್ದು ಹೈವೆ, ತುಳು, ಕೊಂಕಣವನ್ನು ಆಳುತ್ತಿದ್ದಾಗ ಚಾಮಣ್ಣ ದಂಡನಾಯಕರು ಗೋಕರ್ಣದಲ್ಲಿ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ಮಾಡಿದ ಛತ್ರಕ್ಕೆ ಅಂಖಣ್ಣಯ್ಯರು ಕೊಟ್ಟಿದ ಭೂಮಿಯನ್ನು ಜ್ಞಾನೇಂದ್ರಪುರಿ ಶ್ರೀಪಾದರಿಗೆ ಕೊಟ್ಟು ಛತ್ರವನ್ನು ನಡೆಸಿಕೊಂಡು ಹೋಗಬೇಕೆಂದು ತಿಳಿಸುತ್ತದೆ. ಕಾಲ ಉಲ್ಲೇಖವಿಲ್ಲದ ಇನ್ನೊಂದು ಶಾಸನ[೭೬] ವಿಜಯನಗರ ದೊರೆಯ ಹೆಸರಿನ ಸ್ಪಷ್ಟತೆ ಇಲ್ಲ. ಗೋವಿಂದ ದೇವರು ಸುವರ್ಣಪುರವನ್ನು (ಹೊನ್ನಾವರ) ರಾಜಧಾನಿಯನ್ನಾಗಿ ಮಾಡಿ ಆಳುತ್ತಿದ್ದ ಸಮಯದಲ್ಲಿ ಹರಿಹರನ ಪಟ್ಟದ ರಾಣಿ ವಿಠ್ಠಲದೇವಿ, ಮಗಳು ಹೇಮಕೋಟೆ ಆಯಿಗಳು ಸೇರಿ ಅಂಚಿತ್ಯಭಾರತಿ ಶ್ರೀಪಾದರಿಗೆ ಗೋಕರ್ಣದ ಮಹಾಬಲದೇವರಿಗೆ ನೈವೆದ್ಯ, ಯತಿಭಿಕ್ಷೆಗೆ, ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೪೦೬ರ ಗೋಕರ್ಣ ಶಾಸನದಲ್ಲಿ[೭೭] ಗುರುಮಹಾಮಂಡಲೇಶ್ವರ ಕ್ರಿಯಾಶಕ್ತಿ ಒಡೆಯರಿಗೆ ಹೊನ್ನಾವರದ ದೇವಪಯ್ಯರ ಮಕ್ಕಳು ಲಖ್ಖಣಗಳು ಸೇರಿ ಛತ್ರಕ್ಕೆ, ವಿಶ್ವೇಶ್ವರ ದೇವರ ಅಮೃತಪಡಿಗೆ ತಮಗೆ ಬರುವ ಭೂತೆರಿಗೆಯನ್ನು ನೀಡಿದ ಉಲ್ಲೇಖವಿದೆ. ಗೋಕರ್ಣದ ಕ್ರಿ.ಶ. ೧೪೦೮ರ ಶಾಸನ[೭೮] ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಸಾವಣ್ಣ ಒಡೆಯರು ಹೊನ್ನಾವರ ರಾಜಧಾನಿಯಲ್ಲಿದ್ದು ಹೈವೆ, ತುಳು, ಕೊಂಕಣವನ್ನು ಆಳುತ್ತಿದ್ದ ವೇಳೆಯಲ್ಲಿ ರಾಮೇಶ್ವರದ ಸರ್ವ...... ಅಮರೇಂದ್ರಪುರಿ ಶ್ರೀಪಾದರಿಗೆ ಭೂದಾನ ಮಾಡಿದ್ದನ್ನು ಉಲ್ಲೇಖಿಸಿದೆ. ಕ್ರಿ.ಶ. ೧೪೦೮ರ ಧಾರೇಶ್ವರ ಶಾಸನವು[೭೯] ೧ನೇ ದೇವರಾಯನ ಕಾಲದಲ್ಲಿ ದಂಡನಾಯಕ ಈಚಪ್ಪ ಒಡೆಯನು ಧಾರೇಶ್ವರ ದೇವಾಲಯಕ್ಕೆ ಭೂಮಿಯನ್ನು ದಾನಮಾಡಿದನೆಂದು ತಿಳಿಸುತ್ತದೆ.ಕ್ರಿ.ಶ. ೧೪೧೧ರ ಗೋಕರ್ಣ ಶಾಸನ[೮೦] ಒಂದನೇ ದೇವರಾಯನ ಕಾಲದಲ್ಲಿ ಪಿರಪ್ಪ ಒಡೆಯರಿಗೆ ಛತ್ರಧರ್ಮದ ಸಲುವಾಗಿ ಆರಾಧ್ಯದೇವರು ಭೂದಾನ ನೀಡಿದ್ದನ್ನು ದಾಖಲಿಸಿದೆ. ಕ್ರಿ.ಶ. ೧೪೧೨ರ ಶಾಸನದಲ್ಲಿ[೮೧] ಒಂದನೇ ದೇವರಾಯ ದ್ವಾರ ಸಮುದ್ರದ ನೆಲವಿಡಿನಲ್ಲಿ ಆಡಳಿತ ನಡೆಸುತ್ತಿದ್ದಾಗ ವೀರಪ್ಪ ಒಡೆಯರು ಗೊವೆಯ

ಚಂದ್ರಗುತ್ತಿ ಆಳುತ್ತಿದ್ದಾಗ ಗೋಕರ್ಣದ ಛತ್ರಕ್ಕೆ ಮಠದ ನಿವೇಶನವನ್ನು ದಾನ ಮಾಡಿದ ಉಲ್ಲೇಖವಿದೆ. ಕ್ರಿ.ಶ. ೧೪೧೨ರ ಗೋಕರ್ಣ ಶಾಸನ[೮೨] ಒಂದನೇ ದೇವರಾಯ ವಿಜಯನಗರದಲ್ಲಿ ಆಳುತ್ತಿದ್ದಾಗ ಮಹಾಪ್ರಧಾನ ಯಿಚಪ್ಪ ಒಡೆಯರು ಹೊನ್ನಾವರ ರಾಜಧಾನಿಯಲ್ಲಿದ್ದು ಅಧಿಕಾರ ನಡೆಸುತ್ತಿದ್ದಾಗ ಕರಣಿಕ ಆರಾಧ್ಯದೇವನ ಮಗ ಬಸವಣ್ಣ, ವಿರಪ್ಪ ಒಡೆಯರು ಮಾಡಿದ ಛತ್ರಕ್ಕೆ ಹಾಗೂ ಗುಣವಂತೇಶ್ವರ ದೇವರ ಅಮೃತಪಡಿಗೆ ಭೂದಾನ ನೀಡಿದ್ದನ್ನು ದಾಖಲಿಸಿದೆ.

ಕ್ರಿಶ. ೧೪೧೨ರ ಗೋಕರ್ಣ ಶಾಸನವು[೮೩] ವಿಜಯನಗರ ದೊರೆ ಒಂದನೇ ದೇವರಾಯನ ಅಧಿಕಾರವಧಿಯಲ್ಲಿ ಯಿಚಪ್ಪ ಒಡೆಯರು ಹೊನ್ನಾವರ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದಾಗ ಬಾಚಣ್ಣ ಒಡೆಯರು, ಬಸವ ಮಾಲೆಗಾರನ ಮಗಳು ಬಲ್ಲಿಮಳು, ಮಕ್ಕಳು ಸೇರಿ ಮಹಾಬಲೇಶ್ವರ ದೇವರ ಅಮೃತಪಡಿಗೆ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೪೧೨ರ ಶಾಸನ[೮೪] ಒಂದನೇ ದೇವರಾಯ ವಿಜಯನಗರ ಅರಸನಾಗಿದ್ದಾಗ ಯಿಚಪ್ಪ ಒಡೆಯರು ಹೈವೆಯಲ್ಲಿ ಆಳ್ವಿಕೆ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಕರಣಿಕ ನರಸಿಂಹ ದೇವರು ಶ್ರೀಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿನ ಛತ್ರಕ್ಕೆ ಭೂದಾನಮಾಡಿದ್ದನ್ನು ವಿವರಿಸುತ್ತದೆ.

ಕ್ರಿ.ಶ. ೧೪೧೬ರ ಗೋಕರ್ಣ ಶಾಸನವು[೮೫] ವಿಜಯನಗರ ದೊರೆ ಇಮ್ಮಡಿ ದೇವರಾಯನ ಕಾಲದಲ್ಲಿ ಪ್ರಧಾನಿ ದೆಮಣ್ಣ ಒಡೆಯರು ಹೊನ್ನಾವರ ರಾಜಧಾನಿಯಲ್ಲಿ ಆಳುತಿದ್ದರು.ಈ ಸಮಯದಲ್ಲಿ ಗೋಕರ್ಣದ ನರಸಿಂಹ ದೇವಾಲಯದ ಜ್ಞಾನೇಂದ್ರ ಸಾಗರ ಶ್ರೀಪಾದರಿಗೆ ಭೂದಾನ ಮಾಡಿದ್ದನ್ನು ದಾಖಲಿಸಿದೆ. ಕ್ರಿ.ಶ. ೧೪೨೪ರ ಗೋಕರ್ಣ ಶಾಸನದಲ್ಲಿ[೮೬] ಎರಡನೇ ದೇವರಾಯ ವಿಜಯನಗರ ದೊರೆಯಾಗಿದ್ದಾಗ ಮಹಾಪ್ರಧಾನ ಹಲಿದೇವ ಒಡೆಯರು ಹೊನ್ನಾವರ ರಾಜಧಾನಿಯಲ್ಲಿ ಆಳುತ್ತಿದ್ದಾಗ ಹಲಿಯಪ್ಪರಾಣಿಯರಿಗೆ ಬೋಳ ಹೆಬ್ಬಾರ, ಮಧುಸೂದನ ಹೆಬ್ಬಾರ, ಭಟ್ಟರ ಹೆಬ್ಬಾರ ಸಾತಣ್ಣ ಹೆಗಡೆಯರು ಸೇರಿ ಭೂದಾನ ಮಾಡಿದರು. ಅದನ್ನು ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿನ ಬ್ರಾಹ್ಮಣ ಭೋಜನದ ಛತ್ರಕ್ಕೆ ನೀಡಿದ ಉಲ್ಲೇಖವಿದೆ. ಕ್ರಿ.ಶ.೧೪೪೨ರ ಗೋಕರ್ಣ ಶಾಸನದಲ್ಲಿ[೮೭] ಎರಡನೇ ದೇವರಾಯ ವಿಜಯನಗರದ ದೊರೆಯಾಗಿದ್ದಾಗ ಮಾಳ್ವ ಒಡೆಯರು ಹಯಿವೆ, ತುಳು, ಕೊಂಕಣ ಆಳುತ್ತಿದ್ದ ಸಮಯದಲ್ಲಿ ೨ನೇ ದೇವರಾಯನ ಮಕ್ಕಳು ವರದಣ್ಣ ನಾಯ್ಕರು ಮಾಡಿದ ಛತ್ರಕ್ಕೆ ಭೂದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. ೧೪೪೬ರ ಗೋಕರ್ಣ ಶಾಸನ[೮೮] ಎರಡನೇ ದೇವರಾಯ ವಿಜಯನಗರದ ದೊರೆಯಾಗಿದ್ದಾಗ ರಾಮಚಂದ್ರದೇವರು ಹೊನ್ನಾವರ ರಾಜಧಾನಿಯಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ದೇವರಾಯನ ನಿರೂಪದಂತೆ ಪುರುಷೋತ್ತಮ ಭಾರತಿ ಶ್ರೀಪಾದರಿಗೆ ಮಂಗರಸರು ಭೂದಾನ ಮಾಡಿದ್ದನ್ನು ಉಲ್ಲೇಖಿಸಿದೆ. ಅಲ್ಲದೇ ದೇವರಾಯನು ಇದಕ್ಕಿಂತ

ಮೊದಲು ಗೋಕರ್ಣದ ಮಹಾಬಲೇಶ್ವರ ದೇವರಿಗೆ ಪಂಚಾಮೃತ ಅಭಿಷೇಕ, ನೈವೈದ್ಯ, ಅಂಗರಂಗದ ವೈಭವಕ್ಕೆ ಹಾಗೂ ಛತ್ರಕ್ಕೆ ಮಗನ ಹೆಸರಿನಲ್ಲಿ ೨ನೇ ದೇವರಾಯನು ದಾನನೀಡಿದ್ದನು. ಕ್ರಿ.ಶ. ೧೪೪೯ರ ಗೋಕರ್ಣ ಶಾಸನ[೯] ವಿಜಯನಗರ ದೊರೆ ಎರಡನೇ ದೇವರಾಯನ ಕಾಲದಲ್ಲಿ ಬಾಯಪ್ಪ ಒಡೆಯರು ಹೊನ್ನಾವರ ರಾಜಧಾನಿಯಲ್ಲಿ ಆಳುತ್ತಿದ್ದಾಗ ಭೋಗವರ್ಧನವಾಳ ಶ್ರೀರಾಘವೇಶ್ವರ ಶ್ರೀಪಾದರಿಗೆ, ವಿಜಯನಗರ ಚಕ್ರವರ್ತಿಗೆ ಆಯುರಾರೋಗ್ಯ ಆಗಬೇಕೆಂದು ಗೋಕರ್ಣದ ಮಹಾಬಲೇಶ್ವರನ ಸನ್ನಿಧಿಯಲ್ಲಿ ಅವರು ಆರಾಧಿಸುವ ದೇವರನ್ನು ಬೇಡಿಕೊಳ್ಳುವಂತೆ ಅದಕ್ಕೆ ಶ್ರೀರಾಮಚಂದ್ರದೇವರ ಅಮೃತಪಡಿಗೆ ಹಾಗೂ ಯತಿಭಿಕ್ಷಾಸ್ವಾಸ್ಥೆಗೆ ಭೂದಾನ ಮಾಡಿದ್ದನ್ನು ಉಲ್ಲೇಖಿಸಿದೆ. ಕ್ರಿ.ಶ. ೧೪೪೯ರ ಗೋಕರ್ಣದ ಇನ್ನೊಂದು ಶಾಸನವು[೧೦] ವಿಜಯನಗರ ದೊರೆ ೨ನೇ ದೇವರಾಯನ ಕಾಲದಲ್ಲಿ ಬಾಯಪ್ಪ ಒಡೆಯರು ಹೊನ್ನಾವರ ರಾಜಧಾನಿಯಲ್ಲಿ ಆಳುತ್ತಿದ್ದಾಗ ಭೋಗವರ್ಧನವಾಳ ಪರುಶಾಧಿಷ್ಟಿತರಾದ ಅಮರೇಶ್ವರ ಭಾರತಿ ಶ್ರೀಪಾದಂಗಳ ಶಿಷ್ಯರು, ರಾಘವೋತ್ತಮ ಭಾರತಿ ಶ್ರಿಪಾದರಿಗೆ ೨ನೇ ದೇವರಾಯನಿಗೆ ಆರೋಗ್ಯವನ್ನು ಪ್ರಾರ್ಥಿಸಿ ಗೋಕರ್ಣ ಮಹಾಬಲೇಶ್ವರನ ಸನ್ನಿಧಿಯಲ್ಲಿ ಮಾಡಿದ ಛತ್ರಕ್ಕೆ ಹಾಗೂ ಅಮೃತಪಡಿಗೆ ಭೂದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೪೬೯ರ ಗೋಕರ್ಣ ಶಾಸನ[೧೧] ವಿಜಯನಗರ ಚಕ್ರವರ್ತಿ ವಿರುಪಾಕ್ಷನ ಕಾಲದಲ್ಲಿ ಅನಂತಪ್ಪಾಧಿಕಾರಿಗಳು ಛತ್ರದ ಸಲುವಾಗಿ ಬೊಗಣ್ಣಗೆ ಭೂದಾನ ಮಾಡಿದ್ದನ್ನು ದಾಖಲಿಸುತ್ತದೆ. ಕ್ರಿ.ಶ. ೧೫೫೩ರ ಗೋಕರ್ಣದಲ್ಲಿ ದೊರೆತ ಶಾಸನ[೧೨] ವಿಜಯನಗರ ಚಕ್ರವರ್ತಿ ಸದಾಶಿವರಾಯನ ದಂಡನಾಯಕನಾದ ಮಹಾಪ್ರಧಾನ ಕೃಷ್ಣದೇವರಸ ಒಡೆಯರು ನಗಿರೆ ರಾಜ್ಯ ಆಳುತ್ತಿದ್ದ ಸಮಯದಲ್ಲಿ ಗಣಪ ಜೋಯಿಷ ಮತ್ತು ಕೆಲ ಬ್ರಾಹ್ಮಣರು ಸೇರಿ ಭೂಮಿಯನ್ನು ಖರೀದಿಸಿ ಮಠದ ಪೋಷಣೆ ಹಾಗೂ ಇತರ ಧಾರ್ಮಿಕ ಕಾರ್ಯಗಳಿಗೆ ದಾನ ನೀಡಿದ್ದನ್ನು ವಿವರಿಸುತ್ತದೆ. ಕ್ರಿ.ಶ. ೧೫೪೯ರ ಗೋಕರ್ಣದ ಶಾಸನ[೧೩] ಮಹಾರಾಜ ೩ನೇ ಹರಿಹರ ವಿಜಯನಗರದ ದೊರೆಯಾಗಿದ್ದಾಗ ಮಹಾಪ್ರಧಾನ ಮಲ್ಲಪ್ಪ ಹೊನ್ನಾವರ ರಾಜಧಾನಿಯಲ್ಲಿ ಆಳುತ್ತಿದ್ದಾಗ ಹರಿಹರನ ಪತ್ನಿ ವಿಠ್ಠಲದೇವಿ ಬೀರಸಾವಂತನ ಭೂಮಿಯನ್ನು ಖರೀದಿಸಿ ಗೋಕರ್ಣದಲ್ಲಿ ತಾವು ಮಾಡಿದ ಛತ್ರಕ್ಕೆ ಭೂದಾನ ನೀಡಿದ್ದನ್ನು ದಾಖಲಿಸಿದೆ. ಕ್ರಿ.ಶ ೧೫ನೇ ಶತಮಾನಕ್ಕೆ ಸೇರಿದ ಗೋಕರ್ಣದ ಪಾರ್ವತಿ ದೇವಸ್ಥಾನದಲ್ಲಿನ ಶಾಸನ[೧೪] ದಂಡನಾಯಕರಾದ ಮಹಾಪ್ರಧಾನರು ಪಾರ್ವತಿ ದೇವಸ್ಥಾನದ ಸತ್ರದ ನಿರ್ವಹಣೆಗಾಗಿ ಅಂಕೋಲಾ ತಾಲೂಕಿನ ಹೊಸೂರು ಗ್ರಾಮವನ್ನು ಲಿಂಗಭಟ್ಟರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಒಟ್ಟಾರೆ ಈ ಅಧ್ಯಾಯದಲ್ಲಿ ಭೌಗೋಳಿಕ ಪ್ರಭಾವ ಪ್ರಾಕೃತಿಕ ಹಿನ್ನೆಲೆಯ ದೃಷ್ಟಿಯಿಂದ ಯಾವ ರೀತಿ ಪ್ರಭಾವ ಬೀರಿದೆ ಎಂಬುದನ್ನು ಪ್ರಸ್ತುತಪಡಿಸಲಾಗಿದೆ. ಅಲ್ಲದೇ ಇಲ್ಲಿ ಆಳ್ವಿಕೆ ನಡೆಸಿದ ಭೋಜರು, ಕೈಕೇಯರು, ಶಿಶುಗಲಿ ಪಾಂಡ್ಯರು, ಚಂದಾವರ ಕಾದಂಬರು.

ಮಾಂಡಲಿಕರು, ವಿಜಯನಗರ ಅರಸರು ಆಳಿ ಅಳಿದು ಅವರು ಬಿಟ್ಟ ಹೋದ ಕುರುಹುಗಳ ಆಧಾರದಲ್ಲಿ ರಾಜಕೀಯ ಇತಿಹಾಸ ಪ್ರಸ್ತಾಪಿಸಲಾಗಿದೆ.

ಅಡಿಟಿಪ್ಪಣಿಗಳು

೧. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ ಉತ್ತರ ಕನ್ನಡ ಕಾರವಾರ ೨೦೦೧ರ ಜನಗಣತಿ.

೨. ಸೂರ್ಯನಾಥ ಕಾಮತ., (ಸಂ) ಕರ್ನಾಟಕ ಸ್ಟೇಟ ಗ್ಯಾಜಿಟಿಯರ ಉತ್ತರ ಕನ್ನಡ ಡಿಸ್ಟ್ರಿಕ್ಟ,೧೯೮೫, ಪು. ೧೭.

೩. ಕೆ.ಬಿ ಶಿವತಾರಕ., "ಕರ್ನಾಟಕ ಪುರಾತತ್ವ ನೆಲೆಗಳು", ೨೦೦೧, ಪು. ೪೧-೪೨.

೪. ಅದೇ ಪು. ೪೪.

೫. ಕನ್ನಡ ವಿಷಯ ವಿಶ್ವಕೋಶ, ೧೯೭೯, ಪು. ೩೨೮.

೬. ಸೂರ್ಯನಾಥ ಕಾಮತ., ಪೂರ್ವೋಕ್ತ, ೧೯೮೫, ಪು. ೯೧೩.

೭. ಸೂರ್ಯನಾಥ ಕಾಮತ., ಪೂರ್ವೋಕ್ತ, ೧೯೮೫, ಪು. ೯೪೧.

೮. ಕನ್ನಡ ವಿಷಯ ವಿಶ್ವಕೋಶ., ಪೂರ್ವೋಕ್ತ, ೧೯೭೯, ಪು. ೫೦೫.

೯. ಧಾರವಾಡ, ಬೆಳಗಾಂವ್, ವಿಜಾಪುರ, ಕಾರವಾರ, ಮತ್ತು ಕಾನಡಾ ಗ್ಯಾಜಿಟಿಯರ, ಏಶಿಯನ ಎಜುಕೇಶನ ಸರ್ವಿಸಸ್, ೧೯೮೪, ಪು. ೫೭೧.

೧೦. ಎ.ಇ. ಸಂ.XXIII ಪು. ೭೦-೭೫.

೧೧. ಪಂಚಮುಖಿ ಆರ್.ಎಸ್., ಕರ್ನಾಟಕ ಇತಿಹಾಸ (ಸಂ. ೧), ೧೯೬೭, ಪು. ೨೪೦.

೧೨. ಸೂರ್ಯನಾಥ ಕಾಮತ., ಪೂರ್ವೋಕ್ತ, ೧೯೮೫, ಪು. ೧೧೦.

೧೩. ಡಿಸಕ್ರಿಪ್ಟ ಲಿಸ್ಟ ಆಫ್ ಸ್ಟೋನ್ ಆಂಡ ಕೊಪರಪ್ಲೇಟ್ ಇನ್ಸಕ್ರಿಪಶನ್ ೧೯೪೦-೪೧, ೪೨-೪೩, ನಂ. ೧೭, ಪಿ.ಕೆ.ಆರ್.ಬಿ.ಪಿ. ೧೯೪೧-೧೯೪೬, ಪು. ೬-೭, ಗಣಪತಿಗೌಡ ಎಸ್., ಮೈನರ ಡೈನಾಸ್ಟಿಸ್ ಆಫ್ ಉತ್ತರಕನ್ನಡ ರೀಜನ್, (ಅಪ್ರಕಟಿತ ಪಿಎಚ್.ಡಿ ಪ್ರಬಂಧ), ೧೯೯೩, ಪು. ೩೩೧-೩೩೪.

೧೪. ಡಿ.ಎಲ್.ಎಸ್‌ಸಿ.ಐ. ೧೯೪೧-೪೨, ನಂ. ೨೦, ಗಣಪತಿ ಗೌಡ ಎಸ್., ಪೂರ್ವೋಕ್ತ, ೧೯೯೩, ಪು. ೩೪೦-೪೨.

೧೫. ಗಣಪತಿಗೌಡ.ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು,೨೦೦೮, ಪು.೨೨.

೧೬. ಅದೇ, ಪು. ೨೦.

೧೭. ಸೌತ್ ಇಂಡಿಯನ್ ಇನ್ಸಕ್ರಿಪ್ಶನ್ಸ. ಸಂ.XVIII ನಂ. ೮೮ ಪು. ೩೪೮-೫೨.

೧೮. ಕರ್ನಾಟಕ ಇನ್ಸಕ್ರಿಪ್ಶನ್ಸ., ಸಂ. VIII ನಂ. ೯೯.

೧೯. ಗಣಪತಿಗೌಡ ಎಸ್., ಪೂರ್ವೋಕ್ತ, ೨೦೦೮, ಪು. ೧.

೨೦. ಗಣಪತಿಗೌಡ ಎಸ್., ಪೂರ್ವೋಕ್ತ, ೨೦೦೮, ಪು. ೨.

೨೧. ಗಣಪತಿಗೌಡ ಎಸ್., "ಶಿಶುಗಲಿ ಪಾಂಡ್ಯರ ಕೆಕ್ಕಾರ ವೀರಗಂಬ ಶಾಸನಗಳು ಒಂದು ಅಧ್ಯಯನ" ಇತಿಹಾಸ ದರ್ಶನ, ಸಂಪುಟ-೧೧, ೧೯೯೬, ಪು. ೧೩೪-೧೩೯.

೨೨. ಅದೇ.

೨೩. ನಾಯಕ ಸದಾನಂದ., ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪, ಪು. ೯೨-೯೭, ಗಣಪತಿಗೌಡ ಎಸ್, ಅದೇ,೨೦೦೮, ಪು ೨೬.

೨೪. ಗಣಪತಿಗೌಡ ಎಸ್., ಪೂರ್ವೋಕ, ೧೯೯೩, ಪು. ೩೮೫-೩೯೨.

೨೫. ಗಣಪತಿಗೌಡ ಎಸ್, ಪೂರ್ವೋಕ, ೨೦೦೮, ಪು. ೨೯.

೨೬. ಗಣಪತಿಗೌಡ ಎಸ್, ಪೂರ್ವೋಕ್ತ, ೨೦೦೮, ಪು. ೩೩.

೨೭. ಸೂರ್ಯನಾಥ ಕಾಮತ., ಪೂರ್ವೋಕ್ತ, ೧೯೮೫, ಪು. ೧೨೨.

೨೮. ಬೊಂಬಾಯಿ ಪ್ರಾಂತ್ಯದ ಕನ್ನಡ ಸಂಶೋಧನೆಯ ಪ್ರಗತಿ ೧೯೪೧-೪೬, ಪು. ೬-೭.

೨೯. ಗಣಪತಿಗೌಡ ಎಸ್., ಪೂರ್ವೋಕ್ತ, ೧೯೯೩, ಪು. ೩೮೫.

೩೦. ಗಣಪತಿಗೌಡ ಎಸ್., ಪೂರ್ವೋಕ್ತ, ೨೦೦೮, ಪು. ೪೧.

೩೧. ಗಣಪತಿಗೌಡ ಎಸ್., ಪೂರ್ವೋಕ್ತ, ೨೦೦೮, ಪು. ೪೬.

೩೨. ಅದೇ.

೩೩. ಗಣಪತಿಗೌಡ ಎಸ್., ಪೂರ್ವೋಕ್ತ, ೧೯೯೩, ಪು. ೩೯೩-೩೯೭.

೩೪. ಎ.ಇ.ಸಂ. XXVII ಪು. ೧೫೭-೧೬೩.

೩೫. ಗಣಪತಿಗೌಡ ಎಸ್., ಪೂರ್ವೋಕ್ತ, ೧೯೯೩,ನಂ. ೧೪, ಪು. ೩೯೮-೪೦೦.

೩೬. ಅಪ್ರಕಟಿತ ಹೊಸ ಶಾಸನ, ಹೊಸಾಡ.

೩೭. ಅಪ್ರಕಟಿತ ಹೊಸ ಶಾಸನ, ಹಳಕಾರ.

೩೮. ಎ.ಆರ್.ಎಸ್.ಐ.ಇ.೧೯೩೯-೪೦, ನಂ. ೧೧೦.

೩೯. ಕರ್ನಾಟಕ ಪರಂಪರೆ, ಸಂಪುಟ-೧, ಪು. ೩೫೯, ಗಣಪತಿಗೌಡ ಎಸ್, ಪೂರ್ವೋಕ್ತ, ೨೦೦೮, ಪು ೫೩.

೪೦. ಡಿ.ಎಲ್.ಎಸ್.ಸಿ.ಐ. ೧೯೪೧-೪೨, ನಂ. ೨೧.

೪೧. ಅದೇ.

೪೨. ಅದೇ.

೪೩. ಅದೇ. ನಂ. ೨೩.

೪೪. ಅದೇ. ನಂ. ೨೪.

೪೫. ಎನ್ಯುವಲ್ ರಿಪೋರ್ಟ ಆನ್ ಇಂಡಿಯನ್ ಎಪಿಗ್ರಪಿ, (ಎ.ಆರ್.ಐ.ಇ)೧೯೩೦-೪೦, ನಂ. ೧೧೦.

೪೬. ಅದೇ.

೪೭. ಅದೇ. ನಂ.೫೫

೪೮. ಸೂರ್ಯನಾಥ ಕಾಮತ., ಪೂರ್ವೋಕ್ತ, ೧೯೮೫, ಪು. ೧೨೨.

೪೯. ಗಣಪತಿಗೌಡ ಎಸ್, ಪೂರ್ವೋಕ್ತ, ೨೦೦೮, ಪು. ೫೯.

೫೦. ಅದೇ. ಪು. ೬೧.

೫೧. ಸೂರ್ಯನಾಥ ಕಾಮತ., ಪೂರ್ವೋಕ್ತ, ೧೯೮೫, ಪು. ೧೨೨.

೫೨. ಕೆಳದಿ ಗುಂಡಾಜೋಯಿಸ್, ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ ಗೋಕರ್ಣ ಇತಿಹಾಸ ಶಾಸನಗಳು, ಭಾಗ I, ೨೦೦೮, ಪು. ೧೩೮-೧೩೯.

೫೩. ಅದೇ. ಪು. ೧೨೫-೧೨೬.

೫೪. ಸೂರ್ಯನಾಥ ಕಾಮತ., ಪೂರ್ವೋಕ್ತ, ೧೯೮೫, ಪು. ೧೨೪.

೫೫. ಡಿ.ಎಲ್.ಎಸ್.ಸಿ.ಐ. ೧೯೪೦-೪೧, ನಂ.೫೦.

೫೬. ಡಿ.ಎಲ್.ಎಸ್.ಸಿ.ಐ. ೧೯೪೦-೪೧, ನಂ. ೫೨-೫೩.

೫೭. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ I, ೨೦೦೮, ಪು ೧೪೧-೧೪೨.

೫೮. ಅದೇ, ಭಾಗ II, ೨೦೦೯, ಪು. ೫೭–೫೮.

೫೯. ಅದೇ, ಭಾಗ I, ಪು. ೬೧–೬೨.

೬೦. ಅದೇ, ಭಾಗ II, ಪು. ೭೧–೭೨.

೬೧. ಅದೇ, ಭಾಗ I, ೨೦೦೮, ಪು. ೧೧೮–೧೧೯.

೬೨. ಅದೇ, ಪು. ೧೦೨–೧೦೩

೬೩. ಅದೇ, ಭಾಗ II, ೨೦೦೯, ಪು. ೬೯–೭೦.

೬೪. ಅದೇ, ಭಾಗ I, ೨೦೦೮, ಪು. ೮೬–೮೭.

೬೫. ಅದೇ, ಪು. ೮೯–೯೦.

೬೬. ಅದೇ, ಪು. ೧೩೪–೧೩೫.

೬೭. ಅದೇ, ಪು. ೭೩–೭೪.

೬೮. ಅದೇ. ಭಾಗ II, ೨೦೦೯,ಪು. ೧೧೩–೧೧೪

೬೯. ಅದೇ, ಪು. ೩೮–೩೯.

೭೦. ಅದೇ, ಪು. ೧೪೩.

೭೧. ಅದೇ, ಪು. ೧೧೧–೧೧೨.

೭೨. ಅದೇ, ಭಾಗ I, ೨೦೦೮, ಪು. ೪೩–೪೪.

೭೩. ಅದೇ, ಭಾಗ II, ೨೦೦೯, ಪು. ೮೧–೮೨.

೭೪. ಅದೇ, ಭಾಗ I, ೨೦೦೮, ಪು. ೫೯–೬೧.

೭೫. ಅದೇ, ಪು. ೪೮–೫೦.

೭೬. ಅದೇ, ಪು. ೯೭–೯೯.

೭೭. ಅದೇ, ಪು. ೧೨೬–೧೨೭.

೭೮. ಅದೇ, ಭಾಗ II, ೨೦೦೯, ಪು. ೧೬೦–೧೬೧.

೭೯. ಎ.ಆರ.ಎಸ್.ಐ.ಇ. ೧೯೪೫–೪೬, ನಂ. ೩೪೬.

೮೦. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ II, ೨೦೦೯, ಪು. ೬೦–೬೭.

೮೧. ಅದೇ, ಭಾಗ I, ೨೦೦೮, ಪು. ೧೧೩–೧೧೪.

೮೨. ಅದೇ, ಭಾಗ II, ೨೦೦೯, ಪು. ೬೩–೬೪.

೮೩. ಅದೇ, ಭಾಗ I, ೨೦೦೮, ಪು. ೧೩೫–೧೩೬.

೮೪. ಅದೇ, ಪು. ೧೪೦–೧೪೧.

೮೫. ಅದೇ, ಭಾಗ II, ೨೦೦೯, ಪು. ೧೧೫–೧೧೬.

೮೬. ಅದೇ, ಭಾಗ I, ೨೦೦೮, ಪು. ೩೬–೩೭.

೮೭. ಅದೇ, ಭಾಗ II, ೨೦೦೯, ಪು. ೧೫೯–೧೬೦.

೮೮. ಅದೇ, ಭಾಗ I, ೨೦೦೮, ಪು. ೧೨೧–೧೨೪.

೮೯. ಅದೇ, ಪು. ೯೨–೯೩.

೯೦. ಅದೇ, ಪು. ೯೪–೯೫.

೯೧. ಅದೇ, ಪು. ೧೩೭.

೯೨. ಎ.ಆರ್.ಎಸ್.ಐ.ಇ. ೧೯೪೫-೪೬, ನಂ. ೩೪೬.

೯೩. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ I, ೨೦೦೮, ಪು. ೯೦-೯೧.

೯೪. ಎ.ಆರ್.ಐ.ಇ., ಸಂ.೧೯೩೯-೪೦, ೧೯೪೨-೪೩ ಶಾಸನ ಸಂಖ್ಯೆ ೧೦೦, ಪು.೬೨.

ಅಧ್ಯಾಯ – ಮೂರು

ಶಾಸನ ವೈವಿಧ್ಯತೆ

೩.೧ ಪೀಠಿಕೆ

ಶಾಸನಗಳು ಪ್ರಾಚೀನ ಕಾಲದ ಅಮೂಲ್ಯ ಸಂಪತ್ತಿನ ಆಕರಗಳಾಗಿವೆ.[೧] ಶಾಸನ ಪದದ ಅರ್ಥ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂದರ್ಥ. ಶಾಸನ ಶಬ್ದಕ್ಕೆ ಕಾಯ್ದೆ, ಕಾನೂನು ಎಂಬ ಅರ್ಥ ಪ್ರಚಲಿತದಲ್ಲಿದೆ. ಪ್ರಾಚೀನ ಕಾಲದಲ್ಲಿ ಶಾಸನ ಪದ ಅರಸರ ಆಜ್ಞೆಗಳನ್ನು ತಿಳಿಸುವ ಬರಹಗಳು ಎಂಬರ್ಥದಲ್ಲಿದೆ. ಶಾಸನಕ್ಕೆ ಆಂಗ್ಲ ಭಾಷೆಯಲ್ಲಿ Inscription ಎಂದಿದ್ದು ಇದು ಲ್ಯಾಟಿನ ಭಾಷೆಯ Inscribe ಪದದಿಂದ ಬಂದಿದೆ. inscribe ಎಂದರೆ "ಕೆತ್ತು" ಎಂದು ಅರ್ಥ. ಶಾಶ್ವತವಾಗಿ ಇರುವಂತಹ ವಸ್ತುವಿನ ಮೇಲೆ ಕೊರೆದ ದಾಖಲೆಯೇ ಶಾಸನ.[೨]

ಸಾಮಾನ್ಯವಾಗಿ ಶಾಸನ ರಚಿಸುವಲ್ಲಿ ಕೃತಿಕಾರ, ಲಿಪಿಕಾರ ಮತ್ತು ಶಿಲ್ಪಿಗಳ ಪಾತ್ರ ಬಹುಮುಖ್ಯ ಶಾಸನವನ್ನು ರಚಿಸುವಾಗ ಅದರಲ್ಲಿ ಪೀಠಿಕೆ, ಪ್ರಕಟಣೆ ಮತ್ತು ಮುಕ್ತಾಯ ಇರುತ್ತದೆ. ಪೀಠಿಕೆಯಲ್ಲಿ ಮಂಗಳವಾಚಕ, ಪ್ರಾರ್ಥನಾಶ್ಲೋಕ, ವಂಶಾವಳಿ ನೀಡಿದ ದಾನದ ವಿಷಯ ದಾನ ನೀಡಿದವರ ಹೆಸರು, ಯಾವ ಕಾರಣಕ್ಕಾಗಿ ದಾನ ನೀಡಿದ್ದರು ಎನ್ನುವುದರ ಬಗ್ಗೆ ಹಾಗೂ ಮುಕ್ತಾಯದಲ್ಲಿ ದಾನ ನೀಡಿದ ಬಗ್ಗೆ ಇರುವ ಸಾಕ್ಷಿದಾರರ ಹೆಸರು ಕೊನೆಯಲ್ಲಿ ಶಾಪಾಶಯ ಇರುತ್ತದೆ.[೩]

೩.೨ ಶಾಸನವೈವಿದ್ಯತೆಗಳು

ಕನ್ನಡ ನಾಡಿನಲ್ಲಿ ದೊರೆತ ಶಾಸನಗಳಲ್ಲಿ ಹೆಚ್ಚಿನವು ದಾನಶಾಸನಗಳಾಗಿವೆ.[೪] ಅವುಗಳನ್ನು ಈ ಅಧ್ಯಾಯಕ್ಕನುಗುಣವಾಗಿ ಗಾಣಪತ್ಯ ದಾನಶಾಸನಗಳು, ಶೈವ ದಾನಶಾಸನಗಳು, ಶಾಕ್ತ ದಾನಶಾಸನಗಳು, ವೈಷ್ಣವ ದಾನಶಾಸನಗಳು, ಜೈನ ದಾನ ಶಾಸನಗಳೆಂದು ವಿಂಗಡಿಸಲಾಗಿದೆ. ದಾನಶಾಸನಗಳು ದೇವಾಲಯ ನಿರ್ಮಾಣಕ್ಕಾಗಿ, ಜೀರ್ಣೋದ್ಧಾರ ಮಾಡಲು, ನಿತ್ಯಪೂಜೆಗಾಗಿ, ನಂದಾದೀಪಕ್ಕಾಗಿ, ನೈವೇದ್ಯಕ್ಕಾಗಿ, ಅನ್ನಸತ್ರಾದಿ ಧರ್ಮ ಕಾರ್ಯಗಳಿಗಾಗಿ ದಾನ ನೀಡಿದವುಗಳಾಗಿವೆ. ದಾನವನ್ನು ಹಣದ ರೂಪದಲ್ಲಿ, ಹೊಲದ ರೂಪದಲ್ಲಿ, ಗ್ರಾಮದ ರೂಪದಲ್ಲಿ ಇಲ್ಲವೇ ಆದಾಯದ ಭಾಗವನ್ನು ದಾನರೂಪದಲ್ಲಿ ಕೊಡುತ್ತಿದ್ದರು. ಪ್ರಸ್ತುತ ಅಧ್ಯಯನ ಕುಮಟಾ ತಾಲೂಕಿಗೆ ಸೀಮಿತ ಮಾಡಿಕೊಂಡು ಕುಮಟಾ ತಾಲೂಕಿನ ಶಾಸನಗಳ ವೈವಿಧ್ಯತೆಯನ್ನು ಇಲ್ಲಿ ಸೆರೆಹಿಡಿಯಲಾಗಿದೆ.

೩.೨.೧ ಗಣಪತಿ ದಾನಶಾಸನಗಳು

ಗಾಣಪತ್ಯ ದೇವಾಲಯಗಳ ಸೇವಾ ಕಾರ್ಯಗಳಿಗೆ ನೀಡಿದ ದಾನಗಳನ್ನು ಉಲ್ಲೇಖಿಸುವಂತಹ ಶಾಸನಗಳನ್ನು ಗಾಣಪತ್ಯ ದಾನಶಾಸನಗಳೆಂದು ಕರೆಯುತ್ತಾರೆ. ಪ್ರಸ್ತುತ ಕುಮಟಾ ತಾಲೂಕಿನ ಗಾಣಪತ್ಯ ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳನ್ನು ಇಲ್ಲಿ ಅವಲೋಕಿಸಲಾಗಿದೆ.

ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಶಾಸನಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ. ವಿಜಯನಗರ ಅರಸ ಬುಕ್ಕನ ಕಾಲದಲ್ಲಿ ವಿರೂಪಣ್ಣ ಒಡೆಯರು ಪ್ರಾಂತ್ಯಾಧಿಕಾರಿಯಾಗಿದ್ದಾಗ ಬರನಾಯ್ಕನ ಮೊಮ್ಮಗನಾದ ಕಲ್ಲು ನಾಯ್ಕ ಗೋಕರ್ಣದ ವಿನಾಯಕ ದೇವರ ನಿತ್ಯಸೇವೆಗಾಗಿ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.[೫] ಇಲ್ಲಿರುವ ಇನ್ನೊಂದು ಶಾಸನದ ಕಾಲ ಕ್ರಿ.ಶ ೧೪೦೧ ವಿಜಯನಗರದ ಅರಸ ಎರಡನೇ ಹರಿಹರನ ಕಾಲದಲ್ಲಿ ಹೈವೆಯ ಪ್ರಾಂತ್ಯಾಧಿಕಾರಿಯಾಗಿ ಗೋವಿಂದದೇವ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಭಾರದ್ವಾಜ ಗೋತ್ರದ ರುಕ್ಕು ಶಾಖೆಯ ಗರುಡ ರಾಮ ಅಡಿಗಳ ಮಕ್ಕಳು ಮತ್ತು ಸಂಬಂಧಿಕರು ಸೇರಿ ಶ್ರೀವತ್ಸಗೋತ್ರದ ಯಜುಶಾಖೆಯ ದೇವರಸರಿಗೆ, ಗೋಕರ್ಣದ ವಿನಾಯಕ ದೇವರ ನಿತ್ಯಕಟ್ಟಲೆ ಸಲುವಾಗಿ ಭೂದಾನ ನೀಡಿದ್ದರೆಂದು ಈ ಶಾಸನ ತಿಳಿಸುತ್ತದೆ[೬]. ಇಲ್ಲಿರುವ ಕ್ರಿ.ಶ. ೧೪೦೩ರ ಶಾಸನ ವಿಜಯನಗರದ ಅರಸ ಎರಡನೇ ಹರಿಹರನ ಕಾಲದಲ್ಲಿ ಗೋವಿಂದದೇವ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಲಕುಮನ್ನವೆಖರಿ, ನಾಗಣ್ಣ ವೈಖರಿಗಳು ಗೋಕರ್ಣದ ವಿನಾಯಕ ದೇವರ ನಿತ್ಯಕಟ್ಟಳೆ ನಿಮಿತ್ತ ಭೂದಾನ ನೀಡಿದ್ದನ್ನು ಈ ಶಾಸನ ಉಲ್ಲೇಖಿಸುತ್ತದೆ.[೭] ನಾಗೂರ ವಿಷ್ಣು ದೇವಾಲಯದ ಬಲಗಡೆ ಇರುವ ಕ್ರಿ.ಶ ೧೪೦೪ ರ ಚಂದಾವರ ಕಾದಂಬ ಶಿವಚಿತ್ತ ಮೂರನೇ ವೀರಕಾವದೇವರಸನ ಶಾಸನ ಗಣಪತಿ ಸ್ತುತಿಯಿಂದ ಪ್ರಾರಂಭವಾಗುತ್ತದೆ. ಈ ಶಾಸನ ವಿನಾಯಕ ದೇವರ ಶಾಂತಿ ಮತ್ತು ಗಣಹೋಮಕ್ಕೆ ದಾನ ನೀಡಿದ್ದನ್ನು ದಾಖಲಿಸಿದೆ.[೮] ನಾಗೂರವಿಷ್ಣು ದೇವಾಲಯ ಎಡಗಡೆಇರುವ ಕ್ರಿ.ಶ ೧೪೦೮ ರ ಚಂದಾವರ ಕಾದಂಬಶಿವಚಿತ್ತ ಮೂರನೇ ವೀರಕಾವದೇವರಸನ ಶಾಸನಗಣಪತಿ ಮತ್ತು ಸರಸ್ವತಿ ಸ್ತುತಿಯಿಂದ ಆರಂಭವಾಗುತ್ತದೆ. ವಿನಾಯಕ ದೇವರ ನಿತ್ಯ ಕಟ್ಟಲೆ ನಿಮಿತ್ತ ವೀರಕಾವದೇವರಸರು ದಾನ ನೀಡಿದ್ದನ್ನು ಇದು ದಾಖಲಿಸುತ್ತದೆ.[೯]

ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ. ೧೪೧೨ ರ ಶಾಸನ ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಯಿಚಪ್ಪ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಬಾಚಣ್ಣ ಒಡೆಯರು, ತಮ್ಮ ಮಾಲೆಗಾರನಿಗೆ ಗೋಕರ್ಣದ ವಿನಾಯಕ ದೇವರಿಗೆ ಒಪ್ಪಾನೆ ಅಕ್ಕಿಯ ಅಮೃತಪಡಿ ಮತ್ತು ೨೪ಮಾಲೆ ವರುಷಪೂರ್ತಿ ನಡೆಸುವಂತೆ ತಿಳಿಸಿ ಭೂದಾನ ಮಾಡಿದ್ದನ್ನು ತಿಳಿಸುತ್ತದೆ[೧೦]. ಇಲ್ಲಿನ

ಮತ್ತೊಂದು ಶಾಸನ ಇದರ ಕಾಲ ಲಿಪಿ ದೃಷ್ಟಿಯಿಂದ ಇದು ವಿಜಯನಗರ ಕಾಲದ್ದಾಗಿದೆ. ವಿಜಯನಗರ ಅರಸರ ಒಂದನೇ ದೇವರಾಯನ ಕಾಲದಲ್ಲಿ ಗೋವಿಂದದೇವ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿದ್ದಾಗ ಗೋಕರ್ಣದ ವಿನಾಯಕ ದೇವರ ಪೂಜಾಕಾರ್ಯ, ವೇದಪಾರಾಯಣ, ನಂದಾದೀಪಕ್ಕಾಗಿ, ಮಾಬಣ್ಣ ಶೆಟ್ಟಿ ಮತ್ತು ಆತನ ಮಕ್ಕಳು ಸೇರಿ ಭೂದಾನ ಮಾಡಿದ್ದನ್ನು ದಾಖಲಿಸುತ್ತದೆ.[೧೧]

೩.೨.೨ ಶೈವದಾನಶಾಸನಗಳು

ಶೈವ ಧರ್ಮದ ದೇವಾಲಯಗಳ ಸೇವಾ ಕಾರ್ಯಗಳಿಗೆ ನೀಡಿದ ದಾನಗಳನ್ನು ಉಲ್ಲೇಖಿಸುವಂತಹ ಶಾಸನಗಳನ್ನು ಶೈವ ದಾನಶಾಸನಗಳೆಂದು ಕರೆಯಲಾಗಿದೆ. ಪ್ರಸ್ತುತ ಕುಮಟಾ ತಾಲೂಕಿನ ಶೈವ ಧರ್ಮದ ದೇವಾಲಯಗಳಿಗೆ ದಾನ ನೀಡಿದ ವಿಷಯವನ್ನು ತಿಳಿಸುವ ಶಾಸನಗಳ ಗಮನಾರ್ಹ ಅಂಶವನ್ನು ವಿವರಿಸಲಾಗಿದೆ.

ಗೋಕರ್ಣ ಮಹಾಬಲೇಶ್ವರ ದೇವಾಲಯದ ರಂಗ ಮಂಟಪದ ಪ್ರವೇಶದ ಬಲ ಭಾಗದಲ್ಲಿನ ಕ್ರಿ.ಶ ೧೦೭೮ ರ ಶಾಸನ ಮಹಾಮಂಡಳೇಶ್ವರ ನಾಗವರ್ಮನು ತನ್ನನ್ನು ಗೋಕರ್ಣ ಪುರವರಾಧೀಶ್ವರ ಎಂದು ಕರೆದುಕೊಂಡು ಮಹಾಬಲದೇವರ ಸನ್ನಿದಿಯಲ್ಲಿ ನಿತ್ಯ ಉಪಯೋಗಕ್ಕಾಗಿ ಧನ ಸಹಾಯ ಮಾಡಿದ್ದನ್ನು ದಾಖಲಿಸಿದೆ[೧೨]. ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ. ೧೧೧೯ರ ಶಾಸನ ಚಂದಾವರ ಕಾದಂಬ ವೀರಕಾವದೇವರನ ಕಾಲದಲ್ಲಿ ಶಿವಬ್ಬೆಬಸವಿ ದೇವರಸರು ಹೈವೆ ಪ್ರಾಂತ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಮಹಾಬಲದೇವರ ಅಧಿಕಾರಿ ಶಂಭು ನಾಯ್ಕ, ಸೇನಬೋವರು, ಸೇರಿ ಗಣಪಶೆಟ್ಟಿಗೆ ಭೂಮಿಯನ್ನು ದಾನ ನೀಡಿ ಅದರಿಂದ ಬರುವ ತೆರಿಗೆ ೩ ಮೂಡೆ ೧೮ ಹಾನೆ ಭತ್ತವನ್ನು ಗೋಕರ್ಣ ಮಹಾಬಲೇಶ್ವರ ದೇವರಿಗೆ ನೀಡುವಂತೆ ತಿಳಿಸಿದ್ದನ್ನು ಉಲ್ಲೇಖಿಸುತ್ತದೆ. [೧೩]ಗೋಕರ್ಣ ಉಮಾಮಹೇಶ್ವರಿ ದೇವಸ್ಥಾನದಶಾಸನ ಕ್ರಿ.ಶ ೧೨ನೇ ಶತಮಾನಕ್ಕೆ ಸೇರಿದೆ. ಚಂದಾವರ ಕಾದಂಬತ್ರಿಭುವನಮಲ್ಲ ಕಾವದೇವನ ಶಾಸನವು ತ್ರಿಭುವನಮಲ್ಲ ಕಾವದೇವರಸನು ಕುಂಭೇಶ್ವರ ದೇವರಿಗೆ ಭೂಮಿಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ದೇವರಸನನ್ನು ಉಲ್ಲೇಖಿಸಿದ್ದು ಈತನು ಕೂಡ ಕುಂಭೇಶ್ವರ ದೇವರಿಗೆ ಭೂಮಿಯನ್ನು ದಾನ ಮಾಡಿದ್ದನ್ನು ದಾಖಲಿಸಿದೆ[೧೪]. ಕಬ್ಬರ್ಗಿ ವಿಷ್ಣು ದೇವಾಲಯದ ಆವರಣದಲ್ಲಿರುವ ವೀರಕಾಮದೇವನ ಆಳ್ವಿಕೆಯ ೧೨ನೇ ವರ್ಷಕ್ಕೆ ಸೇರಿದ ಕ್ರಿ.ಶ ೧೨೪೫ರ ಶಾಸನ ಚಂದಾವರ ಕಾದಂಬ ಅರಸನಾಗಿ ಒಂದನೇ ವೀರಕಾಮದೇವನು ಆಳುತ್ತಿರುವಾಗ ಮಂತ್ರಿ ಕೀರ್ತಿನಾರಾಯಣ ದಂಡನಾಯಕ ಕಬ್ಬರ್ಗಿ ಗ್ರಾಮವನ್ನು ಗೋಕರ್ಣ ಮಹಾಬಲದೇವರಿಗೆ ದಾನ ನೀಡಿದರು. ಅದನ್ನು ಗೋಕರ್ಣ ತಳಾಧಿಕಾರಿ ಮಾದಯ್ಯ ನಾಲ್ಕು ಜನ ಹೆಬ್ಬಾರರಿಗೆ ನೀಡಿ ಪ್ರತಿವರ್ಷ ಅವರಿಂದ ಬರುವ ಕಂದಾಯ ಮಹಾಬಲೇಶ್ವರ ದೇವರಿಗೆ ಸಲ್ಲಿಸುವಂತೆ ತಿಳಿಸಿದ ಉಲ್ಲೇಖವಿದೆ[೧೫].

ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ. ೧೭೯೪ರ ಶಾಸನ ವಿಜಯನಗರದ ಅರಸ ಬುಕ್ಕರಾಯನ ಪತ್ನಿ ಹೊನ್ನಲದೇವಿ ಗೋಕರ್ಣದ ಮಹಾಬಲೇಶ್ವರ ದೇವರ ಅಮೃತಪಡಿಗೆ ೫೪ ಮೂಡೆ ಭತ್ತ ನೀಡುವಂತೆ ತಿಳಿಸಿ ಭೂದಾನ ಮಾಡಿದ ಉಲ್ಲೇಖವಿದೆ. ಇದರಿಂದ ವಿಜಯನಗರದ ರಾಣಿಯರು ಸಹ ಮಹಾಬಲೇಶ್ವರನ ಆರಾಧಕರಾಗಿದ್ದರೆಂದು ಇದರಿಂದ ತಿಳಿದು ಬರುತ್ತದೆ[೧೬].

ಗೋಕರ್ಣ ನಾರಾಯಣ ಉಪಾಧ್ಯಾಯರ ಮನೆಯಲ್ಲಿನ ಶಾಸನ ಕ್ರಿ.ಶ ೧೨-೧೩ನೇ ಶತಮಾನಕ್ಕೆ ಸೇರಿದೆ. ತ್ರುಟಿತವಾಗಿರುವ ಶಾಸನ ವಿಜಯನಗರ ಸಾಮ್ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿದ್ದ ಬುಕ್ಕರಾಯನ ಪಟ್ಟದರಸಿ ವಿಠಲಾದೇವಿಯು ರಾಜಗುರು ಈಶ್ವರ ಭಟ್ಟನ ಸಮ್ಮುಖದಲ್ಲಿ ಗೋಕರ್ಣ ಧರ್ಮಸತ್ರಕ್ಕಾಗಿ ದಾನ ನೀಡಿದ್ದನ್ನು ತಿಳಿಸುತ್ತದೆ.[೧೭] ಅಘನಾಶಿನಿಯ ಕಾಮೇಶ್ವರ ದೇವಾಲಯದಲ್ಲಿನ ಕ್ರಿ.ಶ ೧೩೬೯ರ ಶಾಸನ ವಿಜಯನಗರ ಅರಸ ಬುಕ್ಕನ ಆಳ್ವಿಕೆಯ ಕಾಲದಲ್ಲಿ ಮಹಾಪ್ರಧಾನರಾದ ಬಸವೆಯ ನಾಯಕರು ಸಕಲ ರಾಜ್ಯಗಳನ್ನು ಪ್ರತಿಪಾಲಿಸುತ್ತಿರುವಾಗ ಮಲ್ಲಪ್ಪೊಡೆಯರು ಗೋಕರ್ಣದ ಕಾಮೇಶ್ವರ ದೇವರ ಜೀರ್ಣೋದ್ಧಾರ ಮಾಡಿ ಅಮೃತ ಪಡಿಗೆ ೨೦ ಮೂಡೆ ಭತ್ತ ನೀಡಿದ್ದನ್ನು ದಾಖಲಿಸಿದೆ[೧೮]. ಗೋಕರ್ಣ, ಮಹಾಬಲೇಶ್ವರ ದೇವಾಲಯದ ಬಳಿ ಇರುವ ಕ್ರಿ.ಶ ೧೩೭೪ ರ ಶಾಸನ ವಿಜಯನಗರದ ಅರಸ ಬುಕ್ಕರಾಯನ ಪಟ್ಟದರಸಿ ಹೊನ್ನಾದೇವಿಯು ಗೋಕರ್ಣದ ಮಹಾಬಲೇಶ್ವರ ದೇವರ ಪೂಜಾವಿನಿಯೋಗಕ್ಕಾಗಿ ಮತ್ತು ಅನ್ನಛತ್ರದ ನಿರ್ವಹಣೆಗಾಗಿ ಭೂಮಿಯನ್ನು ಮಹಾಬಲೇಶ್ವರ ದೇವರ ಸನ್ನಿದಿಯಲ್ಲಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[೧೯] ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ. ೧೩೭೫ರ ಶಾಸನ ವಿಜಯನಗರ ಅರಸ ಬುಕ್ಕನ ಆಳ್ವಿಕೆಯ ಕಾಲದಲ್ಲಿ ಪತ್ನಿ ಹೊನ್ನಲದೇವಿ ಗೋಕರ್ಣದ ಮಹಾಬಲೇಶ್ವರ ದೇವರ ನೈವೇದ್ಯ ಹಾಗೂ ನಂದಾದೀಪಕ್ಕೆ ದಾನಮಾಡಿದ್ದನ್ನು ದಾಖಲಿಸಿದೆ[೨೦]. ಗೋಕರ್ಣದ ಕೆ.ಡಿ ಸಣ್ಣ ಬಡತಿ ಮನೆಯ ಗೋಡೆಯ ಬಳಿ ಇರುವ ಭಗ್ನಗೊಂಡಿರುವ ಶಾಸನಕ್ರಿ.ಶ ೧೪ನೇ ಶತಮಾನಕ್ಕೆ ಸೇರಿದ್ದು ವಿಜಯನಗರ ಅರಸ ಬುಕ್ಕನ ಕಾಲದಲ್ಲಿ ಗೋಕರ್ಣದ ಅನ್ನಛತ್ರಕ್ಕೆ ಭೂಮಿಯನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಯಾರು ದಾನ ನೀಡಿದರು. ಎನ್ನುವ ಸ್ಪಷ್ಟತೆ ಈ ಶಾಸನದಲ್ಲಿ ಇಲ್ಲ. ಶಾಸನದಲ್ಲಿ ಪಟ್ಟದರಸಿ ವೀರಾಂಬ ಮತ್ತು ಹೊನ್ನಾಂಬೆಯನ್ನು ಉಲ್ಲೇಖಿಸುತ್ತದೆ. ಹೀಗಾಗಿ ಬಹುಶಃ ಇವರೇ ಅನ್ನಛತ್ರಕ್ಕೆ ದಾನ ನೀಡಿದ್ದಿರಬಹುದು.[೨೧] ಗೋಕರ್ಣ ಮಹಾಬಲೇಶ್ವರ ದೇವಾಲಯದ ಬಳಿ ಇರುವ ಗೋಪಿಭಟ್ಟರ ಉದ್ಯಾನವನದಲ್ಲಿರುವ ಕ್ರಿ.ಶ ೧೪ನೇ ಶತಮಾನಕ್ಕೆ ಸೇರಿದ ಶಾಸನ ವಿಜಯನಗರ ಅರಸ ಬುಕ್ಕನ ಸೂಚನೆಯಂತೆ ಬಸವರಾಯ ದಂಡನಾಯಕರು ಗೋಕರ್ಣ ಮಹಾಬಲೇಶ್ವರ ದೇವಸ್ಥಾನದಲ್ಲಿ ನಂದಾದೀಪ ಹಾಗೂ ವಿನಿಯೋಗಕ್ಕಾಗಿ ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ವಾಸುದೇವ ಶ್ರೀಪಾದರಿಗೆ ಭೂಮಿಯನ್ನು ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.[೨೨]

ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಈ ಶಾಸನ ಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ. ವಿಜಯನಗರ ಅರಸ ಬುಕ್ಕರಾಯರ ದಂಡನಾಯಕ ಮಾದರಸಯ್ಯರಿಗೆ, ಕಾಮದೇವರಸರು ಗೋಕರ್ಣ ಮಹಾಬಲೇಶ್ವರ ದೇವರ ಅಮೃತಪಡಿಗೆ ಮೂವತ್ತಾರು ಗದ್ಯಾಣ, ಮತ್ತು ನಂದಾದೀಪಕ್ಕಾಗಿ ನಾಲ್ಕು ಹೊನ್ನನ್ನು, ದಾನ ನೀಡಿದ್ದನ್ನು ಶಾಸನ ಉಲ್ಲೇಖಿಸುತ್ತದೆ.[೨೩] ಇಲ್ಲಿರುವ ಇನ್ನೊಂದು ವಿಜಯನಗರದ ಶಾಸನ ವಿಜಯನಗರ ಅರಸ ಬುಕ್ಕರಾಯನ ಕಾಲದಲ್ಲಿ ವಿರೂಪಣ್ಣ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿದ್ದಾಗ ಬರನಾಯ್ಕ ಗೋಕರ್ಣದ ಮಹಾಬಲೇಶ್ವರ ದೇವರಿಗೆ ಪ್ರತಿದಿನ ೧ ಮಾಲೆ, ವಿನಾಯಕ ದೇವರಿಗೆ ೧ ಬಾಳೆಹಣ್ಣು, ನೀಡುವದಕ್ಕಾಗಿ ಭೂದಾನ ಮಾಡಿದ್ದ ವಿಷಯ ಶಾಸನದಲ್ಲಿದೆ[೨೪]. ಇಲ್ಲಿರುವ ಇನ್ನೊಂದು ಶಾಸನಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ. ವಿಜಯನಗರ ಅರಸ ಬುಕ್ಕರಾಯನ ಕಾಲದಲ್ಲಿ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದ ಅಧಿಕಾರಿ ನರಸಿಂಹ, ನಾರಾಯಣ ಹೆಬ್ಬಾರ ಕೊಟ್ಟ ಭೂಮಿಯನ್ನು ಭೀಮರಾಜಿಗೆ ನೀಡಿ ಅದರಿಂದ ಬರುವ ಉತ್ಪನ್ನದಿಂದ ೩೦ ಮೂಡೆ ಭತ್ತವನ್ನು ಮಹಾಬಲೇಶ್ವರ ದೇವರ ಅಮೃತಪಡಿಗೆ ನೀಡುವಂತೆ ತಿಳಿಸಿದ ಉಲ್ಲೇಖ ಶಾಸನದಲ್ಲಿದೆ.[೨೫] ಇಲ್ಲಿರುವ ಇನ್ನೊಂದು ಕ್ರಿ.ಶ ೧೩೮೩ ರ ಶಾಸನ ವಿಜಯನಗರ ಅರಸರ ಎರಡನೇ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ಯಡುಕನಾಯ್ಕ ಮತ್ತು ಆತನ ಸಹೋದರರು ಸೇರಿ ಮುಂಡನಾಯ್ಕನಿಗೆ ಗೋಕರ್ಣದ ಮಹಾಬಲೇಶ್ವರ ದೇವರ ಅಮೃತಪಡಿ ನಡೆಸುವಂತೆ ತಿಳಿಸಿ ಭೂಮಿಯನ್ನು ದಾನ ಮಾಡಿದ್ದನ್ನು ಶಾಸನ ಉಲ್ಲೇಖಿಸಿದೆ.[೨೬] ಇಲ್ಲಿರುವ ಇನ್ನೊಂದು ಕ್ರಿ.ಶ. ೧೩೯೧ ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಮಹಾಪ್ರಧಾನ ಮಲ್ಲಪ್ಪ ಒಡೆಯರು ಹೊನ್ನಾವರ ಪ್ರಾಂತ್ಯಾಧಿಕಾರಿಯಾಗಿ ಅಧಿಕಾರ ನಡೆಸುತ್ತಿದ್ದಾಗ ಅಂಗಸ್ರವಳ್ಳಿಯ ಮಾಬಳನಾಯ್ಕ ಮತ್ತು ತಮ್ಮ ನಾಯ್ಕ ಸೇರಿ ಗೋಕರ್ಣದ ಮಹಾಬಲ ದೇವರ ಅಮೃತ ಪಡಿಗೆ ನಾಲ್ವತ್ತು ಮೂಡೆ ಭತ್ತದ ಉತ್ಪನ್ನವಿರುವ ಭೂಮಿಯನ್ನು ದಾನ ನೀಡಿದ್ದನ್ನು ಶಾಸನ ದಾಖಲಿಸಿದೆ.[೨೭] ಇಲ್ಲಿರುವ ಇನ್ನೊಂದು ಕ್ರಿ.ಶ ೧೩೯೧ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಆಳ್ವಿಕೆಯ ಕಾಲದಲ್ಲಿ ಮಹಾಪ್ರಧಾನ ಮಲ್ಲಪ್ಪ ಒಡೆಯರು ಹೊನ್ನಾವರದಲ್ಲಿ ಪ್ರಾಂತ್ಯಾಧಿಕಾರಿಯಾಗಿದ್ದಾಗ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿರುವ ಛತ್ರಕ್ಕೆ ಸಾರಿಶೆಟ್ಟಿಯ ಮಗ ಬೊಮ್ಮಣ್ಣಶೆಟ್ಟಿ ೯ ಮೂಡೆ ಭತ್ತದ ಭೂಮಿಯನ್ನು ದಾನ ನೀಡಿದ್ದನ್ನು ಶಾಸನ ದಾಖಲಿಸಿದೆ.[೨೮] ಇಲ್ಲಿರುವ ಕ್ರಿ.ಶ. ೧೩೯೨ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಆಳ್ವಿಕೆ ನಡೆಸುತ್ತಿದ್ದಾಗ ಹೆಗ್ಗಡೆ ಮೈಲಣ್ಣರು ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿದಿಯಲ್ಲಿ ನಡೆಯುವ ಛತ್ರದ ಸಲುವಾಗಿ ೨೮ ಮೂಡೆ ಬೀಜ ಬಿತ್ತುವ ಭೂಮಿಯನ್ನು ದೇವರಸರ ಮಕ್ಕಳು ಕಾಮಣ್ಣರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ[೨೯].

ಇಲ್ಲಿರುವ ಕ್ರಿ.ಶ. ೧೩೯೨ ರ ಶಾಸನ ವಿಜಯನಗರ ದೊರೆ ಎರಡನೇ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಅಧಿಕಾರ ನಡೆಸುತ್ತಿದ್ದಾಗ ಹೆಗ್ಗಡೆ ಮೈಲಣ್ಣರು ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಛತ್ರದ ಸಲುವಾಗಿ ೨೮ ಮೂಡೆ ಬೀಜ ಬಿತ್ತುವ ಭೂಮಿಯನ್ನು ದೇವರಸರ ಮಕ್ಕಳು ಕಾಮಣ್ಣರಿಗೆ ದಾನ ನೀಡಿದ್ದನ್ನು ಶಾಸನ ದಾಖಲಿಸಿದೆ[೩೦]. ಗೋಕರ್ಣ ಶಿವಭಟ್ಟ ಅಡಿ ಅವರ ಮನೆಯಲ್ಲಿ ನಿಲ್ಲಿಸಲ್ಪಟ್ಟ ಶಾಸನಕ್ರಿ.ಶ. ೧೩೯೩ ಆಗಿರುತ್ತದೆ. ವಿಜಯನಗರ ಅರಸ ಎರಡನೇ ಹರಿಹರ ಗೋಕರ್ಣದ ಮಹಾಬಲೇಶ್ವರ ದೇವರ ಅನ್ನಸತ್ರ ನಿರ್ವಹಣೆಗಾಗಿ ದಾನ ನೀಡಿದ್ದನ್ನು ಶಾಸನ ತಿಳಿಸುತ್ತದೆ[೩೧]. ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ. ೧೩೯೪ಶಾಸನ ವಿಜಯನಗರ ಅರಸರ ಎರಡನೇ ಹರಿಹರನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಮಲ್ಲಪ್ಪ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಅವರ ಮಗ ಭೂಮಿಯನ್ನು ಗೋವಿಂದ ನಕತ್ತಿಗರ ಮಕ್ಕಳಿಗೆ ಗೇಣಿಗೆ ನೀಡಿ ಪ್ರತಿವರ್ಷ ೩೬ ಹಣವನ್ನು ಮಹಾಬಲೇಶ್ವರ ದೇವರ ಸೇವೆಗೆ ನೀಡುವಂತೆ ತಿಳಿಸಿದರು ಅದರಲ್ಲಿ ಗೋಕರ್ಣ ಮಹಾಬಲೇಶ್ವರನಿಗೆ ಒಪ್ಪಾನೆ ಅಕ್ಕಿಯ ಉಪಹಾರ, ಹಾಲು, ತುಪ್ಪ, ವಿಳೆಯ, ೨೪ ಮಾಲೆ, ೬ ಸೇವಂತಿ ಮಾಲೆ, ಇದಕ್ಕಾಗಿ ೩೩ ಹಣ ಖರ್ಚು ಮಾಡುವಂತೆ ಉಳಿದ ೩ ಹಣವನ್ನು ಬಾಣಸಿಗರಿಗೆ ನೀಡುವಂತೆ ಶಾಸನ ದಾಖಲಿಸಿದೆ[೩೨]. ಇಲ್ಲಿರುವ ಕ್ರಿ.ಶ. ೧೩೯೪ರ ಶಾಸನ ವಿಜಯನಗರ ಅರಸ ಎರಡನೇ ಹರಿಹರ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಮಲ್ಲಪ್ಪ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಗೋಕರ್ಣದ ಮಹಾಬಲೇಶ್ವರ ದೇವರ ಅಮೃತಪಡಿ, ಮತ್ತು ನಂದಾದೀಪಕ್ಕೆ ಹಾಗೂ ಪ್ರತಿದಿನ ೬ ಸೇವಂತಿ ಹೂವು, ೨೪ ಮಾಲೆ ನೀಡುವಂತೆ ತಿಳಿಸಿ ವರದಣ್ಣಗೆ ಭೂದಾನ ಮಾಡಿದನ್ನು ಉಲ್ಲೇಖಿಸುತ್ತದೆ.[೩೩] ಕ್ರಿ.ಶ. ೧೩೯೮ ರ ಶಾಸನ ವಿಜಯನಗರ ಅರಸಎರಡನೇ ಹರಿಹರನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಮಲ್ಲಪ್ಪ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಚಿಕ್ಕ ಮಲ್ಲಪ್ಪ ಒಡೆಯರ ಕುಮಾರ ದಂಡಗಳು ಗೋಕರ್ಣದ ಶ್ರೀ ಮಹಾಬಲೇಶ್ವರ ದೇವರ ಅಮೃತಪಡಿಗೆ ೨ಸಿದ್ದೆಯ ಅಕ್ಕಿಯ ಪಾಯಸ, ಹಾಗೂ ನಂದಾದೀಪಕ್ಕಾಗಿ ೭೪ಮೂಡೆ ಭತ್ತವನ್ನು ನಿಡುವಂತೆ ತಿಳಿಸಿ ಕೆತೆಯನಾಯ್ಕನಿಗೆ ಭೂದಾನ ಮಾಡಿದ್ದನ್ನು ದಾಖಲಿಸಿದೆ.[೩೪] ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ೧೪೦೧ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಗೋವಿಂದ ದೇವ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಗೋಕರ್ಣ ಮಹಾಬಲೇಶ್ವರ ದೇವರ ಸೇವೆಗಾಗಿ ದೇವರಸರು ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.[೩೫] ಕ್ರಿ.ಶ ೧೪೦೫ರ ವಿಜಯನಗರ ಅರಸ ಎರಡನೇ ಹರಿಹರನ ಕಾಲದ ಶಾಸನ ಹೊನ್ನಾವರದಲ್ಲಿ ಪ್ರಾಂತ್ಯಾಧಿಕಾರಿಯಾಗಿ ವಿರುಪಣ್ಣರು ಸೇವೆಸಲ್ಲಿಸುತ್ತಿದ್ದಾಗ ವಿಜಯನಗರ ದೊರೆ ಹರಿಹರನ ಪತ್ನಿ ವಿಠಲದೇವಿ, ಮಗಳು ಹೇಮಕೋಟೆಯವರು

ಗೋಕರ್ಣದ ಮಹಾಬಲೇಶ್ವರ ದೇವರ ಅಮೃತಪಡಿ, ಯತಿ ಭಿಕ್ಷಾರ್ಥವಾಗಿ ಗೋವರ್ಧನವಾಳ ಪರುಷಾಧಿಷ್ಟಿತ ಅಂಚಿತ್ಯ ಭಾರತಿ ಶ್ರೀಪಾದರಿಗೆ ಭೂದಾನ ಮಾಡಿದ್ದನ್ನು ತಿಳಿಸಿದೆ.[೩೬] ಇಲ್ಲಿರುವ ಇನ್ನೊಂದು ಶಾಸನದ ಕಾಲ ಕ್ರಿ.ಶ. ೧೪೦೫ ಇದು ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಗೋವಿಂದ ದೇವನ ಮಗ (ಹೆಸರಿನ ಉಲ್ಲೇಖವಿಲ್ಲ) ಸೇವೆಸಲ್ಲಿಸುತ್ತಿದ್ದಾಗ ಹರಿಹರನ ಪಟ್ಟದರಾಣಿ ವಿಠ್ಠಲದೇವಿ, ಮಗ ಬುಕ್ಕ, ಸೇರಿ ಚಂದಾವರ ಬೊಮ್ಮಣ್ಣ ಶೆಟ್ಟಿಯ ಮಗ ಸಾತಣ್ಣ ಶೆಟ್ಟಿಯಿಂದ ಭೂಮಿಯನ್ನು ಖರೀದಿಸಿ ಗೋಕರ್ಣದ ಮಹಾಬಲೇಶ್ವರ ದೇವರ ನೈವೇದ್ಯಕ್ಕೆ ಹಾಗೂ ಬ್ರಾಹ್ಮಣ ಭೋಜನದ ಸಲುವಾಗಿ ವಿಬುಧೇಂದ್ರ ಭಾರತಿಗಳಿಗೆ ಭೂದಾನ ನೀಡಿದ್ದನ್ನು ದಾಖಲಿಸಿದೆ.[೩೭] ಇಲ್ಲಿರುವ ಇನ್ನೊಂದು ಶಾಸನ ಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ. ವಿಜಯನಗರ ದೊರೆ ಎರಡನೇ ಹರಿಹರನ ಕಾಲದಲ್ಲಿ ಹೈವೆ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದ ಮಲ್ಲಪ್ಪ ಒಡೆಯರ ಅಧಿಕಾರಿ ಮಾದಪ್ಪ ಎಂಟು ಮೂಡೆ ಉತ್ಪನ್ನವಿರುವ ಭೂಮಿಯನ್ನು ಗೋಕರ್ಣದ ಮಹಾಬಲೇಶ್ವರದೇವರಿಗೆ ಪ್ರತಿದಿನ ರುದ್ರಪೂಜೆ ನಡೆಯುವದಕ್ಕೆ ದಾನನೀಡಿದ್ದನ್ನು ದಾಖಲಿಸುತ್ತದೆ[೩೮]. ಇಲ್ಲಿರುವ ಮತ್ತೊಂದು ಶಾಸನ ಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ. ವಿಜಯನಗರದ ಅರಸ ಎರಡನೇ ಹರಿಹರನ ಕಾಲದಲ್ಲಿ ಹೈವೆ ಪ್ರಾಂತ್ಯಾಧಿಕಾರಿಯಾಗಿ ಹರಿಯಣ್ಣ ಒಡೆಯರು ಅಧಿಕಾರ ನಡೆಸುತ್ತಿದ್ದಾಗ ಮಹಾಬಲೇಶ್ವರ ದೇವರ ಮುದ್ರೆಹಸ್ತ ಗಂಗಪ್ಪಾಧಿಕಾರಿ, ಸೇನಬೋವ ಪಡಿಹಾರ, ಮಡಿಯಾಳರೆಲ್ಲರೂ ಸೇರಿ ಜೆಪಾರ ಮಹಂತರಿಗೆ ಯಿಪ್ಪಾನೆ ಎಣ್ಣೆ ಪ್ರತಿವರ್ಷ ಉತ್ತರಾಯಣ ಪುಣ್ಯಕಾಲ ಸಂಕ್ರಾಂತಿಯಂದು ಮಹಾಬಲೇಶ್ವರ ದೇವರ ಕೊಟಾರದಲ್ಲಿ ಅಳೆದುಕೊಡುವಂತೆ ತಿಳಿಸಿ ಭೂದಾನ ಮಾಡಿದ್ದನ್ನು ದಾಖಲಿಸಿದೆ.[೩೯]

ಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿದ್ದಾಗ ಹನಿಹಳ್ಳಿಯ ಬೆಳ್ಳಿಯ ತಮ್ಮ ನಾಯ್ಕ, ಮತ್ತು ಆತನ ತಾಯಿ ಹಯಿವಕ್ಕ, ಇಬ್ಬರು ಸೇರಿ ಗೋಕರ್ಣದ ಮಿತ್ರಾವರುಣೇಶ್ವರ ದೇವರ ಅಮೃತಪಡಿಗಾಗಿ ಪ್ರಕಾಶ ಭಾರತಿ ಶ್ರೀಪಾದರಿಗೆ ಭೂದಾನ ಮಾಡಿದ್ದನ್ನು ದಾಖಲಿಸುತ್ತದೆ.[೪೦]

ಕ್ರಿ.ಶ ೧೪೦೬ರ ಶಾಸನ ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ವಿರುಪಣ್ಣರು ಕಾರ್ಯನಿರ್ವಹಿಸುತ್ತಿದ್ದಾಗ ಗೋಕರ್ಣ ಮಹಾಬಲೇಶ್ವರ ದೇವರ ಪಡಿ, ಹಾಗೂ ಬ್ರಾಹ್ಮಣರ ಸಲುವಾಗಿ ಬೊಮ್ಮಣ್ಣ ದಣ್ಣಾಯ್ಕರಿಗೆ ಚಿಕ್ಕ ತಮ್ಮರಸ ಒಡೆಯರ ಮಗ, ಮತ್ತು ಅಳಿಯಂದಿರು ಶ್ರೀ ಕಂಠ ಶ್ರೀಪಾದರಿಗೆ ದಾನ ಮಾಡುವಂತೆ ಹೇಳಿದ ಕಾರಣ ಅವರು ಭೂದಾನ ಮಾಡಿದ್ದನ್ನು ದಾಖಲಿಸುತ್ತದೆ.[೪೧] ಗೋಕರ್ಣ ಮೋರೆ ಭಟ್ಟರ ಮನೆಯಲ್ಲಿರುವ ಕ್ರಿ.ಶ ೧೪೧೦ ರ ಶಾಸನ ವಿಜಯನಗರಅರಸ

ಒಂದನೇ ದೇವರಾಯನ ಕಾಲದಲ್ಲಿ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ಸಿದ್ದಪ್ಪನ ಮಗ ವಿಸನ್ದಿನಿಗೆ ಅನ್ನಛತ್ರ ನಿರ್ವಹಣೆ ಸಲುವಾಗಿ ಅಮೃತೇಶ್ವರ ಭಾರತಿ ಶ್ರೀ ಪಾದರು ಭೂಮಿಯನ್ನು ದಾನವಾಗಿ ನೀಡಿದ್ದನ್ನು ದಾಖಲಿಸಿದೆ.[೪೨] ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ ೧೪೧೨ ರ ಶಾಸನ ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಈಚಪ್ಪ ಒಡೆಯರು ಕಾರ್ಯ ನಿರ್ವಹಿಸುತ್ತಿದ್ದಾಗ ಬುಕ್ಕರಸ ಒಡೆಯರ ಮಗ ವೀರಪ್ಪ ಗೋಕರ್ಣದಲ್ಲಿ ಮಾಡಿದ ಸತ್ರಕ್ಕೆ ಪ್ರತಿದಿನ ಬ್ರಾಹ್ಮಣ ಭೋಜನಕ್ಕಾಗಿ ೭೨ ಮೂಡೆ ಅಕ್ಕಿ ಹಾಗೂ ಗುಣವಂತೇಶ್ವರ ದೇವರ ಅಮೃತಪಡಿಗೆ ೧೨ ಮೂಡೆ ಅಕ್ಕಿ, ಒಟ್ಟೂ ೮೪ ಮೂಡೆ ಅಕ್ಕಿ ಉತ್ಪನ್ನವಿರುವ ಭೂಮಿಯನ್ನು ಆರಾಧ್ಯ ದೇವಗಳ ಬಸವಣ್ಣರು ದಾನವಾಗಿ ನೀಡಿದ್ದನ್ನು ಉಲ್ಲೇಖಿಸುತ್ತದೆ.[೪೩] ಕ್ರಿ.ಶ ೧೪೧೨ರ ಶಾಸನ ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಯಿಚಪ್ಪ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಗೋವೆಯ ಮಾದರಸ ಒಡೆಯರ ಮಗ ಬಾಚಣ್ಣ ಒಡೆಯರು, ಬಸವ ಮಾಲೆಗಾರನ ಮಗಳು ಬಲ್ಲಿಮೆಳು, ಮಾಲೆಗಾರನ ಮಕ್ಕಳು ಸೇರಿ ವರದ ಮಾಲೆಗಾರನ ಮಗ ತಮ್ಮ ಮಾಲೆಗಾರರಿಗೆ, ಗೋಕರ್ಣದ ಮಹಾಬಲೇಶ್ವರ ದೇವರಿಗೆ ಪ್ರತಿದಿನ ಯಿಪ್ಪಾನೆಯ ಅಮೃತಪಡಿ, ಹಾಗೂ೪೮ ಪತ್ರೆಯ ಮಾಲೆ, ವಿನಾಯಕ ದೇವರಿಗೆ ಒಪ್ಪಾನೆ ಅಕ್ಕಿಯ ಅಮೃತಪಡಿ ೨೪ ಮಾಲೆ, ಪ್ರತಿ ವರ್ಷ ನಡೆಸುವಂತೆ ತಿಳಿಸಿ ಭೂದಾನ ಮಾಡಿದ್ದನ್ನು ದಾಖಲಿಸಿದೆ.[೪೪]

ಕ್ರಿ.ಶ. ೧೪೧೩ರ ಶಾಸನ ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿಹೈವೆ, ತುಳು, ಕೊಂಕಣ ರಾಜ್ಯಗಳನ್ನು ಪ್ರತಿಪಾದಿಸುತ್ತಿದ್ದ ಮಹಾಪ್ರಧಾನರ ಹೆಸರು ಸ್ಪಷ್ಟವಾಗಿ ತಿಳಿದು ಬರುತ್ತಿಲ್ಲ. ಸಾತಣ್ಣ ಶೆಟ್ಟಿ ಗೋಕರ್ಣದ ಮಹಾಬಲೇಶ್ವರ ದೇವರಿಗೆ ೨ ಸಿದ್ದೆಯ ಅಕ್ಕಿಯ ಉಪ್ಪಾರ ನೈವೆದ್ಯಕ್ಕಾಗಿ ೧೨ ಮೂಡೆ ಉತ್ಪನ್ನವಿರುವ ಭೂಮಿಯನ್ನು ಆಧಾರಣ್ಣಗೆ ದಾನ ನೀಡಿದ್ದನ್ನು ದಾಖಲಿಸುತ್ತದೆ.[೪೫] ಕ್ರಿ.ಶ. ೧೪೧೩ರ ಶಾಸನ ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಮಲ್ಲಪ್ಪ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಮಲ್ಲಿನಾಥದೇವರು ಗೋಕರ್ಣದ ಶ್ರೀ ಮಹಾಬಲೇಶ್ವರ ದೇವರಿಗೆ ಒಪ್ಪಾನೆ ಅಕ್ಕಿಯ ನೈವೇದ್ಯ ಮತ್ತು ಛತ್ರಕ್ಕೆ ಭೂದಾನ ನೀಡಿದ್ದನ್ನು ದಾಖಲಿಸುತ್ತದೆ.[೪೬]

ಕ್ರಿ.ಶ ೧೪೧೪ ರ ಇನ್ನೊಂದು ಶಾಸನ ವಿಜಯನಗರ ಅರಸಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಸಿದ್ದಪ್ಪ ಒಡೆಯರು ಸೇವೆ ಸಲ್ಲಿಸುತ್ತಿದ್ದಾಗ ನಾರಾಯಣ ನಕ್ಕತ್ರಿಗರು ಗೋಕರ್ಣದ ಮಹಾಬಲೇಶ್ವರ ದೇವರ ಅಮೃತಪಡಿ ನಡೆಸುವಂತೆ ತಿಳಿಸಿ ಭೂದಾನ ಮಾಡಿದನ್ನು ಉಲ್ಲೇಖಿಸಿದೆ. [೪೭]ಇಲ್ಲಿರುವ ಇನ್ನೊಂದು ಕ್ರಿ.ಶ. ೧೪೧೬ರ ಶಾಸನ ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ

ಪ್ರಾಂತ್ಯಾಧಿಕಾರಿಯಾಗಿ ಬಾಚಣ್ಣ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಪರಮಾನಂದ ಸರಸ್ವತಿ ಶ್ರೀಪಾದರಿಗೆ ಬೊಳಹೆಬ್ಬಾರರು ಗೋಕರ್ಣದ ಮಹಾಬಲೇಶ್ವರ, ವಿಶ್ವಾಮಿತ್ರ, ಮತ್ತು ಬ್ರಹ್ಮೇಶ್ವರ ದೇವರ ಅಮೃತಪಡಿಗೆ ಹಾಗೂ ವಿಶ್ವಾಮಿತ್ರ ಮತ್ತು ಬ್ರಹ್ಮೇಶ್ವರ ದೇವರ ಜೀರ್ಣೋದ್ಧಾರಕ್ಕಾಗಿ ದಾನ ಮಾಡಿದನ್ನು ದಾಖಲಿಸಿದೆ.[೪೮] ಗೋಕರ್ಣ ಮಹಾಬಲೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ. ೧೪೧೭ ರ ಶಾಸನ ಗೋಕರ್ಣದ ಮಹಾಬಲೇಶ್ವರ ದೇವಾಲಯದ ಛತ್ರದ ನಿರ್ವಹಣೆಗಾಗಿ ಭೂಮಿ ದಾನ ಮಾಡಿದ್ದನ್ನು ದಾಖಲಿಸಿದೆ.[೪೯]

ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ. ೧೪೮೯ರ ಶಾಸನ ವಿಜಯನಗರ ಅರಸಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಶಂಕರದೇವ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ರಾಮಚಂದ್ರ ಸಾಗರ ಶ್ರೀ ಪಾದರು ಕಾಮೇಶ್ವರ ದೇವರಿಗೆ ಪ್ರತಿದಿನ ೨ ಸಿದ್ದೆ ಅಕ್ಕಿಯ ಅಮೃತಪಡಿ, ಬಲಿಗಾಗಿ ಒಂದು ಸಿದ್ದೆ ಅಕ್ಕಿಯ ಅನ್ನ, ನೈವೆದ್ಯಪಡಿ ಬಲಿಗೆಪತ್ರೆ ಇದನ್ನು ನಡೆಸಿಕೊಂಡು ಬರುವಂತೆ ತಿಳಿಸಿ ಕಾಮು ಬಂಡಾರರಿಗೆ ಭೂದಾನ ಮಾಡಿದ್ದನ್ನು ಉಲ್ಲೇಖಿಸಿದೆ.[೫೦] ಕ್ರಿ.ಶ. ೧೪೨೧ರ ಶಾಸನ ವಿಜಯನಗರ ಅರಸಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಶಂಕರ ದೇವರು ಅಧಿಕಾರ ನಡೆಸುತ್ತಿದ್ದಾಗ ವಿರುಪಣ್ಣರು ದುಂಡಕುಳಿಯ ಪಾರುಪತ್ಯವನ್ನು ವಹಿಸಿಕೊಂಡವರಿಗೆ ಆ ಗ್ರಾಮದಿಂದ ಪಡೆದ ೬೦ ಮೂಡೆ ಅಕ್ಕಿಯಲ್ಲಿ ೧೨ ಮೂಡೆ ಅಕ್ಕಿಯನ್ನು ಗೋಕರ್ಣ ಮಹಾಬಲೇಶ್ವರ ದೇವರ ಅಮೃತಪಡಿಗಾಗಿ ನೀಡುವಂತೆ ತಿಳಿಸಿದ್ದನ್ನು ಉಲ್ಲೇಖಿಸಿದೆ.[೫೧] ಇಲ್ಲಿರುವ ಇನ್ನೊಂದು ಶಾಸನ ಲಿಪಿ ದೃಷ್ಟಿಯಿಂದ ಇದು ವಿಜಯನಗರ ಕಾಲದ್ದಾಗಿದೆ. ವಿಜಯನಗರದಲ್ಲಿ ಆಳ್ವಿಕೆ ನಡೆಸುತ್ತಿದ್ದ ವೀರಪ್ರತಾಪ ಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಸೇವೆಸಲ್ಲಿಸುತ್ತಿದ್ದ ಸೋಮಣ್ಣ ಒಡೆಯರು ಗೋಕರ್ಣದ ಮಹಾಬಲೇಶ್ವರ ದೇವರ ಅಮೃತಪಡಿ ವರ್ಷಪೂರ್ತಿ ನಡೆಯುವಂತೆ ತಿಳಿಸಿ ೬೪೫೦ ಮೂಡೆ ಭತ್ತ ಉತ್ಪನ್ನವಿರುವ ಭೂಮಿಯನ್ನು ದಾನ ನೀಡಿದ್ದನ್ನು ಶಾಸನ ಉಲ್ಲೇಖಿಸುತ್ತದೆ.[೫೨] ಇನ್ನೊಂದು ಶಾಸನ ಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ.ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿದ್ದಾಗ ಹಡಪ ಮಾದಪಯ್ಯರು ಮಾಧವನಿಗೆ ಭೂಮಿದಾನ ನೀಡಿ ಅದರಿಂದ ಬರುವ ಉತ್ಪನ್ನದಲ್ಲಿ ಅಶೋಕ ತೀರ್ಥದ ಮಲ್ಲಿಕಾರ್ಜುನ ದೇವರಿಗೆ ಪ್ರತಿದಿನ ಒಪ್ಪಾನೆ ಅಕ್ಕಿಯ ಅಮೃತಪಡಿ, ಹಾಗೂ ೨೪ ಹೂವಿನ ಮಾಲೆ ನೀಡುವಂತೆ ತಿಳಿಸಿದ್ದನ್ನು ದಾಖಲಿಸಿದೆ.[೫೩] ಇನ್ನೊಂದು ಶಾಸನ ಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ. ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಗೋವಿಂದದೇವ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಗೋಕರ್ಣ ಮಹಾಬಲೇಶ್ವರ

ದೇವರ ಅಷ್ಟಭೋಗ, ನಂದಾದೀಪ, ಹಾಗೂ ವೇದಪಾರಾಯಣಕ್ಕಾಗಿ ಮಾಬಣ್ಣ ಶೆಟ್ಟಿ ಮತ್ತು ಆತನ ಮಕ್ಕಳು ಸೇರಿ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. [೫೪]

ಇನ್ನೊಂದು ಶಾಸನ ಲಿಪಿ ದೃಷ್ಟಿಯಿಂದ ವಿಜಯನಗರ ಕಾಲವಾಗಿದೆ. ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರ ಪ್ರಾಂತ್ಯಾಧಿಕಾರಿಯಾಗಿ ಬಸವಿದೇವರಸನು ಅಧಿಕಾರದಲ್ಲಿದ್ದಾಗ ಗೋಕರ್ಣದ ಮಹಾಬಲೇಶ್ವರ ದೇವರಿಗೆ ಪ್ರತಿದಿನ ಒಪ್ಪಾನೆ ಅಕ್ಕಿಯ ನೈವೇದ್ಯಕ್ಕಾಗಿ ನಾರಾಯಣ ಹೆಬ್ಬಾರ ನಾಲ್ಕು ಮೂಡೆ ಉತ್ಪನ್ನದ ಗದ್ದೆಯನ್ನು ದಾನನೀಡಿದ್ದನ್ನು ಶಾಸನ ದಾಖಲಿಸಿದೆ.[೫೫] ಇನ್ನೊಂದು ಶಾಸನ ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಪುರುಷೋತ್ತಮ ಸರಸ್ವತಿಗೆ ನಾಗೂರ ಬೊಳಹೆಬ್ಬಾರರು ಬ್ರಹ್ಮೇಶ್ವರ ಮತ್ತು ವಿಶ್ವಾಮಿತ್ರೇಶ್ವರ ದೇವರ ದೇವಸ್ಥಾನ ಜೀರ್ಣೋದ್ಧಾರಕ್ಕಾಗಿ ಭೂದಾನ ಮಾಡಿದ್ದನ್ನು ದಾಖಲಿಸಿದೆ.[೫೬] ಇಲ್ಲಿರುವ ಇನ್ನೊಂದು ಕ್ರಿ.ಶ ೧೪೨೭ ರ ಶಾಸನ ವಿಜಯನಗರ ಅರಸ ಎರಡನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಚಂದರಸ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಛತ್ರ ಕಮಿವಿನ ಕೊಟಮೊಬರಿಯ ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು ಇವರ ಸಂಸಾರದ ೧೧ ಭಾಗಿಯ ಮೂಲದವರು ಸೇರಿ ವರ್ಷಕ್ಕೆ ೧೩೯೦ ಮೂಡೆ ಭತ್ತವನ್ನು ಗೋಕರ್ಣದ ಮಹಾಬಲೇಶ್ವರ ದೇವರಿಗೆ ಪ್ರತಿದಿನ ಅಮೃತಪಡಿ ಸಲ್ಲಿಸುವಂತೆ ತಿಳಿಸಿ ಬಾನಪ್ಪರಿಗೆ ಭೂದಾನ ಮಾಡಿದ್ದನ್ನು ತಿಳಿಸುತ್ತದೆ.[೫೭] ಕ್ರಿ.ಶ. ೧೪೩೮ ರ ಶಾಸನ ವಿಜಯನಗರ ಅರಸಎರಡನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ (?) ಕಾರ್ಯನಿರ್ವಹಿಸುತ್ತಿದ್ದಾಗ ಮಹೇಂದ್ರ ಭಾರತೀ ಶ್ರೀಪಾದರು ವರದೇಶ್ವರ ದೇವರಿಗೆ ಒಪ್ಪಾನೆ ಅಕ್ಕಿಯ ನೈವೇದ್ಯ, ಮತ್ತು ನಂದಾದೀಪಕ್ಕಾಗಿ ಮಹೇಶ್ವರ ಭಟ್ಟರಿಗೆ ೩೦೫ ಹೊನ್ನುಗಳನ್ನು ನೀಡಿ ಅದರಿಂದ ಬರುವ ಬಡ್ಡಿಯಿಂದ ಈ ಕಾರ್ಯ ನೇರವೇರಿಸುವಂತೆ ತಿಳಿಸಿದ್ದನ್ನು ದಾಖಲಿಸುತ್ತದೆ.[೫೮] ಹನಿಯ ಗ್ರಾಮದ (ಹೊಸನಗರ ತಾಲೂಕು,ಶಿವಮೊಗ್ಗಾ ಜಿಲ್ಲೆ) ಶ್ರೀ ರಾಮಚಂದ್ರಾಪುರಮಠದ ಕ್ರಿ.ಶ. ೧೪೪೨ರ ಶಾಸನ ವಿಜಯನಗರ ಅರಸಎರಡನೇ ದೇವರಾಯನ ಕಾಲದಲ್ಲಿ ಹೊನ್ನಾವರ ಪ್ರಾಂತ್ಯಾಧಿಕಾರಿಯಾಗಿ ಮಲ್ಲಪ್ಪ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಗೋಕರ್ಣ ಮಹಾಬಲೇಶ್ವರ ದೇವಾಲಯ ಅಧಿಕಾರಿ ಸೇನಬೋವ ಸಿಂಗರಸನು ವರದೇಶ್ವರ ದೇವರ ಒಪ್ಪಾನೆ ಅಕ್ಕಿಯ ನೈವೇದ್ಯಕ್ಕಾಗಿ ದಾನ ನೀಡಿದ್ದನ್ನು ದಾಖಲಿಸಿದೆ. ಹಾಗೂ ನಂದಾದೀಪಕ್ಕೆ ರಾಮಚಂದ್ರಾಪುರದ ಅಗ್ರಹಾರದ ಮಹಾಜನರು ೧೦ ಸಿದ್ದೆ ಎಣ್ಣೆ ನೀಡಿದ್ದನ್ನು ಉಲ್ಲೇಖಿಸಿದೆ.[೫೯]

ಕ್ರಿ.ಶ ೧೪೪೪ ರ ಶಾಸನ ವಿಜಯನಗರ ಅರಸಎರಡನೇ ದೇವರಾಯನ ಕಾಲದಲ್ಲಿ ಹೈವೆಯ ರಾಜ್ಯದಲ್ಲಿ ರಾಮಚಂದ್ರದೇವ ಒಡೆಯರು ಪ್ರಾಂತ್ಯಾಧಿಕಾರಿಯಾಗಿದ್ದಾಗ ಗೋಕರ್ಣದ ಮಹಾಬಲೇಶ್ವರ ದೇವರ ಪಂಚಾಮೃತ ಅಭಿಷೇಕಕ್ಕೆ ಅಡತಾರೆ ಗ್ರಾಮದಿಂದ

೩೦ಹೊನ್ನನ್ನು ಆನಂದ ತೀರ್ಥ ಶ್ರೀಪಾದರ ವಶಕ್ಕೆ ನೀಡಿದ್ದನ್ನು ತಿಳಿಸಿದೆ.[೬೦] ಕ್ರಿ.ಶ ೧೪೪೫ರ ಶಾಸನ ವಿಜಯನಗರ ಅರಸಎರಡನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ರಾಮಚಂದ್ರ ದೇವ ಒಡೆಯರು ಸೇವೆಸಲ್ಲಿಸುತ್ತಿದ್ದಾಗ ವಿಜಯನಗರ ದೊರೆ ೨ನೇ ದೇವರಾಯನಿಗೆ ಆಯುರಾರೋಗ್ಯ ಲಭಿಸಲೆಂದು ಧಾರೇಶ್ವರದ ಧಾರನಾಥದೇವರ ನೈವೇದ್ಯಕ್ಕಾಗಿ, ಗೋಕರ್ಣ ಮಹಾಬಲೇಶ್ವರ ದೇವರ ಕಿಚ್ಚಡಿಯ ನೈವೇದ್ಯಕ್ಕಾಗಿ, ಪಾರುಪತ್ಯಗಾರ ಮಂಗರಸರ ಮೂಲಕ ಜ್ಞಾನೇಂದ್ರ ಸರಸ್ವತಿ ಶ್ರೀ ಪಾದರಿಗೆ ಭೂದಾನ ನೀಡಿದ್ದನ್ನು ದಾಖಲಿಸಿದೆ.[೬೧] ಹನಿಯ ಗ್ರಾಮದ ಕ್ರಿ.ಶ ೧೪೪೯ ರ ಶಾಸನವೊಂದು ವಿಜಯನಗರ ಅರಸ ಎರಡನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಬಾಯಪ್ಪರು ಸೇವೆ ಸಲ್ಲಿಸುತ್ತಿದ್ದಾಗ ಶ್ರೀ ರಾಘವೇಶ್ವರ ಸರಸ್ವತಿ ಶ್ರೀಪಾದರಿಗೆ ಅಬ್ಬಕ್ಕಗಳ ಮಕ್ಕಳು ಚಾಯ್ಪಗಳು ಗೋಕರ್ಣದ ಮಹಾಬಲೇಶ್ವರ ದೇವರ ಅಮೃತಪಡಿ ಸಲುವಾಗಿ ಭೂದಾನ ಮಾಡಿದ್ದನ್ನು ಹೇಳುತ್ತದೆ.[೬೨] ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ. ೧೪೩೮ರ ಶಾಸನ ವಿಜಯನಗರ ದೊರೆ ಎರಡನೇ ದೇವರಾಯನ ಕಾಲದಲ್ಲಿ ರಾಘವೋತ್ತಮ ಭಾರತಿ ಶ್ರೀಪಾದರಿಗೆ ಕಾಶ್ಯಪಗೋತ್ರದ ಏಕಾಂಬರನಾಥ ದೇವಗಳ ಮಕ್ಕಳು, ಅಣ್ಣ ಮಲ್ಲಿನಾಥ ದೇವಗಳ ತಮ್ಮಂದಿರು, ನಾಯಿನಾರ ದೇವಗಳು ಗೋಕರ್ಣದ ಛತ್ರಕ್ಕೆ ಮತ್ತು ಮಹಾಬಲೇಶ್ವರ ದೇವರ ನೈವೇದ್ಯಕ್ಕೆಂದು ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.[೬೩]

ಕ್ರಿ.ಶ ೧೪೫೭ರ ಶಾಸನ ವಿಜಯನಗರ ಅರಸ ೨ನೇ ದೇವರಾಯನ ಕಾಲದಲ್ಲಿ ಬಾಯಪ್ಪರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿದ್ದಾಗ ಪಾರುಪತ್ಯ ಚವುಡಪ್ಪ ಗೋಕರ್ಣ ಮಹಾಬಲೇಶ್ವರ ದೇವರ ಅಮೃತಪಡಿಗೆ, ಮತ್ತು ಎಣ್ಣೆಗಾಗಿ ಮಠದ ಭೂಮಿಯ ಆದಾಯ ಬಳಸಬೇಕೆಂದು ಉಲ್ಲೇಖಿಸಿದೆ.[೬೪] ಇನ್ನೊಂದು ಶಾಸನ ಲಿಪಿ ದೃಷ್ಟಿಯಿಂದ ಇದು ಚಂದಾವರ ಕಾದಂಬರ ಕಾಲದ್ದಾಗಿದೆ. ಚಂದಾವರದ ಕಾದಂಬ ಚಕ್ರವರ್ತಿ ವೀರಕಾಮದೇವರ ಆಳ್ವಿಕೆಯ ಕಾಲದಲ್ಲಿ ಮಗ ಬಸವಿದೇವ ಮರಣಹೊಂದಿದಾಗ ಅವರ ನೆನಪಿಗೋಸ್ಕರ ತಿಂಕವರದ ನಾಯ್ಕ ಗೋಕರ್ಣದ ಮಹಾಬಲೇಶ್ವರ ದೇವರಿಗೆ ಪ್ರತಿದಿನ ೨ ಸಿದ್ದೆಯ ಅಕ್ಕಿಯನ್ನು ಅಮೃತಪಡಿ ನಡೆಸುವದಕ್ಕೆ ೧೫ಮೂಡೆ ಭತ್ತವನ್ನು ನೀಡುವಂತೆ ತಿಳಿಸಿ ಬಿಲ್ಲಪ್ಪನಿಗೆ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.[೬೫] ಇಲ್ಲಿರುವ ಇನ್ನೊಂದು ಶಾಸನ ಚಂದಾವರ ಕಾದಂಬರ ವೀರಕಾವದೇವರಸನ ಕಾಲದಲ್ಲಿ ಸರ್ವಜ್ಞಪುರಿ ಶ್ರೀಪಾದರು ಕಾಮೇಶ್ವರ ದೇವರ ಸೇವೆಗಾಗಿ ಭೂದಾನ ಮಾಡಿದ್ದನ್ನು ಉಲ್ಲೇಖಿಸಿದೆ.[೬೬] ಧಾರೇಶ್ವರದ ಧಾರಾನಾಥ ದೇವಾಲಯದ ಗರ್ಭಗುಡಿಯ ಹೊರಭಾಗದ ಭಿತ್ತಿಯ ಶಾಸನ ಲಿಪಿ ದೃಷ್ಟಿಯಿಂದ ಕ್ರಿ.ಶ. ೧೪ ನೇ ಶತಮಾನದಾಗಿದ್ದುಧಾರೇಶ್ವರದ ಧಾರನಾಥ ದೇವರಿಗೆ ಮತ್ತು ಭಿಮೇಶ್ವರ ದೇವರಿಗೆ ಭತ್ತದ ಉತ್ಪನ್ನವಿರುವ ಭೂಮಿ ದಾನ ನೀಡಿದ್ದನ್ನು ಶಾಸನ ತಿಳಿಸುತ್ತದೆ.[೬೭]

ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣ ಶಾಸನವೊಂದು ವಿಜಯನಗರ ಕಾಲದ್ದಾಗಿದ್ದು ವಿಜಯನಗರ ಅರಸ ಕಾಲದಲ್ಲಿ ಸೊಮಣ್ಣ ಭಟ್ಟರ ಮಗ ನಾರಾಯಣ ಭಟ್ಟರು ಗೋಕರ್ಣದ ಮಹಾಬಲೇಶ್ವರ ದೇವರಿಗೆ ನಿತ್ಯಪೂಜೆ, ಪುರಾಣ, ರುದ್ರಾಭಿಷೇಕ, ಮಂತ್ರಪುಷ್ಪ, ಸಂಕ್ರಾಂತಿ, ಪಂಚಪರ್ವ, ಮಹಾಪೂಜೆ ಮುಂತಾದ ಧಾರ್ಮಿಕ ಕಾರ್ಯಗಳಿಗಾಗಿ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.[೬೮] ಧಾರೇಶ್ವರದ ಕ್ರಿ.ಶ. ೧೪೮೯ರ ಶಾಸನ ನಗಿರೆ, ತುಳು, ಕೊಂಕಣ ರಾಜ್ಯವನ್ನಾಳುತ್ತಿದ್ದ ಸಾಳುವ ದೇವರಾಯ ಒಡೆಯರು ತಮಗೆ ಆರೋಗ್ಯ ಮತ್ತು ಯುದ್ಧದಲ್ಲಿ ಜಯ, ಸಂಪತ್ತು, ಲಭಿಸಲೆಂದು ಧಾರೇಶ್ವರದ ಧಾರನಾಥ ದೇವರ ಸನ್ನಿಧಿಯಲ್ಲಿ ನಡೆಯುವ ಸೇವೆಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[೬೯] ಧಾರೇಶ್ವರದ ಕ್ರಿ.ಶ ೧೫೧೧ರ ಶಾಸನ ಸಾಳುವ ನರಸಣ್ಣ ನಾಯಕರಿಗೆ ಆರೋಗ್ಯ, ದಿಗ್ವಿಜಯ, ಸಂಪತ್ತು ಲಬಿಸಲೆಂದು ದೇವರಸ ಒಡೆಯರು ಧಾರೇಶ್ವರದ ಧಾರನಾಥ ದೇವರ ಸನ್ನಿಧಿಯಲ್ಲಿ ನಡೆಯುವ ಅಮೃತ ಪಡಿಗಾಗಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[೭೦] ಕ್ರಿ.ಶ ೧೫೪೫ರ ಶಾಸನ ಸಾಳುವಕೃಷ್ಣ ದೇವರಸ ಒಡೆಯರು ತಮಗೆ ಆಯುರಾರೋಗ್ಯ, ಐಶ್ವರ್ಯ ಅಭಿವೃದ್ಧಿಗಾಗಿ ಧಾರನಾಥ ದೇವರಿಗೆ ಅಂಗ, ರಂಗ, ಬೋಗ, ಅಮೃತಪಡಿ, ಸೇವೆಗಳಿಗಾಗಿ ಹಿರಣ್ಯೋದಕ ದಾನ ನೀಡಿದ್ದನ್ನು ತಿಳಿಸುತ್ತದೆ.[೭೧] ಗೋಕರ್ಣ ಹೀರೆಭಟ್ಟರ ಮನೆ ಗೋಡೆಯಲ್ಲಿರುವ ಕ್ರಿ.ಶ ೧೫೫೩ರ ಶಾಸನ ಮಹಾಮಂಡಳೇಶ್ವರ ಸಾಳುವ ಕೃಷ್ಣ ದೇವರಸ ಒಡೆಯರು ಆಳುತ್ತಿದ್ದಾಗ ಭಟ್ಕಳದ ಗಣಪಣ್ಣ ಜೋಯಿಸ ಮತ್ತು ಕೆಲವರು ಸೇರಿ ಭೂಮಿಯನ್ನು ಖರೀದಿಸಿ ಈಶ್ವರ ದೇವಾಲಯದ ಜೀರ್ಣೋದ್ಧಾರ ಹಾಗೂ ಧಾರ್ಮಿಕ ವಿಧಿವಿಧಾನಗಳ ಉಪಯೋಗಕ್ಕೆ ಭೂಮಿಯನ್ನು ದಾನ ಮಾಡಿದ್ದರೆಂದು ತಿಳಿಸುತ್ತದೆ.[೭೨] ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣ ಶಾಸನ ಲಿಪಿ ದೃಷ್ಟಿಯಿಂದ ಇದು ವಿಜಯನಗರ ಕಾಲವಾಗಿದೆ. ಗೋಕರ್ಣದ ಮಹಾಬಲೇಶ್ವರ ದೇವರಿಗೆ ಪ್ರತಿದಿನ ಎರಡು ಸಿದ್ದೆ ಅಕ್ಕಿಯ ನೈವೇದ್ಯ, ರುದ್ರ ಪೂಜೆ, ಶಂಭು ಅಡಿಗಳು, ಶಿವ ಭಟ್ಟರಿಗೆ ಭೂದಾನ ನೀಡಿದ್ದನ್ನು ತಿಳಿಸುತ್ತದೆ. [೭೩]. ಖೈರೆ ಭತ್ತದ ಗದ್ದೆಯಲ್ಲಿರುವ ಕ್ರಿ.ಶ. ೧೪ನೇ ಶತಮಾನಕ್ಕೆ ಸೇರಿದ ಶಾಸನ ಶಿವನ ಸ್ತುತಿಯಿಂದ ಆರಂಭವಾಗಿದ್ದು ಈ ಶಾಸನ ವಿಜಯನಗರ ಅರಸ ಅಚ್ಚುತರಾಯನ ಆಳ್ವಿಕೆಯ ಅವಧಿಯಲ್ಲಿ ಸಾಳುವ ಒಡೆಯ ನಗಿರೆ, ಹೈವೆ, ರಾಜ್ಯವನ್ನು ಆಳುತ್ತಿದ್ದಾಗ ಗೋಕರ್ಣ ಮಹಾಬಲೇಶ್ವರನ ನಿತ್ಯಪೂಜಾ ವಿನಿಯೋಗಕ್ಕಾಗಿ ದಾನ ನೀಡಿದ್ದರ ಕುರಿತಿದೆ.[೭೪]

೩.೨.೩ ಶಾಕ್ತ ದಾನಶಾಸನಗಳು

ಶಾಕ್ತ ದೇವಾಲಯಗಳ ದಿನನಿತ್ಯ ನಡೆಯುವ ಸೇವೆಗಾಗಿ ಅನ್ನಸಂತರ್ಪಣೆಗಾಗಿ ನೀಡಿದ ದತ್ತಿಗಳನ್ನು ದಾಖಲಿಸಿದ ಶಾಸನಗಳಿಗೆ ಶಾಕ್ತ ದಾನಶಾಸನಗಳೆಂದು ಕರೆಯಲಾಗಿದೆ. ಪ್ರಸ್ತುತ ಕುಮಟಾ ತಾಲೂಕಿನ ಶಾಕ್ತ ದೇವಾಲಯಕ್ಕೆ ಸಂಬಂಧಿಸಿದ ದಾನಶಾಸನಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ ೧೪೦೪ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ವಿರುಪಣ್ಣ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ವಲ್ಲಭದೇವಗಳ ಮಕ್ಕಳು, ದೇವರಸರಿಗೆ ಕಾಂಚಿಕಾದೇವಿಯ ಸೇವೆಗಾಗಿ ಭೂದಾನ ಮಾಡಿದ್ದನ್ನು ಉಲ್ಲೇಖಿಸಿದೆ.[೭೫] ಗೋಕರ್ಣ ಪಾರ್ವತಿ ದೇವಾಲಯದ ಗೋಡೆಯಲ್ಲಿ ನಿಲ್ಲಿಸಲ್ಪಟ್ಟ ಶಾಸನ ಕ್ರಿ.ಶ ೧೫ನೇ ಶತಮಾನಕ್ಕೆ ಸೇರಿದೆ. ಈ ಶಾಸನದಲ್ಲಿ ಮಂಜುನಾಯಕನು ಗೋಕರ್ಣದ ಪಾರ್ವತಿ ದೇವಾಲಯದಲ್ಲಿ ನಡೆಯುವ ಅನ್ನ ಸಂತರ್ಪಣೆಗಾಗಿ ಹೊಸೂರ ಗ್ರಾಮವನ್ನು ಮಾಬಲಲಿಂಗ ಭಟ್ಟರಿಗೆ ದತ್ತಿಯಾಗಿ ನೀಡಿದ್ದನ್ನು ದಾಖಲಿಸಿದೆ.[೭೬]

೩.೨.೪ ವೈಷ್ಣವ ದಾನಶಾಸನಗಳು

ವೈಷ್ಣವ ಧರ್ಮದ ದೇವಾಲಯಗಳಿಗೆ ಪೂಜಾಕಾರ್ಯ, ಶಾಂತಿ ಗಣಹೋಮ, ನೈವೇದ್ಯ, ನಂದಾದೀಪಕ್ಕಾಗಿ ನೀಡಿದಂತಹ ದತ್ತಿಗಳನ್ನು ಉಲ್ಲೇಖಿಸಿದ ಶಾಸನಗಳಿಗೆ ವೈಷ್ಣವ ದಾನಶಾಸನಗಳೆಂದು ಪರಿಗಣಿಸಿದೆ. ಪ್ರಸ್ತುತ ಕುಮಟಾ ತಾಲೂಕಿನ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ದಾನಶಾಸನಗಳ ಪ್ರಸ್ತಾವನೆ ಇಲ್ಲಿ ಮಾಡಲಾಗಿದೆ.

ಅಡತಾರೆಈಶ್ವರ ದೇವಸ್ಥಾನದ ಹತ್ತಿರ ಕ್ರಿ.ಶ ೧೧೬೭ರ ಶಾಸನ ಶಿಶುಗಲಿ ಪಾಂಡ್ಯ ದೊರೆ ತೈಲವರ್ಮನ ಅಣ್ಣನಾದ ಮಾವಲಿದೇವ ಮತ್ತು ಅವನ ಮೊಮ್ಮಗ ವೀರದೇವರು ನಿಲ್ಲಿಸಿದರು. ಅಡತಾರೆ ಗ್ರಾಮದವರು ಕೇಶವ ದೇವರ ನೈವೇದ್ಯಕ್ಕಾಗಿ ೩೬ ಮೂಡೆ ಭತ್ತವನ್ನು ಮತ್ತು ನಂದಾದೀಪಕ್ಕಾಗಿ ೩೬ ಕೊಳಗ ಎಣ್ಣೆಯನ್ನು ಹಾಗೂ ಒಂದು ಗದ್ಯಾಣವನ್ನು ದಾನ ನೀಡಿದ್ದನ್ನು ಶಾಸನ ಉಲ್ಲೇಖಿಸಿದೆ.[೭೭] ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣ ಕ್ರಿ.ಶ ೧೨೦೦ರ ಶಾಸನ ಚಂದಾವರ ಕಾದಂಬ ಬಸವಿದೇವರಸರು ಗೋಕರ್ಣದ ನರಸಿಂಹ ದೇವರ ಪೂಜಾಕಾರ್ಯ ಸಲುವಾಗಿ ಪ್ರಸನ್ನ ಸಾಗರ ಶ್ರೀಪಾದರಿಗೆ ಭೂದಾನ ನೀಡಿದ್ದನ್ನು ದಾಖಲಿಸಿದೆ.[೭೮]

ನಾಗೂರ ವಿಷ್ಣು ದೇವಾಲಯದ ಬಲಗಡೆ ಇರುವ ವೀರಕಾವದೇವನ ಆಳ್ವಿಕೆಯ ಕ್ರಿ.ಶ ೧೪೦೪ರ ಶಾಸನ ಚಂದಾವರ ಕಾದಂಬ ಶಿವಚಿತ್ತ ಮೂರನೇ ವೀರಕಾವದೇವರಸನ ವಿನಾಯಕ ದೇವರು, ಮತ್ತು ವಿಷ್ಣು ದೇವರ ಶಾಂತಿ, ಹಾಗೂ ಗಣಹೋಮಕ್ಕೆ ಬೋರಿವಾಳ ಪರಿಷೆಯ ಶ್ರೀ ಪ್ರಕಾಶತೀರ್ಥ ಶ್ರೀಪಾದರಿಗೆ ಶಿವಚಿತ್ತ ವೀರಕಾವದೇವರಸರು ನಾಗೂರ ಮಾನಿಸ ಪ್ರಭುಗಳ ಒಪ್ಪಿಗೆಯಿಂದ ಭೂದಾನ ನೀಡಿದ್ದನ್ನು ಉಲ್ಲೇಖಿಸಿದೆ.[೭೯] ನಾಗೂರವಿಷ್ಣು ದೇವಾಲಯದ ಎಡಗಡೆಇರುವ ಕ್ರಿ.ಶ ೧೪೦೮ರ ಶಾಸನ ವಿಷ್ಣು ದೇವರ ಪೂಜಾವಿನಿಯೋಗಕ್ಕಾಗಿ ವೀರಕಾವದೇವರಸ ದಾನ ನೀಡಿದ್ದನ್ನು ದಾಖಲಿಸಿದೆ.[೮೦]

೩.೨.೫ ಜೈನದಾನ ಶಾಸನಗಳು

ಜೈನ ಬಸದಿಗಳಲ್ಲಿ ದಿನನಿತ್ಯ ನಡೆಯುವ ಪೂಜಾ ವಿನಿಯೋಗಕ್ಕಾಗಿ ನೀಡಿದ ದಾನವನ್ನು ಉಲ್ಲೆಖಿಸುವ ಶಾಸನಗಳಿಗೆ ಜೈನದಾನ ಶಾಸನಗಳೆಂದು ಕರೆಯಲಾಗಿದೆ. ಪ್ರಸ್ತುತ ಕುಮಟಾ ತಾಲೂಕಿನ ಜೈನ ಬಸದಿಗಳಿಗೆ ಸಂಬಂಧಿಸಿದ ಒಂದೇ ದಾನಶಾಸನ ದೊರಕಿದ್ದನ್ನು ಇಲ್ಲಿ ದಾಖಲಿಸಲಾಗಿದೆ.

ಗೋಕರ್ಣದಲ್ಲಿ ಲಭ್ಯವಾಗಿರುವ ತಾಮ್ರಪಟ ಶಾಸನಕ್ರಿ.ಶ. ೧೫೨೧ ಕ್ಕೆ ಸೇರಿದ್ದು ಭಕ್ತ ಮಲ್ಲಿಶೆಟ್ಟಿ ಹುಲಿಗೇರಿಯ ಜೈನಬಸದಿಗೆ ಮಾಸೂರ ಗ್ರಾಮದ ಭೂಮಿಯನ್ನು ದಾನ ಮಾಡಿದ್ದನ್ನು ದಾಖಲಿಸಿದೆ.[೮೧]

೩.೨.೬ ಸತ್ರಗಳಿಗೆ ನೀಡಿದ ದಾನಶಾಸನಗಳು

ದೇವಾಲಯಗಳಿಗೆ ಬರುವ ಭಕ್ತರ ಭೋಜನಕ್ಕಾಗಿ ನೀಡಿದ ದಾನಗಳನ್ನು ಉಲ್ಲೇಖಿಸುವ ಶಾಸನಗಳನ್ನು ಸತ್ರಗಳಿಗೆ ನೀಡಿದ ದಾನಶಾಸನಗಳೆಂದು ಪರಿಗಣಿಸಿದೆ. ಗೋಕರ್ಣದ ಮಹಾಬಲೇಶ್ವರ, ಪಾರ್ವತಿ ದೇವಾಲಯದಲ್ಲಿ ನಡೆಯುವ ಸತ್ರಕ್ಕಾಗಿ ವಿಜಯನಗರದ ಅರಸರು, ರಾಣಿಯರು, ಮಕ್ಕಳು, ಪ್ರಾಂತ್ಯಾಧಿಕಾರಿಗಳು ನೀಡಿದ ದಾನವನ್ನು ಇಲ್ಲಿ ದಾಖಲಿಸಲಾಗಿದೆ.

ಗೋಕರ್ಣನಾರಾಯಣ ಉಪಾಧ್ಯಾಯರ ಮನೆಯಲ್ಲಿನ ಶಾಸನಕ್ರಿ.ಶ ೧೨-೧೩ನೇ ಶತಮಾನಕ್ಕೆ ಸೇರಿದೆ. ಈ ಶಾಸನ ವಿಜಯನಗರ ದೊರೆ ಬುಕ್ಕರಾಯನ ಪಟ್ಟದರಸಿ ವಿಠಲಾದೇವಿ ಗೋಕರ್ಣದ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಅನ್ನಸತ್ರದ ನಿರ್ವಹಣೆಗೆ ರಾಜಗುರು ಈಶ್ವರಭಟ್ಟರ ಸಮ್ಮುಖದಲ್ಲಿ ಭೂದಾನ ನೀಡಿದ್ದನ್ನು ದಾಖಲಿಸಿದೆ.[೮೨] ಗೋಕರ್ಣ ಕೆ.ಡಿ. ಸಣ್ಣ ಬಡತಿ ಮನೆಯ ಗೋಡೆಯ ಬಳಿ ಇರುವ ಭಗ್ನಗೊಂಡಿರುವ ಕ್ರಿ.ಶ ೧೪ನೇ ಶತಮಾನಕ್ಕೆ ಸೇರಿದ ಶಾಸನ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಅನ್ನಸತ್ರಕ್ಕೆ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಪಟ್ಟದರಸಿ ವೀರಾಂಬೆ ಮತ್ತು ಹೊನ್ನಾಂಬೆಯ ಹೆಸರು ಶಾಸನದಲ್ಲಿದೆ.[೮೩] ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ ೧೩೬೮ರ ಇನ್ನೊಂದು ಶಾಸನ ವಿಜಯನಗರ ಅರಸ ಬುಕ್ಕನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೈವೆಯ ಪ್ರಾಂತ್ಯಾಧಿಕಾರಿಯಾಗಿ ಅಧಿಕಾರ ನಡೆಸುತ್ತಿದ್ದಾಗ ಅನಂತರಸ ಒಡೆಯರು ಗೋಕರ್ಣದಲ್ಲಿನ ಛತ್ರದ ಸಲುವಾಗಿ ಭೂದಾನ ನೀಡಿದ್ದನ್ನು ದಾಖಲಿಸಿದೆ.[೮೪]

ಇಲ್ಲಿರುವ ಇನ್ನೊಂದು ಕ್ರಿ.ಶ ೧೩೭೨ರ ಶಾಸನ ವಿಜಯನಗರ ದೊರೆ ಬುಕ್ಕನ ಕಾಲದಲ್ಲಿ ಮಹಾಪ್ರಧಾನ ಮಲ್ಲಪ್ಪ ಒಡೆಯರು ಹೈವೆ ರಾಜ್ಯದ ಅಧಿಕಾರ ನೋಡಿಕೊಳ್ಳುತ್ತಿದ್ದಾಗ ಅಂಕಣ್ಣಗಳು ಗೋಕರ್ಣ ಮಹಾಬಲೇಶ್ವರ ಸನ್ನಿದಿಯಲ್ಲಿ ಮಾಡಿದ ಛತ್ರಕ್ಕೆ ಕೆರಗನಾಯ್ಕ, ಸಾತೆಯ ನಾಯ್ಕ ಇನ್ನಿತರರು ಭೂದಾನ ಮಾಡಿದ್ದನ್ನು ಉಲ್ಲೇಖಿಸಿದೆ.[೮೫]

ಗೋಕರ್ಣಹನೇಹಳ್ಳಿ ಮಠದಲ್ಲಿರುವ ಕ್ರಿ.ಶ ೧೩೭೪ರ ಶಾಸನ ವಿಜಯನಗರ ಅರಸ ಬುಕ್ಕನ ಕಾಲದಲ್ಲಿ ಮಲ್ಲಪ್ಪ ಒಡೆಯರು ಪ್ರಾಂತ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಬುಕ್ಕನ ಮಡದಿ (ಪಟ್ಟದರಸಿ) ಹೊನ್ನಾದೇವಿ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಅನ್ನಸತ್ರದ ನಿರ್ವಹಣೆಗೆ ಭೂದಾನ ಮಾಡಿದ್ದನ್ನು ದಾಖಲಿಸಿದೆ[೮೬]. ಕ್ರಿ.ಶ ೧೩೭೫ರ ಶಾಸನವೊಂದು ವಿಜಯನಗರ ದೊರೆ ಬುಕ್ಕರಾಯನ ಕಾಲದಲ್ಲಿ ಪತ್ನಿ ಹೊನ್ನಲದೇವಿ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ಮಾಡಿದ ಛತ್ರಕ್ಕೆ ಭೂದಾನ ಮಾಡಿದ್ದನ್ನು ಮಾಹಿತಿ ನೀಡುತ್ತದೆ.[೮೭] ಗೋಕರ್ಣ ಅನಂತ ಕೃಷ್ಣ ಕಾರಂತ ಅವರ ಮನೆಯಲ್ಲಿದ್ದ ಶಾಸನ ಲಿಪಿ ದೃಷ್ಟಿಯಿಂದ ಕ್ರಿ.ಶ ೧೫ನೇ ಶತಮಾನಕ್ಕೆ ಸೇರಿದೆ. ವಿಜಯನಗರಅರಸ ಬುಕ್ಕರಾಯ ಮಹಾಬಲೇಶ್ವರ ದೇವರ ಸನ್ನಿದಿಯಲ್ಲಿ ನಡೆಯುವ ಅನ್ನಛತ್ರಕ್ಕೆ ಭೂದಾನ ನೀಡಿದ್ದನ್ನು ಶಾಸನ ಉಲ್ಲೇಖಿಸುತ್ತದೆ[೮೮]. ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣ ಶಾಸನ ವಿಜಯನಗರ ಅರಸ ಬುಕ್ಕನ ಕಾಲದಲ್ಲಿ ಮಲ್ಲಪ್ಪ ಒಡೆಯ ಹೈವೆಯ ಪ್ರಾಂತ್ಯಾಧಿಕಾರಿಯಾಗಿ ಅಧಿಕಾರ ನಡೆಸುತ್ತಿದ್ದಾಗ ಮಹಾಪ್ರಧಾನ ಅನಂತಪ್ಪ ಒಡೆಯರು ಗೋಕರ್ಣದ ಸತ್ರಕ್ಕೆ ಭೂದಾನ ಮಾಡಿದ್ದನ್ನು ದಾಖಲಿಸಿದೆ.[೮೯]

ಇಲ್ಲಿರುವ ಇನ್ನೊಂದು ಕ್ರಿ.ಶ ೧೩೮೫ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಪ್ರಾಂತ್ಯಾಧಿಕಾರಿಯಾಗಿ ಅಧಿಕಾರ ನಡೆಸುತ್ತಿದ್ದಾಗ, ಹನಿಹಳ್ಳಿಯ ವರದ ಹೆಗ್ಗಡೆ, ನಂದಿನಾಯಕ, ಸಣ್ಣಬಲ್ಲುನಾಯಕ, ಬೀರ ಭಂಡಾರಿ, ಇವರಿಂದ ಕೇಶವ ಭಟ್ಟರು ಭೂಮಿಯನ್ನು ಖರೀದಿಸಿ ಗೋಕರ್ಣ ಮಹಾಬಲೇಶ್ವರ ದೇವಾಲಯದ ಬ್ರಾಹ್ಮಣ ಭೋಜನ ಛತ್ರಕ್ಕೆ ಭೂದಾನ ನೀಡಿದ್ದನ್ನು ತಿಳಿಸುತ್ತದೆ.[೯೦] ಇಲ್ಲಿರುವ ಇನ್ನೊಂದು ಕ್ರಿ.ಶ ೧೩೮೫ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಅಧಿಕಾರ ನಡೆಸುತ್ತಿದ್ದಾಗ ಕೆಶವ ಭಟ್ಟರು ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿನ ಛತ್ರಕ್ಕೆ ಮಹಾಬಳನಾಯ್ಕ, ತೆರಗುನಾಯ್ಕ, ಬೀರ ನಾಯಕರಿಂದ ಭೂಮಿಯನ್ನು ಖರೀದಿಸಿ ಗೇಣಿಗಾಗಿ ನಾರಾಯಣ ಹೆಬ್ಬಾರನ ಮಗ ಕೇಶವ ಹೆಬ್ಬಾರ, ವಿಷ್ಣು ಹೆಬ್ಬಾರ, ಈಶ್ವರ ಹೆಬ್ಬಾರ ಇವರಿಗೆ ನೀಡಿ ೫೦ಮೂಡೆ ಭತ್ತವನ್ನು ಛತ್ರಕ್ಕೆ ನೀಡುವಂತೆ ತಿಳಿಸಿದನ್ನು ಶಾಸನ ದಾಖಲಿಸಿದೆ[೯೧]. ಇಲ್ಲಿರುವ ಕ್ರಿ.ಶ ೧೩೮೬ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ವಿಜಯನಗರ ದೊರೆ ಹರಿಹರ ಆರಾಧ್ಯದೇವರಿಗೆ ಗೋಕರ್ಣ ಮಹಾಬಲೇಶ್ವರನ ಸನ್ನಿಧಿಯಲ್ಲಿ ನಡೆಯುವ ಸತ್ರಕ್ಕಾಗಿ ಭೂದಾನ ಮಾಡಿದ್ದನ್ನು ಶಾಸನ ಉಲ್ಲೇಖಿಸುತ್ತದೆ.[೯೨] ಕ್ರಿ.ಶ ೧೩೮೮ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಮಲ್ಲಪ್ಪ ಒಡೆಯರು ಅಧಿಕಾರ ನಡೆಸುತ್ತಿದ್ದಾಗ ಹರಿಹರನ ಮಗಳು ವಿಜಯಲಕ್ಷ್ಮಿ

ಗೋಕರ್ಣದ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಛತ್ರಕ್ಕೆ ಭೂದಾನ ಮಾಡಿದ್ದಳು. ಮತ್ತು ಕುಂಬಲೆಯ ಹೆಬ್ಬಾರರು ಕೂಡ ಛತ್ರಕ್ಕೆ ೩೫ ಮೂಡೆ ಭತ್ತದ ಉತ್ಪನ್ನದ ಗದ್ದೆಯನ್ನು ದಾನ ಮಾಡಿದ್ದನ್ನು ದಾಖಲಿಸುತ್ತದೆ.[೬೩] ಕ್ರಿ.ಶ ೧೩೯೧ರ ಶಾಸನ ಮಹಾಪ್ರಧಾನ ಮಲ್ಲಪ್ಪ ಒಡೆಯರು ಹೊನ್ನಾವರ ಪ್ರಾಂತ್ಯಾಧಿಕಾರಿಯಾಗಿ ಅಧಿಕಾರ ನಡೆಸುತ್ತಿದ್ದಾಗ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿರುವ ವಿಜಯನಗರ ರಾಯರ ಛತ್ರಕ್ಕೆ ಸಾರಿಶೆಟ್ಟಿಯ ಮಗ ಬೊಮ್ಮಣ್ಣಶೆಟ್ಟಿ ೯ ಮೂಡೆ ಭತ್ತದ ಭೂಮಿಯನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[೬೪]

ಕ್ರಿ.ಶ ೧೩೯೧ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಚಂದಾವರದ ಸಾತಣ್ಣಶೆಟ್ಟಿಯ ಮಗ ಬೊಮ್ಮಣ್ಣ ಶೆಟ್ಟಿಯರು ಮಾಡಿದ ಗೋಕರ್ಣದ ಛತ್ರಕ್ಕೆ ದೆಸೆಟ್ಟಿಯೆಂಟು ಹೊರೆ ಬಿತ್ತುವ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಇದನ್ನು ಬ್ರಾಹ್ಮಣರ ಭೋಜನಕ್ಕೆ ನೀಡುವಂತೆ ಇಲ್ಲದೆ ಇದ್ದರೆ ಭೂಮಿಯನ್ನು ವಾಪಸ ನೀಡುವಂತೆ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೬೫] ಕ್ರಿ.ಶ ೧೩೯೨ರ ಶಾಸನದಲ್ಲಿ ಮೈಲಣ್ಣರು ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಛತ್ರಕ್ಕೆ ೨೮ ಮೂಡೆ ಬಿತ್ತುವ ಭೂಮಿಯನ್ನು ದೇವರಸರ ಮಕ್ಕಳು ಕಾಮಣ್ಣರಿಗೆ ದಾನ ನೀಡಿದ ಉಲ್ಲೇಖವಿದೆ.[೬೬] ಕ್ರಿ.ಶ ೧೩೯೨ರ ಶಾಸನ ಚಂದಾವರ ಶೆಟ್ಟಿಗಾರ ಕುಟುಂಬದವರು ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ಪ್ರತಿದಿನ ನಡೆಯುವ ಛತ್ರಕ್ಕೆ ಎಂಟು ಭಾಗದ ಊರವರಿಗೆ ಸೇರಿದ ಭೂಮಿಯನ್ನು ಬೊಮ್ಮಣ್ಣ ಶೆಟ್ಟಿಯಿಂದ ಹಣ ಕೊಟ್ಟು ಪಡೆದುಕೊಂಡು ದಾನ ಮಾಡಿದ್ದನ್ನು ಹೇಳಿದೆ. ಈ ಭೂಮಿಯಿಂದ ಗೋಕರ್ಣದ ಹಾನೆ ೩೦ಕ್ಕೆ ೧ ಮೂಡೆಯಂತೆ ೮೦ ಮೂಡೆ ಅಕ್ಕಿ ಸತ್ರಕ್ಕೆ ನೀಡಲಾಗುತ್ತದೆ ಎಂದು ಶಾಸನ ಉಲ್ಲೇಖಿಸುತ್ತದೆ.[೬೭] ಕ್ರಿ.ಶ ೧೩೯೨ರ ಶಾಸನ ಚಂದಾವರದ ಬೊಮ್ಮಣ್ಣ ಶೆಟ್ಟಿಗೆ ರಾಜ ಗುರು ಬನಕನನಾಯ್ಕನ ಮಗಳು ಬಯಿರಕ್ಕ, ಅವಳ ತಮ್ಮ ಗಂಗಣ್ಣ, ಮಲ್ಲಪ್ಪ ಇವರು ಭೂದಾನ ಮಾಡಿ ಸತ್ರಕ್ಕೆ ೧೨ ಮೂಡೆ ಅಕ್ಕಿ ನೀಡುವಂತೆ ತಿಳಿಸಿದ್ದನ್ನು ದಾಖಲಿಸಿದೆ.[೬೮]

ಗೋಕರ್ಣಶಿವಭಟ್ಟ ಅಡಿ ಅವರ ಮನೆಯಲ್ಲಿಯ ಕ್ರಿ.ಶ ೧೩೯೩ರ ಶಾಸನ. ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಮಹಾಪ್ರಧಾನ ಮಲ್ಲಪ್ಪ ಒಡೆಯರು ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಆಳ್ವಿಕೆ ನಡೆಸುತ್ತಿದ್ದಾಗ ವಿಜಯನಗರ ದೊರೆ ಹರಿಹರ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಅನ್ನಸತ್ರದ ನಿರ್ವಹಣೆಗೆ ಭೂದಾನ ಮಾಡಿದ್ದನ್ನು ಮಾಹಿತಿ ನೀಡುತ್ತದೆ.[೬೯] ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ ೧೩೯೩ರ ಶಾಸನ ವಿಜಯನಗರ ದೊರೆ ಎರಡನೇ ಹರಿಹರನ ಕಾಲದಲ್ಲಿ ಮಲ್ಲಪ್ಪ

ಒಡೆಯರು ಹೊನ್ನಾವರ ಪ್ರಾಂತ್ಯಾಧಿಕಾರಿಯಾಗಿ ಅಧಿಕಾರ ನಡೆಸುತಿದ್ದಾಗ ಹರಿಹರನ ಪತ್ನಿ ವಿಠಲದೇವಿ ಗೋಕರ್ಣದಲ್ಲಿ ಮಾಡಿದ ಛತ್ರಕ್ಕೆ ಭೂದಾನ ಮಾಡಿದ್ದು ಉಲ್ಲೇಖಿಸಿದೆ.[೧೦೦]

ಕ್ರಿ.ಶ ೧೩೯೪ ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಹೊನ್ನಾವರದ ಪ್ರಾಂತ್ಯಾಧಿಕಾರಿಯಾಗಿ ಮಲ್ಲಪ್ಪ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾಗ ಪರಮೇಶ್ವರಗಿರಿ ಶ್ರೀಪಾದರು ಭೂಮಿಯನ್ನು ಖರೀದಿಸಿ ಗೋಕರ್ಣದಲ್ಲಿ ತಾವು ಮಾಡಿದ ಛತ್ರಕ್ಕೆ ಭೂದಾನ ಮಾಡಿದ್ದನ್ನು ದಾಖಲಿಸಿದೆ.[೧೦೧] ಕ್ರಿ.ಶ ೧೩೯೫ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಸಾಯಣ್ಣನ ಮಕ್ಕಳು ತಮ್ಮ ನಾಯ್ಕನಿಂದ ಭೂಮಿಯನ್ನು ಖರೀದಿಸಿ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿನ ಛತ್ರಕ್ಕೆ ಭೂದಾನ ಮಾಡಿದ್ದನ್ನು ದಾಖಲಿಸಿದೆ.[೧೦೨] ಕ್ರಿ.ಶ. ೧೩೯೫ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಕಾರಂತ ಉಪಾಧ್ಯಾಯರ ಮಗ ಮಾಧವರಿಂದ ಕೇಶವಭಟ್ಟರು ಭೂಮಿಯನ್ನು ಖರೀದಿಸಿ ಗೋಕರ್ಣದಲ್ಲಿ ಬುಕ್ಕರಾಯ ಮಾಡಿದ ಛತ್ರಕ್ಕೆ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.[೧೦೩] ಕ್ರಿ.ಶ ೧೩೯೬ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಗೋವೆಯ ಬಾಚಣ್ಣರು ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ಮಾಡಿದ ಛತ್ರಕ್ಕೆ ಅಂಕೋಲಾದ ಸಮಸ್ತರಿಂದ ಹಣಕೊಟ್ಟು ಭೂಮಿಯನ್ನು ಖರೀದಿಸಿ ಗೇಣಿಗೆ ನೀಡಿದ್ದನ್ನು ತಿಳಿಸುತ್ತದೆ. ಅದರಿಂದ ಬಂದ ಗೇಣಿಯಲ್ಲಿ ೩೬ಮೂಡೆ ಅಕ್ಕಿಯನ್ನು ಛತ್ರವನ್ನು ನಡೆಸುವವರಿಗೆ ನೀಡಿದರು. ಇದಕ್ಕೆ ಗೇಣಿದಾರರು ತಪ್ಪಿದರೆ ಭೂಮಿಯನ್ನು ವಾಪಸ್ಸಾಗಿ ನೀಡುವಂತೆ ದಾಖಲಿಸಲಾಗಿದೆ.[೧೦೪]

ಗೋಕರ್ಣ ಸುಬ್ರಮಣ್ಯ ದೇವಾಲಯದ ಹತ್ತಿರ ಇರುವ ಕ್ರಿ.ಶ ೧೩೯೯ರ ಶಾಸನ ಗೋಕರ್ಣದ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಛತ್ರಕ್ಕೆ ವಿಜಯನಗರ ದೊರೆ ಎರಡನೇ ಹರಿಹರನ ಪುತ್ರಿಯರು ಭೂದಾನ ನೀಡಿದ್ದನ್ನು ದಾಖಲಿಸಿದೆ.[೧೦೫] ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣ ಕ್ರಿ.ಶ. ೧೪೦೨ರ ಶಾಸನ ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಮಹಾಪ್ರಧಾನ ಗೋವಿಂದದೇವ ಒಡೆಯರು ಹೊನ್ನಾವರ ರಾಜಧಾನಿಯಲ್ಲಿದ್ದು ಅಧಿಕಾರ ನೋಡಿಕೊಳ್ಳುತ್ತಿದ್ದಾಗ ಮಹಾಪ್ರಧಾನ ಸಾಯಣ್ಣರ ಮಕ್ಕಳು ಸಿಂಗಣಯ್ಯಗಳು ಛತ್ರಕ್ಕೆ ಭೂದಾನ ಮಾಡಿದ್ದನ್ನು ಮಾಹಿತಿ ನೀಡುತ್ತದೆ.[೧೦೬] ಇನ್ನೊಂದು ಶಾಸನ ಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ. ಕರಣಿಕ ನರಸಿಂಹ ದೇವ ಇನ್ನುಳಿದವರು ಸೇರಿ ೫೦ಹೊನ್ನು ಕೊಟ್ಟು ೫೦ಮೂಡೆ ಭತ್ತವನ್ನು ಮಠದ ಧಾರ್ಮಿಕ ಸಂಪ್ರದಾಯಕ್ಕೆ, ಹಾಗೂ ಅಜ್ಜಿಯ ವಿಷ್ಣು ಊಟ ಮಾಡಲು ಬಾಳೆಯೆಲೆಗಳು ಬೇಕಾಗುವುದರ ಬಗ್ಗೆ ತಿಳಿಸಿದಾಗ ಅದಕ್ಕೆಂದು ೫ ಮೂಡೆ ಭತ್ತವನ್ನು ದಾನ ನೀಡಿದ್ದನ್ನು ಶಾಸನ ದಾಖಲಿಸಿದೆ.[೧೦೭] ಇನ್ನೊಂದು ಶಾಸನ ಕರಣಿಕ ನರಸಿಂಹ ಗೋಕರ್ಣದ ಮಹಾಬಲದೇವರ ಸನ್ನಿಧಿಯಲ್ಲಿ ನಿರ್ಮಿಸಿದ ಛತ್ರಕ್ಕೆ ವಾಸುದೇವರು ಅಕ್ಕಿಯನ್ನು ಬಡ್ಡಿಗೆ ಕೊಟ್ಟು ಅದರಲ್ಲಿ ಬಂದ

೧೧೦ ಹೊನ್ನಿನಿಂದ ೨೨ ಮೂಡೆ ಅಕ್ಕಿಯನ್ನು ಸತ್ರಕ್ಕೆ ನೀಡಿದ್ದರ ಕುರಿತು ತಾಮ್ರಶಾಸನ ಬರೆಸಿದರು. ನಂತರ ಅವರು ಮರಣ ಹೊಂದಿದ್ದರಿಂದ ಮಲ್ಲಪ್ಪ ಒಡೆಯರ ಸೂಚನೆಯ ಮೇರೆಗೆ ನಾಗಪ್ಪ ಅಧಿಕಾರಿಗಳು ಇದನ್ನು ಮುಂದುವರಿಸಿ ೧೧೦ ಹೊನ್ನು ಬಡ್ಡಿಯಲ್ಲಿ ಸತ್ರಕ್ಕೆ ಪ್ರತಿ ೧ ಹೊನ್ನಿಗೆ ೧ ಮೂಡೆ ಭತ್ತದಂತೆ ೧೧೦ ಮೂಡೆ ಭತ್ತವನ್ನು ಗೋಕರ್ಣದ ಹಾನೆಯಲ್ಲಿ ಅಳೆದು ಕೊಂಡುವಂತೆ ತಿಳಿಸಿದ್ದನ್ನು ಮಾಹಿತಿ ನೀಡುತ್ತದೆ.[೧೦೮]

ದಣ್ಣಾಯ್ಕರು ಕೇಶವ ಭಟ್ಟರಿಂದ ಭೂಮಿಯನ್ನು ಖರೀದಿಸಿ ಗೋಕರ್ಣದ ಮಹಾಬಲೇಶ್ವರ ದೇವರ ಛತ್ರಕ್ಕೆ ೬೦ಮೂಡೆ ಭತ್ತವನ್ನು ನೀಡುವಂತೆ ತಿಳಿಸಿ ಕೇಶವ ಭಟ್ಟರಿಗೆ ಭೂಮಿಯನ್ನು ದಾನ ನೀಡಿದ್ದನ್ನು ಇನ್ನೊಂದು ಶಾಸನ ದಾಖಲಿಸಿದೆ.[೧೦೯]

ವಿಜಯನಗರ ಅರಸ ಎರಡನೇ ಹರಿಹರನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೈವೆಯ ಪ್ರಾಂತ್ಯಾಧಿಕಾರಿಯಾಗಿ ಅಧಿಕಾರ ನಡೆಸುತ್ತಿದ್ದಾಗ ವಿಜಯನಗರ ದೊರೆ ಹರಿಹರನ ಮಗಳು ವಿಜಯಲಕ್ಷ್ಮಿ ಮಹಾಬಲದೇವರ ಛತ್ರಕ್ಕೆ ಭೂದಾನ ಮಾಡಿದ್ದನ್ನು ಶಾಸನವೊಂದು ಉಲ್ಲೇಖಿಸುತ್ತದೆ.[೧೧೦]ಹರಿಹರರಾಯನ ಪತ್ನಿ ವಿಠ್ಠಲದೇವಿ ಗೋಕರ್ಣದಲ್ಲಿ ಮಾಡಿದ ಛತ್ರಕ್ಕೆ ಕೆತೆಯ ಸಾವಣ್ಣನು ಭೂದಾನ ನೀಡಿದ್ದನ್ನು ಇನ್ನೊಂದು ಶಾಸನ ಉಲ್ಲೇಖಿಸಿದೆ.[೧೧೧] ಬೊಮ್ಮಣ್ಣ ಶೆಟ್ಟಿಯರು ಛತ್ರ ನಡೆಸುವವರಿಗೆ ೧೬ ಮೂಡೆ ಅಕ್ಕಿಯನ್ನು ನೀಡುವಂತೆ ತಿಳಿಸಿದ ಉಲ್ಲೇಖ ಇನ್ನೊಂದು ಶಾಸನ ದಾಖಲಿಸುತ್ತದೆ.[೧೧೨] ಹನೆಹಳ್ಳಿಯ ವರದ ಹೆಗ್ಗಡೆ, ಪ್ರಧಾನ ದಂಡನಾಯಕರಾದ ಕೇಶವ ಭಟ್ಟರಿಗೆ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಸತ್ರಕ್ಕಾಗಿ ಭೂದಾನ ನೀಡಿದ್ದನ್ನು ಮತ್ತೊಂದು ಶಾಸನ ಉಲ್ಲೇಖಿಸುತ್ತದೆ.[೧೧೩] ಗೋಕರ್ಣಪಾರ್ವತಿ ದೇವಾಲಯದ ಗೋಡೆಯಲ್ಲಿ ನಿಲ್ಲಿಸಲ್ಪಟ್ಟ ಶಾಸನಕ್ರಿ.ಶ ೧೫ನೇ ಶತಮಾನಕ್ಕೆ ಸೇರಿದ್ದ ಗೋಕರ್ಣದ ತಾಮ್ರಗೌರಿ ದೇವಾಲಯದಲ್ಲಿ ಅನ್ನಛತ್ರ ನಿರ್ವಹಣೆಗಾಗಿ ಮಂಜುನಾಯಕರು ಮಾಬಲಲಿಂಗ ಭಟರಿಗೆ ಹೊಸೂರು ಗ್ರಾಮವನ್ನು ಉಡುಗೊರೆಯಾಗಿ ನೀಡಿದ್ದನ್ನು ದಾಖಲಿಸುತ್ತದೆ.[೧೧೪] ಕ್ರಿ.ಶ. ೧೪೦೫ರ ಶಾಸನ ಚಾಮಣ್ಣ ದಂಡನಾಯಕರು, ದೇವಪಯ್ಯಗಳ ಮಕ್ಕಳು ಸೇರಿ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿನ ಛತ್ರಕ್ಕೆ ೫೨೦ ಹೊನ್ನು ದಾನ ಮಾಡಿದ್ದನ್ನು ಶಾಸನ ಉಲ್ಲೇಖಿಸುತ್ತದೆ.[೧೧೫] ಕ್ರಿ.ಶ. ೧೪೧೦ರ ಶಾಸನ ವಿಜಯನಗರ ದೊರೆ ಒಂದನೇ ದೇವರಾಯನ ಕಾಲದಲ್ಲಿ ಮಹಾಪ್ರಧಾನ ಬಾಚಣ್ಣ ಒಡೆಯರು ಹೊನ್ನಾವರ ರಾಜಧಾನಿಯಲ್ಲಿದ್ದು ಹೈವೆ, ತುಳು, ಕೊಂಕಣಗಳ ಅಧಿಕಾರ ನೋಡಿಕೊಳ್ಳುತ್ತಿದ್ದಾಗ ಸಾಮಳಾ ಠಕ್ಕುರರಿಗೆ ಬಪ್ಪಸಾವಂತ ಆತನ ಅಳಿಯಂದಿರು ಸೇರಿ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿನ ಛತ್ರಕ್ಕೆ ೪೫ ಹಾನೆಯಲ್ಲಿ ಕಟ್ಟಿದ ೩೦ ಮೂಡೆ ಉತ್ಪನ್ನದ ಗದ್ದೆಯನ್ನು ದಾನ ನೀಡಿದ್ದನ್ನು ದಾಖಲಿಸಿದೆ.[೧೧೬] ಕ್ರಿ.ಶ ೧೪೧೨ರ ಶಾಸನವೊಂದು ವೀರಪ್ಪ ಒಡೆಯರು ಗೋಕರ್ಣದಲ್ಲಿ ಮಾಡಿದ ಛತ್ರಕ್ಕೆ ಹೊನ್ನಾವರದ ಕರಣಿಕ ಆರಾಧ್ಯ ದೇವರ ಮಕ್ಕಳು ವಿರಪ್ಪರಿಂದ ೧೮೦ ಹೊನ್ನನ್ನು ನೀಡಿ ಭೂಮಿಯನ್ನು

ಪಡೆದು ವಿರಪ್ಪ ಒಡೆಯರು ಮಾಡಿದ ಛತ್ರಕ್ಕೆ, ೭೨ ಮೂಡೆ ಅಕ್ಕಿ ನೀಡುವಂತೆ ತಿಳಿಸಿ ಗೇಣಿಗೆ ನೀಡಿದ್ದರೆಂದಿದೆ. ಅದರ ಬಗ್ಗೆ ವಿರಪ್ಪರು ದಾಸಪ್ಪನನ್ನು ಕಳುಹಿಸಿ ವಿಚಾರಿಸಿದಾಗ ೪ಮೂಡೆಯಷ್ಟು ಅಕ್ಕಿ ಛತ್ರಕ್ಕೆ ನೀಡದೆ ಇರುವದು ತಿಳಿದಾಗ ಆರಾದ್ಯದೇವರ ಮಕ್ಕಳು ಇನ್ನಷ್ಟು ಭೂಮಿ ನೀಡಿದರು. ಹಾಗೂ ಪ್ರತಿವರ್ಷ ಗೋಕರ್ಣದ ೩೦ ಹಾನೆಗೆ ಒಂದು ಮೂಡೆಯಂತೆ ೭೨ ಮೂಡೆ ಅಕ್ಕಿಯನ್ನು ಛತ್ರಕ್ಕೆ ನೀಡುವಂತೆ ತಿಳಿಸಿದ್ದನ್ನು ದಾಖಲಿಸಿದೆ.[೧೧೭]

ಕ್ರಿ.ಶ. ೧೪೧೩ರ ಶಾಸನ ಗದುಗಿನ ದೆವಪಯ್ಯರು, ಬುಳಪ್ಪಗಳ ಮಕ್ಕಳು ಸಾವಣ್ಣರಿಗೆ ಗೋಕರ್ಣದ ಮಹಾಬಲದೇವರ ಛತ್ರಕ್ಕಾಗಿ ಭೂದಾನ ಮಾಡಿದನ್ನು ದಾಖಲಿಸಿದೆ.[೧೧೮] ಗೋಕರ್ಣಮಹಾಬಲೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ ೧೪೧೭ರ ಶಾಸನ ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಮಹಾಪ್ರಧಾನರಾದ ಬಮ್ಮಕರಸ ಒಡೆಯರ ಮಗ (ಶಾಸನ ತ್ರುಟಿತಗೊಂಡಿದ್ದರಿಂದ ಹೆಸರು ಸ್ಪಷ್ಟವಾಗಿ ತಿಳಿಯುತ್ತಿಲ್ಲ) ಹೈವೆ,ತುಳು, ಕೊಂಕಣಗಳ ಅಧಿಕಾರ ನಡೆಸುತ್ತಿದ್ದಾಗ ಗೋಕರ್ಣ ಮಹಾಬಲೇಶ್ವರ ದೇವರ ಸತ್ರಕ್ಕೆ ಭೂದಾನ ನೀಡಿದ್ದನ್ನು ಶಾಸನ ದಾಖಲಿಸಿದೆ.[೧೧೯]ಮೆಕೆಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ. ೧೪೨೪ರ ಶಾಸನ ವಿಜಯನಗರ ದೊರೆ ಒಂದನೇ ದೇವರಾಯನ ಕಾಲದಲ್ಲಿ ಮಹಾಪ್ರಧಾನರಾಗಿ ಹಲಿದೇವ ಒಡೆಯರು ಸೇವೆ ಸಲ್ಲಿಸುತ್ತಿದ್ದಾಗ ಬೋಳಹೆಬ್ಬಾರ, ಮಧುಸೂದನ ಹೆಬ್ಬಾರ, ಸಾತಣ್ಣ ಹೆಗಡೆ ಇವರೆಲ್ಲ ಸೇರಿ ಭೂಮಿಯನ್ನು ಹರಿಯಪ್ಪ ರಾಣಿಯರಿಗೆ ದಾನ ನಿಡಿದರು. ಈ ಭೂಮಿಯನ್ನು ಹರಿಯಪ್ಪ ರಾಣಿ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿನ ಛತ್ರಕ್ಕೆ ಬ್ರಾಹ್ಮಣಭೋಜನದ ಸಲುವಾಗಿ ದಾನ ಮಾಡಿದ್ದನ್ನು ದಾಖಲಿಸಿದೆ.[೧೨೦]

ಇಲ್ಲಿರುವ ಇನ್ನೊಂದು ಕ್ರಿ.ಶ ೧೪೨೪ರ ಶಾಸನ ವಿಜಯನಗರ ದೊರೆ ಒಂದನೇ ದೇವರಾಯನ ಕಾಲದಲ್ಲಿ ಗೋವೆಯ ದೇವರಸರೂ ಹೊನ್ನಾವರ ರಾಜಧಾನಿಯಲ್ಲಿದ್ದು ಅಧಿಕಾರ ನಡೆಸುತ್ತಿದ್ದಾಗ ಚಂದ್ರಭೂಷಣ ದೇವ ಒಡೆಯರ ಭಂಡಾರಕ್ಕೆ ಬೆಳಸೆ, ಹಿಚ್ಚಕಡ, ಕಣಗಿಲ ಗ್ರಾಮದ ಗೌಡರು ಸೇರಿ ಗೋಕರ್ಣದಲ್ಲಿ ಮಾಡುವ ಛತ್ರಕ್ಕೆ ೧೨೫ ಹೊನ್ನನ್ನು ನೀಡಿದ್ದನ್ನು ದಾಖಲಿಸಿದೆ.[೧೨೧] ಇಲ್ಲಿರುವ ಇನ್ನೊಂದು ಶಾಸನ ಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ. ವಿಜಯನಗರ ಅರಸ ಒಂದನೇ ಪ್ರತಾಪ ದೇವರಾಯನ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೈವೆಯ ಪ್ರಾಂತ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಕರಣಿಕ ನರಸಿಂಹ ದೇವರ ಕೈಯಲ್ಲಿ ಚಿಕ್ಕ ತಮ್ಮ ನಾಯ್ಕ ಮತ್ತು ಆತನ ಅಳಿಯ ಕೊಡಲನು ಸೇರಿ ೧೫ ಮೂಡೆ ಭತ್ತವನ್ನು ಸತ್ರಕ್ಕೆ ನೀಡಿದ್ದನ್ನು ದಾಖಲಿಸಿದೆ.[೧೨೨] ಇಲ್ಲಿರುವ ಇನ್ನೊಂದು ಶಾಸನ ಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ. ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಹೊನ್ನಾವರದ ಸೆಟ್ಟಿಕಾರ ಮದ್ದಳ ಶೆಟ್ಟಿಯ ಮಗ, ಮತ್ತು ಇನ್ನಿತರರು ಸೇರಿ ಛತ್ರಕ್ಕೆ ಭೂಮಿ ದಾನ ನೀಡಿದ್ದನ್ನು ದಾಖಲಿಸಿದೆ.[೧೨೩] ಇಲ್ಲಿರುವ ಇನ್ನೊಂದು

ಶಾಸನ ಲಿಪಿ ದೃಷ್ಟಿಯಿಂದ ವಿಜಯನಗರ ಕಾಲದ್ದಾಗಿದೆ. ವಿಜಯನಗರ ಅರಸ ಒಂದನೇ ದೇವರಾಯನ ಕಾಲದಲ್ಲಿ ಹೈವೆಯ ಪ್ರಾಂತ್ಯಾಧಿಕಾರಿಯಾಗಿ ನಾಗಣ್ಣ ಒಡೆಯರು ಕಾರ್ಯ ನಿರ್ವಹಿಸುತ್ತಿದ್ದಾಗ ಹೊನ್ನಾವರದ ಗಣಪಣ್ಣ ಶೆಟ್ಟಿಗೆ ಬಸವಣ್ಣ ಮುದ್ದಳಿಗೆ ಗೋಕರ್ಣ ಮಹಾಬಲದೇವರ ಛತ್ರದ ನಿಮಿತ್ತ ಭೂದಾನ ಮಾಡಿದ್ದನ್ನು ಉಲ್ಲೇಖಿಸಿದೆ.[೧೨೪]

ಇಲ್ಲಿರುವ ಇನ್ನೊಂದು ಕ್ರಿ.ಶ ೧೪೩೧ರ ಶಾಸನ ವಿಜಯನಗರ ದೊರೆ ಎರಡನೇ ದೇವರಾಯನ ಮಹಾಪ್ರಧಾನ ತಿಪ್ಪಣ್ಣ ಒಡೆಯರು ಹೊನ್ನಾವರ ರಾಜಧಾನಿಯಲ್ಲಿದ್ದು ಅಧಿಕಾರ ನೋಡಿಕೊಳ್ಳುತ್ತಿದ್ದಾಗ ಸಾಮಳಾ ಠಕ್ಕುರರಿಗೆ ಸಗಡಗೇರಿಯ ಬೊಮ್ಮಣ್ಣ ನಾಯ್ಕ ಇನ್ನಿತರರು ಸೇರಿ ಗೋಕರ್ಣ ಮಹಾಬಲೇಶ್ವರ ಸನ್ನಿಧಿಯಲ್ಲಿರುವ ಛತ್ರಕ್ಕೆ ಭೂದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.[೧೨೫] ಮೆಕಂಜಿ ಸಂಗ್ರಹದಲ್ಲಿನ ಗೋಕರ್ಣದ ಕ್ರಿ.ಶ. ೧೪೩೬ರ ಶಾಸನ ವಿಜಯನಗರ ಅರಸ ಎರಡನೇ ದೇವರಾಯನ ಕಾಲದಲ್ಲಿ ಚಂದ್ರರಸ ಒಡೆಯರು ಹೈವೆಯ ಮಹಾಪ್ರಧಾನರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ, ಶಂಕರ ಸರಸ್ವತಿ ಶ್ರೀಪಾದರಿಗೆ, ಕೊಂಕೇರಿಯ ಗೋವಿಂದ ಭಟ್ಟರ ಮಗ, ನರಹರಿ ಪುರೋಹಿತಿಕೆ ಮತ್ತು ಛತ್ರಧರ್ಮದ ಸಂಬಂಧ ಭೂದಾನ ಮಾಡಿದನ್ನು ಉಲ್ಲೇಖಿಸುತ್ತದೆ.[೧೨೬]ಇಲ್ಲಿರುವ ಮತ್ತೊಂದು ಕ್ರಿ.ಶ ೧೪೪೨ರ ಶಾಸನ ವಿಜಯನಗರ ಅರಸ ೨ನೇ ದೇವರಾಯನ ಅಧಿಕಾರ ಅವಧಿಯಲ್ಲಿ ಹೈವೆಯ ಪ್ರಾಂತ್ಯಾಧಿಕಾರಿಯಾಗಿ ಮಲ್ಲಪ್ಪ ಒಡೆಯರು ಅಧಿಕಾರ ನಡೆಸುತ್ತಿದ್ದಾಗ, ವರದಣ್ಣನಾಯಕ ಕೋಟಿ ತೀರ್ಥದ ಈಶಾನ್ಯ ದಿಕ್ಕಿನಲ್ಲಿ ನಿರ್ಮಿಸಿದ ೨೪ ಮಂದಿಯ ಛತ್ರಕ್ಕಾಗಿ ದಾನ ನೀಡಿದ್ದನ್ನು ಮಾಹಿತಿ ನೀಡುತ್ತದೆ.[೧೨೭] ಇಲ್ಲಿರುವ ಮತ್ತೊಂದು ಕ್ರಿ.ಶ. ೧೪೭೬ರ ಶಾಸನ ವಿಜಯನಗರ ಅರಸರ (ಹೆಸರು ಅಸ್ಪಷ್ಟ) ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರ ರಾಜಧಾನಿಯಲ್ಲಿ ಅಧಿಕಾರ ನಡೆಸುತ್ತಿದ್ದಾಗ, ಹನಿಹಳ್ಳಿಯ ಬೊಬ್ಲು ಹೆಗ್ಗಡೆ ಮಗ ವರದ ಹೆಗಡೆ ಇನ್ನಿತರರು ಕೇಶವ ಭಟ್ಟರು ಗೋಕರ್ಣ ಮಹಾಬಲೇಶ್ವರನ ಸನ್ನಿಧಿಯಲ್ಲಿ ಮಾಡಿದ ಛತ್ರಕ್ಕೆ ಭೂ ದಾನ ನೀಡಿದರು. ಅದನ್ನು ಕೇಶವಭಟ್ಟರು, ನಂದಿನಾಯ್ಕ ಮತ್ತು ಬೊಮ್ಮಣ್ಣ ನಾಯ್ಕ ಇನ್ನಿತರರಿಗೆ ಗೇಣಿಗೆ ನೀಡಿ ಬಂದ ಗೇಣಿಯನ್ನು ಛತ್ರಕ್ಕೆ ನೀಡಿದ್ದನ್ನು ದಾಖಲಿಸಿದೆ.[೧೨೮] ಇಲ್ಲಿರುವ ಮತ್ತೊಂದು ಕ್ರಿ.ಶ ೧೫೪೮ ರ ಶಾಸನ ವಿಜಯನಗರ ಅರಸರ (ಹೆಸರು ಅಸ್ಪಷ್ಟ) ಕಾಲದಲ್ಲಿ ಮಲ್ಲಪ್ಪ ಒಡೆಯರು ಹೊನ್ನಾವರ ರಾಜಧಾನಿಯಲ್ಲಿದ್ದು ಹೈವೆ, ತುಳು, ಕೊಂಕಣಗಳ ಅಧಿಕಾರ ನೋಡಿಕೊಳ್ಳುತ್ತಿದ್ದಾಗ ಹರಿಹರನ ಪತ್ನಿ ವಿಠಲದೇವಿ ಗೋಕರ್ಣದಲ್ಲಿ ಮಾಡಿದ ಛತ್ರಕ್ಕೆ ಹೈವೆಯ ರಾಜ್ಯದ ಬೀರಸಾವಂತ ಭೂದಾನ ಮಾಡಿದ್ದನ್ನು ಶಾಸನ ದಾಖಲಿಸಿದೆ.[೧೨೯] ಧಾರೇಶ್ವರದ ಕ್ರಿ.ಶ ೧೫೧೧ರ ಶಾಸನ ಸಾಳುವ ನರಸಣ್ಣ ನಾಯಕರಿಗೆ ಆಯುಷ್ಯ, ಆರೋಗ್ಯ, ಧನ ಪ್ರಾಪ್ತಿ, ಸಂಬಂಧ ದೇವರಸ ಒಡೆಯರು ೩೬ ಜನ ಬ್ರಾಹ್ಮಣ ಸತ್ರಕ್ಕಾಗಿ ಭೂದಾನ ಮಾಡಿದ್ದನ್ನು ಉಲ್ಲೇಖಿಸಿದೆ.[೧೩೦]

೩.೩ ವೀರಗಲ್ಲುಗಳು

ಪ್ರಾಚೀನ ಕಾಲದಲ್ಲಿ ದೇಶರಕ್ಷಣೆ, ಸ್ವಾಮಿರಕ್ಷಣೆ ಗ್ರಾಮದ ರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಿದವರ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳೇ ವೀರಗಲ್ಲುಗಳು. 'ವೀರ' ಇದು ಸಂಸ್ಕೃತ ಪದ. ಇದು ವ್ಯಕ್ತಿಯ ಪರಾಕ್ರಮ, ಧೈರ್ಯ ಸಾಮರ್ಥ್ಯ ಸೂಚಿಸುವ ಸಲುವಾಗಿ ಉಪಯೋಗಿಸಲ್ಪಟ್ಟಿದೆ.[೧೩೧] ಆಂಗ್ಲಭಾಷೆಯ "Hero Stone" ಎನ್ನುವುದಕ್ಕೆ ಕನ್ನಡದಲ್ಲಿ ವೀರಗಲ್ಲು ಎಂದರ್ಥ. ವೀರಗಲ್ಲು ನಿಲ್ಲಿಸುವ ಉದ್ದೇಶ

೧) ಲೌಕಿಕ ಉದ್ದೇಶ – ವೀರನ ಪರಾಕ್ರಮ ಮೆಚ್ಚಿ ಲೋಕಕ್ಕೆ ತಿಳಿಯಲೆಂದು ನಿಲ್ಲಿಸುವುದು.

೨) ಪಾರಮಾರ್ಥಿಕ ಉದ್ದೇಶ – ವೀರಸ್ವರ್ಗ ಪ್ರಾಪ್ತವಾಗಲಿ ಎನ್ನುವ ಸಲುವಾಗಿ ನಿಲ್ಲಿಸುತ್ತಿದ್ದರು.[೧೩೨]

ವೀರಗಲ್ಲು ಶಿಲ್ಪಗಳು ಹೆಚ್ಚಿನ ಮಟ್ಟಿಗೆ ಮೂರುಪಟ್ಟಿಕೆಗಳಿಂದ ಆರು ಪಟ್ಟಿಕೆಗಳುಳ್ಳ ಹೀಗೆ ಬೃಹದಾಕಾರದ ವೀರಗಲ್ಲುಗಳಿವೆ. ಉದಾ– ಕುಮಟಾತಾಲೂಕಿನ ದಿವಗಿ ಮತ್ತು ಧಾರೇಶ್ವರ ವೀರಗಲ್ಲುಗಳು.

ಮೊದಲನೇ ಪಟ್ಟಿಕೆಯಲ್ಲಿ "ವೀರ" ವೈರಿಪಡೆಯೊಡನೆ ಯುದ್ಧಮಾಡುತ್ತಿರುವ ಚಿತ್ರಣವನ್ನು ಬೃಹದಾಕಾರದ ವೀರಗಲ್ಲುಗಳಲ್ಲಿ ಈ ಹಂತವನ್ನು ವಿಸ್ತರಿಸಿ ಯುದ್ಧಕ್ಕೆ ಸಿದ್ಧರಾಗಿ ಹೋಗುತ್ತಿರುವುದು. ಅನಂತರ ವೈರಿಪಡೆಯೊಡನೆ ಹೋರಾಡುವ ದೃಶ್ಯ ಚಿತ್ರಣವಿದೆ. ಕೆಲವು ವೀರಗಲ್ಲುಗಳಲ್ಲಿ ಯುದ್ಧದ ಹೋರಾಟ ದೃಶ್ಯಗಳನ್ನೇ ೨ ಪಟ್ಟಿಕೆಯಲ್ಲಿ ಚಿತ್ರಿಸಲಾಗುತ್ತದೆ.

ಎರಡನೇ ಹಂತದಲ್ಲಿ ಅಪ್ಸರೆಯರು ವೀರನನ್ನು ಶಿವನ ಸಾನಿದ್ಯಕ್ಕೆ ಕರೆದುಕೊಂಡು ಹೋಗುತ್ತಿರುವ ಚಿತ್ರಣವಿದ್ದು ಈ ಸಂದರ್ಭದಲ್ಲಿ ಅಪ್ಸರೆಯರು ವೀರನ ಕೈಗಳನ್ನು ತಮ್ಮ ಹೆಗಲ ಮೇಲೆ ಇಟ್ಟು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವಂತೆ ನೃತ್ಯಾಂಗನೆಯರು, ತಾಳ, ಮೃದಂಗ, ಹಾಗೂ ವಿವಿಧ ವಾದ್ಯದವರು ಇವರ ಹಿಂದೆ ಹೋಗುತ್ತಿರುವ ಚಿತ್ರಣ ಈ ಪ್ರದೇಶದ ವೀರಗಲ್ಲಿನಲ್ಲಿದೆ.

ಮೂರನೇ ಹಂತದಲ್ಲಿ ವೀರ ಶಿವನ ಸಾನಿದ್ಯದಲ್ಲಿ ಇರುವಂತೆ ಚಿತ್ರಿಸಲಾಗಿದೆ. ಇಲ್ಲಿ ದೊರೆತಿರುವ ಕೆಲವು ವೀರಗಲ್ಲು ಶಾಸನಗಳಲ್ಲಿ ದೇವಾಲಯದ ಚಿತ್ರಣವಿದ್ದು ಅದರಲ್ಲಿ ಶಿವಲಿಂಗ, ಜಟಾದಾರಿ ಸನ್ಯಾಸಿ ಹಾಗೂ ಆತನ ಪಕ್ಕ ನಂದಿ ಮತ್ತು ಪದ್ಮಾಸನದಲ್ಲಿ ಕುಳಿತಿರುವ ವೀರನನ್ನು ಕಾಣಬಹುದು. ವೀರಗಲ್ಲಿನ ಮೇಲ್ಭಾಗದ ಮದ್ಯ ಕೀರ್ತಿಮುಖ ಸುತ್ತಲೂ ಮಕರ ತೋರಣವನ್ನೊಳಗೊಂಡಿರುತ್ತದೆ. ಉದಾ: ಧಾರೇಶ್ವರ ವೀರಗಲ್ಲು.

ಕೆಲವೊಂದು ವೀರಗಲ್ಲುಗಳಲ್ಲಿ ಸ್ವರ್ಗದಲ್ಲಿ ಕುಳಿತಿರುವ ವೀರನ ಎಡ, ಬಲ ಭಾಗದಲ್ಲಿ ಚಾಮರಧಾರಿಣಿ ಅಪ್ಸರೆಯರು ನಿಂತಿರುವ ಚಿತ್ರಣ ಹಾಗೂ ಮೇಲ್ಭಾಗ ಮಕರತೋರಣವನ್ನು ಹೊಂದಿರುತ್ತದೆ. ಉದಾ: ಶಿರಗುಂಜಿ ವೀರಗಲ್ಲು ಈ ಮಾದರಿಯನ್ನು ಒಳಗೊಂಡಿದೆ.

ವೀರಗಲ್ಲು ಶಿಲ್ಪಗಳಲ್ಲಿ ಯೋಧರು ಧರಿಸಿದ ವಸ್ತ್ರ, ಆಭರಣ, ಮತ್ತು ಆಯುಧಗಳ ಬಗ್ಗೆ ಹಾಗೂ ಪುರುಷ ಶಿಲ್ಪಗಳು ಹೆಚ್ಚಾಗಿ ದೋತಿಯನ್ನು ವೀರಗಚ್ಚೆ ಹಾಕಿ ಉಟ್ಟುಕೊಳ್ಳುತ್ತಿದ್ದರು. ಕಿವಿಯೋಲೆ, ಕಂಠಾಭರಣ, ತೋಳ್ಬಂದಿ, ಕಾಲ್ಬಂದಿಗಳನ್ನು ಹಾಗೂ ಎದೆ ಕವಚವನ್ನು ಧರಿಸುತ್ತಿದ್ದರು. ಯೋಧರು ಬಿಲ್ಲು, ಬಾಣ, ಶೂಲ, ಚಂದ್ರಾಯುಧಗಳನ್ನು ಬಳಸುತ್ತಿದ್ದರು. ಉದಾ: ಕೋಡ್ಕಣಿಯ ವೀರಗಲ್ಲಿನಲ್ಲಿ ಇದನ್ನು ಕಾಣಬಹುದು ಕೆಲವೊಂದು ವೀರಗಲ್ಲುಗಳಲ್ಲಿ ಭರ್ಚಿಯನ್ನು ಬಳಸಿದ್ದು ಕಂಡುಬರುತ್ತದೆ. ಉದಾ: ಶಿರಗುಂಜಿ, ದಿವಗಿ ವೀರಗಲ್ಲುಗಳು ಯುದ್ಧದಲ್ಲಿ ಹೆಚ್ಚಾಗಿ ಕುದುರೆಗಳನ್ನು ಬಳಸಿಕೊಳ್ಳುತ್ತಿದ್ದರು. ಉದಾರಣೆಗೆ ವೀರಗಲ್ಲುಗಳಲ್ಲಿ ವೀರನು ಕುದುರೆಯ ಮೇಲೆ ಕುಳಿತು ವೈರಿಪಡೆಯೊಡನೆ ಹೋರಾಡಿ ವೈರಿಗಳನ್ನು ಸೋಲಿಸಿ ನೆಲಕ್ಕುರುಳಿಸಿದ ಚಿತ್ರಣವಿರುವ ವೀರಗಲ್ಲು ಹೊಸಾಡನಲ್ಲಿದೆ. ದಿವಗಿ ವೀರಗಲ್ಲು ಇದೇ ಮಾದರಿಯನ್ನೊಳಗೊಂಡಿದೆ. ಕ್ರಿ.ಶ. ೧೨ನೇ ಶತಮಾನದ ನಂತರದ ವೀರಗಲ್ಲುಗಳಲ್ಲಿ ಅಶ್ವದಳಗಳು ಚಿತ್ರಿತವಾಗಿದೆ.

ವೀರಲ್ಲು ಶಿಲ್ಪಗಳ ಆಧಾರದ ಮೇಲಿಂದ ವ್ಯಕ್ತಿ ಪ್ರಾಣಿಗಳ ನಡುವಿನ ಹೋರಾಟ ಶಿಲ್ಪ, ಗಡಿ ಕಾಳಗ, ತುರುಗೋಳ ವೀರಸ್ತಂಭಗಳೆಂದು ವಿಂಗಡಿಸಬಹುದು. ಪ್ರಸ್ತುತ ಕುಮಟಾ ತಾಲೂಕಿನಲ್ಲಿ ದೊರೆತ ವೀರಗಲ್ಲುಗಳನ್ನು ಶಾಸನಸಹಿತ ವೀರಗಲ್ಲುಗಳು ಮತ್ತು ಶಾಸನರಹಿತ ವೀರಗಲ್ಲುಗಳಾಗಿ ವಿಂಗಡಿಸಲಾಗಿದೆ.

೩.೩.೧ ಶಾಸನಸಹಿತ ವೀರಗಲ್ಲು

ಕುಮಟಾ ಪಾರ್ಶ್ವನಾಥ ಬಸದಿಯ ಎಡಬದಿಯಲ್ಲಿರುವ ಶಾಸನದ ಕಾಲ ಶ್ರೀಮುಖ (ಸಂವತ್ಸರ) ಚೈತ್ರ ಬ ಸ್ವಾತಿ ಮಂಗಳವಾರ ಎಂದಿದೆ. ಚಂದಾವರ ಕಾದಂಬ ವೀರಕಾಮದೇವರಸನ ಈ ಶಾಸನವು ವರ್ಧಮಾನ ಶೆಟ್ಟಿಯ ಮಗ ಮತ್ತು ಚಂದ್ರಕೀರ್ತಿ ಭಟ್ಟಾರಕನ ಅನುಯಾಯಿಯಾಗಿದ್ದ ಸಾತಿ ಪೆದ್ದನು ಮರಣ ಹೊಂದಿದನೆಂದು ಶಾಸನ ಉಲ್ಲೇಖಿಸುತ್ತದೆ.[೧೩೩] ಇಲ್ಲಿರುವ ಇನ್ನೊಂದು ಶಾಸನ ಕ್ರಿ.ಶ ೧೨ನೇ ಶತಮಾನಕ್ಕೆ ಸೇರಿದೆ. ಚಂದಾವರ ಕಾದಂಬ ವೀರಕಾಮದೇವರಸನ ಈ ಶಾಸನವು ಸಮಾಧಿ ರೀತಿಯಿಂದ ಶೆಟ್ಟಿಯೊಬ್ಬನು ಮರಣಹೊಂದಿದನೆಂದು ಉಲ್ಲೇಖಿಸುತ್ತದೆ.[೧೩೪] ಇಲ್ಲಿರುವ ಇನ್ನೊಂದು ಶಾಸನದ ಕಾಲ ಕ್ರಿ.ಶ. ೧೨ನೇ ಶತಮಾನ ಚಂದಾವರ ಕಾದಂಬ ತ್ರಿಭುವನ ಬೀರನ ಈ ಶಾಸನವು ಸಮಾದಿ ವಿದಿಯಿಂದ ಮರಣ ಹೊಂದಿದ ಚಂದಾವರ ಕಾದಂಬ ದೊರೆ ತ್ರಿಭುವನ ಬೀರನ ರಾಣಿ ಕೆಂಚಲಾದೇವಿಯ ಕುರಿತು ತಿಳಿಸುತ್ತದೆ. ಈಕೆ ಕಾಣೂರ ಗಣದ ಮಲಧಾರಿ

ದೇವನ ಅನುಯಾಯಿಯಾಗಿದ್ದಳೆಂದೂ ಉಲ್ಲೇಖಿಸುತ್ತದೆ.[೧೩೫] ಇಲ್ಲಿರುವ ಇನ್ನೊಂದು ಶಾಸನ ಪುಷ್ಯ ಶುದ್ಧ ಗುರುವಾರ ಉತ್ತರಾಯಣ ಎಂದಿದೆ. ಚಂದಾವರ ಕಾದಂಬತ್ರಿಭುವನ ಬೀರನ ಕಾಲಕ್ಕೆ ಸೇರಿದ ಈ ಶಾಸನವು ಶಂಕರ ಚಾಮುಪನ ಪತ್ನಿ ಶಾಂತಲೆಯ ಮರಣವನ್ನು ಉಲ್ಲೇಖಿಸುತ್ತದೆ.[೧೩೬] ಕೋನಳ್ಳಿ ಕೊನೇಶ್ವರ ದೇವಸ್ಥಾನದ ಬಲಗಡೆ ಇರುವ ಶಾಸನ ಕಾಮದೇವರಸನ ಅಧಿಕಾರವಧಿಯ ೫೪ನೇ ವರ್ಷಕ್ಕೆ ಸೇರಿದ್ದು, ಚಂದಾವರದ ಕಾವದೇವನು ನಗಿರೆಯ ಕೋಟೆಯರಸನ ಮೇಲೆ ದಾಳಿ ಮಾಡಿದಾಗ ಕೋಟೆಯರಸನು ಕೋನಳ್ಳಿಯ ಮೇಲೆ ದಾಳಿ ಮಾಡಿದನು. ಈ ಸಂದರ್ಭದಲ್ಲಿ ಈತನ ಸೇನಾಪತಿ ತಿಮ್ಮನಾಯಕ ಸಾವನ್ನಪ್ಪಿದನೆಂದು ಶಾಸನ ದಾಖಲಿಸುತ್ತದೆ.[೧೩೭] ಶಿರಗುಂಜೇಶ್ವರ ದೇವಾಲಯದ ಬಳಿ ಆಲದ ಮರದ ಕೆಳಗೆ ಇರುವ ಶಾಸನ ಕ್ರಿ.ಶ ೧೨ನೇ ಶತಮಾನಕ್ಕೆ ಸೇರಿದೆ. ಕಾದಂಬ ಚಕ್ರವರ್ತಿ ಹೊಂದಿದ್ದ ಬಿರುದು ಭುವನ ವಿಖ್ಯಾತ ಜಯಂತಿ ಮಧುಕೇಶ್ವರ ದೇವರ ಲಬ್ದವರ ಪ್ರಸಾದ ಗೋಕರ್ಣ ಮಹಾಬಲದೇವರ ದಿವ್ಯಶ್ರೀಪಾದ ಪದ್ಮರಾಧಕರ ಕಲಿಗಳಂಕುಶ ಗಂಡರಡಾವಣಿ ನಿಗಳಂಕಶೂಲ ಎಂದು ರಾಜನನ್ನು ಬಣ್ಣಿಸುತ್ತದೆ. ಈ ಶಾಸನವು ಬೊಮ್ಮ ಒಡ್ಡಕಾರನ ಮಗ ಯುದ್ಧದಲ್ಲಿ ಮರಣಹೊಂದಿದನೆಂದಿದೆ.[೧೩೮] ಧಾರೇಶ್ವರದ ಧಾರನಾಥ ದೇವಾಲಯದ ಮುಂಭಾಗದಲ್ಲಿನ ಶಾಸನವು ಲಿಪಿ ದೃಷ್ಟಿಯಿಂದ ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದೆ. ಚಂದಾವರ ಕಾದಂಬ ಚಕ್ರವರ್ತಿ ವೀರಕಾಮದೇವ ಹೊಂದಿರುವ ಬಿರುದುಗಳು "ಸ್ವಸ್ತಿ ಬನವಾಸಿ ಪುರವರಾಧೀಶ್ವರಂ ಜಯಂತಿ ಮಧುಕೇಶ್ವರ ದೇವರಲಬ್ದವರ ಪ್ರಸಾದಂ ಹುಸಿವರ ಶೂಲ, ಶರಣಾಗತ ವಜ್ರಪಂಜರ ಗಂಡರ ದಾವಣಿ ಕಲಿಗಳಂಕುಶ" ಎಂದಿದೆ. ಕದಂಬ ಸೇನಾನಿ ಪಾಳೆಯಗಾರರೊಡನೆ ಹೋರಾಡಿ ಮರಣ ಹೊಂದಿದನ್ನು ಈ ವೀರಗಲ್ಲು ಶಾಸನ ತಿಳಿಸುತ್ತದೆ.[೧೩೯]ಹೊಸಾಡ ಗ್ರಾಮದ ಗೋಶಾಲೆ ಸಮೀಪದಲ್ಲಿರುವ ಶಾಸನ ಲಿಪಿ ದೃಷ್ಟಿಯಿಂದ ಕ್ರಿ.ಶ ೧೩ನೇ ಶತಮಾನಕ್ಕೆ ಸೇರಿದೆ. ಚಂದಾವರ ಕಾದಂಬವೀರಕಾವದೇವರಸನ ಆಡಳಿತವನ್ನು ದಾಖಲಿಸುತ್ತದೆ. ಕಾವದೇವರಸನನ್ನು ಬನವಾಸಿ ಮಧುಕೇಶ್ವರ ದೇವರ ಲಬ್ದ ವರಪ್ರಸಾದ ಎಂಬ ಬಿರುದಿನಿಂದ ಹೊಗಳಲಾಗಿದೆ. ಕ್ರಿಯು ನಾಯ್ಕ, ಕಲಿಗಳಂಕ ರಾಯ ಕಟಕ ವೀರಜಂಗುಳಿ ನಾಯಕರ ಗಂಡ ಎನಿಸಿದ ದಾಳಗೌಡ ಬೊಂಥುಪಾಳಗೌಡನೊಡನೆ ಹೋರಾಡಿ ವೀರ ಸ್ವರ್ಗ ಸೇರಿದ ನೆನಪಿಗಾಗಿ ಈ ವೀರಗಲ್ಲು ನಿಲ್ಲಿಸಿದರು.[೧೪೦] ಹಳಕಾರಗ್ರಾಮದ ಲಕ್ಷ್ಮಣ, ಈಶ್ವರ ಪಟಗಾರ ಅವರ ತೆಂಗಿನ ತೋಟದಲ್ಲಿರುವ ಶಾಸನ ಲಿಪಿ ದೃಷ್ಟಿಯಿಂದ ಕ್ರಿ.ಶ ೧೩ನೇ ಶತಮಾನಕ್ಕೆ ಸೇರಿದೆ.ಚಂದಾವರ ಕಾದಂಬ ಚಕ್ರವರ್ತಿ ವೀರಕಾವದೇವರಸನ ಆಳ್ವಿಕೆಯ (೧೨೩೪-೧೨೮೮) ೪೪ನೇ ವರ್ಷ (ಧಾನ್ಯ ಸಂವತ್ಸರದ ಜೇಷ್ಠಮಾಸ ಮಾಸದ ಬಹುಳ (೧೦) ದಶಮಿ ವಡ್ಡವಾರದಲ್ಲಿ) ಹೊರಡಿಸಿದ ವೀರಗಲ್ಲು ಶಾಸನವಾಗಿದೆ. ಇದರಲ್ಲಿ ಕಾವದೇವರಸನನ್ನು ಬನವಾಸಿ ಮಧುಕೇಶ್ವರ ದೇವರ ದಿವ್ಯಪಾದ ಪದ್ಮಾರಾಧಕ ಗೋಕರ್ಣ ಮಹಾಬಲದೇವರ ದಿವ್ಯ ಶ್ರೀಪಾದಪದ್ಮಾರಾಧಕ ಗಂಡರ ಡಾವಣಿ ನಿಗಳಂಕಮಲ್ಲ ಬಿರುದುಗಳಿಂದ ಹೊಗಳಲಾಗಿದೆ. ಈ ಶಾಸನದಲ್ಲಿ ಸಕವಳ್ಳಿಯ ಚಿಕ್ಕುನಾಯಕನ

ಬಲಿದಾನವನ್ನು ದಾಖಲಿಸಲಾಗಿದೆ.[೧೪೧] ಕಡೆಕೋಡಿಯರಾಷ್ಟ್ರೀಯ ಹೆದ್ದಾರಿ–೧೭ ರ ಪಕ್ಕದಲ್ಲಿ ಅಶ್ವಥ ಕಟ್ಟೆಗೆ ನಿಲ್ಲಿಸಿಡಲಾಗಿದ್ದ ಶಾಸನ ಕ್ರಿ.ಶ ೧೩೫೪ಕ್ಕೆ ಸೇರಿದೆ. ಚಂದಾವರ ಕಾದಂಬ ಚಕ್ರವರ್ತಿ ಇಮ್ಮಡಿ ಕಾಮದೇವರಸ ಹೊಂದಿದ ಬಿರುದಾದ "ಶ್ರೀ ಕಾದಂಬ ಚಕ್ರವರ್ತಿ ಕಲಿಗಳಂಕುಶ ರಾಯ ಗಂಡರ ದಾವಣಿ ಹುಸಿವರ ಶೂಲ ನಿಗಳಂಕಮಲ್ಲ ಸತ್ಯ ಪ್ರಕಾಶ ಅರಿರಾಯ ಮುಖದ ಕೈ" ಎಂದು ತಿಳಿಸುವದರ ಜೊತೆಗೆ ಸಹಣಿ ಎಂಬುವನು ಮರಣಹೊಂದಿದನೆಂದು ಶಾಸನದಲ್ಲಿ ಉಲ್ಲೇಖಿಸುತ್ತದೆ[೧೪೨].

೩.೩.೨ ಶಾಸನ ರಹಿತ ವೀರಗಲ್ಲು

ದಿವಳ್ಳಿ, ಹಳೆಯ ಈಶ್ವರ ದೇವಾಲಯ ಹತ್ತಿರ ಇರುವ ವೀರಗಲ್ಲು ಶಿಲ್ಪ ಕ್ರಿ.ಶ. ೧೧–೧೨ ನೇ ಶತಮಾನಕ್ಕೆ ಸೇರಿದ್ದು ಕ್ಲೋರೈಟಿಕ್ ಸಿಸ್ಟನಿಂದ ಮಾಡಲಾಗಿದ್ದು ಇದು ಐದು ಅಡ್ಡಪಟ್ಟಿಕೆಗಳನ್ನು ಒಳಗೊಂಡಿದೆ.

ಕೆಳಗಿನ (ಮೊದಲನೇಯ) ಪಟ್ಟಿಕೆಯಲ್ಲಿ ವೀರನು ಕೈಯಲ್ಲಿ ಬಿಲ್ಲು ಬಾಣವನ್ನು ಹಿಡಿದುಕೊಂಡು ಹೋರಾಡುತ್ತಿರುವ ದೃಶ್ಯವಿದ್ದು. ಎರಡನೇಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು ಅಪ್ಸರೆಯರು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತಿದೆ. ಮೂರನೇಯ ಪಟ್ಟಿಕೆಯಲ್ಲಿ ನೃತ್ಯವಾದ್ಯಗಾರರ, ನಾಲ್ಕನೇಯ ಪಟ್ಟಿಕೆಯಲ್ಲಿ ಅಪ್ಸರೆಯರು ಕೈಗಳಲ್ಲಿ ಹೂವಿನ ಹಾರವನ್ನು ಹಿಡಿದುಕೊಂಡು ನಿಂತಿರುವಂತಿದೆ. ಐದನೇ ಪಟ್ಟಿಕೆಯಲ್ಲಿ ಶಿವಲಿಂಗದ ಮುಂದೆ ವೀರನು ಕೈಮುಗಿದು ಕುಳಿತ್ತಿರುವ, ಇಕ್ಕೆಲದಲ್ಲಿ ಯತಿಯೊಬ್ಬನು ಶಿವಲಿಂಗಕ್ಕೆ ಪೂಜೆಮಾಡುತ್ತಿರುವಂತಿದೆ. ಮುಂದೆ ಕುಳಿತ ನಂದಿಶಿಲ್ಪವಿದೆ. ಇನ್ನೊಂದು ವೀರಗಲ್ಲು ಹನೆಹಳ್ಳಿ ಗ್ರಾಮದಲ್ಲಿದ್ದು. ಕ್ರಿ.ಶ. ೧೧–೧೨ ನೇ ಶತಮಾನಕ್ಕೆ ಸೇರಿದ್ದು, ಕಪ್ಪುಮಿಶ್ರಿತ ಬಳಪದ ಶಿಲೆಯಿಂದ ಮಾಡಲಾಗಿದೆ. ದೊಡ್ಡದಾದ ವೇದಿಕೆಯ ಮೇಲೆ ನಾಲ್ಕು ವೀರಗಲ್ಲುಗಳನ್ನು ಸಾಲಾಗಿ ನಿಲ್ಲಿಸಲಾಗಿದೆ. ಮೊದಲನೇಯ ವೀರಗಲ್ಲು ಶಿಲ್ಪ ಫಲಕದ ಕೆಳಗಿನ ಪಟ್ಟಿಕೆಯಲ್ಲಿ ವೀರನು ಕೈಗಳಲ್ಲಿ ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಹೋರಾಟ ಮಾಡುವ ದೃಶ್ಯವಿದೆ.

ಎರಡನೇಯ ಪಟ್ಟಿಕೆಯಲ್ಲಿ ವೀರನು ತನ್ನ ಸೈನಿಕರ ಪಡೆಯೊಂದಿಗೆ ವೈರಿಗಳ ವಿರುದ್ಧ ಹೋರಾಟ ಮಾಡುವ, ಮೂರನೇಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು ಅಪ್ಸರೆಯರು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ನಾಲ್ಕನೇಯ ಪಟ್ಟಿಕೆಯಲ್ಲಿ ವಾದ್ಯಗಾರರು ವಾದ್ಯಗಳನ್ನು ಬಾರಿಸುತ್ತಿರುವಂತಿದೆ. ಮೇಲಿನ ಭಾಗದಲ್ಲಿ ವೀರನು ಶಿವಲಿಂಗದ ಮುಂದೆ ಕೈಮುಗಿದು ಕುಳಿತ್ತಿದ್ದಾನೆ. ಶಿಲ್ಪಫಲಕದ ಸುತ್ತಲೂ ಮಕರ ತೋರಣದ ಅಲಂಕಾರವಿದೆ.

ಅದರಂತೆ ಈ ವೀರಗಲ್ಲಿನ ಪಕ್ಕದಲ್ಲಿರುವ ಇನ್ನೊಂದು ವೀರಗಲ್ಲು ಎರಡು ಪಟ್ಟಿಕೆಗಳನ್ನು ಮಾತ್ರ ಹೊಂದಿದೆ. ಕೆಳಗಿನ ಪಟ್ಟಿಕೆಯಲ್ಲಿ ವಾದ್ಯಗಾರರ ಸಾಲು ಇದ್ದು ಮೇಲಿನ ಪಟ್ಟಿಕೆಯಲ್ಲಿ ವೀರನು ಪದ್ಮಾಸನದಲ್ಲಿ ಕೈಮುಗಿದು ಕುಳಿತ್ತಿದ್ದಾನೆ. ಇಕ್ಕೆಲದಲ್ಲಿ ಯತಿಗಳು ಶಿವಲಿಂಗಕ್ಕೆ ಪೂಜೆಮಾಡುತ್ತಿರುವ ದೃಶ್ಯವಿದೆ. ಹಾಗೆಯೇ ಇನ್ನೆರಡು ಶಿಲ್ಪಫಲಕಗಳು ಇದೇ ಮಾದರಿಯದ್ದಾಗಿವೆ.

ಇನ್ನೊಂದು ವೀರಗಲ್ಲು ಶಿಲ್ಪ ಗೋಕರ್ಣ, ಮಹಾಬಲೇಶ್ವರ ದೇವಸ್ಥಾನ ಮುಂದೆ ಇದೆ. ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ್ದು, ಕ್ಲೋರೈಟಿಕ್ ಸಿಸ್ಟನಿಂದ ಮಾಡಲಾಗಿದೆ. ಈ ವೀರಗಲ್ಲಿನಲ್ಲಿ ಗಜದಳ, ಅಶ್ವದಳಗಳನ್ನು ಬಳಸಿ ಹೋರಾಡುತ್ತಿರುವ ಸೈನ್ಯದ ಚಿತ್ರಣವಿದೆ. ಶಿಲ್ಪದ ೪ನೇ ಪಟ್ಟಿಕೆಯಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ಚಿತ್ರವನ್ನು ಶಿಲ್ಪಿ ಬಿಂಬಿಸಿದ್ದಾನೆ. ಈ ವೀರಗಲ್ಲುಗಳಲ್ಲಿ ತೋರಿಸಿರುವ ಅಪ್ಸರೆಯರ ಹಾವಭಾವ ಸೈನಿಕರ ಉಡುಪು ಮತ್ತು ಅವರು ಬಳಸುತ್ತಿರುವ ಶಸ್ತ್ರಾಸ್ತ್ರ ಕುರಿತಿದೆ. ಇನ್ನೊಂದು ವೀರಗಲ್ಲು ಶಿಲ್ಪ ಕಾಗಲ ಗ್ರಾಮದ ಲೋಕನಾಥ ದೇವರ ಮುಂದೆ ಇದೆ. ಇದು ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ್ದು, ಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ. ಶಿಲ್ಪಿಯು ಪ್ರಾಚೀನ ಕಾಲದ ಯುದ್ಧ ಕೌಶಲ್ಯವನ್ನು ಕುರಿತು ಚಿತ್ರಗಳ ಮೂಲಕ ರೂಪಿಸಿದ್ದಾನೆ. ಮೊದಲ ಪಟ್ಟಿಕೆಯಲ್ಲಿ ವೀರನು ಪಲ್ಲಕಿಯ ಮೇಲೆ ಕುಳಿತು ಬರುವ ದೃಶ್ಯ ನಂತರ ಯುದ್ಧ ಮಾಡುತ್ತಿರುವ ದೃಶ್ಯ, ನಂತರ ಯುದ್ಧದಲ್ಲಿ ಸಾವನಪ್ಪಿ ಸ್ವರ್ಗಾರೋಹಣ ಮಾಡುತ್ತಿರುವ ದೃಶ್ಯವಿದೆ. ವೀರನು ಮಹಿಳೆಯ ರಕ್ಷಣೆಗೆ ಹೋರಾಡುತ್ತಿರುವಂತೆ ಕಂಡುಬರುತ್ತದೆ. ಇನ್ನೊಂದು ವೀರಗಲ್ಲು ಶಿಲ್ಪ ವಾಲಗಳ್ಳಿ ಗ್ರಾಮದ ಗೋಳಿಬೀರ ದೇವಸ್ಥಾನ ಹತ್ತಿರ ಇದೆ. ಕ್ರಿ.ಶ. ೧೨-೧೩ನೇ ಶತಮಾನಕ್ಕೆ ಸೇರಿದ್ದು, ಸಿಸ್ಟಶಿಲೆಯಿಂದ ಮಾಡಲ್ಪಟ್ಟಿದೆ. ಈ ವೀರಗಲ್ಲು ಶಿಲ್ಪದ ಕೆಳಗಿನ(ಮೊದಲನೇಯ) ಪಟ್ಟಿಕೆಯು ತ್ರುಟಿತಗೊಂಡಿದೆ.

ಎರಡನೇಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು ಅಪ್ಸರೆಯರುಪುಷ್ಪಕ ವಿಮಾನದಲ್ಲಿ ಕುಳ್ಳರಿಸಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ಮೂರನೇಯ ಪಟ್ಟಿಕೆಯಲ್ಲಿ ವಾದ್ಯಗಾರರ ಚಿತ್ರಣವಿದೆ. ಮೇಲ್ಭಾಗದಲ್ಲಿ ವೀರನು ಕೈಮುಗಿದು ಕುಳಿತಿರುವ ದೃಶ್ಯವಿದೆ. ಯತಿಯು ಶಿವಲಿಂಗಕ್ಕೆ ಪೂಜೆಗೈಯುವ ಪ್ರಭಾವಳಿಯ ದೃಶ್ಯವಿದೆ. ಸುತ್ತಲೂ ಮಕರ ತೋರಣದ ಅಲಂಕಾರವಿದೆ. ಇನ್ನೊಂದು ವೀರಗಲ್ಲು ಶಿಲ್ಪ ಗೋಕರ್ಣ ಗ್ರಾಮದ ಪಟ್ಟವಿನಾಯಕ ದೇವಸ್ಥಾನದ ಬಲಕ್ಕೆ ಇದೆ. ಇದು ಕ್ರಿ.ಶ. ೧೨-೧೩ನೇ ಶತಮಾನಕ್ಕೆ ಸೇರಿದ್ದು, ಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ. ಈವೀರಗಲ್ಲು ಶಿಲ್ಪವು ಐದು ಪಟ್ಟಿಕೆಗಳನ್ನು ಹೊಂದಿದೆ. ಮೊದಲನೇ ಪಟ್ಟಿಕೆಯಲ್ಲಿ ವೀರನು ವೈರಿಗಳ ಜೊತೆ ಹೋರಾಡುತ್ತಿರುವ, ಎರಡನೇಯ ಪಟ್ಟಿಕೆಯಲ್ಲಿ ವೀರನು ವೈರಿಗಳ ಜೊತೆ ಹೋರಾಡುತ್ತಿರುವ ಮೂರನೇಯ ಪಟ್ಟಿಕೆಯಲ್ಲಿ ಪ್ರಾಣಿಗಳ ಮೇಲೆ ಕುಳಿತುಕೊಂಡು ಹೋರಾಡುತ್ತಿರುವ ದೃಶ್ಯಗಳಿವೆ. ನಾಲ್ಕನೇ ಪಟ್ಟಿಕೆಯಲ್ಲಿ

ಯುದ್ಧದಲ್ಲಿ ಮಡಿದ ವೀರರನ್ನು ಅಪ್ಸರೆಯರು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ, ಮೇಲ್ಭಾಗದಲ್ಲಿ ಎರಡು ಆನೆಗಳು ಅಭಿಷೇಕ ಮಾಡುತ್ತಿರುವ ದೃಶ್ಯವಿದೆ. ಹಾಗೂ ಯತಿಯೊಬ್ಬನು ಕುಳಿತ ಶಿವನಿಗೆ ಪೂಜೆ ಮಾಡುತ್ತಿರುವ ದೃಶ್ಯವಿದೆ. ಇನ್ನೊಂದು ವೀರಗಲ್ಲು ಶಿಲ್ಪ ಹರವಳ್ಳಿ ಗ್ರಾಮದ ಭಾಸ್ಕರ ಗಣಪತಿ ದೇಶಬಂಡಾರಿ ಅವರ ತೋಟದಲ್ಲಿದೆ ಇದು ಕ್ರಿ.ಶ. ೧೨-೧೩ನೇ ಶತಮಾನಕ್ಕೆ ಸೇರಿದ್ದು, ಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ. ಮೊದಲನೇಯ (ಕೆಳಗಿನ) ಪಟ್ಟಿಕೆಯಲ್ಲಿ ವೀರನು ವೈರಿಗಳ ಜೊತೆ ಹೋರಾಡುತ್ತಿರುವ ಚಿತ್ರದ ಸನ್ನಿವೇಶವಿದೆ. ಎರಡನೇಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವೀರರನ್ನು ಅಪ್ಸರೆಯರುಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ಮೂರನೇಯ ಪಟ್ಟಿಕೆಯಲ್ಲಿ ವೀರನು ಶಿವಲಿಂಗದ ಮುಂದೆ ಕೈಮುಗಿದು ಕುಳಿತುಕೊಂಡಿದ್ದಾನೆ. ಇಕ್ಕೆಲದಲ್ಲಿ ಕುಳಿತ ನಂದಿ ಮತ್ತು ಅಪ್ಸರೆಯರು ನಿಂತಿದ್ದಾರೆ. ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರಿದ್ದಾರೆ. ದೀವಳ್ಳಿ ಗ್ರಾಮದ ಮೆಕ್ಸಿ ಫರ್ನಾಂಡಿಸ್ ಅವರ ತೋಟದಲ್ಲಿರುವ ವೀರಗಲ್ಲು ಶಿಲ್ಪ, ಕ್ರಿ.ಶ. ೧೨-೧೩ನೇ ಶತಮಾನಕ್ಕೆ ಸೇರಿದ್ದು ಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ. ಮೊದಲನೇಯ ಪಟ್ಟಿಕೆಯು ಪೂರ್ತಿಯಾಗಿ ಭೂಮಿಯಲ್ಲಿ ಮುಚ್ಚಿಕೊಂಡಿದ್ದು, ಎರಡನೇಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವೀರರನ್ನು ಅಪ್ಸರೆಯರುಸ್ವರ್ಗಕ್ಕೆ ಕರೆ ದುಕೊಂಡು ಹೋಗುತ್ತಿರುವ ದೃಶ್ಯವಿದೆ. ಮೂರನೇಯ ಪಟ್ಟಿಕೆಯಲ್ಲಿ ಅಪ್ಸರೆಯರನ್ನು ಕಾಣುತ್ತೇವೆ.

೩.೩.೩ ತುರುಕಾಳಗ

ಸಂಸ್ಕೃತದ 'ಗೋಗ್ರಹಣ' ಎಂಬ ಪದಕ್ಕೆ ಸಮಾನಾಂತರವಾಗಿ ತುರುಗೋಳ ಪದ ಬಳಕೆಯಲ್ಲಿದೆ. ಪ್ರಾಚೀನ ಕಾಲದಲ್ಲಿ ಗೋವು ಸಂಪತ್ತಿನ ಮೂಲವಾಗಿತ್ತು. ಹೀಗಾಗಿ ವೈರಿಗಳು, ಕಳ್ಳರು, ಗೋವುಗಳನ್ನು ಅಪಹರಿಸುತ್ತಿದ್ದರು. ಆಸಂದರ್ಭದಲ್ಲಿ ಅವರ ವಿರುದ್ಧ ಹೋರಾಡಿ ವೀರಸ್ವರ್ಗ ಸೇರಿದ ನೆನಪಿಗೋಸ್ಕರವಾಗಿ ಸ್ಮಾರಕಗಳನ್ನು ನೆಡುತ್ತಿದ್ದರು. ಇದನ್ನು ತುರುಗೋಳ ವೀರಶಿಲ್ಪಗಳೆಂದು ಕರೆಯಲಾಗುತ್ತದೆ.

ಗೋಕರ್ಣ, ಗ್ರಾಮದ ಮಹಾಬಲೇಶ್ವರ ದೇವರ ಹಿಂದೆ ಇರುವ ತುರುಕಾಳಗ ಶಿಲ್ಪ. ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದೆ. ಇದು ಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ.ಈ ವೀರಗಲ್ಲು ಚಿತ್ರಲಿಪಿಯನ್ನು ಒಳಗೊಂಡಿದೆ. ಎರಡು ಪಟ್ಟಿಕೆಗಳು ಭೂಮಿಯಲ್ಲಿ ಹುದುಗಿದೆ. ನಂತರ ಲಭ್ಯವಿರುವ ಪಟ್ಟಿಕೆಯ ಪ್ರಕಾರ ಪರಸ್ಪರರು ಸಂವಾದವನ್ನು ನಡೆಸುತಿರುವಂತಿದೆ. ಎರಡನೇ ಪಟ್ಟಿಯಲ್ಲಿ ಗೋವನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಹೋರಾಡುವ ದೃಶ್ಯವನ್ನು ಮೂರನೇ ಪಟ್ಟಿಯಲ್ಲಿ ಶತ್ರುವಿನಿಂದ ಹತನಾದ ವೀರನನ್ನು ಅಪ್ಸರೆಯರು ದೇವಲೋಕಕ್ಕೆ ಹೊತ್ತೊಯುತ್ತಿರುವುದು, ನಂತರ ವೀರನು ಸ್ವರ್ಗಸ್ಥನಾದನೆಂಬುದನ್ನು ನಿರೂಪಿಸುತ್ತದೆ ಈ ಶಿಲ್ಪ.

೩.೩.೪ ವ್ಯಕ್ತಿ ಪ್ರಾಣಿಗಳ ಹೋರಾಟದ ಶಿಲ್ಪ

ಪ್ರಾಚೀನ ಕಾಲದಿಂದಲೂ ಮಾನವನು ಅನೇಕ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದನು. ರಾಜ-ಮಹಾರಾಜರಿಗೆ ಬೇಟೆಯಾಡುವದು ಒಂದು ಮೋಜು ಆಗಿತ್ತು. ಕೆಲವೊಂದು ಸಂದರ್ಭದಲ್ಲಿ ಪ್ರಾಣಿಗಳು ರೈತರು ಬೆಳೆದ ಬೆಳೆಗಳನ್ನು ನಾಶ ಮಾಡುತ್ತಿದ್ದವು. ಇದನ್ನು ತಿಳಿದ ವೀರರು ಕ್ರೂರ ಪ್ರಾಣಿಗಳಿಂದ ರಕ್ಷಣೆ ಒದಗಿಸುವ ಸಲುವಾಗಿ ಪ್ರಾಣಿಗಳ ಜೊತೆ ಹೋರಾಡಿ ವೀರಸ್ವರ್ಗ ಸೇರುತ್ತಿದ್ದರು. ಇವರ ಸ್ಮರಣಾರ್ಥವಾಗಿ

ವೀರಗಲ್ಲುಗಳನ್ನು ನಿಲ್ಲಿಸುತ್ತಿದ್ದರು. ಉದಾ: ವಾಲಗಳ್ಳಿಯಲ್ಲಿರುವ ವೀರಗಲ್ಲು, ಇಲ್ಲಿ ಯೋಧನು ಕಾಡುಕೋಣದೊಂದಿಗೆ ಹೋರಾಡುತ್ತಿರುವ ಚಿತ್ರಣವಿದೆ. ಇನ್ನು ಇದಕ್ಕೆ ಪೂರಕ ಎನ್ನುವಂತೆ ಈ ಭಾಗದಲ್ಲಿ ಇಂದಿಗೂ ಬಿಲ್ಲು ಬಾಣ ಹಿಡಿದುಕೊಂಡು ನಿಂತಿರುವ ಬೇಟೆಬೀರನ ಗುಡಿಗಳಿವೆ.

ಬಂಕಿಕೊಡ್ಲ ಗ್ರಾಮದ ಅಮ್ಮನವರ ದೇವಸ್ಥಾನ ಮುಂದೆ ಇರುವ ಕ್ರಿ.ಶ. ೧೧-೧೨ನೇ ಶತಮಾನಕ್ಕೆ ಸೇರಿದ ವ್ಯಕ್ತಿ ಪ್ರಾಣಿಗಳ ಹೋರಾಟದ ಶಿಲ್ಪ. ಕ್ಲೊರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ.ವೇದಿಕೆಯ ಮೇಲೆ ನಿಲ್ಲಿಸಲಾಗಿರುವ ಮೂರು ವೀರಗಲ್ಲುಗಳು ಸ್ಪಷ್ಟವಾಗಿದ್ದು ಮೊದಲನೇಯ ವೀರಗಲ್ಲು (ಎಡಭಾಗ ದೊಡ್ಡದು) ಶಿಲ್ಪವು ಐದು ಪಟ್ಟಿಕೆಗಳನ್ನು ಒಳಗೊಂಡಿದೆ. ಕೆಳಗಿನ ಅಡ್ಡಪಟ್ಟಿಕೆಯಲ್ಲಿ ಕೇವಲ ಯುದ್ಧವೀರರ ದೃಶ್ಯ ಅವರು ಕೈಗಳಲ್ಲಿ ಖಡ್ಗ ಮತ್ತು ಗುರಾಣಿಗಳನ್ನು ಹಿಡಿದುಕೊಂಡಿದ್ದಾರೆ. ಎರಡನೇಯ ಅಡ್ಡಪಟ್ಟಿಕೆಯಲ್ಲಿ ವೀರನು ಖಡ್ಗ ಮತ್ತು ಗುರಾಣಿಯನ್ನು ಹಿಡಿದುಕೊಂಡು ವೈರಿಗಳೊಂದಿಗೆ ಹೋರಾಡುತ್ತಿರುವ, ಮೂರನೇಯ ಅಡ್ಡಪಟ್ಟಿಕೆಯಲ್ಲಿ ವೀರನು ತನ್ನ ಸೈನಿಕರ ಸಹಾಯದೊಂದಿಗೆ ಆನೆಯೊಂದಿಗೆ ಸೆಣಸಾಡುವ ದೃಶ್ಯವಿದೆ. ಎಲ್ಲಾ ಸೈನಿಕರು ತಮ್ಮ ಕೈಗಳಲ್ಲಿ ಖಡ್ಗ ಮತ್ತು ಗುರಾಣಿ (ಡಾಲು) ಗಳನ್ನು ಹಿಡಿದುಕೊಂಡಿದ್ದಾರೆ. ನಾಲ್ಕನೇಯ ಅಡ್ಡಪಟ್ಟಿಕೆಯಲ್ಲಿ ವೀರ ಮತ್ತು ಆತನ ಪತ್ನಿಯರು ಮಂಚದ ಮೇಲೆ ಕುಳಿತಿರುವ ದೃಶ್ಯವಿದೆ. ಇಕ್ಕೆಲಗಳಲ್ಲಿ ಸ್ತ್ರೀ ಪುರುಷರು ನಿಂತಿದ್ದಾರೆ. ಐದನೇಯ ಅಡ್ಡಪಟ್ಟಿಕೆಯಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಲೋಕಕ್ಕೆ ಕರೆದುಕೊಂಡು ಹೋಗುತ್ತಿರುವಂತಿದೆ. ಮೇಲ್ಭಾಗದಲ್ಲಿ ಎರಡು ಆನೆಗಳು ಕುಂಬಾಭಿಷೇಕ ಮಾಡುವ ಚಿತ್ರಣವಿದೆ.

ಎರಡನೇ (ಮಧ್ಯದಲ್ಲಿ) ವೀರಗಲ್ಲು ಶಿಲ್ಪವು ನಾಲ್ಕು ಪಟ್ಟಿಕೆಗಳನ್ನು ಒಳಗೊಂಡಿದ್ದು ಮೊದಲನೆಯ ಪಟ್ಟಿಕೆಯಲ್ಲಿ ಸತಿಯು ನಿಂತಿರುವ ದೃಶ್ಯವಿದೆ. ಎರಡನೇಯ ಪಟ್ಟಿಕೆಯಲ್ಲಿ ಐದು ಜನ ಸತಿಯರು ನಿಂತಿರುವ ದೃಶ್ಯವಿದೆ. ಮೂರನೇಯ ಪಟ್ಟಿಕೆಯಲ್ಲಿ ಇಬ್ಬರು ಸತಿಯರು ಕುಳಿತಿದ್ದಾರೆ. ಇಕ್ಕೆಲಗಳಲ್ಲಿ ಮೂರು ಜನ ಸ್ತ್ರೀಯರು ನಿಂತಿದ್ದಾರೆ. ಮೆಲ್ಭಾಗದಲ್ಲಿ ಸತಿಯು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವಂತಿದೆ.

೩.೩.೫ ಸ್ತಂಭ ವೀರಗಲ್ಲು

ಮೇಲೆ ಪೂರ್ಣಕಲಶವನ್ನು ಹೊತ್ತಂತೆ ಚಿತ್ರಿಸಲಾಗಿದೆ. ಕಂಬದ ಮುಖಗಳನ್ನು ಚಿಕ್ಕ ಪಟ್ಟಿಕೆಗಳನ್ನಾಗಿ ವಿಂಗಡಿಸಿ ಅದರಲ್ಲಿ ರಣರಂಗದಲ್ಲಿ ವೈರಿಗಳೊಂದಿಗೆ ಹೋರಾಡುತ್ತಿರುವ, ವೈರಿಗಳೊಂದಿಗೆ ಸೋಲನ್ನು ಹೊಂದಿ ಮರಣಹೊಂದಿದಂತೆ ಅವನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ಚಿತ್ರಣ, ಬಿಲ್ಲು, ಬಾಣ, ಗುರಾಣಿ, ಭರ್ಚಿಗಳನ್ನು ಹಿಡಿದು ಅಶ್ವ, ಮತ್ತು ಗಜಪಡೆಯೊಂದಿಗೆ ಹೋರಾಡುವ ಚಿತ್ರಣ ರಾಮಾಯಣ ದೃಶ್ಯಾವಳಿಗಳು, ರಾಮ–ರಾವಣರೊಡನೆ ಯುದ್ಧ, ವಾಲಿ–ಸುಗ್ರೀವರ ನಡುವಿನ ಹೋರಾಟ, ಜಟಾಯು ವಧೆ, ಇಂತಹ ವೀರಗಲ್ಲುಗಳು ಕಾಗಲ, ವಾಲಗಳ್ಳಿ, ಗೋಕರ್ಣಗಳಲ್ಲಿ ಕಂಡು ಬಂದಿವೆ.

೩.೩.೬ ಮಹಾಸತಿ ಶಿಲ್ಪಗಳು

"ಮಾಸ್ತಿ" ಎಂಬುದು ಸಂಸ್ಕೃತದ "ಮಹಾಸತಿ" ಎಂಬುದರ ಸಂಕ್ಷಿಪ್ತರೂಪ[೧೪೩] ಪತಿಯ ಚಿತೆಯಲ್ಲಿ ಬಿದ್ದು ಪ್ರಾಣ ತ್ಯಾಗ ಮಾಡುತ್ತಿದ್ದರು. ಈ ಪದ್ಧತಿಯಲ್ಲಿ ಎರಡು ವಿಧ ೧) ಸಹಗಮನ–ಪತಿಯು ಮರಣ ಹೊಂದಿದಾಗ ಆತನ ಚಿತೆಗೆ ಹಾರಿ ಪ್ರಾಣತ್ಯಾಗ ಮಾಡುವದು ಸಹಗಮನ ೨) ಅನುಗಮನ–ಪತಿಯು ಮರಣ ಹೊಂದಿದ ಸುದ್ದಿ ಕೇಳಿ ತಾನೇ ಚಿತೆ ಸಿದ್ಧಪಡಿಸಿ ಆ ಚಿತೆಯಲ್ಲಿ ಹಾರಿ ಪ್ರಾಣ ಬಿಡುವ ಪದ್ಧತಿ ಅನುಗಮನ. ಇದರ ಸ್ಮರಣಾರ್ಥವಾಗಿ ನಿಲ್ಲಿಸಿರುವರು ಮಹಾಸತಿಗಲ್ಲುಗಳು.[೧೪೪]

ಮಹಾಸತಿಗಲ್ಲುಗಳ ಮೇಲೆ ಒಂದು ಸ್ತಂಬದಂತೆ, ಅದರ ಬಲಭಾಗದಿಂದ ಹೊರಬಂದ ಒಂದು ಕೈ ಇರುತ್ತದೆ. ಇದನ್ನು ಒಕ್ಕೈಮಾಸ್ತಿ ಎಂದು, ಸ್ತಂಬದಿಂದ ಎರಡು ಕೈಗಳು ಹೊರಟಿದ್ದರೆ ಇಕ್ಕೈಮಾಸ್ತಿ ಎಂದು ಕರೆಯುತ್ತಾರೆ.[೧೪೫] ಮಹಾಸತಿ ಕೈಯಲ್ಲಿ ಲಿಂಬು ಹಿಡಿದಿರುವಂತೆ ಒಬ್ಬರಿಗಿಂತ ಹೆಚ್ಚು ಜನರು ಸಹಗಮನ ಮಾಡಿದ್ದರೆ ಅಷ್ಟುಜನರು ನಿಂತು ಎಡಗೈ ಮೇಲೆತ್ತಿರುವ ಚಿತ್ರ ಇರುತ್ತದೆ.

ಸಾಂತಗಲ್ ಗ್ರಾಮದ ಶಾಂತಿಕಾ ಪರಮೇಶ್ವರಿ ದೇವಸ್ಥಾನ ಮುಂದೆ ಇರುವ ಮಹಾಸತಿಗಲ್ಲು, ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ್ದು ಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ. ಈ ವೀರಗಲ್ಲಿನಲ್ಲಿ ವೀರನು ಶತ್ರುಗಳೊಂದಿಗೆ ಹೋರಾಡುತ್ತಾ ನಂತರ ಸಾವನಪ್ಪಿದಾಗ ಆತನ ಪತ್ನಿಯು ಸತಿಹೋಗುವದನ್ನು ಶಿಲ್ಪದ ಮೂಲಕ ತೋರಿಸಲಾಗಿದೆ. ಎತ್ತರದ ವೇದಿಕೆಯನ್ನು ನಿರ್ಮಾಣಮಾಡಿ ವೇದಿಕೆಯ ಪಕ್ಕದಲ್ಲಿ ಏಣಿ ಇಟ್ಟಂತೆ ತೋರಿಸಿ ಅದನ್ನು ಹತ್ತುತ್ತಿರುವ ಯೋಧನು ಅವನನ್ನು ಹಿಂಬಾಲಿಸಿ ವಾದ್ಯಮೇಳ ಮತ್ತು ಪಕ್ಕದಲ್ಲಿ ಆತನು ಯಜ್ಞಕುಂಡ ಹಾರಿದ ದೃಶ್ಯವನ್ನು ಚಿತ್ರಿಸಲಾಗಿದೆ. ಇನ್ನೊಂದು ಮಹಾಸತಿಗಲ್ಲು ಬಂಕಿಕೊಡ್ಲ ಅಮ್ಮನವರ ದೇವಸ್ಥಾನದ ಹತ್ತಿರ ಇದೆ. ಇದುಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ್ದುಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ.ಪೀಠದಲ್ಲಿ ನಿಲ್ಲಿಸಿರುವ ಎರಡು ಸತಿಗಲ್ಲುಗಳಲ್ಲಿ ಮೊದಲನೇಯ ಸತಿಗಲ್ಲಿನಲ್ಲಿ

ಸತಿಯು ಕೈಮುಗಿದು ನಿಂತಿದ್ದಾಳೆ.ಹಾಗೆಯೇ ೨ನೇ ಸತಿಗಲ್ಲು ತ್ರುಟಿತಗೊಂಡಿದೆ.ಇನ್ನೊಂದು ಮಹಾಸತಿಗಲ್ಲು ಹನೆಹಳ್ಳಿ ಗ್ರಾಮದ ಬೀರದೇವಸ್ಥಾನ ಹತ್ತಿರ ಇದೆ. ಇದು ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ್ದುಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ. ಎತ್ತರವಾದ ಪೀಠದ ಮೇಲೆ ನಿಲ್ಲಿಸಿದ ಸತಿಗಲ್ಲು ನಾಲ್ಕು ಪಟ್ಟಿಕೆಗಳನ್ನು ಹೊಂದಿದೆ. ಮೊದಲನೇಯ ಪಟ್ಟಿಕೆಯಲ್ಲಿ ಸತಿಯು ಹೋರಾಡುತ್ತಿರುವ ದೃಶ್ಯ ಎರಡನೇಯ ಪಟ್ಟಿಕೆಯಲ್ಲಿ ಕೈಮುಗಿದು ನಿಂತಿರುವಂತೆ ಮೂರನೇ ಪಟ್ಟಿಕೆಯಲ್ಲಿ ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ಚಿತ್ರಣ ನಾಲ್ಕನೇ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಪೂಜೆ ಮಾಡುತ್ತಿರುವಂತಿದೆ.ಇನ್ನೊಂದು ಮಹಾಸತಿಗಲ್ಲು ಹಿಂಡಬೈಲ್ ಗ್ರಾಮದ ನಜಿಂಸಾಹೇಬ ಮನೆ ಹತ್ತಿರಇದೆ. ಇದು ಕ್ರಿ.ಶ. ೧೩ನೇ ಶತಮಾನಕ್ಕೆ ಸೇರಿದ್ದುಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ. ಅಷ್ಟಪಟ್ಟಿ ಆಕೃತಿಯಲ್ಲಿ ಕಂಡರಿಸಿರುವ ಕಲ್ಲಿನ ಸ್ತಂಬದ ಬಲಭಾಗದಲ್ಲಿ ಕಲ್ಲಿನ ಫಲಕದ ಮೇಲೆ ಮುತ್ತೈದೆಯ ಕೈ ಅಭಯ ಹಸ್ತ, ಮತ್ತು ಮುತ್ತೈದೆಯ ಸಂಕೇತವಾಗಿ ಸಹಸ್ರಪದ್ಮದಳಗಳನ್ನು ಶಿಲ್ಪಿಯು ಚಿತ್ರಿಸಿದ್ದಾನೆ. ಈ ಸ್ತಂಬದ ಮೇಲೆ ಕಲಶದಂತೆ ಕಂಡರಿಸಲಾಗಿದ್ದು ಈ ಸ್ತಂಬದ ಮಧ್ಯದ ಪಟ್ಟಿಕೆಯಲ್ಲಿ ಸತಿಪತಿಯರು ಕುಳಿತಂತೆ ಚಿತ್ರಿಸಲಾಗಿದೆ.

ಇನ್ನೊಂದು ಮಹಾಸತಿಗಲ್ಲು ಬಂಗಣೆ ಗ್ರಾಮದ ಕರಿಯಾ ತಿಮ್ಮಾ ಮರಾಠಿ ಇವರ ಬೆಣದಲ್ಲಿಇದೆ. ಇದು ಕ್ರಿ.ಶ. ೧೩ನೇ ಶತಮಾನಕ್ಕೆ ಸೇರಿದ್ದುಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ. ಅಷ್ಟಪಟ್ಟಿ ಆಕೃತಿಯಲ್ಲಿ ಕಂಡರಿಸಿರುವ ಕಲ್ಲಿನ ಸ್ತಂಬದ ಬಲಭಾಗದಲ್ಲಿ ಕಲ್ಲಿನ ಫಲಕದ ಮೇಲೆ ಮುತ್ತೈದೆಯ ಕೈ ಅಭಯ ಹಸ್ತ, ಮತ್ತು ಮುತ್ತೈದೆಯ ಸಂಕೇತವಾಗಿ ಸಹಸ್ರಪದ್ಮದಳಗಳನ್ನು ಶಿಲ್ಪಿಯು ಚಿತ್ರಿಸಿದ್ದಾನೆ. ಸ್ತಂಬದ ಮೇಲೆ ಗುಮ್ಮಟದಂತೆ ಕಂಡರಿಸಲಾಗಿದೆ. ಈ ಸ್ತಂಬದ ಕೆಳಗಿನ ಪಟ್ಟಿಕೆಯಲ್ಲಿ ಸತಿಪತಿಯರು ಕುಳಿತಂತೆ ಚಿತ್ರಿಸಲಾಗಿದೆ. ಮೇಲಿನ ಪಟ್ಟಿಕೆಯಲ್ಲಿ ಲಿಂಗ, ಸೂರ್ಯ, ಚಂದ್ರರ ಸಂಕೇತಗಳಿವೆ. ಇನ್ನೊಂದು ಮಹಾಸತಿಗಲ್ಲು ಬಂಗಣೆ ಗ್ರಾಮದ ಕರಿಯಾ ತಿಮ್ಮಾ ಮರಾಠಿ ಇವರ ಬೆಣದಲ್ಲಿ ಇದೆ. ಇದು ಕ್ರಿ.ಶ. ೧೩ನೇ ಶತಮಾನಕ್ಕೆ ಸೇರಿದ್ದುಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ. ಅಷ್ಟಪಟ್ಟಿ ಆಕೃತಿಯಲ್ಲಿ ಕಂಡರಿಸಿರುವ ಕಲ್ಲಿನ ಸ್ತಂಬದ ಬಲಭಾಗದಲ್ಲಿ ಕಲ್ಲಿನ ಫಲಕದ ಮೇಲೆ ಮುತ್ತೈದೆಯ ಕೈ ಅಭಯ ಹಸ್ತ, ಮತ್ತು ಬೆರಳುಗಳ ಮಧ್ಯ ಲಿಂಬು ಇದೆ. ಸ್ತಂಬದ ಕೆಳಗಿನ ಪಟ್ಟಿಕೆಯಲ್ಲಿ ಸತಿ–ಪತಿಯರು ಧ್ಯಾನದಲ್ಲಿ ಕುಳಿತಿರುವಂತೆ ಚಿತ್ರಿಸಲಾಗಿದೆ. ಮೇಲಿನ ಪಟ್ಟಿಕೆಯಲ್ಲಿ ಗುಮ್ಮಟದಂತೆ ಸ್ವರ್ಗ ಪ್ರಾಪ್ತಿಯಾದ ಸ್ತ್ರೀ, ಶಿವಲಿಂಗ, ಆಕಳ ಚಿತ್ರವಿದೆ. ಸ್ತಂಬದ ಮೇಲೆ ಗುಮ್ಮಟದಂತೆ ಕಂಡರಿಸಲಾಗಿದೆ. ಇನ್ನೊಂದು ಮಹಾಸತಿಗಲ್ಲು ಶಿರಗುಂಜಿ ಗ್ರಾಮದ ಮೇಗಿನ ಮೂಲೆಯಲ್ಲಿರುವ ಮಹಾಸತಿಗಲ್ಲು ಕ್ರಿ.ಶ. ೧೩–೧೪ ನೇ ಶತಮಾನಕ್ಕೆ ಸೇರಿದ್ದುಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ.ಅಷ್ಟಪಟ್ಟಿಗಳುಳ್ಳ ಲಂಬಾಕೃತಿಯ ಕಲ್ಲಿನ ಸ್ತಂಬದಲ್ಲಿ ಮಕುಟಪ್ರಾಯದಂತೆ ಕಲಶವನ್ನು ಅನುಕ್ರಮವಾಗಿ ಮೂರು ಭಾಗಗಳಾಗಿ

ವಿಂಗಡಿಸಲಾಗಿದ್ದು, ಕೆಳಭಾಗದ ಪಟ್ಟಿಕೆಯಲ್ಲಿ ಸತಿಪತಿಯರು ಕುಳಿತಿರುವಂತೆ ಚಿತ್ರಿಸಲಾಗಿದೆ. ನಡುಪಟ್ಟಿಕೆಯಲ್ಲಿ ಅಭಯ ಹಸ್ತವನ್ನು ತೋರುತ್ತಿರುವ ಸತಿಯ ಕೈಯನ್ನು ಚಿತ್ರಿಸಲಾಗಿದೆ. ಈ ಪರಂಪರೆ ವಿಜಯನಗರ ಕಾಲದ ಆರಂಭ ಹಂತದಲ್ಲಿ ಪ್ರಾರಂಭಗೊಂಡು ಅಂತ್ಯದವರೆಗೆ ಈ ರೀತಿಯ ಅಭಯ ಹಸ್ತವನ್ನು ಹೊಂದಿರುವ ಸತಿಗಲ್ಲುಗಳು ನೆಡುವ ಪದ್ಧತಿ ಬೆಳೆದು ಬಂದಿರಬೇಕು.

೩.೩.೭ ನಿಷಿಧಿ ಶಾಸನ ಶಿಲ್ಪಗಳು

ಸಂಸ್ಕೃತದಲ್ಲಿ "ನಿಷೇದಿಕಾ" ಪ್ರಾಕೃತದಲ್ಲಿ 'ನಿಸಿಹಿಯಾ' ಎಂದು ಕರೆಯುತ್ತಾರೆ.[೧೪೬] ನಿಷಿಧಿ ಎಂದರೆ ಕುಳಿತಿರುವದು ಎಂದರ್ಥ ಆಹಾರವನ್ನು ಸೇವಿಸದೆ ದೇಹತ್ಯಾಗ ಮಾಡಿದವರ ನೆನಪಿಗೋಸ್ಕರ ನಿಲ್ಲಿಸಿದ ಕಲ್ಲುಗಳಿಗೆ ನಿಷಿಧಿಗಳೆನ್ನುವರು.[೧೪೭] ಸಲ್ಲೇಖನ ವೃತ, ಸಮಾಧಿ ಮರಣ ಹೊಂದಿದ ಜೈನಮುನಿಗಳ ಸ್ಮಾರಕಗಳೇ ನಿಷಿಧಿಕಲ್ಲುಗಳಾಗಿವೆ.[೧೪೮] ನಿಷಿಧಿಗಲ್ಲುಗಳಲ್ಲಿ ಸಂಬಂದ ಪಟ್ಟ ಅರಸನು ಧಾರ್ಮಿಕ ಪ್ರವಚನ ಆಲಿಸುತ್ತಿರುವದಾಗಿಯೂ ನಂತರ ನಿರ್ವಾಣ ಹೊಂದಿದಾಗಿಯೂ, ಸ್ವರ್ಗದಲ್ಲಿ ಚಾಮರದಾರಿಯರೂ, ಯಕ್ಷರು, ಆತನನ್ನು ಗೌರವಿಸುವಂತೆ ಚಿತ್ರಿಸಲಾಗುತ್ತದೆ. ಪ್ರಸ್ತುತ ಕುಮಟಾ ತಾಲೂಕಿನಲ್ಲಿ ಕಂಡುಬಂದಿರುವ ಇಂತಹ ನಿಷಿಧಿಗಲ್ಲುಗಳ ಪ್ರಸ್ತಾವನೆ ಇಲ್ಲಿ ಮಾಡಲಾಗಿದೆ.

ಕುಮಟಾ ಪಾರ್ಶ್ವನಾಥ ಬಸದಿಯ ಆವರಣದಲ್ಲಿರುವ ನಿಷಿಧಿ ಶಾಸನ ಶಿಲ್ಪ. ಕ್ರಿ.ಶ ೧೨೬೬ಕ್ಕೆ ಸೇರಿದೆ. ಈ ಶಾಸನವು ಮೂಲಸಂಘ, ದೇಶಿಗಣ, ಪುಸ್ತಕಗಚ್ಛದ ಕುಂದ ಕುದಾನ್ವಯಕ್ಕೆ ನಾಗಚಂದ್ರದೇವನು ಆರಾದನಾ ವಿಧಿಯಿಂದ ಸಾವನಪ್ಪಿದನೆಂದು ತಿಳಿಸುತ್ತದೆ.[೧೪೯]

ಕತಗಾಲ, ಹೈಸ್ಕೂಲ ಆವರಣದಲ್ಲಿರುವ ನಿಷಿಧಿ ಶಿಲ್ಪ. ಕ್ರಿ.ಶ. ೧೩-೧೪ ನೇ ಶತಮಾನಕ್ಕೆ ಸೇರಿದ್ದು, ಕ್ಲೊರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ. ರಾಜಕುಟುಂಬದ ಸದಸ್ಯ ಸಲ್ಲೇಖನ ವೃತವನ್ನು ಆಚರಿಸಲು ಕುಳಿತಂತೆ ನಿರೂಪಿಸಲಾಗಿದ್ದು ನಿಷೀದಿಯ ಮೇಲ್ಭಾಗದಲ್ಲಿ ಜೈನತೀರ್ಥಂಕರ ಪದ್ಮಾಸನದಲ್ಲಿ ಕುಳಿತಿರುವ ಜಿನಶಿಲ್ಪವಿದೆ. ಈ ಜಿನಶಿಲ್ಪದ ಮೇಲೆ ಮುಕ್ಕೋಡೆಯ ಚಿತ್ರಣವಿದೆ.

ವಾಲಗಳ್ಳಿ, ಬಸದಿಯ ಹೊರಗೆ ಇರುವ ನಿಷಿಧಿ ಶಿಲ್ಪ. ಕ್ರಿ.ಶ. ೧೯ ನೇ ಶತಮಾನಕ್ಕೆ ಸೇರಿದ್ದು, ಕ್ಲೋರೈಟಿಕ್ ಸಿಸ್ಟನಿಂದ ಮಾಡಲ್ಪಟ್ಟಿದೆ.ಸ್ಥಳೀಯವಾಗಿ ವೀರಗಲ್ಲು ಎಂದು ಪೂಜಿಸಲ್ಪಡುತ್ತಿರುವ ಈ ಶಿಲ್ಪವು ಪ್ರತಿಮಾಲಕ್ಷಣಗಳಿಂದ ಮಹಾವೀರನ ಶಿಲ್ಪವಾಗಿರುತ್ತದೆ. ಈ ಶಿಲ್ಪದಲ್ಲಿ ಮಹಾವೀರ ಕಾರ್ಯೋತ್ಸರ್ಗ ಭಂಗಿಯಲ್ಲಿ ನಿಂತಿದ್ದು ಅವನ ಅಕ್ಕಪಕ್ಕದಲ್ಲಿ ಸಹಚರರಾದ ಯಕ್ಷ-ಯಕ್ಷಿಯರನ್ನು ಚಿತ್ರಿಸಲಾಗಿದೆ. ಈ ಶಿಲ್ಪದ ಪ್ರಭಾವಳಿಯಲ್ಲಿ ೨೩ ತೀರ್ಥಂಕರರ ಬಿಂಬಗಳಿವೆ.

ಒಟ್ಟಾರೆ ಈ ಅಧ್ಯಾಯದಿಂದ ಕಂಡುಬರುವ ಅಂಶವೇನೆಂದರೆ ದೊರೆತಿರುವ ಶಾಸನಗಳಲ್ಲಿ ಅತಿ ಹೆಚ್ಚಿನವು ದಾನಶಾಸನಗಳಾಗಿವೆ. ಇವು ದೇವಾಲಯಗಳ ಸ್ಥಾಪನೆಗೆ, ಜೀರ್ಣೋದ್ಧಾರಕ್ಕಾಗಿ, ಧೂಪ, ದೀಪ,ನೈವೇದ್ಯಕ್ಕಾಗಿ ಕೊಟ್ಟಂತಹ ದಾನಗಳಾಗಿವೆ. ಈ ದಾನಶಾಸನಗಳಲ್ಲಿ ಅರವತ್ತಮೂರು ಶೈವದಾನಶಾಸನಗಳು ದೊರೆತಿದ್ದು ಇವೇ ಅಧಿಕವಾದವುಗಳಾಗಿವೆ. ಗಾಣಪತ್ಯ ದೇವಾಲಯಕ್ಕೆ ದಾನನೀಡಿದ ಏಳು ಶಾಸನಗಳು. ಶಾಕ್ತದೇವಾಲಯಕ್ಕೆ ದಾನನೀಡಿದ ಎರಡು ಶಾಸನಗಳು, ವೈಷ್ಣವ ದೇವಾಲಯಕ್ಕೆ ದಾನನೀಡಿದ ಮೂರು ಶಾಸನಗಳು, ಸತ್ರಗಳಿಗೆ ದಾನನೀಡಿದ ಐವತ್ತು ಶಾಸನಗಳನ್ನು ಇಲ್ಲಿ ದಾಖಲಿಸಲಾಗಿದೆ.

ದಾನಶಾಸನಗಳ ನಂತರ ಈ ಪ್ರದೇಶದಲ್ಲಿ ಸ್ಮಾರಕ ಶಾಸನಗಳು ಕಂಡುಬರುತ್ತವೆ. ಹನ್ನೊಂದು ವೀರಗಲ್ಲು ಶಾಸನಗಳು ಈ ತಾಲೂಕಿನಲ್ಲಿ ದೊರೆತಿವೆ. ವೀರಗಲ್ಲು ಶಿಲ್ಪಗಳಲ್ಲಿ ಹೆಚ್ಚಿನ ಮಟ್ಟಿಗೆ ಮೂರು ಪಟ್ಟಿಕೆಗಳಿಂದ ಆರು ಪಟ್ಟಿಕೆಗಳುಳ್ಳ ಬೃಹದಾಕಾರವಾದ ವೀರಗಲ್ಲುಗಳು ಇವೆ. ಉದಾ: ದಿವಗಿ, ಧಾರೇಶ್ವರ.

ಒಂದು ತುರುಕಾಳಗ ಈ ಪ್ರದೇಶದಲ್ಲಿ ದೊರೆತಿದ್ದು ಪ್ರಾಚೀನಕಾಲದಲ್ಲಿ ಗೋವುಗಳು ಸಂಪತ್ತಿನ ಮೂಲವಾಗಿದ್ದವು. ಇವುಗಳನ್ನು ಕದ್ದೊಯ್ಯಲು ಶತ್ರುಪಕ್ಷದವರು ಮತ್ತು ದರೋಡೆಕಾರರು ಸದಾ ಸಿದ್ಧರಾಗುತ್ತಿದ್ದರು.ಇಂತಹವರಿಂದ ಜನಸಾಮಾನ್ಯರನ್ನು ರಕ್ಷಿಸಿಹೋರಾಟದಲ್ಲಿ ಪ್ರಾಣಕಳೆದುಕೊಳ್ಳುತ್ತಿದ್ದರು. ಈ ವೀರನ ನೆನಪಿಗಾಗಿ ಸ್ಮಾರಕಗಳನ್ನು ನೆಡುತ್ತಿದ್ದರು. ಉದಾ: ಗೋಕರ್ಣ ಮಹಾಬಲೇಶ್ವರ ದೇವಾಲಯದ ಆವರಣದಲ್ಲಿರುವ ವೀರಗಲ್ಲಿನಲ್ಲಿ ಯೋಧನೊಬ್ಬ ಹಸುಗಳನ್ನು ರಕ್ಷಿಸಲು ಹೋರಾಡುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ. ಮಡಿದ ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುವ ದೃಶ್ಯ ನಿರೂಪಿಸಲಾಗಿದೆ.


ಎಂಟು ಶಾಸನರಹಿತ ವೀರಗಲ್ಲುಗಳ ಬಗ್ಗೆ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ವೀರನ ಹೋರಾಟದ ದೃಶ್ಯ ಇತರರಿಗೆ ತಿಳಿಯಲೆಂದು, ಜೀವತ್ಯಾಗ ಮಾಡಿದ ವೀರನಿಗೆ ಸ್ವರ್ಗಪ್ರಾಪ್ತಿಯಾಗಲೆಂದು ಅದರಲ್ಲಿ ಶಿವಲಿಂಗ, ನಂದಿ ಮತ್ತು ಪದ್ಮಾಸನದಲ್ಲಿ ಕುಳಿತ ವೀರನನ್ನು ಚಿತ್ರಿಸಲಾಗಿದೆ ಮೇಲ್ಭಾಗದಲ್ಲಿ ಕೀರ್ತಿಮುಖ ಮತ್ತು ಮಕರತೋರಣದ ಅಲಂಕಾರವಿದೆ. ಇವುಗಳೆಲ್ಲಾ ಕ್ರಿ.ಶ. ೧೨ನೇ ಶತಮಾನಕ್ಕೆ ಸೇರುತ್ತವೆ. ಉದಾ: ಧಾರೇಶ್ವರದ ವೀರಗಲ್ಲಿನಲ್ಲಿ ಈ ಮಾದರಿಯನ್ನು ಕಾಣುತ್ತೇವೆ.

ವ್ಯಕ್ತಿಪ್ರಾಣಿಗಳ ಹೋರಾಟದ ಒಂದು ಶಾಸನರಹಿತ ವೀರಗಲ್ಲು ಬಂಕಿಕೊಡ್ಲ ಗ್ರಾಮದ ಅಮ್ಮನವರ ದೇವಸ್ಥಾನದ ಮುಂದೆ ದೊರೆತಿದೆ. ವೀರನು ತನ್ನ ಸೈನಿಕರ ಸಹಾಯದೊಂದಿಗೆ ಆನೆಯೊಂದಿಗೆ ಸೆಣಸಾಡುವ ದೃಶ್ಯವಿದೆ. ಏಳು ಮಹಾಸತಿ ಶಿಲ್ಪಗಳು ಈ ಪ್ರದೇಶದಲ್ಲಿ ದೊರೆತಿವೆ. ಅವುಗಳಲ್ಲಿ ವೀರನು ಶತ್ರುಗಳೊಂದಿಗೆ ಹೋರಾಡುತ್ತಾ ಸಾವನಪ್ಪಿದಾಗ ಆತನ

ಪತ್ನಿಯರು ಸತಿ ಹೋಗುವದನ್ನು ಶಿಲ್ಪದ ಮೂಲಕ ತೋರಿಸಲಾಗಿದೆ. ಕೆಲವೊಂದು ಮಹಾಸತಿ ಶಿಲ್ಪಗಳಲ್ಲಿ ಅಭಯಹಸ್ತ ಮತ್ತು ಮಹಾಸತಿಯ ಸಂಕೇತವಾಗಿ ಸಹಸ್ರಪದ್ಮದಳಗಳನ್ನು ಶಿಲ್ಪಿಯು ಚಿತ್ರಿಸಿದ್ದಾನೆ. ಸ್ತಂಬದ ಮೇಲೆ ಗುಮ್ಮಟದಂತೆ, ಸ್ತಂಬದ ಕೆಳಗಿನ ಪಟ್ಟಿಕೆಯಲ್ಲಿ ಸತಿ–ಪತಿಯರು ಕುಳಿತಂತೆ , ಮೇಲಿನ ಪಟ್ಟಿಕೆಯಲ್ಲಿ ಲಿಂಗ ಮತ್ತು ಸೂರ್ಯ ಚಂದ್ರರ ಸಂಕೇತಗಳಿವೆ. ಎರಡು ನಿಷಿಧಿಗಲ್ಲುಗಳು ಇಲ್ಲಿ ದೊರೆತಿದ್ದು ಜೈನಧರ್ಮದ ಯತಿಗಳು ಸಲ್ಲೇಖನ ವಿಧಿಯಿಂದ ಪ್ರಾಣತ್ಯಾಗ ಮಾಡಿದ್ದರ ನೆನಪಿನ ದ್ಯೋತಕವಾಗಿ ನಿಲ್ಲಿಸಲ್ಪಟ್ಟ ಸ್ಮಾರಕಗಳಾಗಿವೆ. ಉದಾ: ಕತಗಾಲ,ವಾಲಗಳ್ಳಿಗಳಲ್ಲಿನ ಸ್ಮಾರಕ ಶಿಲ್ಪಗಳು ಆಗಿನ ಕಲೆಯನ್ನು ಶಿಲ್ಪದ ಮೂಲಕ ಬಿಂಬಿಸಿವೆ.

ಶಾಸನಗಳ ವೈವಿಧ್ಯತೆ

೧	ದಾನಶಾಸನಗಳು	೧೨೫
೨	ವೀರಗಲ್ಲು	೨೧
೩	ಮಾಸ್ತಿಗಲ್ಲು	೦೬
೪	ನಿಷದಿಗಲ್ಲು	೦೨



ಅಡಿ ಟಿಪ್ಪಣಿಗಳು

೧. ಹಿರೇಮಠ ಎಸ್, ಎಂ., "ಶಾಸನ ಪರಿಭಾಷೆ", ೨೦೦೫, ಪು.೧.

೨. Encyclopedia Britanica, Vol -12 , ಪು. ೩೯೩.

೩. ಕಲಬುರ್ಗಿ ಎಂ.ಎಂ ., "ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು", ೧೯೮೦, ಪು ೩-೪.

೪. ಪಿ.ಬಿ. ದೇಸಾಯಿ., "ಕನ್ನಡ ನಾಡಿನ ಶಾಸನಗಳು", ಪು. ೨೭.

೫. ಕೆಳದಿ ಗುಂಡಾಜೋಯಿಸ್, ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ ಗೋಕರ್ಣ ಇತಿಹಾಸ ಶಾಸನಗಳು, ಭಾಗ-೧, ೨೦೦೮, ಶಾ.ಸಂ ೩, ಪು. ೩೫.

೬. ಕೆಳದಿ ಗುಂಡಾಜೋಯಿಸ್, ಅದೇ, ಭಾಗ-೨, ೨೦೦೯, ಶಾ.ಸಂ. ೧೭೭, ಪು. ೧೩೬-೧.

೭. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮ ಶಾ. ಸಂ. ೯೦, ಪು. ೧೩೫-೧೩೬.

೮. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ ೧೭೨, ಪು. ೧೨೬-೧೨೭.

೯. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ, ೧೯೫, ಪು, ೧೭೫-೧೭೬.

೧೦. ಎ.ಆರ್.ಎಸ್.ಐ.ಇ, ೧೯೩೯-೪೦, ನಂ ೯೬.

೧೧. ಎಚ್. ಆರ್. ರಘುನಾಥ ಭಟ್, ಗೋಕರ್ಣದ ಉಮಾಮಹೇಶ್ವರ ಪ್ರಭಾವಳಿ ಶಾಸನ, Journal of Karnatak university ಸಂ.೨೩, ಪು. ೩೯-೪೩.

೧೨. ಗಣಪತಿಗೌಡ ಎಸ್, ಮೈನರ್ ಡೈನಾಸಿಸ್ಟ ಆಪ್ ಉತ್ತರಕನ್ನಡ ರೀಜನ್ (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೧೯೯೩, ಶಾ.ಸಂ, ೧೩, ಪು. ೩೯೮.

೧೩. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ,೧೪೫ ಪು. ೭೭-೭೮.

೧೪. ಎ.ಆರ್.ಎಸ್.ಐ.ಇ, ೧೯೩೯-೪೦, ನಂ. ೧೦೫.

೧೫. ಶಾಸನ ಅಧ್ಯಯನ, ಸಂ.೮, ಸಂಚಿಕೆ ೨, ಜುಲೈ-ಡಿಸೆಂಬರ ೨೦೧೧, ಪು ೧೮-೨೫.

೧೬. ಎ.ಆರ್.ಎಸ್.ಐ.ಇ, ೧೯೩೯-೪೦, ನಂ. ೧೦೬.

೧೭. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ ೨೫, ಪು. ೬೧-೬೩.

೧೮. ಡಿ.ಎಲ್.ಎಸ್.ಸಿ.ಐ, ೧೯೪೧-೪೨, ನಂ.೬೮

೧೯. ಎ.ಆರ್.ಎಸ್.ಐ.ಇ, ೧೯೩೯-೪೦, ನಂ.೧೦೧.

೨೦. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೦೫, ಪು.೬-೭.

೨೧. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ ೩, ಪು. ೩೫.

೨೨. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ.೧೪, ಪು. ೪೮.

೨೩. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೫೪, ಪು. ೯೨-೯೪.

೨೪. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೧೬, ಪು. ೨೪-೨೫.

೨೫. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೧೧, ಪು. ೧೬-೧೭.

೨೬. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೦೮, ಪು. ೧೧-೧೩.

೨೭. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೦೭, ಪು. ೯-೧೧.

೨೮. ಎ.ಆರ್.ಎಸ್.ಐ.ಇ, ೧೯೩೯-೪೦, ನಂ.೧೦೪.

೨೯. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೬೯, ಪು.೧೧೮–೧೨೦.

೩೦. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ ೩೫, ಪು. ೭೩–೭೪.

೩೧. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ. ೪೬, ಪು. ೮೬–೮೭.

೩೨. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೭೯, ಪು. ೧೩೯–೧೪೦.

೩೩. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೭೯,ಪು.೧೩೯–೧೪೦.

೩೪. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ. ೨೪,ಪು. ೫೯–೬೧

೩೫. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೦೬, ಪು.೮–೯

೩೬. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ ೫೩, ಪು. ೯೩

೩೭. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೮೩, ಪು. ೧೪೬–೧೪೮.

೩೮. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ. ೨೨, ಪು. ೫೭–೫೮.

೩೯. ಎ.ಆರ್.ಎಸ್.ಐ.ಇ ೧೯೩೯–೪೦, ನಂ. ೧೧೨, ಪು. ೨೩೬–೨೩೭.

೪೦. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೩೭,ಪು. ೬೩–೬೬.

೪೧. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ. ೯೦, ಪು. ೧೩೫–೧೩೬.

೪೨. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೧೮, ಪು. ೨೮–೨೯.

೪೩. ಪ್ರಕಟಣೆ–ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ. ೧, ಪು. ೨.

೪೪. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೫೯, ಪು. ೧೦೧–೧೦೨.

೪೫. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ. ೫ ಪು. ೩೮–೩೯.

೪೬. ಡಿ.ಎಲ್.ಎಸ್.ಸಿ.ಐ ೧೯೪೧–೪೨, ನಂ. ೬೩, ಪು. ೩೮–೩೯.

೪೭. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೮೫, ಪು. ೧೫೦–೧೫೨.

೪೮. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೩೨, ಪು. ೫೫–೫೭.

೪೯. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೧೦, ಪು. ೧೫–೧೬.

೫೦. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೪೮, ಪು. ೮೨–೮೩.

೫೧. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ೧೭೨, ಪು. ೧೨೬–೧೨೭.

೫೨. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ೧೯೫, ಪು. ೧೭೪–೧೭೫.

೫೩. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ. ೭, ಪು. ೪೦–೪೧.

೫೪. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧ , ೨೦೦೮, ಶಾ.ಸಂ. ೯ .ಪು. ೪೨–೪೩.

೫೫. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨ ,೨೦೦೯ ಶಾ.ಸಂ. ೧೮೭ ,ಪು. ೧೫೭–೧೫೯.

೫೬. ಕೆಳದಿ ಗುಂಡಾ ಜೋಯಿಸ್, ಶಾ.ಸಂ ೧೬, ಪು. ೧೧೯–೧೨೧.

೫೭. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೯, ಶಾ.ಸಂ. ೮, ಪು.೪೧–೪೨.

೫೮. ಕೆಳದಿ ಗುಂಡಾ ಜೋಯಿಸ್, ಭಾಗ–೨, ೨೦೦೯, ಶಾ.ಸಂ. ೧೮೬, ಪು.೧೫೨–೧೫೭.

೫೯. ಕೆಳದಿ ಗುಂಡಾ ಜೋಯಿಸ್, ರಾಮಚಂದ್ರಪುರದ ರಾಜಮಾನ್ಯ ಇತಿಹಾಸಶಾ.ಸಂ. ೨೦ಪು.೧೩೨–೧೩೩.

೬೦. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ. ೨ ಪು. ೩೪.

೬೧. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೫೫, ಪು. ೯೪–೯೬

೬೨. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ. ೧೨, ಪು. ೪೬–೪೭.

೬೩. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ ೧೮, ಪು. ೫.

೬೪. ಕೆ.ಜಿ.ಭಟ್‌ಸೂರಿ., ಧಾರಾನಾಥ ದೇವಾಲಯ, ೧೯೯೬, ನಂ.೩.

೬೫. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೧೯೧, ಪು. ೧೬೭–೧೬೯.

೬೬. ಕೆ.ಜಿ ಭಟ್ ಸೂರಿ., ಧಾರನಾಥ ದೇವಾಲಯ ೧೯೯೬, ನಂ.೪.

೬೭. ಕೆ.ಜಿ ಭಟ್ ಸೂರಿ, ಧಾರನಾಥ ದೇವಾಲಯ, ೧೯೯೬, ಅನುಬಂಧ ೨, ನಂ.೩.

೬೮. ಕೆ.ಜಿ ಭಟ್ ಸೂರಿ, ಧಾರನಾಥ ದೇವಾಲಯ ೧೯೯೬, ನಂ.೪.

೬೯. ಎ.ಆರ್.ಎಸ್.ಐ.ಇ ೧೯೩೯–೪೦, ನಂ. ೧೧೮.

೭೦. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೨, ೨೦೦೯, ಶಾ.ಸಂ. ೨೦೨, ಪು. ೧೮೫–೧೮೬.

೭೧. ಎಚ್.ಎಚ್.ಭಟ್ಟ, ಕರಾವಳಿ ಕರ್ನಾಟಕದ ಉತ್ತರ ಭಾಗದ ಶಾಸನಗಳು (ಅಪ್ರಕಟಿತ ಪಿ ಎಚ್.ಡಿ ಪ್ರಬಂಧ) ೨೦೦೫, ಶಾ.ಸಂ. ೧೯೬, ಪು. ೩೬೬.

೭೨. ಕೆಳದಿ ಗುಂಡಾ ಜೋಯಿಸ್, ಪೂರ್ವೋಕ್ತ, ಭಾಗ–೧, ೨೦೦೮, ಶಾ.ಸಂ ೯೦, ಪು. ೧೪೦–೧೪೨.

೭೩. ಡಿ.ಎಲ್.ಎಸ್.ಸಿ.ಐ, ೧೯೪೧–೪೨, ಶಾ.ಸಂ ೯೧, ಎ.ಆರ್.ಎಸ್.ಐ.ಇ, ೧೯೩೯–೪೦, ೪೨–೪೩, ಶಾ.ಸಂ ೧೦೦, ಪು. ೨೩೬–೨೩೭.

೭೪. ಗಣಪತಿ ಗೌಡ ಎಸ್, ಮೈನರ್ ಡೈನಾಸಿಸ್ಟ ಆಫ ಉತ್ತರಕನ್ನಡ ರೀಜನ್ (ಅಪ್ರಕಟಿತ ಪಿಎಚ್.ಡಿ, ಪ್ರಬಂಧ) ೧೯೯೩, ಶಾ.ಸಂ. ೧೧, ಪು. ೩೮೫.

೭೫. ಕೆಳದಿ ಗುಂಡಾ ಜೋಯಿಸ್, ಅದೇ, ಭಾಗ–೧, ೨೦೦೮, ಶಾ.ಸಂ. ೧೧೯, ಪು. ೧೩–೧೪.

೭೬. ಇತಿಹಾಸ ದರ್ಶನ, ಸಂ. ೧೯, ಪು. ೬೬–೬೯, ಗಣಪತಿ ಗೌಡ ಎಸ್, ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ೨೦೦೮, ಪು. ೧೪೮–೧೪೯.

೭೭. ಇತಿಹಾಸ ದರ್ಶನ, ಸಂ.೧೯, ಪು. ೬೩–೬೬ ಗಣಪತಿ ಗೌಡ ಎಸ್., ಪೂರ್ವೋಕ್ತ, ೨೦೦೮, ಪು.೧೪೮–೧೪೯

೭೮. ಎ.ಆರ್.ಐ.ಇ ೧೯೩೯–೪೦, ೪೨–೪೩, ನಂ.೧೫, ಪು. ೧೪೭, ಎಚ್.ಎಚ್.ಭಟ್. ಕರಾವಳಿ ಕರ್ನಾಟಕದ ಉತ್ತರ ಭಾಗದ ಶಾಸನಗಳು (ಪಿಎಚ್.ಡಿ ಅಪ್ರಕಟಿತ ಶಾಸನ) ಅ.ನಂ ೪೬, ಪು. ೨೭೮–೨೯೮.

೭೯. ಎ.ಆರ್.ಐ.ಇ ೧೯೩೯-೪೦, ೪೨-೪೩, ನಂ. ೧೦೫.

೮೦. ಡಿ.ಎಲ್.ಎಸ್.ಸಿ.ಐ ೧೯೪೧-೪೨, ನಂ.೬೮.

೮೧. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ ೧೩೩, ಪು. ೫೭- ೫೮.

೮೨. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ. ೭೪, ಪು.೧೧೬-೧೧೭.

೮೩. ಎ.ಆರ್.ಎಸ್.ಸಿ.ಐ, ೧೯೩೯-೪೦, ನಂ.೧೦೬.

೮೪. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ. ೨೫, ಪು. ೬೧-೬೩.

೮೫. ಎ.ಆರ್.ಎಸ್.ಐ.ಎ ೧೯೩೯-೪೦,ಶಾ.ಸಂ ೧೦೮

೮೬. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨,೨೦೦೯, ಶಾ.ಸಂ.೧೩೪, ಪು. ೫೯-೬೦.

೮೭. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೨೨, ಪು. ೩೪-೩೬.

೮೮. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೨೩, ಪು. ೩೬-೩೮.

೮೯. ಕೆಳದಿ ಗುಂಡಾಜೋಯಿಸ್,ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೯೦, ಪು.೧೬೧-೧೬೭.

೯೦. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೪೧, ಪು. ೭೧-೭೨.

೯೧. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೧೧, ಪು. ೧೬-೧೮.

೯೨. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೧೭, ಪು. ೨೫-೨೮.

೯೩. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೦೭, ಪು. ೯-೧೦.

೯೪. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೧೧, ಪು. ೧೮-೨೦.

೯೫. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೧೩, ಪು. ೨೦-೨೧.

೯೬. ಎ.ಆರ್.ಎಸ್.ಐ.ಇ ೧೯೩೯-೪೦, ನಂ. ೧೦೪.

೯೭. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ. ೪೯, ಪು. ೮೯-೯೦.

೯೮. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ.೧೬೮, ಪು.೧೧೨-೧೧೩.

೯೯. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ.೧೬೬, ಪು.೧೧೩-೧೧೫.

೧೦೦. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ.೧೨೪, ಪು. ೩೮-೪೦.

೧೦೧. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೮೨, ಪು. ೧೪೪-೧೪೭.

೧೦೨. ಎ.ಆರ್.ಎಸ್.ಇ, ೧೯೩೯-೪೦, ನಂ. ೧೦೯.

೧೦೩. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೬೪, ಪು. ೧೧೧-೧೧೨.

೧೦೪. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ. ೧೦೧, ಪು. ೧.

೧೦೫. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ. ೧೦೨, ಪು. ೨-೩.

೧೦೬. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ ಭಾಗ-೧, ೨೦೦೮, ಶಾ.ಸಂ. ೧೨೧, ಪು. ೩೨-೩೪.

೧೦೭. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ. ೧೪೨, ಪು. ೭೨-೭೪.

೧೦೮. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ ಭಾಗ-೧, ೨೦೦೮, ಶಾ.ಸಂ.೪೮, ಪು. ೮೮-೮೯.

೧೦೯. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೧೫, ಪು. ೨೨-೨೪.

೧೧೦. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೨೭, ಪು. ೪೩-೪೪.

೧೧೧. ಡಿ.ಎಲ್.ಎಸ್.ಸಿ.ಐ, ೯೪೧-೪೨, ಶಾ.ಸಂ. ೯೧, ಎ.ಆರ್.ಎಸ್.ಐ.ಎ ೧೯೩೯-೪೦, ೪೨-೪೩ ಶಾ.ಸಂ ೧೦೦, ಪು. ೨೩೬-೨೩೭.

೧೧೨. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ. ೧೫, ಪು. ೪೮-೫೦.
೧೧೩. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ. ೩೭, ಪು. ೭೫-೭೬.
೧೧೪. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೩೭, ಪು. ೬೩-೬೬.
೧೧೫. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೫೩, ಪು. ೯೦-೯೨.
೧೧೬. ಡಿ.ಎಲ್.ಎಸ್.ಸಿ.ಐ, ೧೯೪೧-೪೨, ನಂ.೬೩.
೧೧೭. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ.೪, ಪು. ೩೬-೩೭.
೧೧೮. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ.೮೫, ಪು. ೧೩೦-೧೩೧.
೧೧೯. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೧೧, ಪು. ೩-೪.
೧೨೦. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೨೦, ಪು. ೩೧-೩೨.
೧೨೧. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೪೪, ಪು. ೭೬-೭೭.
೧೨೨. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ. ೬೨, ಪು.೧೦೫-೧೦೬
೧೨೩. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೫೨, ಪು. ೮೭-೯೦
೧೨೪. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೧೫೨, ಪು. ೯೭-೯೮.
೧೨೫. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ. ೪೨, ಪು. ೮೦-೮೧
೧೨೬. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೧, ೨೦೦೮, ಶಾ.ಸಂ. ೫೦, ಪು. ೯೦-೯೧
೧೨೭. ಕೆ.ಜಿ. ಭಟ್ಟಸೂರಿ, ಧಾರನಾಥ ದೇವಾಲಯ, ಧಾರೇಶ್ವರ, ಅನುಬಂಧ-೨, ಶಾ.ಸಂ. ೩, ೧೯೯೬,
೧೨೮. ಎ.ಆರ್.ಐ.ಇ ೧೯೪೭-೪೮, ನಂ.೨೩೮, ಎಚ್.ಎಚ್.ಭಟ್ ಕರಾವಳಿ ಕರ್ನಾಟಕದ ಉತ್ತರ ಭಾಗದ ಶಾಸನಗಳು ೨೦೦೫ (ಪಿಎಚ್.ಡಿ ಅಪ್ರಕಟಿತ ಪ್ರಬಂಧ), ಅ.ನಂ ೨೫, ಪು.೨೬೯.
೧೨೯. ಎ.ಆರ್.ಐ.ಇ ೧೯೪೭-೪೮, ನಂ.೨೪೦, ಎಚ್.ಎಚ್. ಭಟ್ ಪೂರ್ವೋಕ್ತ, ಅ.ನಂ. ೨೬, ಪು.೨೭೦.
೧೩೦. ಎ.ಆರ್.ಐ.ಇ ೧೯೪೭-೪೮, ನಂ.೨೪೨.
೧೩೧. ಎ.ಆರ್.ಐ.ಇ ೧೯೪೭-೪೮, ನಂ.೨೪೧ ಎಚ್.ಎಚ್.ಭಟ್ ಪೂರ್ವೋಕ್ತ, ಅ.ನಂ. ೨೮, ಪು. ೨೭೧.
೧೩೨. ಡಿ.ಎಲ್.ಎಸ್.ಸಿ.ಐ, ೧೯೪೧-೪೨, ನಂ.೨೮.
೧೩೩. ಶೇಷಾಶಾಸ್ತ್ರಿ ಆರ್., "ಕರ್ನಾಟಕದ ವೀರಗಲ್ಲುಗಳು", ಶಾಸನ ಪರಿಚಯ, ೧೯೮೨, ಪು. ೧೯.
೧೩೪. ಅದೇ, ಪು. ೭೧.
೧೩೫. ಎಚ್.ಎಚ್.ಭಟ್ಟ ಪೂರ್ವೋಕ್ತ, ಪು. ೩೬೪.
೧೩೬. ಕೆ.ಜಿ.ಭಟ್‌ಸೂರಿ, ಧಾರನಾಥ ದೇವಾಲಯಧಾರೇಶ್ವರ, ೧೯೯೬, ಪು.೨೪.
೧೩೭. ಗೋಪಾಲಕೃಷ್ಣ ಡಿ. ರಾಯ್ಕರ, ಹೊಸಾಡ ವೀರಗಲ್ಲು ಶಾಸನ ಹೊಸಶೋಧ.
೧೩೮. ಗೋಪಾಲಕೃಷ್ಣ ಡಿ. ರಾಯ್ಕರ, ಹೊಸಾಡ ವೀರಗಲ್ಲು ಶಾಸನ ಹೊಸಶೋಧ.
೧೩೯. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪು.೧೨೪.
೧೪೦. ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಭಾಗ-೨, ೨೦೦೯, ಶಾ.ಸಂ ೧೭೮, ಪು. ೧೩೮-೧೩೯.
೧೪೧. ಗಣಪತಿ ಗೌಡ ಎಸ್, ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, ೨೦೦೮ ಪು. ೧೪೮-೧೪೯.
೧೪೨. ಗಣಪತಿ ಗೌಡ ಎಸ್, ಪೂರ್ವೋಕ್ತ, ೨೦೦೮, ಪು. ೧೪೮-೧೪೯.

೧೪೩. ಚಿದಾನಂದಮೂರ್ತಿ ಎಂ., "ಮಾಸ್ತಿಕಲ್ಲು", ೧೯೮೪, ಪು. ೧೫.

೧೪೪. ಪರಮಶಿವಮೂರ್ತಿ ಡಿ ವಿ., "ಕರ್ನಾಟಕದ ಶಾಸನ ಶಿಲ್ಪ", ೧೯೯೯, ಪು. ೧೩೮.

೧೪೫. ಚಿದಾನಂದ ಮೂರ್ತಿ ಎಂ., ಪೂರ್ವೋಕ್ತ, ೧೯೮೪, ಪು. ೧೬.

೧೪೬. ಚಿದಾನಂದ ಮೂರ್ತಿ ಎಂ., "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ೧೯೭೯, ಪು. ೯೮.

೧೪೭. ನರಸಿಂಹಮೂರ್ತಿ ಎ.ವಿ., "ಕರ್ನಾಟಕದ ಶಾಸನ ಸಂಪತ್ತು", ೧೯೭೩, ಪು. ೫೧.

೧೪೮. ಶ್ರೀನಿವಾಸ ರಿತ್ತಿ,(ಸಂ) "ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ", ೨೦೦೦, ಪು. ೧೮.

೧೪೯. ಎ.ಆರ್.ಐ.ಇ ೧೯೪೭-೪೮, ನಂ. ೨೩೯ ಎಚ್.ಎಚ್.ಭಟ್ ಪೂರ್ವೋಕ್ತ, ಅ.ನಂ. ೩೦, ಪು.೨೭೧.

ಅಧ್ಯಾಯ ನಾಲ್ಕು

ದೇವಾಲಯಗಳು

ಪೀಠಿಕೆ

"ಅಮರ್ತ್ಯಾಶ್ಚೈವ ಮರ್ತ್ಯಾಶ್ವಯತ್ರ ಯತ್ರ ವಸಂತಿ ಹಿ ತದ್ವಸ್ತು ಇತಿಮತಂ" ಮಯಮತ ಗ್ರಂಥವು ವಾಸ್ತುಶಬ್ದವನ್ನು ಈ ರೀತಿ ಅರ್ಥೈಸಿದೆ. ಅಂದರೆ ಮೃರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಾಸ್ತು ಎಂದು ಹೆಸರು. ವಸ್ತುವನ್ನು ಆಶ್ರಯಿಸಿದ್ದೆ ವಾಸ್ತು ಎಂದೆನಿಸಲ್ಪಡುತ್ತದೆ.[೧] ವಾಸ್ತುಕಲೆ ಆರವತ್ತ ನಾಲ್ಕು ಕಲೆಗಳಲ್ಲಿ ಒಂದಾಗಿದೆ. ಮಾನಸಾರ ಕೃತಿಯಲ್ಲಿ ಬ್ರಹ್ಮನ ನಾಲ್ಕು ಮುಖಗಳಿಂದ ಜನಿಸಿದ ವಿಶ್ವಕರ್ಮ,ಮಯ, ತೃಷ್ಟ್ರ, ಮತ್ತು ಮನುವಿನ ಸುಪುತ್ರರಾದ ಸ್ಥಪತಿ, ಸೂತ್ರಗಾಹಿ, ವರ್ಧಕಿ, ಮತ್ತು ತಕ್ಷಕರು ವಾಸ್ತು ಕಲೆ ಬೆಳೆಸಿದರು.[೨] ವಾಸ್ತು ಪುರುಷನು ಆಕಾಶದಿಂದ ತನ್ನ ಕೈಕಾಲುಗಳನ್ನು ಮಡಚಿಕೊಂಡು ಈಶಾನ್ಯಕ್ಕೆ ತಲೆಯನ್ನು ಮಾಡಿ ಭೂಮಿಯ ಮೇಲೆ ಬಿದ್ದಾಗ ಚತುಷ್ಕೋಣಾಕಾರವಾಗಿ ವಾಸ್ತು ಮಂಡಲ ನಿರ್ಮಾಣವಾಯಿತು. ಅವನ ಹೃದಯದಲ್ಲಿ ಬ್ರಹ್ಮ, ಮತ್ತು ಇತರೆ ಅಂಗಗಳಲ್ಲಿ ಎಲ್ಲ ದೇವತೆಗಳು ನೆಲೆಸಿದರು.[೩]

ಮನುಷ್ಯನು ವಾಸಿಸುವ ಕಟ್ಟಡವಾದರೂ ಸರಿ, ದೇವರು ಇರುವ ಕಟ್ಟಡವಾದರೂ ಸರಿಇಲ್ಲಿ ವಾಸ್ತು ಪದ ಬಳಕೆಯಾಗುತ್ತದೆ. ದೇವಾಲಯ ಎಂದರೆ ದೇವರು ಇರುವ ಆಲಯ ಎಂದರ್ಥ. ಆಲಯ ಎಂದರೆ ಕಟ್ಟಡ, ಅಂದರೆ ದೇವರು ಇರುವ ಸ್ಥಾನ.[೪] ದೇವಾಲಯಗಳು ಧಾರ್ಮಿಕ ಶ್ರದ್ಧೆಯ ಪ್ರಮುಖ ಕೇಂದ್ರ. ಇದಕ್ಕೆ ತನ್ನದೇ ಆದ ಸಂಸ್ಕೃತಿ ಪರಂಪರೆ ಇದೆ. ದೇವಾಲಯಗಳು ಜನರ ಭಕ್ತಿ ಮತ್ತು ನಿಷ್ಠೆಗಳ ಪ್ರತೀಕವಾಗಿವೆ. ದೇವಾಲಯ ಮೂಲತಃ ಪೂಜಾಗೃಹಗಳಾಗಿ, ಮಾನವನ ಬದುಕಿನಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿವೆ. ಎಲ್ಲಾ ಧರ್ಮಗಳಲ್ಲೂ ದೇವಾಲಯಗಳಿಗೆ ವಿಶಿಷ್ಟ ಸ್ಥಾನವಿದೆ.[೫]

೪.೧ ದೇವಾಲಯಗಳ ಉಗಮ ಮತ್ತು ಬೆಳವಣಿಗೆ

ಮನುಷ್ಯನು ತನ್ನ ಕಣ್ಣಿಗೆ ಕಾಣದ, ತನಗಿಂತ ಬಲಿಷ್ಟವೆಂದು ತಿಳಿದ, ಮುನಿದರೆ ಕೆಡಕನ್ನು, ಒಲಿದರೆ ಒಳಿತನ್ನು, ಮಾಡುವುದೆಂದು ತಿಳಿದಿರುವ ಅಗೋಚರ ಶಕ್ತಿಯ (ದೇವರ) ಭಯವೊ ಭಯಮಿಶ್ರಿತ ಗೌರವವೋ, ಇದು ಪೂಜೆಗೆ ಕಾರಣವಾಗಿರಬೇಕು. ಆದಿ ಮಾನವ ಕಂಡ ಪ್ರಕೃತಿಯ ವೈಚಿತ್ರಗಳಾದ ಮಿಂಚು, ಬೆಳಕು, ಸೂರ್ಯ, ಚಂದ್ರ, ಬೆಂಕಿ, ಕೇಳಿದ ಗುಡುಗು, ಭೀತಿಗೆ ಕಾರಣವಾದ ಸಾವು, ನೋವು, ಭೂಕಂಪ ಪ್ರವಾಹ ಇತ್ಯಾದಿಗಳೆಲ್ಲವೂ ಮನುಷ್ಯನ ಮನಸ್ಸನ್ನು ಅದ್ಭುತ ಆಶ್ಚರ್ಯ, ವಿಸ್ಮಯ, ಭಯ, ಭಾವನೆಗಳಿಂದ ಆಕ್ರಮಿಸಿ ಆಭಾವನೆಗಳಿಗೆ ತಕ್ಕಂತೆ ಗೌರವ, ಪೂಜೆಗಳು ನೀಡಲು ಆರಂಭಗೊಂಡಿರಬೇಕು.[೬] ಬಹುಶಃ ಈ ಎಲ್ಲಾ ಕಾರಣದಿಂದ ದೇವಾಲಯಗಳು ನಿರ್ಮಾಣವಾಗಿರಬೇಕು.

ದೇವಾಲಯಗಳು ಯಾವಾಗ ಹೇಗೆ ನಿರ್ಮಾಣ ಮಾಡಲಿಕ್ಕೆ ಪ್ರಾರಂಭಿಸಿದರು? ಎನ್ನುವುದರ ಬಗ್ಗೆ ನಿಖರವಾಗಿ ಹೇಳುವುದು ಕಷ್ಟ. ದೇವಾಲಯಗಳು ವೇದಕಾಲದ ಯಜ್ಞ ವೇದಿಕೆಗಳಿಂದ ಆರಂಭವಾದವೇ? ಸಮಾಧಿ ಮಂದಿರಗಳಾಗಿ ಬೆಳೆದು ಬಂದವೇ? ದೇವಾಲಯಗಳು ಬೌದ್ಧ ಸ್ತೂಪಗಳಿಂದ ಉಗಮವಾದವೇ? ಇಂತಹ ಹಲವಾರು ಪ್ರಶ್ನೆಗಳ ಕುರಿತು ವಿದ್ವಾಂಸರಲ್ಲೇ ಜಿಜ್ಞಾಸೆಗಳಿವೆ.[೭] ಆದರೂ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಬೋಳೆಯಲ್ಲಿ ಕ್ರಿ.ಶ. ೧ನೇ ಶತಮಾನಕ್ಕೆ ಸಂಬಂಧಿಸಿದ ಇಟ್ಟಿಗೆಯಿಂದ ನಿರ್ಮಾಣವಾಗಿದ್ದ ದೇವಾಲಯವಿದ್ದು ಇದು ಕರ್ನಾಟಕದ ಅತಿ ಪ್ರಾಚೀನವಾದ ದೇವಾಲಯಕ್ಕೆ ಸಾಕ್ಷಿಯಾಗಿದೆ.[೮] ಇದರಿಂದ ಕ್ರಿ.ಶ. ೧ನೇ ಶತಮಾನದಿಂದಲೇ ದೇವಾಲಯ ನಿರ್ಮಾಣ ಮಾಡಲಿಕ್ಕೆ ಆರಂಭಿಸಿರಬೇಕು.

೪.೨ ದೇವಾಲಯಗಳ ಪ್ರಭೇದಗಳು

ಈ ನಾಡಿನಲ್ಲಿ ವೈವಿಧ್ಯಮಯ ದೇವಾಲಯಗಳ ನಿರ್ಮಾಣಕ್ಕೆ ಪ್ರಾಕೃತಿಕ ಪರಿಸರ, ಜನರ ಅಭಿರುಚಿ, ಮತ್ತು ಆಳ್ವಿಕೆ ನಡೆಸಿದ ಬನವಾಸಿ ಕದಂಬರಿಂದ ವಿಜಯನಗರದ ಅರಸರ ಪ್ರೋತ್ಸಾಹ, ಶಿಲ್ಪಿಗಳ ಕೈಚಳಕ ಇದರಿಂದ ಆಯಾ ಪ್ರದೇಶದಲ್ಲಿ ದೇವಾಲಯಗಳ ನಿರ್ಮಾಣ ಕಲೆ ಉಗಮಗೊಂಡು ವಿಕಾಸಗೊಂಡ ಹಲವು ಶೈಲಿಯ ದೇವಾಲಯಗಳು ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಕೆಲವೊಂದು ಪ್ರಮುಖ ಶೈಲಿಯ ಲಕ್ಷಣಗಳನ್ನು ಪ್ರಸ್ತುತ ಅಧ್ಯಯನ ಹಿನ್ನೆಲೆಯ ದೃಷ್ಟಿಯಿಂದ ಇಲ್ಲಿ ಪ್ರಸ್ತಾಪಿಸಲಾಗಿದೆ.

೪.೨.೧ ದ್ರಾವಿಡಶೈಲಿ

ದ್ರಾವಿಡಶೈಲಿ ಎಂದರೆ ಕಂಠದಿಂದ ಮೇಲಕ್ಕೆ ಅಷ್ಟಾಶ್ರವಾಗಿರುವುದು ಎಂದು ಅಜಿತಾಗಮ ಕೃತಿಯಲ್ಲಿ ಇದೆ. ಅಧಿಷ್ಠಾನದಿಂದ ಸ್ತೂಪಿಯವರೆಗೆ ಆರು ಅಥವಾ ಎಂಟು ಕೋನವಾಗಿರುವುದು. ಕೆಳಗೆ ಆರು ಅಥವಾ ಎಂಟು ಕೋನಗಳಾದರೆ ಮೇಲ್ಗಡೆ ಆಯತಾಕಾರ ಅಥವಾ ಎಂಟು ಕೋನವಾಗಿರುತ್ತದೆ. ಇವು ದ್ರಾವಿಡ ಶೈಲಿಯ ದೇವಾಲಯಗಳ ಲಕ್ಷಣವಾಗಿದೆ.[೯] ಈ ಶೈಲಿಯಲ್ಲಿ ಶಿಖರವು ಮೇಲಕ್ಕೆ ಹೋದಂತೆ ಕ್ರಮೇಣ ಮೆಟ್ಟಿಲಾಗಿ ಕಿರಿದಾದ ಅಂತಸ್ತುಗಳಿಂದ ಕೂಡಿರುತ್ತವೆ. ಪ್ರತಿಯೊಂದು ಅಂತಸ್ತನ್ನು ಪ್ರತಿನಿಧಿಸಲು ಬಾಗುಕಪೋತಗಳಿರುತ್ತವೆ.[೧೦] ಇದು ದಕ್ಷಿಣ ಭಾತರದಲ್ಲಿನ ಜನಪ್ರಿಯ ಶೈಲಿಯ ಲಕ್ಷಣಗಳಾಗಿವೆ.

೪.೨.೨ ನಾಗರಶೈಲಿ

ತಲವಿನ್ಯಾಸದಲ್ಲಿ ಚಚ್ಚೌಕವಾಗಿದ್ದು ಮೇಲಣ ರೂಪದಲ್ಲಿ ಸಣ್ಣದಾಗುತ್ತ ಹೋಗುತ್ತದೆ. ಆರಂಭದಲ್ಲಿ ಈ ಶೈಲಿಯಲ್ಲಿ ಒಂದೇ ಶಿಖರವನ್ನು ಹೊಂದಿದ ದೇವಾಲಯಗಳು ಕಂಡು ಬರುತ್ತದೆ. ಇನ್ನೊಂದು ವಿಧದ ನಾಗರ ಶೈಲಿ ಇದು ಭೂಮಿಯಿಂದ ಸ್ತೂಪಿಯವರೆಗೆ

ಚತುರಸ್ರವಾಗಿರುವುದು ಎಂದು ಅಜಿತಾಗಮದಲ್ಲಿದೆ. ಕೆಳಗಿನಿಂದ ಮೇಲಕ್ಕೆ ಹೋದಂತೆ ಬಾಗಿದ ರೇಖೆಯಂತಹ ರಚನೆಯಾಗಿರುವುದರಿಂದ ಇದನ್ನು "ರೇಖಾನಾಗರ ಶೈಲಿ"ಎಂತಲೂ ಕರೆಯುತ್ತಾರೆ. ಈ ಶೈಲಿಯ ದೇವಾಲಯದ ಹೊರಭಾಗ ಪೀಠ, ಭಿತ್ತಿ, ಶಿಖರ, ಅಮಲಕ ಕಲಶವನ್ನೊಳಗೊಂಡಿರುತ್ತದೆ. ಶಿಖರದ ಮೂಲೆಯಲ್ಲಿ ಹಂತ ಹಂತವಾಗಿ ಕೂಟದಂತಹ ರಚನೆಯಿದ್ದು ಶಿಖರದ ತುದಿಯಲ್ಲೂ ಚಪ್ಪಟೆ ವೃತ್ತಾಕಾರದ ಅಂಚುಗಳನ್ನು ಅರೆಗೊಳವಿನಾಕಾರದಲ್ಲಿ ಕಂಡರಿಸಿದ ಅಮಲಕವಿರುತ್ತದೆ.[೧೧]

೪.೨.೩ ವೇಸರ ಶೈಲಿ

ನಾಗರ ಮತ್ತು ದ್ರಾವಿಡ ಶೈಲಿಗಳ ಮಿಶ್ರಣವೇ ವೇಸರಶೈಲಿ. ಈ ಶೈಲಿಯ ದೇವಾಲಯಗಳು ವಿಂಧ್ಯ ಪರ್ವತದಿಂದ ಕೃಷ್ಣಾ ನದಿಯವರೆಗೆ ಹರಡಿಕೊಂಡಿವೆ.[೧೨] ಇದರ ಲಕ್ಷಣಗಳನ್ನು ಅಜಿತಾಗಮದಪ್ರಕಾರ ಉಲ್ಲೇಖಿಸಲಾಗಿದೆ. ಅವುಗಳೆಂದರೆ ಕಂಠದಿಂದ ಮೇಲಕ್ಕೆ ವೃತ್ತಾಕಾರವಾಗಿರುತ್ತದೆ. ಕಾಶ್ಯಪರವರ ಶಿಲ್ಪ ಕೃತಿಯ ಪ್ರಕಾರ ಕಂಠ ಹಾಗೂ ಶಿಖರ ಭಾಗ ವೃತ್ತಾಕರವಾಗಿದ್ದಲ್ಲಿ ಅದು ವೇಸರ ಶೈಲಿ ಎಂದಿದ್ದಾರೆ. ಮಾನಸಾರ ಕೃತಿ ಕೆಳಭಾಗ ವೃತ್ತಾಕಾರ ಕಂಠದಿಂದ ಮೇಲಕ್ಕೆ ಚತುರಸ್ರ ರಚನೆಯೇ ವೇಸರ ಶೈಲಿಯಾಗಿದೆ.[೧೩]

೪.೨.೪ ಕಳಿಂಗ ಶೈಲಿ

ಈ ಶೈಲಿ ಓರಿಸ್ಸಾ ಪ್ರದೇಶದಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿದ್ದುದು ಕಂಡು ಬರುತ್ತದೆ. ಪ್ರಸ್ತುತ ಕರ್ನಾಟಕದಲ್ಲಿ ಅದರಲ್ಲೂ ಹೆಚ್ಚಾಗಿ ಕದಂಬ ನಾಗರಶೈಲಿಯೇ ಹೆಚ್ಚು ಪ್ರಚಲಿತವಿದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಉತ್ತರಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಬೋಳೆಯಲ್ಲಿ ಕ್ರಿ.ಶ. ಸುಮಾರು ೧ನೇ ಶತಮಾನದ ಇಟ್ಟಿಗೆ ದೇವಾಲಯ ಶೋಧನೆಯಾಗಿದೆ.[೧೪] ಇದು ಉತ್ತರಕನ್ನಡದ ಮೊದಲ ದೇವಾಲಯದ ಕುರುಹು ಎನ್ನಬಹುದಾಗಿದೆ. ಬನವಾಸಿ ಕದಂಬ ಮನೆತನ ಕಾಲದಲ್ಲಿನ ಶಿಲಾ ದೇಗುಲಗಳು, ಗುಹಾಲಯ ಮಾದರಿಯಲ್ಲಿ ಮತ್ತು ರಾಚನಿಕ ದೇವಾಲಯಗಳ ಮಾದರಿಯಲ್ಲಿ ಬೆಳೆದು ಬಂದ ಕಾಲಘಟ್ಟವನ್ನು ಶಿಲಾ ವಸ್ತುವಿನ ಆರಂಭವೆನ್ನಬಹುದು[೧೫]. ಹೀಗೆ ಆಯಾ ಪ್ರದೇಶದಲ್ಲಿ ಉಗಮಗೊಂಡ ಹಲವು ಶೈಲಿಯ ದೇವಾಲಯಗಳು ಕನ್ನಡ ನಾಡಿನಲ್ಲಿ ಇವೆ.

ಪ್ರಸ್ತುತ ಕುಮಟಾ ತಾಲೂಕು ದೇವಾಲಯಗಳಿಗೆ ಸಂಬಂಧಿಸಿದಂತೆ ಕುಮಟಾ ತಾಲೂಕು ದೇವಾಲಯಗಳ ಕಾಶಿಯೆಂದರೂ ತಪ್ಪಾಗಲಾರದು. ಕುಮಟಾದಲ್ಲಿ "ದಕ್ಷಿಣಕಾಶಿ" ಎಂದು ಹೆಸರಾದ ಗೋಕರ್ಣವು ಐತಿಹಾಸಿಕ ಮಹತ್ವವನ್ನು ಹೊಂದಿದೆ. ಇಲ್ಲಿಯ ಮಹಾಬಲೇಶ್ವರ ದೇವಾಲಯ, ಧಾರೇಶ್ವರದ ಆದಿಧಾರೇಶ್ವರ, ಧಾರನಾಥ ದೇವಾಲಯ, ಕುಮಟಾದ ಕುಂಭೇಶ್ವರ ದೇವಾಲಯ, ಬಂಕಿಕೊಡ್ಲದ ಬಂಕನಾಥೇಶ್ವರ, ಮಾಸೂರದ

ಬಬ್ರಲಿಂಗೇಶ್ವರ, ಹನಿಹಳ್ಳಿಯ ಮುರ್ಕುಂಡಿ ದೇವಸ್ಥಾನ, ಕಲ್ಲಬ್ಬೆಯ ನಂದಿಕೇಶ್ವರ ದೇವಾಲಯ, ಗೋಕರ್ಣದ ಗಣಪತಿ ದೇವಾಲಯ, ಊಳ್ಳುರುಮಠದ ಗಣಪತಿ ದೇವಾಲಯ, ಗೋಕರ್ಣದ ತಾಮ್ರಗೌರಿ, ಭದ್ರಕಾಳಿ, ಸ್ಮಶಾನಕಾಳಿ ದೇವಾಲಯಗಳು, ಬಾಡ ಕಾಂಚಿಕಾ ಪರಮೇಶ್ವರಿ, ನೀಲಕೋಡದ ವನದುರ್ಗಾ, ನಾಡುಮಾಸ್ಕೇರಿಯ ಗಂಗಾಮಾತಾ, ಬಸ್ತಿಕೇರಿಯ ಜೈನಬಸದಿ, ಕಲಕೇರಿ ಜೈನಬಸದಿ ಅತ್ಯಂತ ಪ್ರಾಚೀನ ದೇವಾಲಯಗಳಾಗಿವೆ.

೪.೩ ಬೌದ್ಧ ಧರ್ಮ

ಭಾರತದಲ್ಲಿ ಬೌದ್ಧ ಧರ್ಮ ಪ್ರಸಾರ ಕಾರ್ಯವನ್ನು ಮೌರ್ಯ ದೊರೆ ಅಶೋಕನು ಆರಂಭಿಸಿದನು. ಈ ವಿಷಯವನ್ನು ಬೌದ್ಧ ಗ್ರಂಥಗಳಾದ ದೀಪವಂಶ ಮತ್ತು ಮಹಾವಂಶ ತಿಳಿಸುತ್ತವೆ.ಅಶೋಕನ ಕಾಲದಲ್ಲಿ ೩ನೇ ಬೌದ್ಧ ಸಮ್ಮೇಳನವು ಪಾಟಲಿಪುತ್ರದಲ್ಲಿ ನಡೆಯಿತು. ಈ ಸಮ್ಮೇಳನದ ನಂತರ ಬೌದ್ಧಧರ್ಮ ಪ್ರಸಾರಕ್ಕಾಗಿ ಉತ್ತರಕನ್ನಡ ಜಿಲ್ಲೆಯ ಬನವಾಸಿಗೆ ರಕ್ಷಿತ ಬೌದ್ಧ ಭಿಕ್ಷುವನ್ನು ಕಳುಹಿಸಿಲಾಯಿತು. ಹೀಗೆ ಬೌದ್ಧಧರ್ಮ ಉತ್ತರಕನ್ನಡ ಜಿಲ್ಲೆಯಲ್ಲಿ ನೆಲೆಸಿತು.

ಪ್ರಸ್ತುತ ಕುಮಟಾ ತಾಲೂಕಿಗೆ ಸಂಬಂಧಿಸಿದಂತೆ ಇಲ್ಲಿ ದೊರೆತ ಶಾಸನಗಳಿಂದ ಬೌದ್ಧ ಧರ್ಮ ಅಸ್ತಿತ್ವದಲ್ಲಿತ್ತೆಂದು ಹೇಳಬಹುದು. ಹಿರೇಗುತ್ತಿ ಗ್ರಾಮದಲ್ಲಿ ಸಿಕ್ಕಿರುವ ಕ್ರಿ.ಶ. ೬ನೇ ಶತಮಾನದ ಭೋಜ ದೊರೆ ಅಶಂಕಿತನ ರಾಜನ ತಾಮ್ರಶಾಸನ ಈ ಪ್ರದೇಶದಲ್ಲಿ ಬೌದ್ಧ ಧರ್ಮ ಅಸ್ತಿತ್ವದಲ್ಲಿತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಈ ಶಾಸನ ಸಂಸ್ಕೃತ ಭಾಷೆ ಮತ್ತು ಕನ್ನಡ ಲಿಪಿಯಲ್ಲಿದ್ದು ಅದರಲ್ಲಿ ಬುದ್ಧನ ಪ್ರಾರ್ಥನೆಯೊಂದಿಗೆ ಆರಂಭಗೊಳ್ಳುತ್ತದೆ.ಭೋಜ ದೊರೆ ಅಶಂಕಿತ, ಮಾಂಡಲೀಕ ಅರಸ ಕೈಕೇಯ ವಂಶದ ಕೊಟ್ಟಿ ಪೆಗ್ಗಿಲಿಯ ವಿನಂತಿಯ ಮೇರೆಗೆ ತಾನು ಕಟ್ಟಿಸಿದ ಬೌದ್ಧ ವಿಹಾರಕ್ಕೆ ದೀಪಕ ವಿಷಯದಲ್ಲಿ ಸುಂದರಿಕಾಗ್ರಾಮವನ್ನು ದತ್ತಿಯಾಗಿ ನೀಡಿದ್ದನ್ನು ವಿವರಿಸುತ್ತದೆ.[೧೬] ಪ್ರಸ್ತುತ ಕುಮಟಾ ತಾಲೂಕಿನಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಯಾವುದೇ ಸ್ತೂಪಗಳು ಈವರೆಗೆ ಕಂಡುಬಂದಿಲ್ಲ.

೪.೪ ಜೈನ ಬಸದಿಗಳು

ಜೈನಧರ್ಮ ಕರ್ನಾಟಕದಲ್ಲಿ ಕ್ರಿ.ಪೂ ಕಾಲದಿಂದಲೇ ಇತ್ತು. ಎಂಬುದಕ್ಕೆ ಶಾಸನ ಮತ್ತು ಸಾಹಿತ್ಯಿಕ ಆಧಾರಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಜೈನ ತೀರ್ಥಂಕರರೆಲ್ಲರೂ ಉತ್ತರಭಾರತದಲ್ಲಿ ಜನಿಸಿದರು. ಜೈನಶಾಸ್ತ್ರಗ್ರಂಥಗಳನ್ನು ರಚಿಸಿದ ಆಚಾರ್ಯರಲ್ಲಿ ಹೆಚ್ಚಿನವರು ಕರ್ನಾಟಕದವರು. ವೈದಿಕ ಮತ್ತು ಬೌದ್ಧ ಧರ್ಮಗಳ ಸಮಕಾಲಿನ ಸಾಹಿತ್ಯಗಳಲ್ಲಿಯೂ ಜೈನ ಧರ್ಮದ ಉಲ್ಲೇಖಗಳಿವೆ.[೧೭] ಜೈನಧರ್ಮದ ಮೊದಲನೆಯ ತೀರ್ಥಂಕರನಾದ ವೃಷಭನಾಥನ ನಿರ್ವಾಣದ ನಂತರ ಆತನ ಪ್ರಥಮ ಸುಪುತ್ರ ಭರತ ಚಕ್ರವರ್ತಿ ಕೈಲಾಸ ಪರ್ವತದಲ್ಲಿ ಒಂದು ಚೈತ್ಯ, ನಿರ್ಮಿಸಿದನೆಂದು

ಜಿನಸೇನಾಚಾರ್ಯರ ಪೂರ್ವಪುರಾಣದಲ್ಲಿ ಬರುವ ಪ್ರಸ್ತಾಪವೇ ಈ ಧರ್ಮದ ವಾಸ್ತು ನಿರ್ಮಾಣ ಪ್ರಥಮ ನಿದರ್ಶನ[೧೮] ಈ ಧರ್ಮದ ವಾಸ್ತು ನಿರ್ಮಾಣಕ್ಕೆ ಸಂಬಂಧಿಸಿದಂತೆ ಮೌರ್ಯ ಪ್ರಸಿದ್ಧ ಚಕ್ರವರ್ತಿ ಅಶೋಕ ಮತ್ತು ಆತನ ಮೊಮ್ಮಗ ದಶರಥನು ಅಜೀವಿಕ ಪಂಥದ ಮುನಿಗಳ ಆಶ್ರಯಕ್ಕಾಗಿ ಗುಹಾಲಯಗಳನ್ನು ಖಂಡರಿಸಿದ್ದಾರೆ.[೧೯]

ಪ್ರಾಚೀನ ಕರ್ನಾಟಕದಲ್ಲಿ ಶ್ರವಣಬೆಳಗೊಳ, ಬನವಾಸಿ, ಕೊಪ್ಪಳ, ಹಲಸಿ ಮುಂತಾದ ಕಡೆಗಳಲ್ಲಿ ಜೈನ ಕೇಂದ್ರಗಳು ಪ್ರವರ್ಧಮಾನಕ್ಕೆ ಬಂದವು. ರಾಜಾಶ್ರಯ ದೊರೆತಿದ್ದರಿಂದ ಜೈನ ಧರ್ಮ ಅಂದು ಈ ಭಾಗದಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂದಿತು. ಈ ಧರ್ಮದ ಪ್ರಾಚೀನತೆ ಕ್ರಿ.ಶ ಸುಮಾರು ೪ನೇ ಶತಮಾನದಿಂದ ಗುರುತಿಸಬಹುದಾದರೂ ಇದರ ವಾಸ್ತು ನಿರ್ಮಾಣ ಕ್ರಿ.ಪೂ. ೪-೫ನೇಯ ಶತಮಾನದಿಂದ ಕಂಡು ಬರುತ್ತವೆ ಪ್ರಸ್ತುತ ಕುಮಟಾ ತಾಲೂಕಿನ ಬಸ್ತಿಕೇರಿಯಲ್ಲಿ ಮತ್ತು ಚಂದಾವರದಲ್ಲಿ ಜೈನಬಸದಿಗಳಿದ್ದು ಇವೆಲ್ಲವೂ ಸುಮಾರು ೧೧-೧೨ನೇ ಶತಮಾನಕ್ಕೆ ಸಂಬಂಧಿಸಿದಾಗಿವೆ.[೨೦] ಆದರೆ ಈಗ ಕುಮಟಾ ಬಸ್ತಿಕೇರಿಯಲ್ಲಿರುವ ಬಸದಿಯನ್ನು ಜೀರ್ಣೋದ್ಧಾರ ಮಾಡಲಾಗಿದ್ದು. ಬಸದಿಯಲ್ಲಿರುವ ಪಾರ್ಶ್ವನಾಥನ ಉಬ್ಬುಶಿಲ್ಪವು ಮೂಲಸಂಘ ಸೂರಸ್ತಗಣ ಚಿತ್ರಕೂಟಗಚ್ಛದ ಮುಕುಂದದೇವನು ಪ್ರತಿಷ್ಠಾಪಿಸಿದನೆಂದಿದೆ.[೨೧] ಚಂದಾವರದಲ್ಲಿ ಖಡ್ಗಾಗಸನದಲ್ಲಿರುವ ತೀರ್ಥಂಕರನ ಉಬ್ಬುಶಿಲ್ಪವಿದೆ. ಸಂತೆಗುಳಿ ಹತ್ತಿರವಿರುವ ಬಸ್ತಿಕೇರಿಯಲ್ಲಿ ಒಂದು ತೀರ್ಥಂಕರನ ಮತ್ತು ಶ್ರಾವಕಿಯ ಮೂರ್ತಿಯಿದೆ.

ಕುಮಟಾ ತಾಲೂಕಿನ ಹಿರೇಗುತ್ತಿ ಗ್ರಾಮದಲ್ಲಿ ಒಂದು ಜಿನ ವಿಗ್ರಹವಿದ್ದು ಈ ಸ್ಥಳವನ್ನು ಅಲ್ಲಿನ ಜನರು ಜೈನ ಬಸದಿ ಎಂದು ಕರೆಯುತ್ತಾರೆ. ಇದಕ್ಕೆ ಸಾಕ್ಷಿಯೆಂಬಂತೆ ಬಸದಿಯ ಅಧಿಷ್ಠಾನದ ಭಾಗವೂ ಅಲ್ಲಿದೆ. ಆದರೆ ಪ್ರಸ್ತುತ ಅಲ್ಲಿ ಬಸದಿ ಇಲ್ಲ ಕುಮಟಾ ತಾಲೂಕಿನಲ್ಲಿ ಎರಡು ಜೈನ ಬಸದಿಯಿದ್ದು ಬಸದಿಯ ಪ್ರಸ್ತಾವನೆಯನ್ನು ಇಲ್ಲಿ ಸೆರೆಹಿಡಿಯಲಾಗಿದೆ.

೧) ಹೆಸರು – **ಪಾರ್ಶ್ವನಾಥ ಬಸದಿ**
ಸ್ಥಳ – ಬಸ್ತಿಪೇಟೆ ಕುಮಟಾ
ಕಾಲ – ಕ್ರಿ.ಶ. ೨೦-೨೧ನೇ ಶತಮಾನ
ವಸ್ತು – ಜಂಬಿಟ್ಟಿಗೆ (ಲೆಟರೈಟ್)
ಅಳತೆ – ೫೨.೪ಮೀ ಉದ್ದ, ೨೯.೩ ಮೀ ಅಗಲ

ಕುಮಟಾ ಬಸ್‌ನಿಲ್ದಾಣದಿಂದ ೨ಕಿ.ಮೀ ದೂರದಲ್ಲಿ ಬಸದಿಯಿದೆ. ಪ್ರಸ್ತುತ ಜೀರ್ಣೋದ್ಧಾರವಾಗಿದೆ. ಈ ಬಸದಿಯು ಉತ್ತರಾಭಿಮುಖವಾಗಿದ್ದು, ಗರ್ಭಗೃಹ, ಪ್ರದಕ್ಷಿಣಾಪಥವನ್ನು ಹೊಂದಿದೆ. ಗರ್ಭಗೃಹದಲ್ಲಿ ಪಾರ್ಶ್ವನಾಥನ ಮೂರ್ತಿ ಮತ್ತು ಆದಿನಾಥ ಮೂರ್ತಿ ಇದೆ. ಬಸದಿಯ ಹೊರಭಾಗ ಅಧಿಷ್ಠಾನ, ಭಿತ್ತಿಯನ್ನೊಳಗೊಂಡಿದೆ.

೨) ಹೆಸರು – ಶಾಂತಿನಾಥ

ಸ್ಥಳ – ಕಲಕೇರಿ

ಕಾಲ – ಕ್ರಿ.ಶ.೨೦–೨೧ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೭.೪೦ ಮೀ ಉದ್ದ, ೭.೪೦ ಮೀ. ಅಗಲ

ಕುಮಟಾದಿಂದ ೩ ಕಿ.ಮೀ ದೂರದಲ್ಲಿ ಕಲಕೇರಿ ಗ್ರಾಮವಿದ್ದು, ಅಲ್ಲಿ ಶಾಂತಿನಾಥ ಬಸದಿ ಇದೆ.ಇದುಕೂಡಾ ಜೀರ್ಣೋದ್ಧಾರವಾಗಿದೆ. ಗರ್ಭಗೃಹದಲ್ಲಿ ಶಾಂತಿನಾಥನ ಮೂರ್ತಿ ಇದೆ. ಈತನ ಬಲಭಾಗದಲ್ಲಿ ಯಕ್ಷ, ಎಡಭಾಗದಲ್ಲಿ ಯಕ್ಷಿಯರ ಶಿಲ್ಪವಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿಯನ್ನೊಳಗೊಂಡಿದೆ. ಹೀಗೆ ಕುಮಟಾ ತಾಲೂಕಿನಲ್ಲಿ ಜೈನಧರ್ಮ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಈ ಎರಡು ಬಸದಿಗಳು ಸಾಕ್ಷಿಯಾಗಿವೆ.

ಜೈನಬಸದಿಗಳಿಗೆ ಸಂಬಂಧಿಸಿದಂತೆ ಒಟ್ಟಾರೆಯಾಗಿ ಇಲ್ಲಿ ಜೈನ ಪಂಥವನ್ನು ನಿರ್ಲಕ್ಷಿಸಿಲ್ಲ ಎಂಬುದಕ್ಕೆ ಎರಡೇ ಜೈನಬಸದಿಗಳು ಉಳಿದುಕೊಂಡಿವೆ. ಅವು ಕುಮಟಾದ ಬಸ್ತಿಪೇಟೆಯ ಪಾರ್ಶ್ವನಾಥ ಬಸದಿ ಮತ್ತು ಕಲಕೇರಿಯ ಶಾಂತಿನಾಥ ಬಸದಿ. ಇಲ್ಲಿನ ಮೂರ್ತಿಶಿಲ್ಪಗಳ ಕಾಲ ೧೧–೧೨ನೇ ಶತಮಾನವಾದರೂ ಎರಡು ಬಸದಿಗಳು ಜೀರ್ಣೋದ್ಧಾರವಾಗಿದ್ದು ಆಧುನಿಕ ಕಾಲಕ್ಕೆ ಸೇರಿವೆ.

ಜೈನ ಬಸದಿಗಳು

ಕ್ರ.ಸಂ.	ಸ್ಥಳ	ಹೆಸರು	ಕಾಲ	ಸ್ಥಿತಿ
೧.	ಬಸ್ತಿಪೇಟೆ, ಕುಮಟಾ	ಪಾರ್ಶ್ವನಾಥ ಬಸದಿ	ಕ್ರಿ.ಶ ೨೦–೨೧ನೇ ಶತಮಾನ	ಜೀರ್ಣೋದ್ಧಾರ
೨.	ಕಲಕೇರಿ	ಶಾಂತಿನಾಥ ಬಸದಿ	ಕ್ರಿ.ಶ೨೦–೨೧ನೇ ಶತಮಾನ	ಜೀರ್ಣೋದ್ಧಾರ

೪.೫ ಗಾಣಪತ್ಯ ದೇವಾಲಯಗಳು

ಪೀಠಿಕೆ

ಪುರಾಣ ಆಗಮಗಳಲ್ಲಿ ಗಣೇಶನ ಉಲ್ಲೇಖವಿದೆ. ಪಾರ್ವತಿ ತನ್ನ ಮೈಬೆವರಿನ ಕಲ್ಮಶದಿಂದ ಮೂರ್ತಿ ಮಾಡಿ ಅದಕ್ಕೆ ಜೀವವನ್ನು ಕೊಟ್ಟಳು. ತಾನು ಸ್ನಾನ ಮಾಡಲು ಹೋಗುವಾಗ ಹೊರಗಡೆ ಕಾವಲಿಗಾಗಿ ಆ ಬಾಲಕನನ್ನು ನಿಲ್ಲಿಸಿದಳು. ಶಿವನು ಮನೆಯನ್ನು ಪ್ರವೇಶಿಸಲು ಬಂದಾಗ ಹೊರಗಡೆ ಕಾವಲು ಕಾಯುತ್ತಿದ್ದ ಬಾಲಕ ಅವನನ್ನು ತಡೆದು ನಿಲ್ಲಿಸಿದನು. ಸಿಟ್ಟಿಗೆದ್ದ ಶಿವ ಅವನ ರುಂಡ ಕತ್ತರಿಸಿದನು. ಈ ವಿಷಯ ತಿಳಿದು ಪಾರ್ವತಿ

ದುಃಖಿಸತೊಡಗಿದಾಗ ಅವಳನ್ನು ಸಮಧಾನ ಮಾಡುವ ಮಾರ್ಗವನ್ನು ಕಾಣದೇ ಆನೆಯ ತಲೆಯನ್ನು ತಂದು ಅವನ ಮುಂಡಕ್ಕೆ ಅಂಟಿಸಿ ಜೀವ ಬರುವಂತೆ ಮಾಡಿದನು. ಶಿವನು ಮಾಡಿದ ತಪ್ಪಿಗಾಗಿ ಗಣಪತಿಯನ್ನು ಗಣಗಳಿಗೆ ಅಧಿಪತಿಯನ್ನಾಗಿ ಮಾಡಿದನು. ಹೀಗೆ ಅವನು ಗಣಪತಿಯಾದನು.

ಮತ್ಸ್ಯ ಮತ್ತು ಸ್ಕಂಧ ಪುರಾಣದಲ್ಲಿ ಪಾರ್ವತಿ ತನ್ನ ಮೈಗೆ ಬಳೆದ ಅಂಗಾರವನ್ನು ಸೇರಿಸಿ ಆನೆಯ ತಲೆಯ ಆಕೃತಿ ಮಾಡಿ ಅದನ್ನು ಗಂಗೆಗೆ ಎಸೆದಳು. ಅದು ಜೀವಂತವಾಯಿತು. ಅವನಿಗೆ ವಿನಾಯಕ ಎಂದು ಹೆಸರಿಟ್ಟಳು.[೨೨] ಇವು ಗಣಪತಿಯ ಬಗ್ಗೆ ಇರುವ ಕಥೆಯಾಗಿದೆ. ಪ್ರಸ್ತುತ ಕುಮಟಾ ತಾಲೂಕಿನಲ್ಲಿರುವ ಗಣಪತಿ ದೇವಾಲಯಗಳಲ್ಲಿ ಪ್ರಮುಖವಾದ ದೇವಾಲಯಗಳ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾಗಿದೆ.

೧)	ಹೆಸರು	–	**ಶ್ರೀ ಮಹಾಗಣಪತಿ ದೇವಾಲಯ**
	ಸ್ಥಳ	–	ಗೋಕರ್ಣ, ಮಹಾಬಲೇಶ್ವರ ದೇವಾಲಯದ ಸಮೀಪವಿದೆ.
	ಕಾಲ	–	೧೦–೧೧ ನೇ ಶತಮಾನ
	ವಸ್ತು	–	ಕ್ಲೋರೈಟಿಕ್ ಸಿಸ್ಟ
	ಅಳತೆ	–	೨೪.೧೦ಮೀ ಉದ್ದ, ೯.೦೫ಮೀ ಅಗಲ

ಕುಮಟಾ ತಾಲೂಕು ಕೇಂದ್ರದಿಂದ ೩೧ ಕಿ.ಮೀ ದೂರದಲ್ಲಿ ದೇವಾಲಯ ಇದೆ. ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹ, ನವರಂಗ, ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹ ಚೌಕಾಕಾರವಿದ್ದು ಮಧ್ಯದಲ್ಲಿ ಮಹಾಗಣಪತಿ ಮೂರ್ತಿಯಿದೆ. ಗಣಪತಿ ದೇವಾಲಯದ ಒಳಗೆ ಬಲಬದಿಗೆ ಒಂದು ಚಿಕ್ಕದಾದ ಗುಡಿಯಿದ್ದು ಇಲ್ಲಿ ಕ್ಲೋರೈಟಿಕ ಸಿಸ್ಟನಿಂದ ಮಾಡಿದ ಗೋಲಾಕಾರದ ಲಿಂಗವಿದೆ. ಲಿಂಗದ ಮುಂದೆ ನಂದಿಯ ಮೂರ್ತಿಶಿಲ್ಪವಿದ್ದು.ಗರ್ಭಗೃಹ ದ್ವಾರವು ಸಂಪೂರ್ಣವಾಗಿ ಕಲ್ಲಿನಲ್ಲಿ ಮಾಡಿದ್ದಾಗಿದೆ. ನವರಂಗದಲ್ಲಿ ನಾಲ್ಕು ಸ್ತಂಭಗಳಿವೆ.

ದೇವಾಲಯವು ಸಾಂಧಾರ ಮಾದರಿಯದಾಗಿದೆ. ಸಭಾಮಂಟಪದಲ್ಲಿ ಮರದಿಂದ ಮಾಡಿದ ಸ್ತಂಭಗಳಿದ್ದು ಭೋದಿಗೆಯಲ್ಲಿ ಆನೆಯ ಶಿಲ್ಪವಿದೆ. ದೇವಾಲಯದಲ್ಲಿ ದ್ವಿಭುಜಧಾರಿಯಾಗಿ ನಿಂತ ಗಣಪತಿಯ ಶಿಲ್ಪವಿದೆ. ದೇವಾಲಯಕ್ಕೆ ಪ್ರವೇಶ ದ್ವಾರ ಇದೆ. ಯಾವುದೇ ಅಲಂಕಾರತೆ ಇಲ್ಲಿ ಇಲ್ಲ. ಪ್ರವೇಶ ದ್ವಾರದ ಎರಡು ಬದಿಗೆ ಜಾಲಂದ್ರಗಳಿವೆ. ಮತ್ತು ದ್ವಿಭುಜದಾರಿಯಾಗಿ ನಿಂತ ಗಣಪತಿ ಮೂರ್ತಿಶಿಲ್ಪ ಇದೆ.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಹಂಚಿನಿಂದ ಮಾಡಿದ ಮೇಲ್ಛಾವಣಿಯಿಂದ ಆವೃತವಾಗಿದೆ. ಮೇಲೆ ಕಲಶವಿದೆ. ಅಧಿಷ್ಠಾನ ಎತ್ತರವಾಗಿದೆ. ಭಿತ್ತಿಯ ಮಧ್ಯ ಸ್ತಂಭಗಳಿಂದ ಕೂಡಿದೆ.

ಪೂರ್ವಕ್ಕೆ ಶಂಕುವಿನ ಚಿತ್ರ. ಪಶ್ಚಿಮಕ್ಕೆ– ಕಾಳಿಂಗಮರ್ಧನ ಕೃಷ್ಣನ ಶಿಲ್ಪವಿದ್ದು. ಕೃಷ್ಣನು ಬಲಗಾಲಿನಲ್ಲಿ ಹಾವನ್ನು ತುಳಿಯುತ್ತಿದ್ದು ಎಡಗೈಯಲ್ಲಿ ಹಾವಿನ ಬಾಲವನ್ನು ಹಿಡಿದಿರುವನು. ಉತ್ತರಕ್ಕೆ– ಪಾರ್ವತಿಯ ಶಿಲ್ಪವಿದ್ದು ಚರ್ತುಭುಜಧಾರಿಯಾಗಿದ್ದಾಳೆ. ಶಂಕ, ಚಕ್ರ, ಅಭಯ, ವರದ ಮುದ್ರೆಯಲ್ಲಿದೆ. ದಕ್ಷಿಣಕ್ಕೆ– ಚಕ್ರದ ಚಿತ್ರಣವಿದೆ.

೨)	ಹೆಸರು	–	**ಪಟ್ಟ ವಿನಾಯಕ ದೇವಾಲಯ**
	ಸ್ಥಳ	–	ಕೋಟಿತೀರ್ಥದ ಸಮೀಪದಲ್ಲಿದೆ.
	ಕಾಲ	–	ಕ್ರಿ.ಶ. ೧೯–೨೦ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೇಟರೈಟ್)
	ಅಳತೆ	–	೯.೯೦ಮೀ ಉದ್ದ, ೧೧.೮೮ಮೀ ಅಗಲ

ಕುಮಟಾ ತಾಲೂಕು ಕೇಂದ್ರದಿಂದ ೩೩ ಕಿ.ಮೀ ದೂರದಲ್ಲಿ ಪಟ್ಟ ವಿನಾಯಕ ದೇವಾಲಯ ಇದೆ. ದೇವಾಲಯ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಪ್ರದಕ್ಷಿಣಾ ಪಥ ಒಳಗೊಂಡಿದೆ. ಗರ್ಭಗೃಹದಲ್ಲಿ ಪಟ್ಟ ವಿನಾಯಕ ಮೂರ್ತಿ ಇದೆ. ದೇವಾಲಯವು ಒಂದೇ ಪ್ರವೇಶದ್ವಾರವಿದೆ. ದ್ವಾರದ ಎರಡು ಬದಿಗೆ ಜಾಲಂದ್ರಗಳಿವೆ. ದೇವಾಲಯದ ದ್ವಾರಬಂದವೂ ಯಾವುದೇ ಅಲಂಕಾರಗಳಿಂದ ಕೂಡಿಲ್ಲ ದ್ವಾರಬಂದದ ಲಲಾಟ ಬಿಂಬದಲ್ಲಿ ನಾಗಬಂದ ಚಿತ್ರವಿದೆ.ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ. ಎತ್ತರವಾದ ಹೊರಭಾಗ ಅಧಿಷ್ಠಾನ ಹೊಂದಿದ್ದು. ಭಿತ್ತಿಯು ಸಪಾಟಾಗಿದೆ. ರೇಖಾನಾಗರ ಮಾದರಿಯ ಶಿಖರವಿದ್ದು. ಕವಚವನ್ನು ತಾಮ್ರದಿಂದ ಮಾಡಲಾಗಿದೆ. ಶಿಖರದ ಮೇಲೆ ಕಲಶವಿದೆ.

ಐತಿಹ್ಯ: ಋಷಿ ಮುನಿಗಳಿಗೆ ಸಂಭವಿಸಿದ ಚಿಂತೆಯನ್ನು ವಿನಾಯಕಮೂರ್ತಿ ಪರಿಹರಿಸಿದ್ದರಿಂದ ಚಿಂತಾಮಣಿ ವಿನಾಯಕ ಹೆಸರು ಬಂದಿದೆ.[೨೩] ಋಷಿ ಮುನಿಗಳಿಂದ ವಿನಾಯಕ ಮೂರ್ತಿ ಪ್ರತಿಷ್ಠಾಪಿಸಲ್ಪಟ್ಟಿದೆ. ಎಂಬುದು ಪ್ರತೀತಿ. ಆತ್ಮಲಿಂಗ ಗೋಕರ್ಣದಲ್ಲಿ ಪ್ರತಿಷ್ಠೆಯಾದ ನಂತರ ಶಿವ ಪಾರ್ವತಿಯರು ಇಲ್ಲಿಗೆ ಬಂದು ವಿನಾಯಕನಿಗೆ ಚಿನ್ನಭರಣಗಳಿಂದ ಅಲಂಕರಿಸಿ ಪೂಜೆಮಾಡಿ ಈ ಕ್ಷೇತ್ರದ ಪೂರ್ವದಿಕ್ಕನ್ನು ರಕ್ಷಿಸಲು ಪಟ್ಟವನ್ನು ಕಟ್ಟಿದ್ದರು. ಈ ಕಾರಣದಿಂದ ಗಣೇಶನಿಗೆ "ಪಟ್ಟ ವಿನಾಯಕ" ಎಂಬ ಹೆಸರು ರೂಢಿಯಲ್ಲಿದೆ.[೨೪]

೩) ಹೆಸರು – **ಕೇತಕಿ ವಿನಾಯಕ ದೇವಾಲಯ**

ಸ್ಥಳ – ತಾರಮಕ್ಕಿ ಗೋಕರ್ಣ ಬಸ್ ನಿಲ್ದಾಣದಿಂದ ೧ಕಿ.ಮೀ ದೂರದಲ್ಲಿದೆ

ಕಾಲ – ಕ್ರಿ.ಶ. ೧೯–೨೦ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೧೫.೨೪ಮೀ ಉದ್ದ, ೬.೦೯ ಮೀ ಅಗಲ

ಈ ದೇವಾಲಯ ಜೀರ್ಣೋದ್ಧಾರವಾಗಿದೆ. ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ ಒಳಗೊಂಡಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ಕೇತಕಿವಿನಾಯಕ ದೇವರ ಮೂರ್ತಿ ಇದೆ. ಹೊರಭಾಗ ಅಧಿಷ್ಠಾನ, ಭಿತ್ತಿ, ಹಾಗೂ ಹಂಚಿನ ಮೇಲ್ಛಾವಣಿಯನ್ನೊಳಗೊಂಡಿದೆ ಮೇಲೆ ಕಲಶವಿದೆ.

ಐತಿಹ್ಯ: ಒಂದು ಕಾಲದಲ್ಲಿ ಈಶ್ವರನು ಪಾರ್ವತಿಯನ್ನು ಪ್ರೀತಿಯಿಂದ ನೋಡುತ್ತಿರಲು ಅವನ ಹಣೆಯಿಂದ ಮಹಾತೇಜಸ್ಸು ಹೊರಟಿತು. ಆ ತೇಜಸ್ಸು ಕೂಡಲೇ ಈಶ್ವರ ರೂಪದ ಸುಂದರ ಬಾಲಕನ ರೂಪ ಪಡೆಯಿತು. ಬಾಲಕನನ್ನು ಈಶ್ವರನು ಆಲಂಗಿಸಿ ಮುದ್ದಿಟ್ಟು "ವಿನಾಯಕ" ಎಂಬ ಹೆಸರಿಟ್ಟನು. ಪಾರ್ವತಿ ವಿನಾಯಕನನ್ನು ನೋಡಿ ಸಂತೋಷಪಟ್ಟಳು. ಒಂದು ದಿನ ಪಾರ್ವತಿ ಈ ಹುಡುಗನನ್ನು ದೂರದಿಂದ ನೋಡಿ ತನ್ನ ಪತಿಯೆಂದ ಭಾವಿಸಿ, ಸಮೀಪಕ್ಕೆ ಬಂದ ಮೇಲೆ ಮಗನೆಂದು ತಿಳಿದು ಸಿಟ್ಟಾಗಿ ವೈರೂಪ್ಯತಾಳೆಂದು ಶಾಪಕೊಟ್ಟಳು. ಈ ಶಾಪದಿಂದ ವಿನಾಯಕನು ಹತ್ತು ಭುಜಗಳು, ಹ್ರಸ್ವವಾದ ಕೈಗಾಲು, ದೊಡ್ಡ ಹೊಟ್ಟೆಯೂ ಆಗಿ ವಿಕಾರ ರೂಪ ಪಡೆದನೆಂದಿದೆ. ಈಶ್ವರನು ಇವನನ್ನು ನೋಡಿ ಚಿಂತಿಸಿ ಗೋಕರ್ಣಕ್ಕೆ ಹೋಗಿ ತಪಸ್ಸು ಮಾಡೆಂದು ತಿಳಿಸಿದನು. ಅದರಂತೆ ವಿನಾಯಕ ತಪಸ್ಸು ಮಾಡಿದನು. ಈಶ್ವರನು ಪ್ರತ್ಯಕ್ಷನಾಗಿ ತಾಯಿಯ ಶಾಪವನ್ನು ಪರಿಹರಿಸುವದು ಸೂಕ್ತವಾದ್ದರಿಂದ ಈ ರೂಪದಿಂದಲೇ ಲೋಕ ಪೂಜ್ಯನು ಅಗೆಂದು ವರವಿತ್ತನು. ಕೇತಕಿ ಆಶ್ರಮದಲ್ಲಿ ತಪಸ್ಸು ಮಾಡಿದ್ದರಿಂದ ಕೇತಕಿ ವಿನಾಯಕನೆಂಬ ಹೆಸರಾಯಿತು. ಇಲ್ಲಿ ಶ್ರಾವಣಮಾಸ ಮತ್ತು ಮಂಗಳವಾರ ದಿವಸ ಪೂಜೆಸಿದರೆ ಕೈಕೊಂಡ ಕಾರ್ಯದಲ್ಲಿ ಸಿದ್ದಿಸುವದು ಎಂಬ ಪ್ರತೀತಿ ಇದೆ.[೨೫]

೪) ಹೆಸರು – **ಶ್ರೀ ಉಪ್ಪಿನ ಗಣಪತಿ ದೇವಾಲಯ**

ಸ್ಥಳ – ನೆಲ್ಲಿಕೇರಿ,

ಕಾಲ – ಕ್ರಿ.ಶ ೧೯–೨೦ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೧೯.೯೦ ಮೀ ಉದ್ದ, ೧೨.೪೬ಮೀ ಅಗಲ

ಕುಮಟಾ ಬಸ್‌ನಿಲ್ದಾಣದಿಂದ ಒಂದು ಕಿ.ಮೀ ದೂರದಲ್ಲಿ ಉಪ್ಪಿನ ಗಣಪತಿ ದೇವಾಲಯ ಇದೆ. ಈ ದೇವಾಲಯ ಜೀರ್ಣೋದ್ಧಾರಗೊಂಡಿದೆ. ಪ್ರಾಚೀನ ಕಾಲದಿಂದಲೂ ಕುಮಟಾ

ದೊಡ್ಡ ಬಂದರು ಆಗಿತ್ತು. ಇಲ್ಲಿಂದ ಉಪ್ಪನ್ನು ಅನ್ಯ ದೇಶಗಳಿಗೆ ಹಡಗಿನಲ್ಲಿ ರಫ್ತು ಮಾಡಲಾಗುತ್ತಿತ್ತು. ತಮ್ಮ ಉಪ್ಪಿನ ವ್ಯಾಪಾರ ನಿರ್ವಿಘ್ನವಾಗಿ ಸಾಗಲಿ ಎಂದು ವ್ಯಾಪಾರಿಗಳು, ಉಪ್ಪು ತಯಾರಕರು ಈ ಗಣಪತಿಗೆ ಉಪ್ಪಿನ ಹರಕೆ ಮಾಡುತ್ತಿದ್ದರು. ಆದ್ದರಿಂದ ಈ ಗಣಪತಿಗೆ ಉಪ್ಪಿನ ಗಣಪತಿ ಎಂದು ಹೆಸರು ಬಂದಿತೆಂಬ ಪ್ರತೀತಿ ಇದೆ.

ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗವನ್ನು ಒಳಗೊಂಡಿದೆ. ಗರ್ಭಗೃಹದ ಬಲಕ್ಕೆ ಉಪ್ಪಿನ ಗಣಪತಿ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಮಧ್ಯದಲ್ಲಿ ಶಿವಲಿಂಗವಿದೆ. ಎಡಕ್ಕೆ ಮಹಿಷಾಸುರಮರ್ಧಿನಿ ಶಿಲ್ಪವಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ. ಇಂದೂ ಸಹ ದೇವಾಲಯದ ಹೊರಗಿನ ಆವರಣದ ಎಡಭಾಗದಲ್ಲಿ ಒಂದು ದೋಣಿಯನ್ನು ಇಟ್ಟಿದ್ದು ಉಪ್ಪಿನ ಹರಕೆ ಹೊತ್ತಿದ್ದ ಭಕ್ತರು ಉಪ್ಪನ್ನು ದೇವರಿಗೆ ಅರ್ಪಿಸಿ ನಂತರ ಅದನ್ನು ದೋಣಿಗೆ ತಂದು ಹಾಕುತ್ತಾರೆ. ಇದರಿಂದ ತಮ್ಮ ಸಂಕಷ್ಟಗಳು ದೂರವಾಗುತ್ತವೆ ಎಂಬ ನಂಬಿಕೆ ಇವರಲ್ಲಿದೆ.

೫) ಹೆಸರು – **ಶ್ರೀ ಸ್ವಯಂಭೂ ವಿನಾಯಕ ದೇವಾಲಯ**

ಸ್ಥಳ – ಊರಕೇರಿ

ಕಾಲ – ಕ್ರಿ.ಶ೨೦–೨೧ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೮.೨೨ ಮೀ ಉದ್ದ, ೪.೨೬ ಮೀ ಅಗಲ

ಪ್ರಸ್ತುತ ಈ ದೇವಾಲಯ ಜೀರ್ಣೋದ್ಧಾರವಾಗಿದ್ದು ಪೂರ್ವಾಭಿಮುಖವಾಗಿದೆ. ಗರ್ಭಗೃಹ ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಸ್ವಯಂಭೂವಿನಾಯಕ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ ಮತ್ತು ಕಲಶವನ್ನು ಒಳಗೊಂಡಿದೆ. ಶಿಖರ ರೇಖಾನಾಗರ ಶೈಲಿಯನ್ನೊಳಗೊಂಡಿದೆ. ಪಂಚಲೋಹದಿಂದ ಮಾಡಿದ ಕಲಶ ಮೇಲಿದೆ.

ಐತಿಹ್ಯ: ಯವನಾಶ್ವ ರಾಜನ ಮಗನು ಮಾಂದಾತ. ಈತನನಿಂದ ದೇವಾಲಯ ನಿರ್ಮಾಣವಾಯಿತೆಂಬ ಪ್ರತೀತಿ ಇದೆ. ಮಾದಾಂತ ಮತ್ತು ರಾಣಿ ಇಂದುಮತಿಯರಿಗೆ ಅಂಬರೀಶ, ಮತ್ತು ಮುಚಕುಂದ ಗಂಡು ಮಕ್ಕಳಿದ್ದರೂ ದೈವಭಕ್ತಿಯುಳ್ಳವನಾಗಿದ್ದ ಮಾಂದಾತನು ಭಾರತದ ಪುಣ್ಯ ಕ್ಷೇತ್ರದ ದರ್ಶನ ಮಾಡಿದನು. ಮತ್ತು ಅನೇಕ ದೇವಾಲಯ ನಿರ್ಮಿಸಿದನೆಂಬ ಪ್ರತೀತಿ ಇದೆ.

ಯುವರಾಜನು ಪಟ್ಟಾಭಿಷೇಕಕ್ಕೆ ಯೋಗ್ಯನಾದಾಗ ಅವನಿಗೆ ಪಟ್ಟಕಟ್ಟಿ ಮಾಂದಾತರಾಜನು ರಾಣಿಯ ಜೊತೆಯಲ್ಲಿ ತೀರ್ಥಯಾತ್ರೆಗೆ ಹೊರಟನು. ಅವನ

ಜೊತೆಯಲ್ಲಿ ಅವನ ಪರಿವಾರದಲ್ಲಿನ ಕೆಲಗಣ್ಯರು ಹೊರಟರು. ಉತ್ತರ ಭಾರತದ ಎಲ್ಲ ತೀರ್ಥಕ್ಷೇತ್ರಗಳ ಸಂದರ್ಶನ ಮುಗಿದಿರಲು ದಕ್ಷಿಣದ ಕಾಶಿಯಾದ ಗೋಕರ್ಣಕ್ಕೆ ಆಗಮಿಸುತ್ತಾರೆ. ಅಲ್ಲಿಂದ ಹೊರಟ ಮಾಂದಾತನು ಕುಂದಗಣಿ ಊರನ್ನು ಪ್ರವೇಶಿಸುತ್ತಾನೆ. ಅದು ರಮಣೀಯ ಸ್ಥಳವಾಗಿದ್ದು ಎಲ್ಲರೂ ಊರಿನ ಸೌಂದರ್ಯಕ್ಕೆ ಮನಸೋಲುತ್ತಾರೆ.

ರಾಜನ ಶಿಬಿರವಿದ್ದಲ್ಲಿಗೆ ಒಬ್ಬ ವಯೋವೃದ್ಧರು ಬರುತ್ತಾರೆ. ಅವರ ಕೈಯಲ್ಲಿ ರೇಶಿಮೆ ಬಟ್ಟೆಯಿಂದ ಸುತ್ತಿದ ಮೂರ್ತಿ ಒಂದಿತ್ತು ರಾಜನಿಗೆ ನಮಸ್ಕಾರಿಸುವಾಗ ಅದು ಕೈ ಜಾರಿ ಬಿದ್ದು ಭಿನ್ನವಾಗಿತ್ತು ಅದನ್ನು ಕಂಡ ವೃದ್ದರು ಜೋರಾಗಿ ಅಳುತ್ತ ಯಾವ ಜನಾರ್ಧನನನ್ನು ನಂಬಿ ಈ ತನಕ ಜೀವಧಾರಣೆ ಮಾಡಿಕೊಂಡು ಬಂದೆನೋ ಅಂತಹ ಜನಾರ್ಧನ ಭಗ್ನಗೊಂಡ ಮೇಲೆ ನಾನು ಬದುಕಿರಬಾರದೆಂದು ನಿರ್ಧರಿಸುತ್ತಾನೆ. ಆದರೆ ರಾಜನು ಆ ಬ್ರಾಹ್ಮಣನನ್ನು ಸಂತೈಯಿಸಿ ಜನಾರ್ಧನನು ನನ್ನ ಕುಲಸ್ವಾಮಿಯು ಹೌದು. ಇಲ್ಲಿಯೇ ಸಮೀಪದಲ್ಲಿ ಅತಿ ಸುಂದರವಾದ ದೊಡ್ಡದಾದ ಜನಾರ್ಧನ ಮೂರ್ತಿ ಸ್ಥಾಪಿಸಿ ದೇವಾಲಯ ನಿರ್ಮಿಸುತ್ತೇನೆ. ನೀವು ಅಲ್ಲಿ ಪೂಜೆ ಮಾಡಬೇಕೆಂದು ಬ್ರಾಹ್ಮಣರಿಗೆ ಸಮಾಧಾನ ಪಡಿಸಿದನು.

ಆ ಕೂಡಲೇ ಕಾರ್ಯ ಪ್ರವೃತ್ತನಾಗಿ ತಾನಿರುವಲ್ಲಿಗೆ ಹೆಸರಾಂತ ಶಿಲ್ಪಿಯನ್ನು ಕರೆಯಿಸಿ ಸುಂದರ ಜನಾರ್ಧನ ಮೂರ್ತಿ ನಿರ್ಮಿಸಲು ತಿಳಿಸಿದನು. ಶಿಲ್ಪಿ ಚಾಣಾಕ್ಷತೆಯಿಂದ ಮೂರ್ತಿಯನ್ನು ನಿರ್ಮಿಸುತ್ತಾನೆ. ಆದರೆ ಮೂರ್ತಿಯನ್ನು ನೋಡುತ್ತಿದ್ದಂತೆ ರಾಜನಿಗೆ ಅಸಮಾಧಾನವಾಗುತ್ತದೆ. ಅವನು ಕೆತ್ತಿದ್ದು ಕೃಷ್ಣನ ಮೂರ್ತಿಯಾಗಿರುತ್ತದೆ.

ಇದಕ್ಕೆ ಕಾರಣ ಕೇಳಿದಾಗ ಶಿಲ್ಪಿಯು "ಎಲ್ಲ ಭಗವಂತನ ಇಚ್ಚೆ" ತನ್ನದೇನು ಇಲ್ಲ ಎಂದು ತಿಳಿಸಿದ. ರಾಜ ಅದರ ಕುರಿತು ಯೋಚಿಸುತ್ತಾನೆ. ಹಾಗೆ ನಿದ್ದೆ ಹತ್ತಿ ಕನಸಿನಲ್ಲಿ ಸ್ವಪ್ನ ಸುಂದರಿಯೊಬ್ಬಳು ಬಂದು ಏನುಬೇಕೋ ಕೇಳಿಕೋ ಎಂದಾಗ ರಾಜನ ಮನದಿಚ್ಚೆಯಂತೆ ಜನಾರ್ಧನ ಮೂರ್ತಿ ನಿರ್ಮಿಸುವ ತನ್ನ ಸಂಕಲ್ಪ ಯಾಕೆ ಈಡೇರಿಲ್ಲ ಎಂದು ಕೇಳುತ್ತಾನೆ. ಆಗ ಆ ದೇವತೆ ನೀನು ಹಿರಿಯರ ಉಪದೇಶವನ್ನು ಮರೆತು ರಾಜನೆಂಬ ಅಹಂಕಾರದಿಂದ ವರ್ತಿಸಿದೆ. ಸರ್ವಕೆಲಸಕ್ಕೂ ವಿಘ್ನವಿನಾಶಕನಾದ ವಿನಾಯಕನನ್ನು ಪೂಜಿಸಬೇಕು. ಅದನ್ನು ನೀನು ಮಾಡಲಿಲ್ಲ ಎಂದಾಗ ರಾಜನು ಪುನಃ ತಾನು ಪೂಜಿಸುವ ವಿನಾಯಕ ದೇವರು ಎಲ್ಲಿದ್ದಾನೆಂದು ಕೇಳುತ್ತಾನೆ. ಆಗ ದೇವಿಯು ಒಂದು ಪ್ರದೇಶವನ್ನು ತೋರಿಸುತ್ತಾಳೆ. ಅದನ್ನು ಗಮನಿಸಿದ ರಾಜ ಮರುದಿನ ಬೆಳಿಗ್ಗೆ ಪೂಜಾ ಸಾಮಾಗ್ರಿಯೊಂದಿಗೆ ಬಿಲ್ವಮರಗಳಿಂದ ಅಮೃತವಾದ ಕುಂದಗಣಿಯಿಂದ ೨ ಮೈಲು ದೂರದಲ್ಲಿರುವ ಬಿಲ್ವವನಕ್ಕೆ ಹೊರಟನು. ಇದರ ನಡುವೆ ದೇವರಿ ಎಂಬ ಪವಿತ್ರ ಹೊಳೆಯು ಹರಿಯುತ್ತಿತ್ತು. ರಾಜನು ಬಂದ ತಕ್ಷಣ ಹೊಳೆ ತನ್ನ ಹರಿವನ್ನು ತಗ್ಗಿಸಿ ದಾರಿ ಮಾಡಿ ಕೊಟ್ಟಿತು. ನಂತರ ಅಲ್ಲೇ ಒಬ್ಬ ಹುಡುಗನಿಗೆ ರಾಜ ಕನಸಿನಲ್ಲಿ ಕಂಡ ಪ್ರದೇಶದ ಕುರಿತು ಕೇಳುತ್ತಾನೆ. ಅವನು ಆ ಜಾಗವನ್ನು ರಾಜನಿಗೆ

ತೋರಿಸುತ್ತಾನೆ. ಅಲ್ಲಿ ಪ್ರವೇಶಿಸಿದ ತಕ್ಷಣ ಘಂಟಾನಾದವು ಕೇಳಿ ಬರುತ್ತದೆ. ಅಲ್ಲೇ ಗಣಪತಿಯು ಇರುವನೆಂದು ತಿಳಿದು ನೋಡಿದಾಗ ಅಲ್ಲಿ ಗೋಮಾತೆ ಗೋಮಯ ಹಾಕಿ ಅದರ ಮೇಲೆ ಕ್ಷೀರಾಭಿಷೇಕ ಮಾಡುತ್ತಿತ್ತು. ರಾಜನನ್ನು ಕಂಡಾಗ ಅದು ಅಲ್ಲಿಂದ ಹೊರಟು ಹೋಯಿತು. ನೋಡುತ್ತಿದ್ದಂತೆಯೇ ೩ ಅಂಗುಲದ ಗೋಮಯ ತನ್ನ ಗಾತ್ರವನ್ನು ಹೆಚ್ಚಿಸಿಕೊಂಡು ಕೆಂಪು ಮಿಶ್ರಿತ ಕಪ್ಪು ಶಿಲೆಯಾಯಿತು. ಆಗ ಗಂ. ಗಂ. ಗಂ. ಎಂಬ ಮಂತ್ರನಾದವು ಕೇಳಿತು. ಈ ರೀತಿ ಸ್ವಯಂ ಆಗಿ ಉದ್ಭವಿಸಿದ ಗಣಪತಿಯಾದ್ದರಿಂದ ಅದಕ್ಕೆ ಸ್ವಯಂಭೂ ವಿನಾಯಕ ಎಂದು ನಾಮಕರಣ ಮಾಡಲಾಯಿತೆಂದಿದೆ.[೨೬]

ಒಟ್ಟಾರೆಯಾಗಿ ಗಾಣಪತ್ಯ ಪಂಥಕ್ಕೆ ಸಂಬಂಧಿಸಿದಂತೆ ೧೬ ದೇವಾಲಯಗಳು ದಾಖಲಿಸಲ್ಪಟ್ಟಿವೆ. ೧೦-೧೧ ನೇ ಶತಮಾನದಿಂದ ಹಿಡಿದು ೨೦ ನೇ ಶತಮಾನದವರೆಗೂ ಈ ಮೂರ್ತಿಶಿಲ್ಪಗಳಿವೆ. ಕೆಲವೊಂದು ಜೀರ್ಣೋದ್ಧಾರವಾಗಿದ್ದರೆ ಇನ್ನೂ ಕೆಲವು ಸುಸ್ಥಿತಿಯಲ್ಲಿವೆ. ಗಾಣಪತ್ಯಕ್ಕೆ ಸಂಬಂಧಿಸಿದಂತೆ ಗೋಕರ್ಣದ ಮಹಾಬಲೇಶ್ವರ ದೇವಾಲಯದ ಸಮೀಪ ಇರುವ ಶಿಲ್ಪವೇ ಅತ್ಯಂತ ಪ್ರಾಚೀನ ದ್ವಿಭುಜ ಶಿಲ್ಪವಾಗಿದೆ. ಕುಮಟಾ ತಾಲೂಕಿನ ಹೆಚ್ಚಿನ ಗಾಣಪತ್ಯ ಶಿಲ್ಪಗಳೆಲ್ಲಾ ಆಧುನಿಕ ಮೂರ್ತಿಶಿಲ್ಪಗಳೇ ಆಗಿವೆ.

ಗಾಣಪತ್ಯ ದೇವಾಲಯಗಳು

ಕ್ರ.ಸಂ	ಸ್ಥಳ	ಹೆಸರು	ಕಾಲ	ಸ್ಥಿತಿ
೧.	ಮಹಾಬಲೇಶ್ವರ ದೇವಾಲಯದ ಸಮೀಪ, ಗೋಕರ್ಣ.	ಮಹಾಗಣಪತಿ ದೇವಾಲಯ	ಕ್ರಿ.ಶ ೧೦-೧೧ ನೇ ಶತಮಾನ	ಸುಸ್ಥಿತಿ
೨.	ಅಳವಳ್ಳಿ ಗ್ರಾಮದ ನಡುವೆ	ಗಣಪತಿ ದೇವಾಲಯ	ಕ್ರಿ.ಶ ೧೯ ನೇ ಶತಮಾನ	ಸುಸ್ಥಿತಿ
೩.	ಕೋಟಿತೀರ್ಥದ ಬಲಪಕ್ಕದ ಮೆಲಿನ ಗುಡ್ಡದ ಮೇಲೆ, ಗೋಕರ್ಣ.	ಪಟ್ಟ ವಿನಾಯಕ ದೇವಾಲಯ	ಕ್ರಿ.ಶ ೧೯ ನೇ ಶತಮಾನ	ಸುಸ್ಥಿತಿ
೪.	ತಾರಮಕ್ಕಿ, ಗೋಕರ್ಣ ಬಸನಿಲ್ದಾಣದಿಂದ ೧ ಕಿ.ಮೀ ದೂರದಲ್ಲಿದೆ.	ಕೇತಕಿ ವಿನಾಯಕ ದೇವಾಲಯ	ಕ್ರಿ.ಶ ೧೯-೨೦ ನೇ ಶತಮಾನ	ಜೀರ್ಣೋದ್ಧಾರ
೫.	ನೆಲ್ಲಿಕೇರಿ	ಉಪ್ಪಿನ ಗಣಪತಿ ದೇವಾಲಯ	ಕ್ರಿ.ಶ ೧೯-೨೦ ನೇ ಶತಮಾನ	ಜೀರ್ಣೋದ್ಧಾರ
೬.	ಊಳ್ಳುರುಮಠ	ಗಣಪತಿ ದೇವಾಲಯ	ಕ್ರಿ.ಶ ೧೯-೨೦ ನೇ ಶತಮಾನ	ಜೀರ್ಣೋದ್ಧಾರ
೭.	ಉಪ್ಪಿನಪಟ್ಟಣ ಗ್ರಾಮದಲ್ಲಿ	ವಿನಾಯಕ ದೇವಸ್ಥಾನ	ಕ್ರಿ.ಶ ೧೯-೨೦ ನೇ ಶತಮಾನ	ಜೀರ್ಣೋದ್ಧಾರ
೮.	ಊರಕೇರಿ, ಊರ ಪ್ರಾರಂಭದಲ್ಲಿ	ಗಣಪತಿ ದೇವಾಲಯ	ಕ್ರಿ.ಶ ೧೯-೨೦ ನೇ ಶತಮಾನ	ಜೀರ್ಣೋದ್ಧಾರ

೯.	ಹಳೇ ಹೆರವಟ್ಟಾ ಗ್ರಾಮದ ಊರ ಮಧ್ಯ ಭಾಗದಲ್ಲಿ	ಗಣಪತಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೧೦.	ಹಂದಿಗೋಣ, ಈಶ್ವರ ದೇವಸ್ಥಾನ ಹತ್ತಿರ	ಗಣಪತಿ ದೇವಾಲಯ	ಕ್ರಿ.ಶ ೨೦ನೇ ಶತಮಾನ	ಸುಸ್ಥಿತಿ
೧೧.	ಹಾರುಮಾಸ್ಕೇರಿ ಗ್ರಾಮದ ಮಧ್ಯದಲ್ಲಿ ಉತ್ತರದಿಕ್ಕಿಗಿದೆ	ಗಣಪತಿ ದೇವಾಲಯ	ಕ್ರಿ.ಶ ೨೦ನೇ ಶತಮಾನ	ಸುಸ್ಥಿತಿ
೧೨.	ಊರಕೇರಿ	ಶ್ರೀ ಸ್ವಯಂಭು ವಿನಾಯಕ ದೇವಾಲಯ	ಕ್ರಿ.ಶ ೨೦–೨೧ ನೇ ಶತಮಾನ	ಜೀರ್ಣೋದ್ಧಾರ
೧೩.	ಚಿತ್ರಗಿ	ಮಹಾಗಣಪತಿ ದೇವಾಲಯ	ಕ್ರಿ.ಶ ೨೧ನೇ ಶತಮಾನ	ಸುಸ್ಥಿತಿ
೧೪.	ಹೆಗಡೆ	ಮಹಾಗಣಪತಿ ದೇವಾಲಯ	ಕ್ರಿ.ಶ ೨೧ನೇ ಶತಮಾನ	ಸುಸ್ಥಿತಿ
೧೫.	ಹೊಸ್ಕೇರಿ	ಮಹಾಗಣಪತಿ ದೇವಾಲಯ	ಕ್ರಿ.ಶ ೨೧ನೇ ಶತಮಾನ	ಸುಸ್ಥಿತಿ
೧೬.	ಮಾದನಗೇರಿ	ಮಾಳಸಾ ಸಿದ್ದಿವಿನಾಯಕ ಮಂದಿರ	ಕ್ರಿ.ಶ ೨೧ನೇ ಶತಮಾನ	ಸುಸ್ಥಿತಿ

೪.೬ ಶೈವ ದೇವಾಲಯಗಳು

ಧರ್ಮಗಳಲ್ಲಿ ಶೈವ ಧರ್ಮವು ಒಂದಾಗಿದೆ. ಈ ಧರ್ಮದ ಪ್ರಾಚೀನತೆಯನ್ನು ಸಿಂಧೂ ನಾಗರಿಕತೆಯ ಹರಪ್ಪ, ಮೆಹೆಂಜೋದಾರೋ, ಕಾಲಿಬಂಗಾನ್, ಕಡೆಗಳಲ್ಲಿ ಶಿವಲಿಂಗವನ್ನು ಹೋಲುವಂತಹ ಕುರುಹುಗಳು, ಪಶುಪತಿ ಮುದ್ರೆಗಳು ದೊರೆತಿವೆ. ಜೊತೆಗೆ ಇವುಗಳ ಬಗ್ಗೆ ವೈದಿಕ ಸಾಹಿತ್ಯದಲ್ಲಿ, ಮಾಹಾಕಾವ್ಯಗಳು, ಹಾಗೂ ಪುರಾಣಗಳಲ್ಲಿ ಶೈವಧರ್ಮದ ಪ್ರಾಚೀನತೆಯನ್ನು ಗುರುತಿಸಬಹುದು.[೨೭]

ಪ್ರಸ್ತುತ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಶಾತವಾನರು, ಬನವಾಸಿ ಕದಂಬರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಆಳಿ ಅಳಿದರೂ ಅಂದು ನೀಡಿದ ಪ್ರೋತ್ಸಾಹದಿಂದ ಶೈವ ಧರ್ಮದ ದೇವಾಲಯಗಳು ಇಂದಿಗೂ ಉಳಿದು ಅಂದಿನ ಸಂಸ್ಕೃತಿಗೆ ಸಾಕ್ಷಿಯಾಗಿವೆ.

ಭೋಜರ ಶಾಸನಗಳಲ್ಲಿಯೂ ಶೈವ ಮತದ ಉಲ್ಲೇಖಗಳಿವೆ. ಅಮರೀಶ್ವರ[೨೮], ಶಿವಪುರಿ[೨೯] ಮುಂತಾದ ವ್ಯಕ್ತಿನಾಮ, ಸ್ಥಳನಾಮಗಳು ಪರೋಕ್ಷ ಸೂಚನೆಗಳಾದರೆ ಅಶಂಕಿತವರ್ಮನ ಪರಮಮಹೇಶ್ವರ[೩೦]ಎಂಬ ಬಿರುದು ಶಿವನ ಆರಾಧಕರಾಗಿದ್ದನ್ನು

ಉಲ್ಲೇಖಿಸಿದೆ. ಇನ್ನು ಉತ್ತರಕನ್ನಡ ಜಿಲ್ಲೆಯಲ್ಲಿನ ಧಾರೇಶ್ವರ, ಗುಣವಂತೆ, ಗೋಕರ್ಣ, ಅಂಕೋಲಾ ತಾಲೂಕಿನ ಮಾರುಗದ್ದೆ, ಬೋಳೆ ಗ್ರಾಮದ ಶಿವಲಿಂಗ, ಬನವಾಸಿಯ ಮಧುಕೇಶ್ವರ ಶೈವಧರ್ಮದ ಪ್ರಾಚೀನ ಕೇಂದ್ರಗಳಾಗಿವೆ. ಪ್ರಸ್ತುತ ಕುಮಟಾ ತಾಲೂಕಿಗೆ ಸೀಮಿತ ಮಾಡಿಕೊಂಡು ಈ ತಾಲೂಕಿನ ಶೈವದೇವಾಲಯಗಳ ಪ್ರಸ್ತಾವನೆ ಇಲ್ಲಿ ಮಾಡಲಾಗಿದೆ.

೧) ಹೆಸರು – **ಆದಿಧಾರೇಶ್ವರ ದೇವಾಲಯ**[೫೧]
ಸ್ಥಳ – ಧಾರೇಶ್ವರ ಧಾರನಾಥ ದೇವಾಲಯ ಹೊರಗೆ ನೈರುತ್ಯ ದಿಕ್ಕಿಗಿದೆ
ಕಾಲ – ಕ್ರಿ.ಶ. ೧೦–೧೧ನೇ ಶತಮಾನ
ವಸ್ತು – ಸಿಸ್ಟ ಕಲ್ಲು(ಬಳಪದ ಕಲ್ಲು)
ಅಳತೆ – ೫.೩೫ ಮೀ ಉದ್ದ, ೩.೮೫ ಮೀ ಅಗಲ

ಕುಮಟಾದಿಂದ ಉತ್ತರಕ್ಕೆ ೮ ಕಿ.ಮೀ, ಹೊನ್ನಾವರ ತಾಲೂಕಿನಿಂದ ದಕ್ಷಿಣಕ್ಕೆ ೧೮ ಕಿ.ಮೀ. ದೂರದಲ್ಲಿರುವ ಹಿಂದಿನ ದೇವಗಿರಿಯೇ ಇಂದಿನ ಧಾರೇಶ್ವರ, ಪುರಾಣ ಪ್ರಸಿದ್ಧವಾದ ಶಿವನ ಪಂಚಕ್ಷೇತ್ರಗಳಲ್ಲಿ ಒಂದಾದ ಧಾರೇಶ್ವರಕ್ಕೆ ದಂತ ಕಥೆಯಿದೆ. ರಾವಣನಿಂದ ಒಗೆಯಲ್ಪಟ್ಟ ದೋರಕ ನಾಗಶೃಂಗ ಪರ್ವತದಲ್ಲಿ ಬಂದು ಬಿದ್ದಿತು. ಇದರಲ್ಲಿ ಪರಶಿವನು ನೆಲೆಸಿದ ತದನಂತರ ಧೋರೇಶ ಅಥವಾ ದಾರನಾಥನೆಂದು ಪ್ರಸಿದ್ಧಿಗೆ ಬಂದಿತು. ಆತನ ಸಾನಿಧ್ಯದ ಈ ಭೂಭಾಗವೇ ಈಗಿನ ಧಾರೇಶ್ವರ.[೫೨]

ಆದಿ ಧಾರನಾಥ ದೇವಾಲಯ ಗರ್ಭಗೃಹ, ಅಂತರಾಳವನ್ನೊಳಗೊಂಡಿದೆ. ಗರ್ಭಗೃಹ ಚೌಕಾಕಾರವಾಗಿದೆ. ಗರ್ಭಗೃಹದ ಮಧ್ಯದಲ್ಲಿ ಎರಡು ಲಿಂಗಗಳಿವೆ. ಗರ್ಭಗೃಹ ಮತ್ತು ಅಂತರಾಳದ ಮೇಲಿನ ಮೇಲ್ಚಾವಣಿಯಲ್ಲಿ ಪದ್ಮಫಲಕವಿದೆ.

ದೇವಾಲಯದ ಹೊರಭಾಗ

ಮಂಚ ಬಂಧದ ಉಪಪೀಠದ ಮೇಲೆ ಅಧಿಷ್ಠಾನವಿದೆ. ಉಪಾನ, ಖುರ, ಪದ್ಮ ,ಮತ್ತು ಅಂತರಿತ ಕಪೋತ, ಭಾಗಗಳನ್ನು ಒಳಗೊಂಡಿದೆ. ದೇವಾಲಯ ಭಿತ್ತಿಯು ಸರಳವಾಗಿದ್ದು ಕುಡ್ಯ ಸ್ತಂಭಗಳ ಅಲಂಕಾರವನ್ನೊಳಗೊಂಡಿದೆ. ಮಧ್ಯದಲ್ಲಿ ಮಕರ ತೋರಣದ ಅಲಂಕಾರವಿದೆ ಭಿತ್ತಿಯ ಮೇಲ್ಭಾಗದಲ್ಲಿ ಇಳಿಜಾರಾದ ಲೂಪಾಕಾರದ ಶಿಖರವಿದೆ. ಕರಾವಳಿ ಪ್ರದೇಶದಲ್ಲಿ ಮಳೆಯ ನೀರು ಸರಾಗವಾಗಿ ಹೋಗಲು ಮನೆಯ ಛಾವಣಿಯನ್ನು ಇಳಿಜಾರಾಗಿ ನಿರ್ಮಿಸಿದಂತೆ ಈ ದೇವಾಲಯದ ಛಾವಣಿಯನ್ನು ನಿರ್ಮಿಸಲಾಗಿದೆ.

೨) ಹೆಸರು – **ಧಾರನಾಥ ದೇವಾಲಯ**[೩೩]

ಸ್ಥಳ – ಧಾರೇಶ್ವರ

ಕಾಲ – ಕ್ರಿ.ಶ.೧೧ನೇ ಶತಮಾನ

ವಸ್ತು – ಸಿಸ್ಟ ಕಲ್ಲು (ಬಳಪದ ಕಲ್ಲು)

ಅಳತೆ – ೨೨.೯ ಮೀ ಉದ್ದ, ೧೦.೬೬ ಮೀ ಅಗಲ

ಧಾರೇಶ್ವರದ ಧಾರಾನಾಥ ದೇವಾಲಯ ಕುಮಟಾದಿಂದ ೫ ಕಿ.ಮೀ. ಅಂತರದಲ್ಲಿದೆ. ಪೂರ್ವಾಭಿಮುಖವಾಗಿರುವ ದೇವಾಲಯ ದ್ರಾವಿಡಶೈಲಿಯಲ್ಲಿದೆ. ಈ ದೇವಾಲಯವು ಗರ್ಭಗೃಹ ಅಂತರಾಳ ಸಭಾಮಂಟಪ ಮತ್ತು ಮುಖಮಂಟಪವನ್ನು ಒಳಗೊಂಡಿದೆ.

ಗರ್ಭಗೃಹವು ಚೌಕಾಕಾರವಾಗಿದ್ದು ಕೇಂದ್ರದಲ್ಲಿ ಶಿವಲಿಂಗವಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಅಂತರಾಳದ ಮೇಲಿನ ಚತ್ತಿನಲ್ಲಿ ಪದ್ಮ ಪಲಕವಿದೆ. ಅಂತರಾಳಕ್ಕೆ ಹೊಂದಿಕೊಂಡಂತೆ ಸಭಾ ಮಂಟಪ, ಸಭಾ ಮಂಟಪದಲ್ಲಿನ ಹದಿನಾರು ಸ್ತಂಭಗಳಿಗೆ ಮಧ್ಯದಲ್ಲಿ ನಾಲ್ಕು ಸ್ತಂಭಗಳು ನಾಜೂಕಾದ ಕೆತ್ತನೆಯನ್ನು ಒಳಗೊಂಡಿದೆ. ಈ ಸ್ತಂಭಗಳು ಕಲ್ಯಾಣ ಚಾಲುಕ್ಯರ ವಾಸ್ತು ಶಿಲ್ಪದ ಮಾದರಿಯಲ್ಲಿದೆ. ಗರ್ಭಗೃಹ ಒಳ ಹೋಗುವದಕ್ಕಿಂತ ಮೊದಲು ಎಡ ಮತ್ತು ಬಲ ಭಾಗದಲ್ಲಿ ಪರಿವಾರ ದೇವತೆಗಳಾದ ಸರಸ್ವತಿ ಮತ್ತು ಗಣಪತಿಯ ಮೂರ್ತಿಶಿಲ್ಪಗಳಿವೆ. ಸಭಾಮಂಟಪದ ಮಧ್ಯದಲ್ಲಿರುವ ನಂದಿ ಗರ್ಭಗೃಹಕ್ಕೆ ಮುಖ ಮಾಡಿಕೊಂಡಿದೆ. ಸಭಾಮಂಟಪಕ್ಕೆ ಹೊಂದಿಕೊಂಡಂತೆ ಮುಖಪಂಟಪದಲ್ಲಿ ಕಕ್ಷಾಸನವಿದೆ.

ಈ ದೇವಾಲಯದ ಮುಖ್ಯ ಪ್ರವೇಶ ದ್ವಾರ ಹಾಗೂ ಗರ್ಭಗೃಹದ ಎಡ ಮತ್ತು ಬಲಭಾಗಕ್ಕೂ ಎರಡು ದ್ವಾರಗಳಿವೆ. ಯಾವುದೇ ರೀತಿಯ ಅಲಂಕಾರದ ಕೆತ್ತನೆ ಇಲ್ಲಿಲ್ಲ. ದ್ವಾರಬಂಧದ ಲಲಾಟ ಬಿಂಬದಲ್ಲಿ ಗಜ ಲಕ್ಷ್ಮಿಯ ಶಿಲ್ಪವಿದೆ. ಈ ಶಿಲ್ಪದ ಇಕ್ಕೆಲೆಗಳಲ್ಲಿ ಆನೆಯ ಚಿತ್ರವನ್ನು ಕೆತ್ತಲಾಗಿದೆ.

ಹೊರಭಾಗವು

ಅಧಿಷ್ಠಾನವು ಉಪಾನ, ಖುರಕ, ಪದ್ಮ, ಅಂತರಿತ, ಮತ್ತು ಕಪೋತ ಭಾಗವನ್ನು ಹೊಂದಿದೆ. ದೇವಾಲಯದ ಭಿತ್ತಿಯು ಸರಳವಾಗಿದ್ದು ಅರ್ಧಗಂಬಗಳು ಭಿತ್ತಿಯ ಮಧ್ಯದಲ್ಲಿವೆ. ಪ್ರಸ್ತರ ಭಾಗವು ಉತ್ತರವಾಜನ,ವಲ್ಲಭಿ, ಕಪೋತ ಭಾಗಗಳಿಂದ ಕೂಡಿದೆ.

ಶಿಖರವು ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಮಧ್ಯದಲ್ಲಿ ಫಲಕಗಳನ್ನೊಳಗೊಂಡಿದೆ. ಶಿಖರದ ಉತ್ತರ ದಿಕ್ಕಿಗೆ ಭೈರವ, ಪಶ್ಚಿಮ ದಿಕ್ಕಿನ ಶಿಖರ

ಭಾಗದಲ್ಲಿ ಯೋಗಿ ಶಿವ, ದಕ್ಷಿಣ ದಿಕ್ಕಿನಲ್ಲಿ ತಾಂಡವ ಶಿವನಿದ್ದಾನೆ. ಮುಂಭಾಗದಲ್ಲಿ ಸುಖನಾಶಿಯಿದೆ.

೩) ಹೆಸರು – **ಆದಿಗೋಕರ್ಣೇಶ್ವರ ದೇವಾಲಯ**

ಸ್ಥಳ – ಗೋಕರ್ಣ ಮಹಾಬಲೇಶ್ವರ ದೇವಾಲಯದ ಪ್ರದಕ್ಷಿಣಾಪಥದ ಬಲಭಾಗದಲ್ಲಿ ಇದೆ.

ಕಾಲ – ಕ್ರಿ.ಶ ೧೧ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೬ ಮೀ ಉದ್ದ, ೪ಮೀ ಅಗಲ

ದೇವಾಲಯ ಕುಮಟಾದಿಂದ ೩೨ ಕಿ.ಮೀ ದೂರದಲ್ಲಿದೆ. ಪಶ್ಚಿಮಾಭಿಮುಖವಾಗಿದೆ. ಗುಹಾಕೃತಿಯ ಒಂದು ಮಂಟಪವಿದ್ದು ಕೆಳಗಡೆ ಚೌಕಾಕೃತಿಯ ಗರ್ಭಗೃಹವಿದೆ. ಇದು ಭೂಮಿಯಿಂದ ಎರಡು ಅಡಿಯಷ್ಟು ಕೆಳಗಿದೆ. ಎಂಟು ಮೆಟ್ಟಿಲುಗಳನ್ನು ಇಳಿದಾಗ ಅಲ್ಲಿ ಒಂದು ಹೊಂಡದಲ್ಲಿ ಚೌಕಾಕಾರದ ಪೀಠದ ಮೇಲೆ ಲಿಂಗವಿದೆ. ಈ ದೇವಾಲಯ ಯಾವುದೇ ಹೆಚ್ಚಿನ ಅಲಂಕಾರಗಳನ್ನೊಳಗೊಂಡಿಲ್ಲದೆ ಮೂಲರೂಪದಲ್ಲಿದೆ.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಮತ್ತು ಹಂಚಿನ ಮೇಲ್ಛಾವಣಿಯನ್ನೊಳಗೊಂಡಿದೆ. ಮಲೆನಾಡಿನ ಭಾಗದಲ್ಲಿ ನಿರ್ಮಿಸುವ ಹಂಚಿನ ಮನೆಗಳಂತೆ ಮಳೆಯ ನೀರು ಸರಾಗವಾಗಿ ಇಳಿಯಲು ಇಳಿಜಾರಾದ ಮಾಡನ್ನು ಒಳಗೊಂಡಿದೆ. ಮೇಲೆ ಕಲಶವಿದೆ.

೪) ಹೆಸರು – **ಸಾಕ್ಷೇಶ್ವರ ದೇವಾಲಯ**

ಸ್ಥಳ – ಗೋಕರ್ಣ, ಮಹಾಬಲೇಶ್ವರ ದೇವಾಲಯದ ಪ್ರದಕ್ಷಿಣಾಪಥದ ಬಲಬದಿಗೆ ಇದೆ

ವಸ್ತು – ಜಂಬಿಟ್ಟಿಗೆ(ಲೆಟರೈಟ್)

ಅಳತೆ – ೫.೯೪ ಮೀ ಉದ್ದ, ೩.೪೪ ಮೀ ಅಗಲ

ಕುಮಟಾದಿಂದ ೩೨ ಕಿ.ಮೀ ದೂರದಲ್ಲಿ ಸಾಕ್ಷೇಶ್ವರ ದೇವಾಲಯವಿದೆ. ಈ ದೇವಾಲಯ ಜೀರ್ಣೋದ್ಧಾರಗೊಂಡಿದ್ದು, ಪೂರ್ವಾಭಿಮುಖವಾಗಿದೆ. ದೇವಾಲಯವು ಗರ್ಭಗೃಹ, ಮತ್ತು ಅಂತರಾಳ ಒಳಗೊಂಡಿದ್ದು ನಿರಂಧಾರ ಮಾದರಿಯದಾಗಿದೆ. ಗರ್ಭಗೃಹದಲ್ಲಿ ಚೌಕಾಕಾರದ ಪೀಠದ ಮೇಲೆ ವೃತ್ತಾಕಾರದ ಲಿಂಗವಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಮತ್ತು ಹಂಚಿನ ಮೇಲ್ಛಾವಣಿಯನ್ನೊಳಗೊಂಡಿದೆ. ಮೇಲೆ ಕಲಶವಿದೆ.

೫) ಹೆಸರು – **ಮಹಾಬಲೇಶ್ವರ ದೇವಾಲಯ**[೩೪]

ಸ್ಥಳ – ಗೋಕರ್ಣ,

ಕಾಲ – ಕ್ರಿ.ಶ.೧೧–೧೨ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೨೬.೧೮ ಮೀ ಉದ್ದ, ೧೦.೧೪ ಮೀ ಅಗಲ

ಗೋಕರ್ಣ ಗ್ರಾಮವು ಕುಮಟಾ ತಾಲೂಕಿನ ವಾಯುವ್ಯ ದಿಕ್ಕಿಗಿದೆ. ಕುಮಟಾದಿಂದ ಸುಮಾರು ೩೧ ಕಿ.ಮೀ. ಅಂತರದಲ್ಲಿದೆ. ಇಲ್ಲಿಯ ಮಹಾಬಲೇಶ್ವರ ದೇವಾಲಯ ಗೋಕರ್ಣದ ಮುಖ್ಯ ದೇವಸ್ಥಾನ ಯಾವಾಗ ನಿರ್ಮಾಣಗೊಂಡಿತೆಂದುಹೇಳುವುದು ಕಷ್ಟ ಪಾಂಡವರು ನಿರ್ಮಿಸಿರುತ್ತಾರೆಂಬುದು ದಂತಕಥೆ.

ಮಹಾಬಲೇಶ್ವರ ದೇವಾಲಯವು ದ್ರಾವಿಡಶೈಲಿಯಲ್ಲಿದೆ. ದೇವಾಲಯವು ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಮಹಾಬಲೇಶ್ವರನ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಶಿರೋಭಾಗವು ಚಪ್ಪಟೆಯಾಗಿದೆ. ಗರ್ಭಗೃಹವು ಅಷ್ಟಕೋನಾಕೃತಿಯಲ್ಲಿದೆ. ಶಿಖರವು ವೃತ್ತಾಕಾರವಾಗಿದೆ. ಮೇಲೆ ಪಂಚಲೋಹದ ಕಲಶವಿದೆ. ನವರಂಗದಲ್ಲಿ ಆರು ಸ್ಥಂಭಗಳು ಇವೆ. ದೇವಾಲಯದ ಸುತ್ತ ಪ್ರದಕ್ಷಿಣಾಪಥವಿದೆ. ಗರ್ಭಗೃಹದಲ್ಲಿರುವ ಲಿಂಗದ ಮೇಲು ತುದಿ ಮಾತ್ರ ಕಾಣಬಹುದು. ಪಾಣಿಪೀಠದ ಒಳಗಡೆ ಕೈ ಹಾಕಿ ದರ್ಶನ ಪಡೆಯಬಹುದು. ದೇವಾಲಯದ ಮುಖಮಂಟಪ ೧೮ ಮೀಟರ ಉದ್ದ, ೯ ಮೀಟರ ಅಗಲವಿದೆ. ದೇವಾಲಯವನ್ನು ಕ್ಲೋರೈಟಿಕ್ ಸಿಸ್ಟನಿಂದ ನಿರ್ಮಿಸಲಾಗಿದೆ. ಮುಖಮಂಟಪದ ಎಡಬದಿಗೆ ಮಹಿಷಾಸುರಮರ್ದಿನಿಯ ಚಿಕ್ಕದಾದ ಮಂದಿರವಿದೆ. ಬಲಬದಿಗೆ ಗಣಪತಿ ಮೂರ್ತಿಶಿಲ್ಪವಿದೆ. ಮುಖಮಂಟಪದ ಮಧ್ಯದಲ್ಲಿ ಗರ್ಭಗೃಹಕ್ಕೆ ಮುಖವಾಗಿ ನಂದಿ ಮೂರ್ತಿಶಿಲ್ಪವಿದೆ. ಮುಖಮಂಟಪದಲ್ಲಿ ಕಲ್ಲಿನಿಂದ ಮಾಡಿದ ಆರು ಸ್ಥಂಭಗಳನ್ನು ಒಳಗೊಂಡಿದೆ. ಸ್ತಂಭಗಳ ಮಧ್ಯೆ ನೆಲದ ಮೇಲೆ ದೊಡ್ಡದಾದ ಆಮೆಯ ಅಲಂಕ್ರತೆಯಿದೆ.

ಮುಖಮಂಟಪದ ಪ್ರವೇಶದ್ವಾರದಲ್ಲಿರುವ ಬಾಗಿಲ ಲಲಾಟಬಿಂಬದಲ್ಲಿ ಸುಖಾಸನ ಗಣಪತಿಯ ಮೂರ್ತಿಯಿದೆ. ಬಾಗಿಲ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕ ಮೂರ್ತಿಶಿಲ್ಪಗಳಿದ್ದು ಸರ್ವಾಲಂಕಾರ ಭೂಷಿತರಾಗಿ ನಿಂತಿದ್ದಾರೆ. ದೇವಾಲಯದ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಮಹಾಬಲೇಶ್ವರನ ಮೂರ್ತಿಶಿಲ್ಪವಿದೆ. ಇದು ಮಾನುಷ ರೂಪದಲ್ಲಿ ಇದೆ. ಆತನ ತಲೆಯ ಮೇಲೆ ಏಳು ತಲೆಯ ಹಾವು ರಕ್ಷಣೆ ನೀಡಿದೆ. ಶಿವನು ಮುಕ್ಕಣ್ಣನಾಗಿದ್ದಾನೆ ಈ ದೇವಾಲಯದ ಪ್ರವೇಶದ್ವಾರದಲ್ಲಿ ನಂದಿ ಸ್ಥಂಭವಿದೆ.

ಗೋಕರ್ಣ ಮತ್ತು ಪರಿಸರದ ಐತಿಹ್ಯಗಳು

ಪೂರ್ವದಲ್ಲಿ ನಿಸರ್ಗದ ರಮಣೀಯತೆಯನ್ನು ಪ್ರದರ್ಶಿಸುವ ಸಹ್ಯಾದ್ರಿ ಪರ್ವತ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಉತ್ತರದಲ್ಲಿ ಗಂಗಾನದಿಯಿಂದ, ದಕ್ಷಿಣದಲ್ಲಿ ಅಘನಾಶಿನಿ ನದಿಯವರೆಗೆ ಸುತ್ತುವರೆಯಲ್ಪಟ್ಟ ಕ್ಷೇತ್ರ ಗೋಕರ್ಣ. ಇದು ಪುರಾತನ ಪ್ರಸಿದ್ಧವಾದ ಯಾತ್ರಾ ಸ್ಥಳ. ಗೋಕರ್ಣ ಎಂದು ಹೆಸರು ಬರಲು ಇಲ್ಲಿಯ ಭೌಗೋಳಿಕವಾದ ರಚನೆಗೂ ಇಲ್ಲಿಯ ಜನರು ನಂಬಿರುವಂತಹ ಐತಿಹ್ಯಕ್ಕೂ ವಿಶೇಷವಾದ ನಂಟಿದೆ.

ಸಾತ್ವಿಕ ಸೃಷ್ಠಿಯನ್ನು ಮಾಡುವುದಕ್ಕೆ ರುದ್ರನು ಪಾತಾಳಕ್ಕೆ ಹೋಗಿ ತಪಸ್ಸನ್ನು ಮಾಡುತ್ತಿದ್ದನು. ತಪಸ್ಸಿನಲ್ಲಿ ಮೂರು ಯುಗಗಳು ಕಳೆದು ಹೋದರೂ ಆ ಕಾರ್ಯ ಆಗಲಿಲ್ಲ. ಆಗ ಬ್ರಹ್ಮ ಸೃಷ್ಠಿಕಾರ್ಯವನ್ನು ಮಾಡಿದನು. ಇದರಿಂದ ರುದ್ರನು ಪ್ರಕೃತಿ ಮುಖದಿಂದ ಮೇಲಕ್ಕೆ ಬರಬೇಕೆಂದಿಚ್ಚಿಸಿ ಚಕ್ರಾಕಾರವಾಗಿ ಸುತ್ತಿ ತನಗೆ ಅಡ್ಡಿಯಾಗಿರುವ ಭೂಮಿಯನ್ನು ನೋಡಿ ಮಾರ್ಗವನ್ನು ಬಿಡೆಂದು ಕೇಳಲು ಅದಕ್ಕೆ ಭೂಮಿಯು ದೇವನೆ! ನನಗೆ ವೇದನೆಯಾಗದಂತೆ ಹೃಸ್ವವಾಗಿ ನನ್ನ ಕರ್ಣ(ಕಿವಿ)ದಿಂದ ಹೊರಟು ಮೇಲಕ್ಕೆ ಹೋಗುಎಂದು ಪ್ರಾರ್ಥಿಸಿದಳು. ಅವಳ ಕಿವಿಯಿಂದ ಹೊರಟು ಮೇಲಕ್ಕೆ ಬಂದನು ನಿನಗೆ ಗೋ ಎಂಬ ಹೆಸರಿದ್ದು ನಿನ್ನ ಕಿವಿಯನ್ನು ಪ್ರವೇಶಿಸಿದ್ದರಿಂದ ಗೋಕರ್ಣ ಎಂಬ ಹೆಸರು ಬರಲಿ[೩೫] ನಾನು ಪಾತಾಳದಿಂದ ಮೇಲಕ್ಕೆ ಬರುವಾಗ ಈ ಸ್ಥಳವು ನನಗೆ ಯೋನಿಯಂತಾದ್ದರಿಂದ ರುದ್ರ+ಯೋನಿ ಎಂದು ಕರೆಯಲ್ಪಡಲಿ ಎಂದು ಹೇಳಿದನು. ಇಲ್ಲಿ ಅನೇಕ ಮಹನೀಯರು ತಪಸ್ಸನ್ನಾಚರಿಸಿ ಸಿದ್ದಿ ಪಡೆದಿದ್ದರೆಂಬ ಪ್ರತೀತಿಯೂ ಇದೆ.[೩೬] ಗೋಕರ್ಣವು ನಕ್ಷೆಯಲ್ಲಿ ನೋಡಿದಾಗ ಅದು ಆಕಳ ಕಿವಿಯ ರೂಪದಲ್ಲಿ ಕಂಡು ಬರುವುದರಿಂದ ಆ ಕ್ಷೇತ್ರಕ್ಕೆ ಗೋಕರ್ಣ ಹೆಸರು ಬಂದಿದೆ.

ಗಂಗಾವಳಿ ಮತ್ತು ಅಘನಾಶಿನಿ ಎಂಬ ಎರಡು ನದಿಗಳ ಮಧ್ಯದ ಈ ಭೂ ಪ್ರದೇಶ ಗೋವಿನ ಕಿವಿಯ ಆಕಾರದಲ್ಲಿ ಇರುವದರಿಂದ ಇದಕ್ಕೆ ಗೋಕರ್ಣ ಎಂಬ ಹೆಸರು ಬಂದಿರಲೂ ಸಾಕು.

ಗೋಕರ್ಣದ ಪೂರ್ವ ಇತಿಹಾಸ

ಋಷಿಮುನಿಗಳು ಸಹ್ಯ ಪರ್ವತದಲ್ಲಿ ವಿಶ್ವಜಿತಯಾಗವನ್ನು ಕೈಗೊಳ್ಳುತ್ತಿದ್ದ ಸಂದರ್ಭದಲ್ಲಿ ನೀರು ತುಂಬಿ ಲಿಂಗ, ತೀರ್ಥ, ಅಲ್ಲದೇ ಋಷಿಮುನಿಗಳ ಆಶ್ರಮವೂ ಮುಳುಗಲ್ಪಟ್ಟಿತು. ಆಗ ಋಷಿಗಳು ಪರಶುರಾಮನಿಗೆ ಈ ಸಂಗತಿ ತಿಳಿಸಿದರು. ಪರಶುರಾಮ ವರುಣನಿಗೆ ನೀನು ಆಕ್ರಮಿಸಿದ ಭೂಭಾಗವನ್ನು ಬಿಟ್ಟು ಕೊಡುವಂತೆ ಕೋಪದಿಂದ ಕೇಳಿದನು. ಪರಶುರಾಮನ ಅಟ್ಟಹಾಸಕ್ಕೆ ಅಂಜಿ ನೀನು ಕೇಳಿದಷ್ಟು ಭೂಭಾಗವನ್ನು ಬಿಟ್ಟು ಕೊಡುವೆ ಎಂದು ವಿನಯದಿಂದ ವಿನಂತಿಸಿಕೊಂಡನು. ಪರಶುರಾಮನು ಅದಕೊಪ್ಪಿ ತಾನು

ಕುಳಿತ ಸ್ಥಳದಿಂದಲೇ ಯಜ್ಞದ ಸ್ರುವೆಯನ್ನು ಬೀಸಿ ಒಗೆದಾಗ, ಗೋಕರ್ಣದ ಭೂಭಾಗ ಮತ್ತೆ ಮೊದಲಿನಂತಾಯಿತು. ಪರಶುರಾಮ ಈ ಕ್ಷೇತ್ರವನ್ನು ಮರಳಿ ನಿರ್ಮಿಸಿದ್ದರಿಂದ ಈ ಕ್ಷೇತ್ರಕ್ಕೆ ಪರಶುರಾಮ ಕ್ಷೇತ್ರ ಎಂತಲೂ ಕರೆಯುತ್ತಾರೆ[೩೭]

ಆತ್ಮಲಿಂಗ

ಸತ್ವಯುತವಾದ ಸೃಷ್ಟಿಯನ್ನು ಮಾಡುವ ಉದ್ಧೇಶದಿಂದ ರುದ್ರನು ಪಾತಾಳದಲ್ಲಿ ತಪಸ್ಸನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಬ್ರಹ್ಮನು ಭೂಮಿಯಲ್ಲಿ ಸೃಷ್ಟಿಯ ಕಾರ್ಯವನ್ನು ಪ್ರಾರಂಭಿಸಿದನು. ಪಾತಾಳದಿಂದ ಮೇಲೆ ಬಂದ ಶಿವನು ಇದನ್ನು ನೋಡಿ ಕೋಪಗೊಂಡು ಸೃಷ್ಟಿಯಾದ ಸಕಲ ಚರಾಚರಗಳ ಸತ್ವ ಶಕ್ತಿಯನ್ನು ಸೆಳೆದು ಅವೆಲ್ಲವನ್ನು ಒಂದೆಡೆ ಕಲೆ ಹಾಕಿ, ಒಂದು ವಿಶಿಷ್ಟವಾದ ಮೃಗವನ್ನು ನಿರ್ಮಿಸಿದನು. ಆ ಮೃಗಕ್ಕೆ ಮೂರು ಕಣ್ಣುಗಳು, ಬಂಗಾರದ ಕಾಂತಿಯೂ ನೀಡಲ್ಪಟ್ಟನು. ಈ ರೀತಿ ಸಕಲ ಸೃಷ್ಟಿಯ ಸತ್ವ ಶಕ್ತಿಯೆ, ಇಲ್ಲದಂತಾಗಲು ದೇವತೆಗಳೆಲ್ಲರೂ ಬ್ರಹ್ಮ, ವಿಷ್ಣುವಿಂದೊಡಗೂಡಿ ಕೈಲಾಸಕ್ಕೆ ಬಂದು ಶಿವನನ್ನು ಒಲಿಸಲು ಅವರ ಪ್ರಾರ್ಥನಗೆ ಒಲಿದು ಆ ವಿಶಿಷ್ಟ ಮೃಗವನ್ನು ಅವರಿಗೆ ನೀಡಿ. ಮರಳಿ ಸತ್ವಶಕ್ತಿ ಪಡೆಯುವಂತೆ ತಿಳಿಸಿದನು. ಆಗ ಸತ್ವ ಸಮೃದ್ಧವಾದ ಆ ವಿಶಿಷ್ಟ ಮೃಗದ ಮೂರು ಕೋಡುಗಳು ಕಡಿಯಲ್ಪಟ್ಟು ಮಧ್ಯದ ಶೃಂಗ ರುದ್ರನಿಗೂ, ಬಲದ ಶೃಂಗ, ಬ್ರಹ್ಮನಿಗೂ, ಎಡದ ಶೃಂಗ ವಿಷ್ಣುವಿಗೂ ಕೊಡಲ್ಪಟ್ಟವು, ಬ್ರಹ್ಮ, ವಿಷ್ಣು, ರುದ್ರರು ಈ ಸತ್ವಶಕ್ತಿ ಶೃಂಗಗಳನ್ನೆ, ಆತ್ಮಲಿಂಗವಾಗಿಸಿ ಪೂಜಿಸಿದರು. ಅದೇ ಇಂದು ಕಾಣುವ ಶಿವನ ಆತ್ಮಲಿಂಗದ ರೂಪವಾಗಿದೆ.

೧೯೮೩ ಮೇ ತಿಂಗಳಿನಲ್ಲಿ ನಡೆದ ಅಷ್ಟಬಂಧ ಮಹೋತ್ಸವ ಕಾಲದಲ್ಲಿ ಆತ್ಮಲಿಂಗದ ಸುತ್ತಲಿರುವ ಪೀಠಗಳನ್ನು ತೆಗೆದಾಗ ಲಿಂಗದ ನಿಜಸ್ಥಿತಿ ಕಂಡು ಬಂದಿದೆ. ಈ ಕಾಲದಲ್ಲಿ ತೆಗೆದ ಆತ್ಮಲಿಂಗದ ಚಿತ್ರವು ಪುರಾಣದಲ್ಲಿ ವಿವರಿಸಿದಂತೆ ಬುಡದಲ್ಲಿ ಮೂರು ಕವಲೊಡೆದು ಭೂಗರ್ಭದಲ್ಲಿ ಇಳಿದಿದೆ.[೩೮] ಇದು ಪುರಾಣದಲ್ಲಿ ಉಲ್ಲೇಖಿಸಿದ ವಿಷಯವನ್ನು ಪುಷ್ಟಿಕರಿಸುತ್ತದೆ.

ಜನಪ್ರಿಯ ಐತಿಹ್ಯ

ರಾವಣನ ತಾಯಿ ಕೈಕಸೆಯು ನಿತ್ಯ ಲಂಕಾ ಸಮುದ್ರ ತಟದಲ್ಲಿ ಮರಳಿನಿಂದ (ಉಸುಕಿನ) ಲಿಂಗ ಮಾಡಿ ಪೂಜಿಸುತ್ತಿದ್ದಳು. ಸಮುದ್ರದ ರಭಸದ ಅಲೆಗಳಿಗೆ ಆ ಶಿವಲಿಂಗ ದಿನ ಕೊಚ್ಚಿ ಹೋಗುತ್ತಿತ್ತು. ಅವಳು ಮಗನಾದ ರಾವಣನ ಹತ್ತಿರ ಯಾರು ಕೊಚ್ಚಿಕೊಂಡು ಹೋಗದೆ ಇರುವಂಥ ಶಾಶ್ವತವಾಗಿರುವ ಲಿಂಗವನ್ನು ಪೂಜೆಗಾಗಿ ತಂದು ಕೊಡು ಎಂದು ಮಗನಲ್ಲಿ ಹೇಳಿದಳು. ಆಗ ರಾವಣ ತಾಯಿ ನಾನು ನಿನಗೆ ಕೈಲಾಸದಿಂದಲೇ ಈಶ್ವರನ ಆತ್ಮಲಿಂಗವನ್ನು ತಂದು ಕೊಡುತ್ತೇನೆಂದು ಹೇಳಿ ಕೈಲಾಸಕ್ಕೆ ತೆರಳಿ ಘೋರ ತಪಸ್ಸನ್ನು ಆಚರಿಸುತ್ತಾನೆ. ತಪ್ಪಸಿಗೆ ಮೆಚ್ಚಿದ ಪರಮೇಶ್ವರ ರಾವಣನ ಕೈಗೆ ತನ್ನ ಆತ್ಮ ಲಿಂಗವನ್ನು

ಪೂಜಿಸಲು ನೀಡುತ್ತಾನೆ. ಆದರೆ ನೀನು ಇದನ್ನು ಎಲ್ಲಿಯೂ ಭೂಮಿಯ ಮೇಲೆ ಇಡಬೇಡ ಒಮ್ಮೆ ಎಲ್ಲಾದರೂ ಇಟ್ಟರೆ ಇದು ಅಲ್ಲಿಯೇ ಪ್ರತಿಷ್ಠೆಗೊಳ್ಳುತ್ತದೆ ಎಂದು ಪರಮೇಶ್ವರನು ತಿಳಿಸಿದನು.

ರಾವಣನ ಕೈಗೆ ಕೈಲಾಸಪತಿ ಆತ್ಮಲಿಂಗ ದೊರಕಿರುವದು ದೇವತೆಗಳನ್ನು ಕಂಗೆಡಿಸುತ್ತದೆ. ರಾವಣ ಆತ್ಮಲಿಂಗವನ್ನು ಪಡೆದಿದ್ದರಿಂದ ತನ್ನ ಶಕ್ತಿಯಿಂದ ಜಗತ್ತನ್ನೇ ಹಾಳು ಮಾಡಬಹುದು ಹಾಗೂ ಮನಸಿಚ್ಚೆ ಜಗತ್ತನ್ನೇ ದಂಡಿಸಬಹುದೆಂದು ಹೆದರಿ ಜಗತ್ತನ್ನು ರಕ್ಷಿಸುವಂತೆ ಮಹಾಗಣಪತಿಗೆ ಶರಣಾಗುತ್ತಾರೆ. ಮಹಾ ಗಣಪತಿ ಓರ್ವ ವಟು ರೂಪದಲ್ಲಿ ಗೋಕರ್ಣದ ಸಮುದ್ರದ ತೀರದಲ್ಲಿ ದನಗಳನ್ನು ಮೇಯಿಸುತ್ತಾನೆ. ರಾವಣನು ಕೈಲಾಸದಿಂದ ಲಂಕೆಗೆ ಹೋಗುವ ದಾರಿಯಲ್ಲಿ ಗೋಕರ್ಣದ ಸಮೀಪ ಬಂದಾಗ ದೇವತೆಗಳು ಸಾಯಂಕಾಲವಾಗುವಂತೆ ಭ್ರಮೆಯನ್ನು ಉಂಟುಮಾಡುತ್ತಾರೆ. ಸಾಯಂಕಾಲವಾಯಿತೆಂದು ತಿಳಿದು ರಾವಣ ಸಂಧ್ಯಾವಂದನೆ ಮಾಡಲು ಹೋಗಬೇಕೆಂದು ಬಯಸಿ ತನ್ನ ಕೈಯಲ್ಲಿನ ಆತ್ಮಲಿಂಗವನ್ನು ಯಾರಲ್ಲಿ ಕೊಟ್ಟು ಹೋಗಲೆಂದು ನೋಡುತ್ತಿರುವಾಗ ಆತನಿಗೆ ವಟು ರೂಪದ ಮಹಾಗಣಪತಿ ಗೋಚರಿಸುತ್ತಾನೆ. ಆತನನ್ನು ಕರೆದು ಏ ಹುಡುಗ ಇದನ್ನು ಕ್ಷಣಕಾಲ ನಾನು ಸಂಧ್ಯಾವಂದನೆ ಮುಗಿಸಿ ಬರುವವರೆಗೆ ಹಿಡಿದಿಟ್ಟುಕೋ, ನೆಲದ ಮೇಲೆ ಇಡಬಾರದು. ನಾನು ಸಂದ್ಯಾವಂದನೆ ಮುಗಿಸಿ ಬಂದು ಆತ್ಮಲಿಂಗವನ್ನು ಒಯ್ಯುವದಾಗಿ ಹೇಳುತ್ತಾನೆ. ಆಗ ವಟು ರೂಪದಲ್ಲಿರುವ ಗಣಪತಿ ನಾನು ಮೂರು ಸಾರಿ ನಿನ್ನನ್ನು ಕೂಗುತ್ತೇನೆ. ಅಷ್ಟರಲ್ಲಿ ಬರದಿದ್ದರೆ ಈ ಆತ್ಮಲಿಂಗವನ್ನು ಇಲ್ಲಿಯೇ ಇಡುತ್ತೇನೆಂದು ಹೇಳುತ್ತಾನೆ. ಅದಕ್ಕೆ ಒಪ್ಪಿದ ರಾವಣ ಸಮುದ್ರದಲ್ಲಿ ಸ್ನಾನಮಾಡಿ ಸಂಧ್ಯಾವಂದನೆ ಮಾಡಲು ತೆರಳಿದಾಗ ಮಹಾಗಣಪತಿ ಮೂರು ಸಾರಿ ಕೂಗಿ ಆತ್ಮಲಿಂಗವನ್ನು ಅಲ್ಲಿಯೇ ಇಡುತ್ತಾನೆ. ಹೀಗೆ ಶಿವನ ಆತ್ಮಲಿಂಗ ಗೋಕರ್ಣದಲ್ಲಿ ಪ್ರತಿಷ್ಠಾಪನೆಗೊಳ್ಳುತ್ತದೆ. ಸಂಧ್ಯಾವಂದನೆ ಮುಗಿಸಿ ಬಂದು ರಾವಣ ಆತ್ಮಲಿಂಗವನ್ನು ಕಿತ್ತೊಗೆಯಬೇಕೆಂದು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗದಿದ್ದಾಗ ಅದನ್ನು ಅಲ್ಲಿಯೇ ಬಿಟ್ಟು ನೀನು ಮಹಾಬಲ ಎಂದು ಹೇಳಿ ಸಿಟ್ಟಿನಿಂದ ಗಣಪತಿಯ ತಲೆಗೆ ಗುದ್ದಿ ಹೋಗುತ್ತಾನೆ ಇದು ಗೋಕರ್ಣದ ಆತ್ಮಲಿಂಗದ ಹಿನ್ನಲೆಯಾಗಿದೆ. ಇದಕ್ಕೆ ಪೂರಕವಾಗಿ ಗಣಪತಿಯ ತಲೆಭಾಗದಲ್ಲಿ ಸ್ವಲ್ಪ ಕುಣಿ ಬದ್ದಿರುವದನ್ನು ಇಂದಿಗೂ ಕಾಣಬಹುದು. ಈ ಐತಿಹ್ಯದ ಪ್ರಕಾರ ಗೋಕರ್ಣದ ಪ್ರಾಚೀನತೆಯನ್ನು ರಾಮಾಯಣ ಕಾಲಕ್ಕೆ ಸಮಕಾಲೀನ ಎಂಬುದು ದಂತಕಥೆ ಇದೆ.

೬) ಹೆಸರು – **ಕುಂಭೇಶ್ವರ ದೇವಾಲಯ**

ಸ್ಥಳ – ಬಸ್ತಿಪೇಟೆ, ಜೈನಬಸದಿಯ ಹತ್ತಿರ

ಕಾಲ – ಕ್ರಿ.ಶ. ೧೨ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೨೨.೪೭ ಮೀ ಉದ್ದ, ೭.೪ ಮೀ ಅಗಲ

ಕುಂಭೇಶ್ವರ ದೇವಾಲಯ ಕುಮಟಾದ ಪ್ರಾಚೀನ ದೇವಾಲಯವಾಗಿದ್ದು ಪೂರ್ವಾಭಿಮುಖವಾಗಿದೆ. ಇದು ಬಸ್ತಿಪೇಟೆ ಬಳಿ ಇದೆ. ಒಳಭಾಗ ಗರ್ಭಗೃಹ ಸಭಾಮಂಟಪವನ್ನೊಳಗೊಂಡಿದೆ.

ಗರ್ಭಗೃಹದಲ್ಲಿ ಕುಂಭೇಶ್ವರ ಲಿಂಗವಿದೆ. ಒಂದೇ ಪ್ರವೇಶ ದ್ವಾರವಿದೆ. ದ್ವಾರದಲ್ಲಿ ಯಾವುದೇ ವಿಶೇಷವಾದ ಅಲಂಕಾರತೆ ಇಲ್ಲದೇ ಬಾಗಿಲ ದ್ವಾರದಲ್ಲಿ ಇಬ್ಬರು ದ್ವಾರಪಾಲಕರಿದ್ದಾರೆ. ಗರ್ಭಗೃಹದ ಹೊರಭಾಗದಲ್ಲಿ ನಂದಿ ಮಂಟಪವಿದೆ. ನಂದಿ ಮಂಟಪದಲ್ಲಿ ದೇವರ ಬಲಕ್ಕೆ ವಿಘ್ನನಿವಾರಕನಾದ ಮಹಾಗಣಪತಿ ಮೂರ್ತಿ ಇದೆ. ಎಡಭಾಗದಲ್ಲಿ ಮಹಿಷಾಸುರಮರ್ಧಿನಿ ಮೂರ್ತಿಇದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರವನ್ನೊಳಗೊಂಡಿದೆ, ಶಿಖರದ ತುದಿಯ ಕವಚ ತಾಮ್ರದಿಂದ ಆವೃತವಾಗಿದೆ. ಮೇಲೆ ಕಂಚಿನ ಕಲಶವಿದೆ.

ದೇವಾಲಯದ ಎಡಕ್ಕೆ ಇರುವ ಬಾವಿ ಸುಮ್ನಾ ತೀರ್ಥ ಎಂದು ಕರೆಯಲ್ಪಡುತ್ತಿದೆ. ಈಶಾನ್ಯ ದಿಕ್ಕಿಗೆ ನಾಗರ ಕಲ್ಲುಗಳಿವೆ. ನಾಗದೋಷ ಮುಕ್ತಿಗೆ ಪ್ರಸಿದ್ಧವಾಗಿದೆ. ನಾಗರ ಪಂಚಮಿಯ ದಿವಸ ನೂರಾರು ಭಕ್ತರು ವಿಶೇಷವಾಗಿ ಪೂಜೆ ಸಲ್ಲಿಸುತ್ತಾರೆ.

ಐತಿಹ್ಯ: ಈ ಪ್ರದೇಶವನ್ನು ಹುಂಡ ದೈತ್ಯನ ಮಗನಾದ ಕುಂಭಾಸುರನು ಆಳುತ್ತಿದ್ದನು. ಆತನು ಬ್ರಹ್ಮನಿಂದ ಪಡೆದ ವರಬಲದಿಂದಾಗಿ ದೇವತೆಗಳನ್ನು ಪಿಡಿಸಿದನು. ಆಗ ದೇವತೆಗಳು "ಉದ್ವಾಲಖ" ಋಷಿಯ ಮಾರ್ಗದರ್ಶನದಂತೆ ಲಿಂಗರೂಪಿಯಾದ ದೇವಿಯನ್ನು ಸ್ತುತಿಸಿದರು. ದೇವಿಯು ಪ್ರತ್ಯಕ್ಷಗೊಂಡುಕುಂಬಾಸುರನನ್ನು ವಧಿಸಿ ಲಿಂಗದಲ್ಲಿ ಲೀನಳಾದಳು. ಅಂದಿನಿಂದ ಅ ಲಿಂಗವೇ "ಕುಂಭೇಶ್ವರ" ಹಾಗೂ ಈ ಊರು "ಕುಂಭಾಪುರ" ಎಂದು ಪ್ರಸಿದ್ಧಿ ಹೊಂದಿತೆಂಬುದು ದಂತಕಥೆ. ಕದಂಬರ ೧೨ನೇ ಶತಮಾನದ ದೊರೆತ ಉಮಾಮಹೇಶ್ವರ ಪ್ರಭಾವಳಿ ಶಾಸನ[೩೬] ಕದಂಬ ಅರಸ ಇಮ್ಮಡಿ ಕಾಮದೇವರಸನು (೧೦೭೮-೧೧೨೦) ಕುಂಭೇಶ್ವರ ದೇವರಿಗೆ ೧೪ಮಕ್ಕಿಜಮೀನನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಮಂಡಲಾಧಿಕಾರಿ ದೇವರಸ ಉತ್ತರ ದಿಕ್ಕಿನಲ್ಲಿ ೫ ಮಕ್ಕಿ ಜಮೀನನ್ನು ದಾನ ನೀಡಿದನೆಂದು, ಹಾಗೂ ತೆರಳಿದಿತ್ಯ ಮಸನೀಸೆಟ್ಟಿ, ಹಾಗೂ ಮುನ್ನೂರಳವೆ ಸೆಟ್ಟಿಗಳು ಸೇರಿ ಶಿವಾಲಯ ನಿರ್ಮಿಸಿ ೫ ಮೂಡೆ ಮಕ್ಕಿ ಜಮೀನನ್ನು ದತ್ತಿ ನೀಡಿದರು. ರಾಚಯ್ಯದೇವ, ಮಸಣಿಸೆಟ್ಟಿ, ವಿನ್ನಿಸೆಟ್ಟಿ ಮತ್ತು ಅಂಗರವಳ್ಳಿಯ ಕಾಮಯ್ಯ ನಾಯಕ ೧ ಮೂಡೆ ಜಮೀನನ್ನು ದತ್ತಿ ನೀಡಿದರು. ಈ ಕಾರಣದಿಂದ ಈ ದೇವಾಲಯ ೧೨ನೇ ಶತಮಾನಕ್ಕಿಂತ ಮೊದಲೇ ನಿರ್ಮಾಣಗೊಂಡ ಬಗ್ಗೆ ವಿವರಣೆ ಸಿಗುತ್ತಿಲ್ಲ.

೭) ಹೆಸರು – **ಭೈರವೇಶ್ವರ**
ಸ್ಥಳ – ಯಾಣ

ಬೃಹದಾಕಾರದ ಬಂಡೆಯ ಆಳದಲ್ಲಿ ಅವಿತಿರುವ ಭೈರವೇಶ್ವರನ ಗುಹಾಂತರ ದೇವಾಲಯ ಪ್ರಕೃತಿಯ ಪವಾಡ, ಮನುಷ್ಯರು ನಿರ್ಮಿಸದ ಈ ದೇವಾಲಯದಲ್ಲಿ ಕಲ್ಲಿನಲ್ಲಿ ಆವಿರ್ಭವಿಸಿದ ಶಿವಾಲಯ ಶಿವನ ಜಡೆಯಿಂದ ನೀರು ಬಿಳುವದನ್ನು ನೋಡಿ ಪೂಜೆ ಪ್ರಾರಂಭಿಸಿದರು. ಈ ನೆಲೆ ದೇವಾಲಯವೆನಿಸಿದೆ.[೪೦]

ಐತಿಹ್ಯ: ಯಾಣದ ಘಟ್ಟ ಹತ್ತಲು ಬಲು ಕಷ್ಟ. ಹೀಗಾಗಿ "ಹಣ ಇದ್ದರೆ ಗೋಕರ್ಣ, ಸೊಕ್ಕಿದ್ದರೆ ಯಾಣ" ಎಂಬ ಗಾದೆಮಾತಿದೆ. ಪುರಾತನ ಪುಣ್ಯ ಕ್ಷೇತ್ರ ಯಾಣ ನಿಸರ್ಗ ಸುಂದರ ತಾಣವಾಗಿದೆ. ಭಸ್ಮಾಸುರನು ತಾನು ಮುಟ್ಟಿದೆಲ್ಲ ಭಸ್ಮವಾಗಲಿ, ಎಂಬ ವರವನ್ನು ಶಿವನಿಂದ ಪಡೆದ ಕಥೆ ಜನಜನಿತ. ಶಿವನಿಂದ ಪಡೆದ ವರದಿಂದಲೇ ಶಿವನನ್ನು ಭಸ್ಮ ಮಾಡಿ ಬಿಡಬೇಕೆಂದು ಪ್ರಯೋಗಿಸಲು ಪ್ರಯತ್ನಿಸಿದಾಗ ಶಿವನು ವಿಷ್ಣುವನ್ನು ಮೋಹಿನಿಯ ರೂಪದಲ್ಲಿ ಕಳುಹಿಸಿ ತಾನು ನೀಡಿದ ವರ ಶಾಪವಾಗುವಂತೆ ಮಾಡಿದನೆಂಬ ದಂತಕಥೆಯಿದೆ.

ಭಸ್ಮಾಸುರ ತ್ರಿಪುರ ಸುಂದರಿ (ಜಗನ್ಮೋಹಿನಿ)ಯ ಸೌಂದರ್ಯಕ್ಕೆ ಮಾರು ಹೋಗಿ ಆಕೆ ಹೇಳಿದಂತೆ ನಟಿಸಿ ಶಿವನಿಂದ ಪಡೆದ ವರದಿಂದಲೇ ಭಸ್ಮವಾದ. ಹೀಗಾಗಿ ಯಾಣದ ಮಣ್ಣು ಇವತ್ತಿಗೂ ಸುಟ್ಟ ಮಣ್ಣಿ (ಕಪ್ಪು ಮಣ್ಣು)ನಂತೆ ಕಾಣುತ್ತದೆ. ಪ್ರತಿವರ್ಷ ಮಹಾಶಿವರಾತ್ರಿಯಂದು ಇಲ್ಲಿ ಜಾತ್ರಾ ಉತ್ಸವ ನಡೆಯುತ್ತದೆ. ಆ ದಿವಸ ಚಂಡಿ ನದಿಯಲ್ಲಿ ಸ್ನಾನ ಮಾಡಿ ಭೈರವೇಶ್ವರನನ್ನು ಪೂಜಿಸಿ ಒಂದು ತಂಬಿಗೆಯಲ್ಲಿ ನೀರನ್ನು ತುಂಬಿಕೊಂಡು ಹೋಗಿ ದಕ್ಷಿಣ ಕಾಶಿ ಎಂದೇ ಹೆಸರು ವಾಸಿಯಾದ ಗೋಕರ್ಣದ ಮಹಾಬಲೇಶ್ವರನಿಗೆ ಅಭಿಷೇಕ ಮಾಡಿದರೆ ಪುಣ್ಯ ಲಭಿಸುತ್ತದೆ ಎಂಬ ಪ್ರತೀತಿ ಇದೆ.

ನಿಸರ್ಗನಿರ್ಮಿತ ದೇವಾಲಯವಾಗಿರುವ ಯಾಣವು, ಕುಮಟಾದಿಂದ ೨೪ ಕಿ.ಮೀ. ದೂರದಲ್ಲಿರುವ ಸಹ್ಯಾದ್ರಿಯ ಸೆರಗಿನ ಕೊನೆಯ ಕಂದರವೇ ಯಾಣ. ದೇವಿಮನೆ ಘಟ್ಟ ಹಾಗೂ ವಡ್ಡಿ ಘಟ್ಟದ ಮಧ್ಯದಲ್ಲಿದೆ. ಯಾಣದಲ್ಲಿ ಕೃಷ್ಣಾಕ್ಷ ದೈತ್ಯನ। ಗೋಣನರಿದಾ ಭೈರವೇಶ್ವರ। ಕಾಣನಿಸುತ ಲಿಂಗದಲ್ಲಿದ್ದಾನೆ.[೪೧] ಏಣ–ಯಾಣ, ಏಣ–ಎನ್ನುವುದಕ್ಕೆ ಸೀಳಾದ ಶಿಲೆ, ಕಡಿದಾದ ಶಿಲಾಭಾಗ ಎಂದು ಅರ್ಥ. ಎತ್ತರಕ್ಕೆ ತಲುಪಲು ಏರುವಿಕೆ ಅಗತ್ಯ. ಏಣ ಏ ಅಕ್ಷರಕ್ಕೆ ಬದಲಾಗಿ 'ಯಾ' ಅಕ್ಷರ ಬಳಸುವ ರೂಢಿಯಿದೆ. ಹಾಗಾಗಿ ಏಣ ನಂತರದಲ್ಲಿ ಯಾಣವಾಗಿದೆ.[೪೨]

ಯಾಣದಲ್ಲಿ ೧೨೦ ಮೀಟರ್ ಹಾಗೂ ೯೦ ಮೀಟರ್ ಎತ್ತರವಾದ ಎರಡು ದೊಡ್ಡದಾದ ಕಲ್ಲಿನ ಬಂಡೆಗಳಿವೆ. ಸಾಮಾನ್ಯವಾಗಿ ಇವುಗಳನ್ನು ಭೈರವ ಶಿಖರ ಮತ್ತು ಮೋಹಿನಿ ಶಿಖರವೆಂದು ಕರೆಯಲಾಗುತ್ತದೆ. ಗಟ್ಟಿಯಾದ ಈ ಬಂಡೆಗಳು ಕಪ್ಪು ಸುಣ್ಣದ

ಕಲ್ಲಿನಿಂದ ಮಾಡಲ್ಪಟ್ಟಿದೆ. ಇಲ್ಲಿ ಸುಮಾರು ೩೬ ಮೀಟರ ಉದ್ದ ೩ಮೀಟರ ಎತ್ತರವಿರುವ ಒಂದು ಗವಿಯಿದೆ.[೪೩] ಗುಹೆಯಲ್ಲಿ ಉದ್ದವಾಗಿರುವ ಭೈರವೇಶ್ವರನ ಅಗಲವಾದ ಜಡೆಯಿಂದ ಸದಾಕಾಲ ನೀರು ಬಿಳುತ್ತಿರುತ್ತದೆ. ಇದನ್ನು ಗಂಗೋದ್ಭವ ಎಂದು ಹೇಳಲಾಗುತ್ತದೆ. ಭೈರವೇಶ್ವರನ ಮೂರ್ತಿಯ ಎದುರು ದೊಡ್ಡವಾದ ಶಿವಲಿಂಗವಿದೆ. ಅದನ್ನು ಕಣಶಿಲೆಯಿಂದ ಮಾಡಿದ್ದು, ಈ ಶಿವಲಿಂಗದ ಮೇಲೆ ಸದಾಕಾಲ ನೀರಿನ ಧಾರೆಯು ಬೀಳುತ್ತಿರುತ್ತದೆ.ಇಲ್ಲಿಂದ ಸ್ವಲ್ಪ ದೂರದಲ್ಲಿ ದಕ್ಷಿಣ ದಿಕ್ಕಿನಲ್ಲಿ ೯ ಅಡಿ ಎತ್ತರದ ಚಂಡಿಕಾ ದೇವತೆಯ ಕಂಚಿನ ವಿಗ್ರಹವಿದೆ.

೮)	ಹೆಸರು	–	**ಮಾರ್ಕಾಂಡೇಶ್ವರ ದೇವಾಲಯ**
	ಸ್ಥಳ	–	ಹನೇಹಳ್ಳಿ ಗ್ರಾಮದ ಉತ್ತರದ ಕೊನೆಯ ಭಾಗದಲ್ಲಿ ಇದೆ.
	ಕಾಲ	–	ಕ್ರಿ.ಶ ೧೬ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
	ಅಳತೆ	–	೧೮.೨೮ಮೀ ಉದ್ದ, ೧೦.೬೬ ಮೀ ಅಗಲ

ಹನೇಹಳ್ಳಿ ಗ್ರಾಮದ ಉತ್ತರದ ಕೊನೆಯಭಾಗದಲ್ಲಿ ಮಾರ್ಕಾಂಡೇಶ್ವರ ದೇವಾಲಯವಿದ್ದು ಪೂರ್ವಾಭಿಮುಖವಾಗಿದೆ. ಇದು ಸಾಂಧಾರ ಮಾದರಿಯಾಗಿದೆ. ಮಾರ್ಕಾಂಡೆಶ್ವರ ದೇವಾಲಯದ ಗರ್ಭಗೃಹದಲ್ಲಿ ಮಾರ್ಕಾಂಡೆಶ್ವರ ದೇವರ ಮೂರ್ತಿ ಸ್ಥಾಪಿಸಲಾಗಿದೆ. ಗರ್ಭಗೃಹವು ಅಷ್ಟಭುಜಾಕೃತಿಯ ವಿನ್ಯಾಸವನ್ನು ಹೊಂದಿದೆ. ನವರಂಗವು ವಿಶಾಲವಾಗಿದೆ. ನವರಂಗ ದ್ವಾರವನ್ನು ಪ್ರವೇಶಿಸಬೇಕಾದರೆ ಆನೆಯ ಶಿಲ್ಪವಿದೆ. ಗರ್ಭಗೃಹದ ಬಾಗಿಲ ಲಲಾಟಬಿಂಬದಲ್ಲಿ ಸುಖಾಸನ ಗಣಪತಿಯ ಮೂರ್ತಿಯಿದೆ. ದೇವಾಲಯದ ಮುಂಭಾಗದಲ್ಲಿ ನಂದಿ ಸ್ತಂಭವಿದೆ. ಸ್ತಂಭದ ತುದಿಯಲ್ಲಿ ಬೆಳ್ಳಿಯಿಂದ ಮಾಡಿದ ಒಂದು ಚಿಕ್ಕದಾದ ನಂದಿಯ ಮೂರ್ತಿಶಿಲ್ಪವಿದೆ. ನಂದಿ ಸ್ತಂಭದ ಕೆಳಗೆ ಈಶ್ವರನ ಮಾನುಷ ರೂಪದ ಮೂರ್ತಿಇದೆ.

ದೇವಾಲಯದ ಹೊರಭಾಗ ೧ ಮೀಟರ ಎತ್ತರವುಳ್ಳ ಅಧಿಷ್ಠಾನವನ್ನು ಹೊಂದಿದೆ. ಭಿತ್ತಿಯಲ್ಲಿ ಮಾರ್ಕಾಂಡೇಯನ ಕಥಾನಕ ಹೇಳುವ ಶಿಲ್ಪಗಳಿವೆ. ಗರ್ಭಗುಡಿಯ ಮೇಲ್ಭಾಗದಲ್ಲಿಯೂ ಸಹ ಅಷ್ಟ ಭೂಜಾಕೃತಿಯ ಶಿಖರವಿದ್ದು ಇಲ್ಲಿ ನಾಗ, ಸಿಂಹ, ಯಕ್ಷರ ಮೂರ್ತಿಗಳು ಇವೆ. ಮೇಲೆ ಕಲಶವಿದೆ.

ಐತಿಹ್ಯ: ಈ ದೇವಾಲಯವುಹನೇಹಳ್ಳಿ ಗ್ರಾಮದ ಒಂದು ಪ್ರಸಿದ್ದ ದೇವಾಲಯವಾಗಿದೆ. ಐತಿಹ್ಯದ ಪ್ರಕಾರ ಹಿಂದೆ ಒಬ್ಬ ಋಷಿ, ಅವನ ಪತ್ನಿ ಕಾಡಿನಲ್ಲಿ ವಾಸವಾಗಿದ್ದರು. ಅವರಿಬ್ಬರು ಶಿವನ ಪೂಜೆಯನ್ನು ಮಾಡುತ್ತಿದ್ದಾಗ ಋಷಿಗೆ ಶಿವನು ಪ್ರತ್ಯಕ್ಷನಾಗಿ ಏನು ವರ ಬೇಕು ಕೇಳು ಎಂದನು. ಆಗ ಆ ಋಷಿಯು ತನಗೆ ಮಕ್ಕಳಿಲ್ಲದ ಕೊರಗು ನೀಗಿಸು ಎಂದನು. ಅದಕ್ಕೆ

ಶಿವನು ಒಬ್ಬ ಒಳ್ಳೆಯ ಮಗನು ಜನಿಸಲಿ ಎಂದು ಆಶೀರ್ವದಿಸಿದನು. ದಿನಕಳೆದಂತೆ ಋಷಿಯ ಪತ್ನಿಯು ಒಂದು ಗಂಡು ಮಗುವಿಗೆ ಜನ್ಮ ನೀಡಿದಳು ಅವನಿಗೆ ಮಾರ್ಕಾಂಡೇಯ ಎಂದು ನಾಮಕರಣ ಮಾಡಲಾಯಿತು.

ಅವನು ಕೂಡ ತನ್ನ ತಂದೆಯಂತೆ ಯಾವಾಗಲೂ ಶಿವನ ಪೂಜೆ ಧ್ಯಾನದಲ್ಲಿ ಮಗ್ನನಾಗುತ್ತಿದ್ದನು. ಮಗನು ದೊಡ್ಡವನಾಗುತ್ತ ಬೆಳೆದನು. ಆದರೆ ತಂದೆ ತಾಯಿಗೆ ಚಿಂತೆ ಶುರುವಾಯಿತು. ತನ್ನ ಮಗ ೧೬ ವರ್ಷ ಮಾತ್ರ ಬದುಕಿರುವುದು ಎಂದು ಆಗಾಗ ದು:ಖಪಡುತ್ತಿದ್ದರು. ಮಾರ್ಕಾಂಡೇಯನಿಗೆ ೧೬ ವಯಸ್ಸಾದಾಗ ತಂದೆ–ತಾಯಿಯ ದು:ಖ ಇನ್ನಷ್ಟು ಹೆಚ್ಚಾಯಿತು. ಇದನ್ನು ನೋಡಿದ ಮಗನು, ತನ್ನ ತಂದೆ ತಾಯಿಗೆ ಸಮಾಧಾನ ಹೇಳಿ ತಾನು ಶಿವನ ಧ್ಯಾನಕ್ಕೆ ಹೋಗಿ ನಿಮ್ಮ ಚಿಂತೆಯನ್ನು ದೂರ ಮಾಡುತ್ತೇನೆಂದು ಹೇಳಿ ಮನೆಯಿಂದ ಹೊರಟನು. ಹೀಗೆ ಅಲೆಯುತ್ತ ಹೋಗಿ ಒಂದು ದಟ್ಟವಾದ ಕಾಡಿನ ಮಧ್ಯೆ ಶಿವಲಿಂಗವನ್ನು ಕಂಡನು. ಅಲ್ಲಯೇ ಉಳಿದು ಪ್ರತಿನಿತ್ಯ ಶಿವನ ಧ್ಯಾನದಲ್ಲಿ ಮಗ್ನನಾಗಿರುತ್ತಿದ್ದನು. ಹೀಗಿರುವಾಗ ಅವನ ಆಯುಷ್ಯವು ಮುಗಿಯುವ ದಿನ ಬಂದಿತು. ಯಮನ ಕಿಂಕರರು ಮಾರ್ಕಾಂಡೇಯನನ್ನು ಕರೆದೊಯ್ಯಲು ಬಂದರು. ಸಾಧ್ಯವಾದಾಗ ಯಮನೇ ಬಂದು ಮಾರ್ಕಾಂಡೇಯನನ್ನು ಎಳೆದೊಯ್ಯಲು ಪ್ರಯತ್ನಿಸಿದನು. ಯಮನು ಆತನ ಕೊರಳಿಗೆ ಹಾಕಿದ ಹಗ್ಗವು ಲಿಂಗವನ್ನು ಆವರಿಸಿರುವದರಿಂದ ಯಮನ ಎಳೆತದಿಂದ ಕೋಪಗೊಂಡು ಶಿವನು ಪ್ರತ್ಯಕ್ಷನಾಗಿ ಮಾರ್ಕಾಂಡೇಯನಿಗೆ ಚಿರಂಜಿವಿಯಾಗಿ ಬಾಳು ಎಂದು ಹರಸಿದ್ದರಿಂದ ನಂತರ. ಮಾರ್ಕಾಂಡೇಶ್ವರ ದೇವಾಲಯವೆಂದು ಪ್ರಸಿದ್ಧವಾಯಿತು.

೯)	ಹೆಸರು	–	**ಈಶ್ವರ ದೇವಾಲಯ**
	ಸ್ಥಳ	–	ಮಿರ್ಜಾನ
	ಕಾಲ	–	ಕ್ರಿ.ಶ. ೧೬–೧೭ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
	ಅಳತೆ	–	೧೨.೫೫ ಮೀ ಉದ್ದ, ೧೦.೧೧ ಮೀ ಅಗಲ

ಕುಮಟಾದಿಂದ ೧೦ ಕಿ.ಮೀ ದೂರದಲ್ಲಿರುವ ಮಿರ್ಜಾನ ಗ್ರಾಮದಲ್ಲಿ ಈಶ್ವರ ದೇವಾಲಯವಿದೆ. ಈ ದೇವಾಲಯ ಉತ್ತರಾಭಿಮುಖವಾಗಿದ್ದು ಗರ್ಭಗೃಹ ಮತ್ತು ಅಂತರಾಳವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು ಚೌಕಾಕಾರದಪೀಠದ ಮೇಲೆ ಆಯತಾಕೃತಿಯ ವಿನ್ಯಾಸಗಳುಳ್ಳ ಪೀಠವಿದ್ದು ಮಧ್ಯದಲ್ಲಿ ಶಿವಲಿಂಗವಿದೆ.

ಅಂತರಾಳದಲ್ಲಿ ನಂದಿಯ ವಿಗ್ರಹವಿದೆ. ಗರ್ಭಗೃಹದ ದ್ವಾರವು ಚಿಕ್ಕದಾಗಿದೆ. ದೇವಾಲಯವನ್ನು ಪ್ರವೇಶಿಸಬೇಕಾದರೆ ಒಂದು ಆಯತಾಕಾರದ ಶಿಲಾಸ್ತಂಭವಿದೆ.

ಒಂದನೇಯ ಪಟ್ಟಿಯಲ್ಲಿ ನರ್ತಕಿಯರ ಶಿಲ್ಪ ಹಾಗೂ ಶಿವಲಿಂಗವಿದೆ. ಎರಡನೇಯ ಪಟ್ಟಿಯಲ್ಲಿ ಹುಲಿಯು ಮಾನವನ ಮೇಲೆ ಎರಗುವಂತಿದೆ. ಮೂರನೇಯ ಪಟ್ಟಿಯಲ್ಲಿ ಒಬ್ಬ ಪುರುಷನು ಲೋಕಾಭಿರಾಮವಾಗಿ ಸಖಿಯೊರಡನೆ ಕುಳಿತುಕೊಂಡಿದ್ದಾನೆ. ನಾಲ್ಕನೇಯ ಪಟ್ಟಿಯಲ್ಲಿ ಯುದ್ಧ ನಡೆಸಲು ಸನ್ನದ್ಧರಾಗುವಂತೆ, ಐದು, ಆರು, ಏಳನೇಯ ಪಟ್ಟಿಯಲ್ಲಿ ಯುದ್ಧದ ದೃಶ್ಯಾವಳಿಗಳನ್ನು ಕಾಣಬಹುದು. ಇವೆಲ್ಲಾ ಪಟ್ಟಿಕೆಗಳ ನಡುವೆ ಅಡ್ಡಪಟ್ಟಿಗಳಿವೆ. ಅವುಗಳ ಮೇಲೆ ಲತೆ, ಬಳ್ಳಿ, ಹಂಸ, ಗಜ ಮೊದಲಾದ ಚಿತ್ರಗಳ ಅಲಂಕೃತೆಯನ್ನು ಕಾಣಬಹುದು. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಮತ್ತು ಕಲಶವನ್ನೊಳಗೊಂಡಿದೆ.

೧೦) ಹೆಸರು – **ಮಹಾಲಿಂಗೇಶ್ವರ**
ಸ್ಥಳ – ಹಿರೇಗುತ್ತಿ ರಸ್ತೆ ಪಕ್ಕದಲ್ಲಿ
ಕಾಲ – ಕ್ರಿ.ಶ. ೧೯ನೇ ಶತಮಾನ
ವಸ್ತು – ಜಂಬಿಟ್ಟಿಗೆ(ಲೆಟರೈಟ್)
ಅಳತೆ – ೭.೧೦ ಮೀ ಉದ್ದ, ೪.೬೩ ಮೀ ಅಗಲ

ಕುಮಟಾದಿಂದ ೧೮ ಕಿ.ಮೀ ದೂರದಲ್ಲಿ ಹಿರೇಗುತ್ತಿ ಗ್ರಾಮದಲ್ಲಿ ಮಹಾಲಿಂಗೇಶ್ವರ ದೇವಾಲಯ ಇದೆ. ಈ ದೇವಾಲಯ ಪೂರ್ವಾಭಿಮುಖವಾಗಿದೆ. ದೇವಾಲಯವು ನಿರಂಧಾರ ಮಾದರಿಯದಾಗಿದ್ದು ಗರ್ಭಗೃಹ ಮತ್ತು ಅಂತರಾಳ ಒಳಗೊಂಡಿದೆ. ದೇವಾಲಯದ ಹೊರಭಾಗ ಅಧಿಷ್ಠಾನ , ಭಿತ್ತಿ ಹೊಂದಿದೆ. ದೇವಾಲಯವು ಚೌಕಾಕಾರದಲ್ಲಿದ್ದು ಶಿಖರವು ಅರ್ಧವೃತ್ತಾಕಾರದಲ್ಲಿದೆ. ಮೇಲೆ ಪಂಚಲೋಹದಿಂದ ಮಾಡಿದ ಕಲಶವಿದೆ.

ಗರ್ಭಗೃಹದಲ್ಲಿ ಕಪ್ಪು ಶಿಲೆಯಿಂದ ಮಾಡಿದ ಶಿವಲಿಂಗವಿದೆ. ಇಲ್ಲಿ ವಿಜಯನಗರ ಕಾಲದ ಶಾಸನ ಇದೆ. ವೀರ ಪ್ರತಾಪದೇವರಾಯ ವಿಜಯನಗರ ಸಾಮ್ರಾಜ್ಯದಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಮಹಾಪ್ರಧಾನ ಯಿಚಪ್ಪ ಒಡೆಯರು ಹೊನ್ನಾವರ ರಾಜಧಾನಿಯಲ್ಲಿದ್ದು ಹೈವೆ, ತುಳು, ಕೊಂಕಣ ರಾಜ್ಯಗಳನ್ನು ಆಳುತ್ತಿದ್ದಾಗ ಕ್ರಿ.ಶ. ೧೪೧೧ ರಲ್ಲಿ ಯಿಚಪ್ಪ ಒಡೆಯರು ನಾಗೇಂದ್ರತೀರ್ಥ ಶ್ರೀಪಾದರಿಗೆ ಕೊಟ್ಟ ಶಾಸನಪತ್ರದ ಕ್ರಮವೇನೆಂದರೆ "ನಾಡಗುತ್ತಿ-೧೨" ಈ ಅರಮನೆಯನ್ನು ಹಾಗೂ ಚಿಕ್ಕಗುತ್ತಿಯ ಬಾಳಿದ ಅರಮನೆ ದಾನನೀಡಿದ್ದನೆಂದು ತಿಳಿಸುತ್ತದೆ[೪೪].

೧೧) ಹೆಸರು – **ಬಂಕನಾಥೇಶ್ವರ ದೇವಾಲಯ**
ಸ್ಥಳ – ಬಂಕಿಕೊಡ್ಲ ಗ್ರಾಮದ ಉತ್ತರ ದಿಕ್ಕಿನ ಗಡಿಭಾಗ
ಕಾಲ – ಕ್ರಿ.ಶ. ೧೯–೨೦ ನೇ ಶತಮಾನ
ವಸ್ತು – ಜಂಬಿಟ್ಟಿಗೆ (ಲೆಟರೈಟ್)
ಅಳತೆ – ೧೩.೭೧ ಮೀ ಉದ್ದ, ೪.೨೬ ಮೀ ಅಗಲ

ಕುಮಟಾದಿಂದ ಉತ್ತರಕ್ಕೆ ೨೬ ಕಿ.ಮೀ ದೂರದಲ್ಲಿ, ಬಂಕನಾಥೇಶ್ವರ ದೇವಾಲಯ ಇದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಸಾಂಧಾರ ಮಾದರಿಯ ದೇವಾಲಯವಾಗಿದೆ. ದೇವಾಲಯ ಗರ್ಭಗೃಹ, ನವರಂಗ, ಸಭಾಮಂಟಪ ಒಳಗೊಂಡಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ಬಂಕನಾಥೇಶ್ವರ ಶಿವಲಿಂಗವಿದೆ. ಶಿವಲಿಂಗದ ಹಿಂಭಾಗದಲ್ಲಿ ಪಂಚಲೋಹದ ಶಿವನ ಉತ್ಸವ ಮೂರ್ತಿ ಇದ್ದು. ಶಿವನ ತಲೆಯ ಮೇಲೆ ಒಂಬತ್ತು ಹೆಡೆಯ ಹಾವು ರಕ್ಷಣೆ ನೀಡುವಂತಿದೆ. ಶಿವನ ಜಟಾಮುಕುಟದಲ್ಲಿ ಗಂಗೆಯನ್ನು ಬಿಂಬಿಸಲಾಗಿದೆ. ನವರಂಗದಲ್ಲಿ ನಂದಿಯ ಶಿಲ್ಪವಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ.

೧೨) ಹೆಸರು	–	**ಶಂಭುಲಿಂಗೇಶ್ವರ ದೇವಾಲಯ**
ಸ್ಥಳ	–	ಮೂರೂರು, ಊರ ಮಧ್ಯಭಾಗದಲ್ಲಿ
ಕಾಲ	–	೧೯-೨೦ ನೇ ಶತಮಾನ
ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
ಅಳತೆ	–	೧೧.೭೭ ಮೀ ಉದ್ದ, ೬.೦೫ ಮೀ ಅಗಲ

ಕುಮಟಾದಿಂದ ೧೦ ಕಿ.ಮೀ ದೂರದಲ್ಲಿ ಈ ದೇವಾಲಯವಿದೆ. ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಸಾಂಧಾರ ಮಾದರಿಯದಾಗಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಪಾಣಿಪೀಠದ ಮೇಲೆ ಶಿವಲಿಂಗವಿದೆ. ಗರ್ಭಗೃಹದ ದ್ವಾರದ ಮೇಲೆ ಪದ್ಮದಳದ ಅಲಂಕೃತವಾದ ಕೆತ್ತನೆ ಇದೆ. ನವರಂಗದಲ್ಲಿ ಕ್ಲೋರೈಟಿಕ ಸಿಸ್ಟ ಕೆತ್ತಿದ ನಂದಿಯ ಮೂರ್ತಿಶಿಲ್ಪವಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರವನ್ನೊಳಗೊಂಡಿದೆ. ಶಿಖರವು ಚೌಕಾಕಾರವಾಗಿದ್ದು ವರ್ತುಳಾಕಾರದ ಗುಮ್ಮಟವನ್ನು ಹೊಂದಿದೆ. ಮೇಲೆ ಕಲಶವಿದೆ.

೧೩) ಹೆಸರು	–	**ಸಪ್ತಕೋಟೀಶ್ವರ ದೇವಾಲಯ**
ಸ್ಥಳ	–	ಗೋಕರ್ಣ, ಕೋಟೀತೀರ್ಥ ಮಧ್ಯ ಗೋಕರ್ಣದಲ್ಲಿ
ಕಾಲ	–	ಕ್ರಿ.ಶ. ೧೯-೨೦ ನೇಶತಮಾನ
ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
ಅಳತೆ	–	೪.೫೭ ಮೀ ಉದ್ದ, ೩.೦೪ ಮೀ ಅಗಲ

ಕುಮಟಾದಿಂದ ೩೧ ಕಿ.ಮೀ ದೂರದಲ್ಲಿ ಸಪ್ತಕೋಟೀಶ್ವರ ದೇವಾಲಯವಿದೆ. ಈ ದೇವಾಲಯ ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಒಳಗೊಂಡಿದೆ. ಗರ್ಭಗೃಹದಲ್ಲಿ ಸಪ್ತಕೋಟೀಶ್ವರನ ಲಿಂಗ ಇದೆ. ಹೊರಗಡೆ ಶಿವನ ವಾಹನವಾದ ನಂದಿಯ ಮೂರ್ತಿಶಿಲ್ಪವಿದೆ.ದೇವಾಲಯದ ಹೊರ ಭಾಗ ಅಧಿಷ್ಠಾನ, ಭಿತ್ತಿಯನ್ನೊಳಗೊಂಡಿದೆ.

ಭಿತ್ತಿಯು ಭಿತ್ತಿಯ ಮೇಲ್ಭಾಗದಲ್ಲಿ ಇಳಿಜಾರಾದ ಲೂಪಾಕಾರದ ಶಿಖರವಿದೆ. ಕರಾವಳಿ ಪ್ರದೇಶದಲ್ಲಿ ಮಳೆಯ ನೀರು ಸರಾಗವಾಗಿ ಹೋಗಲು ರಕ್ಷಣೆಗಾಗಿ ಮನೆಯ ಮಾಡನ್ನು ಇಳಿಜಾರಾಗಿ ನಿರ್ಮಿಸಿರುವರು. ಇದು ಕರಾವಳಿ ಪ್ರದೇಶದ ವೈಶಿಷ್ಟ್ಯತೆಯು ಹೌದು.

೧೪) ಹೆಸರು	–	**ಪಿತೃಸ್ಥಾಲೇಶ್ವರ ದೇವಾಲಯ**
ಸ್ಥಳ	–	ಗೋಕರ್ಣ, ಅರಬ್ಬಿ ಸಮುದ್ರ ದಂಡೆಯ ಮೇಲಿದೆ
ಕಾಲ	–	ಕ್ರಿ.ಶ. ೧೯–೨೦ ನೇ ಶತಮಾನ
ವಸ್ತು	–	ಜಂಬಿಟ್ಟಿಗೆ(ಲೇಟರೈಟ್)
ಅಳತೆ	–	೭.೬೨ ಮೀ ಉದ್ದ, ೩.೬೨ ಮೀ ಅಗಲ

ಕುಮಟಾದಿಂದ ವಾಯುವ್ಯಕ್ಕೆ ೩೧ ಕಿ.ಮೀ ದೂರದಲ್ಲಿ ಪಿತೃಸ್ಥಾಲೇಶ್ವರ ದೇವಾಲಯವಿದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಮತ್ತು ಅಂತರಾಳವನ್ನು ಒಳಗೊಂಡಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ಪಿತೃಸ್ಥಾಲೇಶ್ವರ ಲಿಂಗವಿದೆ. ಇದರ ಪ್ರವೇಶ ದ್ವಾರ ಸಣ್ಣದಾಗಿದ್ದು ದ್ವಾರಬಂಧದ ಲಲಾಟದಲ್ಲಿ ಯಾವುದೇ ಕೆತ್ತನೆ ಕಾಣುವುದಿಲ್ಲ. ದೇವಾಲಯದ ಹೊರಭಾಗ ಅಧಿಷ್ಠಾನ ಮತ್ತು ಭಿತ್ತಿಯನ್ನು ಮಾತ್ರ ಒಳಗೊಂಡಿದೆ.

ಐತಿಹ್ಯ: ಬ್ರಹ್ಮನೇ ಸಂಧ್ಯಾ ಎಂಬ ಸ್ತ್ರೀ ರೂಪದಲ್ಲಿ ಬಂದು ಶಿವನನ್ನು ಕುರಿತು ತಪಸ್ಸನ್ನಾಚರಿಸಿದ. ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಶಿವ ಇಲ್ಲಿ ಮಾಡಿದ ಶ್ರಾದ್ಧಕ್ಕೆ ವಿಶೇಷ ಪುಣ್ಯ ಭಾಗವನ್ನು ಧಾರೆ ಎರೆದನೆಂಬುದು ಸ್ಥಳೀಯ ಪ್ರತೀತಿಯಾಗಿದೆ.

ಪುರಾಣದ ಪ್ರಕಾರ: ಬ್ರಹ್ಮನ ಮಾನಸ ಕುವರಿಯಾದ ಸುರಭಿ (ಆಕಳುಗಳ ಮೂಲ ತಾಯಿ) ತನಗೆ ವಾಸಸ್ಥಳ ಯಾವುದು ಎಂದು ಕೇಳಲು ಬ್ರಹ್ಮನು ಪಾತಾಳದಲ್ಲಿರುವ ರುದ್ರನನ್ನು ಕೇಳೆಂದನು. ಆ ಪ್ರಕಾರ ಸುರಭಿಯು ಪಾತಾಳಕ್ಕೆ ಹೋಗಿ ರುದ್ರನನ್ನು ಕೇಳಲು ಅವನು ಗೋಕರ್ಣದಲ್ಲಿರುವುದು ಎಂದು ಹೇಳಿದಾಗ, ತನ್ನ ಹಾಲಿನಿಂದ ಲಿಂಗವನ್ನು ಸ್ಥಾಪಿಸಿಕೊಂಡು ತಪಸ್ಸನ್ನು ಮಾಡಿದಳು. ಅವಳ ತಪಸ್ಸಿಗೆ ವಿಷ್ಣು ಪ್ರತ್ಯಕ್ಷನಾಗಿ ಅವಳ ಬೇಡಿಕೆಯಂತೆ ಅವಳ ಹಾಲು ದೇವರ್ಷಿ ಪಿತ್ರ ತರ್ಪಣೆಗೆ ಯೋಗ್ಯವಾದದ್ದಂತಲೂ ಅವಳು ಸ್ಥಾಪಿಸಿದ ಶಿವಲಿಂಗವು ಪೂಜ್ಯವಾಗಲೆಂದು ವರವಿತ್ತನು. ಈಶ್ವರನಿಂದ ಸಿದ್ಧಿಯನ್ನು ಹೊಂದಿ ಸಮುದ್ರದಲ್ಲಿರುವ ಗೋಬಿಲದ ಮಾರ್ಗವಾಗಿ ಪಾತಾಳಕ್ಕೆ ಹೋಗಿ ಉಳಿದು ೬ ತಿಂಗಳಿಗೊಮ್ಮೆ ಅದೇ ಬಿಲದ ಮಾರ್ಗವಾಗಿ ಬಂದು ತನ್ನ ಹಾಲಿನಿಂದ ಆ ಸ್ಥಳವನ್ನು ಪವಿತ್ರ ಮಾಡುವಳು. ಪಿತ್ರಗಳ ಬಗ್ಗೆ ಇಲ್ಲಿ ಮಾಡಿದ ದಾನಗಳು ಅನಂತ ಫಲಗಳನ್ನು ಕೊಡುವದು ಎಂಬ ನಂಬಿಕೆ ಇದೆ. ಪಾಪವನ್ನು ದೂರ ಮಾಡುವ ಸ್ಥಳವಾದರಿಂದ "ವಿಧೂತ್+ಪಾಪಸ್ಥಾಲಿ" ಎಂಬ ಹೆಸರು ಬಂದು ಇದೇ ಮುಂದೆ ಪಿತ್ರಾಸ್ಥಾಲೀಶ್ವರ ಆಗಿರುವ ಸಾಧ್ಯತೆ ಇದೆ.

ಬ್ರಹ್ಮನು ಸಂಧ್ಯಾ ಎಂಬ ಸ್ತ್ರೀ ರೂಪವನ್ನು ಹೊಂದಿದನು. ನಂತರ ಈ ಸ್ಥಳದಲ್ಲಿ ತಪಸ್ಸು ಮಾಡಿ ಈಶ್ವರನಿಂದ ಸಿದ್ಧಿಯನ್ನು ಪಡೆದು ತನ್ನ ಆ ರೂಪವನ್ನು ದೂರಮಾಡಿಕೊಂಡನು. ಈಕೆಯ ತಪಸ್ಸಿಗೆ ಮೆಚ್ಚಿದ ಶಿವ ಪ್ರತ್ಯಕ್ಷನಾಗಿ ಈ ಸ್ಥಳವು ಪಿತ್ರಸ್ಥಾಲಿ ಎಂಬ ಹೆಸರಿಂದ ಪಿತೃಗಳ ಕ್ಷೇತ್ರವಾಗಲಿ. ಮಾಘ ಬಹುಳ ೧೪ ಮತ್ತು ೩೦ ದಿವಸ ಇಲ್ಲಿ ಪಿಂಡ ಅಥವಾ ತ್ರಿಲೋಧಕವನ್ನು ಕೊಟ್ಟರೆ ಪಿತೃಗಳು ಮುಕ್ತರಾಗಲಿ., ಪಿಶಾಚತ್ವ ಹೊಂದಿದವರ ಬಗ್ಗೆ ಇಲ್ಲಿ ಶ್ರಾದ್ಧ ಮಾಡಿದರೆ ಅವರ ಪಿಶಾಚತ್ವವು ದೂರವಾಗಲಿ ಎಂದು ವರವನ್ನು ಕೊಟ್ಟನೆಂಬುದು ಸ್ಥಳೀಯ ನಂಬಿಕೆಯಾಗಿದೆ.ಈ ಸ್ಥಳದಲ್ಲಿ ಈಗಲೂ ಪ್ರೇತೋದ್ಧಾರ. ಮುಂತಾದ ಪಿತ್ರುಕಾರ್ಯಗಳು ನಡೆಯುತ್ತವೆ.[೪೫]

ಒಟ್ಟಾರೆ ಶೈವ ಪಂಥಕ್ಕೆ ಸಂಬಂಧಿಸಿದಂತೆ ಒಟ್ಟು ಕುಮಟಾ ತಾಲೂಕಿನಲ್ಲಿ ೩೫ ದೇವಾಲಯಗಳಿದ್ದು ಕಲ್ಯಾಣ ಚಾಲುಕ್ಯ, ವಿಜಯನಗರ ಮತ್ತು ಆಧುನಿಕ ಕಾಲಕ್ಕೆ ಸೇರಿವೆ. ಶೈವ ಪಂಥದಲ್ಲಿರುವ ಹೆಚ್ಚಿನ ಎಲ್ಲಾ ದೇವಾಲಯಗಳೆಲ್ಲ ಜೀರ್ಣೋದ್ಧಾರವಾಗಿದ್ದು ಕೆಲವೊಂದು ಮಾತ್ರ ಸುಸ್ಥಿತಿಯಲ್ಲಿವೆ. ಹೆಸರುಗಳು ಬೇರೆ ಬೇರೆ ಇದ್ದರೂ ಕಾಲಭೈರವನನ್ನು ಹೊರತು ಪಡಿಸಿ ಉಳಿದೆಲ್ಲವೂ ಶಿವಲಿಂಗ ರೂಪದಲ್ಲಿಯೇ ಮೂರ್ತಿಶಿಲ್ಪವನ್ನು ಕಾಣಬಹುದು.

ಶೈವ ದೇವಾಲಯಗಳು

ಕ್ರಸಂ	ಸ್ಥಳ	ಹೆಸರು	ಕಾಲ	ಸ್ಥಿತಿ
೧	ಧಾರೇಶ್ವರ, ಧಾರನಾಥ ದೇವಾಲಯದ ಹೊರಗೆ ನೈರುತ್ಯ ದಿಕ್ಕಿಗಿದೆ.	ಆದಿ ಧಾರೇಶ್ವರ ದೇವಾಲಯ	ಕ್ರಿ.ಶ ೧೦-೧೧ ನೇ ಶತಮಾನ	ಸುಸ್ಥಿತಿ
೨	ಧಾರೇಶ್ವರ.	ಧಾರನಾಥ ದೇವಾಲಯ	ಕ್ರಿ.ಶ ೧೧ ನೇ ಶತಮಾನ	ಸುಸ್ಥಿತಿ
೩.	ಗೋಕರ್ಣ, ಮಹಾಬಲೇಶ್ವರ ದೇವಾಲಯದ ಪ್ರದಕ್ಷಿಣಾ ಪಥದ ಬಲಭಾಗದಲ್ಲಿ ಇದೆ	ಆದಿ ಗೋಕರ್ಣೇಶ್ವರ ದೇವಾಲಯ	ಕ್ರಿ.ಶ ೧೧ನೇ ಶತಮಾನ	ಶಿಥಿಲಾವಸ್ಥೆ
೪	ಗೋಕರ್ಣ, ಮಹಾಬಲೇಶ್ವರ ದೇವಾಲಯದ ಪ್ರದಕ್ಷಿಣಾ ಪಥದ ಬಲಭಾಗದಲ್ಲಿ ಇದೆ.	ಸಾಕ್ಷೇಶ್ವರ ದೇವಾಲಯ	ಕ್ರಿ.ಶ ೧೦-೧೧ ನೇ ಶತಮಾನ	ಜೀರ್ಣೋದ್ಧಾರ
೫	ಗೋಕರ್ಣ	ಮಹಾಬಲೇಶ್ವರ ದೇವಾಲಯ	ಕ್ರಿ.ಶ ೧೧-೧೨ ನೇ ಶತಮಾನ	ಸುಸ್ಥಿತಿ
೬	ಬಸ್ತಿಪೇಟೆ, ಜೈನಬಸದಿಯ ಹತ್ತಿರ	ಕುಂಬೇಶ್ವರ ದೇವಾಲಯ	ಕ್ರಿ.ಶ ೧೨ ನೇ ಶತಮಾನ	ಜೀರ್ಣೋದ್ಧಾರ
೭	ಹನಿಹಳ್ಳಿ, ಗ್ರಾಮದ ಉತ್ತರದ ಕೊನೆಯ ಭಾಗದಲ್ಲಿ ಇದೆ.	ಮುಕುಂಡೇಶ್ವರ ದೇವಾಲಯ	ಕ್ರಿ.ಶ ೧೬ ನೇ ಶತಮಾನ	ಜೀರ್ಣೋದ್ಧಾರ

೮	ಮಿರ್ಜಾನ	ಈಶ್ವರ ದೇವಸ್ಥಾನ	ಕ್ರಿ.ಶ ೧೬ – ೧೭ನೇ ಶತಮಾನ	ಜೀರ್ಣೋದ್ಧಾರ
೯	ಮೂರುಕಟ್ಟೆ ರಥಬೀದಿ ಕುಮಟಾ	ಕಾಲಭೈರವ ದೇವಾಲಯ	ಕ್ರಿ.ಶ ೧೬ ನೇ ಶತಮಾನ	ಜೀರ್ಣೋದ್ಧಾರ
೧೦	ಹಿರೇಗುತ್ತಿ ರಸ್ತೆ ಪಕ್ಕದಲ್ಲಿ	ಮಹಾಲಿಂಗೇಶ್ವರ ದೇವಾಲಯ	ಕ್ರಿ.ಶ ೧೯ ನೇ ಶತಮಾನ	ಸುಸ್ಥಿತಿ
೧೧	ಬಂಕಿಕೊಡ್ಲ ಗ್ರಾಮದ ಉತ್ತರದಿಕ್ಕಿನ ಗಡಿಭಾಗ	ಬಂಕನಾಥೇಶ್ವರ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಜೀರ್ಣೋದ್ಧಾರ
೧೨	ಮುರೂರ ಊರ ಮಧ್ಯಭಾಗದಲ್ಲಿ	ಶಂಭುಲಿಂಗೇಶ್ವರ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಜೀರ್ಣೋದ್ಧಾರ
೧೩	ಗೋಕರ್ಣ ಕೋಟಿತೀರ್ಥ ಮಧ್ಯೆ	ಸಪ್ತಕೋಟೇಶ್ವರ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಜೀರ್ಣೋದ್ಧಾರ
೧೪	ಅರಬ್ಬಿ ಸಮುದ್ರದ ದಂಡೆಯ ಮೇಲೆ ಗೋಕರ್ಣ	ಪಿತೃಸಾಲೇಶ್ವರ ದೇವಾಲಯ	ಕ್ರಿ.ಶ ೧೯–೨೦ನೇ ಶತಮಾನ	ಜೀರ್ಣೋದ್ಧಾರ
೧೫.	ಅಬ್ಬೊಳ್ಳಿಗ್ರಾಮದ ಪ್ರಾರಂಭದಲ್ಲಿ	ಈಶ್ವರ ದೇವಸ್ಥಾನ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೧೬.	ಬಡಾಳ ಗ್ರಾಮದ ಪ್ರಾರಂಭದಲ್ಲಿ	ಈಶ್ವರ ದೇವಸ್ಥಾನ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೧೭.	ಅಂತ್ರವಳ್ಳಿ ಗೋಳಿಬೀರ ದೇವಸ್ಥಾನ ಹತ್ತಿರ	ವಿಶ್ವೇಶ್ವರ ದೇವಸ್ಥಾನ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೧೮.	ದೀವಳ್ಳಿ ಊರ ಮಧ್ಯಭಾಗದಲ್ಲಿದೆ	ಈಶ್ವರ ದೇವಸ್ಥಾನ	ಕ್ರಿ.ಶ ೧೯–೨೦ ನೇ ಶತಮಾನ	ಜಿರ್ಣೋದ್ಧಾರ
೧೯.	ಕಲ್ಲಬ್ಬೆ ಗ್ರಾಮದ ಮಧ್ಯಭಾಗದಲ್ಲಿದೆ.	ನಂದಿಕೇಶ್ವರ ದೇವಸ್ಥಾನ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೨೦.	ಕೋಡ್ಕಣಿ ಊರ ಕೊನೆಯಲ್ಲಿ ಇದೆ	ಈಶ್ವರ ದೇವಸ್ಥಾನ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೨೧.	ಶಿರಗುಂಜಿ ಗ್ರಾಮದಿಂದ ಸುಮಾರು ೧.೫ ಕಿ.ಮೀ ದೂರದಲ್ಲಿ ಇದೆ	ಶಿರಗುಂಜೇಶ್ವರ ದೇವಸ್ಥಾನ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೨೨.	ನಾಡುಮಾಸ್ಕೇರಿ ಗ್ರಾಮದ ಗಂಗಾದೇವಾಲಯಕ್ಕೆ ಹೋಗುವ ಮಾರ್ಗದಲ್ಲಿ	ಗಂಗಾಧರೇಶ್ವರ ದೇವಸ್ಥಾನ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೨೩.	ವಾಲಗಳ್ಳಿ ಊರಿನ ಮಧ್ಯಭಾಗದಲ್ಲಿ	ಆದಿಮಲ್ಲಿಕಾರ್ಜುನ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೨೪.	ಬಂಕಿಕೊಡ್ಲ ಗ್ರಾಮದ ಉತ್ತರ ದಿಕ್ಕಿಗೆ ಇರುವ ವಿಶ್ವೇಶ್ವರ ಮಠದ ಮಧ್ಯದಲ್ಲಿ	ಕಾಶಿವಿಶ್ವೇಶ್ವರ ದೇವಾಲಯ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ
೨೫.	ಮಾಸೂರ ಊರ ಪ್ರಾರಂಭದಲ್ಲಿ	ಬೊಬ್ರುಲಿಂಗೇಶ್ವರ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ

೨೬.	ಮಣಕೋಣ ಗ್ರಾಮದ ವಾಯುವ್ಯ ದಿಕ್ಕಿನಅರಣ್ಯದಲ್ಲಿ	ಬೊಂಬೆಲಿಂಗೇಶ್ವ ರ ದೇವಸ್ಥಾನ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ
೨೭.	ಹಂದಿಗೋಣ ಗ್ರಾಮದ ಕನ್ನಡ ಶಾಲೆಯ ಹತ್ತಿರ ಇದೆ	ಈಶ್ವರ ದೇವಸ್ಥಾನ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ
೨೮.	ದುಂಡಕುಳಿ ಗ್ರಾಮದ ನೈರುತ್ಯ ದಿಕ್ಕಿಗಿದೆ	ಬೊಂಬೆಲಿಂಗೇಶ್ವ ರ ದೇವಸ್ಥಾನ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ
೩೦	ಬರ್ಗಿ ಗಜನಿ	ಈಶ್ವರ ದೇವಾಲಯ	ಕ್ರಿ.ಶ ೨೧ ನೇ ಶತಮಾನ	ಸುಸ್ಥಿತಿ
೩೧	ಬಾಸೊಳ್ಳಿ	ಈಶ್ವರ ದೇವಾಲಯ	ಕ್ರಿ.ಶ ೨೧ ನೇ ಶತಮಾನ	ಸುಸ್ಥಿತಿ
೩೨	ಬಸ್ತಿಕೇರಿ	ಈಶ್ವರ ದೇವಾಲಯ	ಕ್ರಿ.ಶ ೨೧ ನೇ ಶತಮಾನ	ಸುಸ್ಥಿತಿ
೩೩	ಬೆಳ್ಳಂಗಿ	ಈಶ್ವರ ದೇವಾಲಯ	ಕ್ರಿ.ಶ ೨೧ ನೇ ಶತಮಾನ	ಸುಸ್ಥಿತಿ
೩೪	ಕಲಬಾಗ	ರಾಮನಾಥೇಶ್ವರ ದೇವಾಲಯ	ಕ್ರಿ.ಶ ೨೧ ನೇ ಶತಮಾನ	ಸುಸ್ಥಿತಿ
೩೫	ಕಲವೆ	ಈಶ್ವರ ದೇವಾಲಯ	ಕ್ರಿ.ಶ ೨೧ ನೇ ಶತಮಾನ	ಸುಸ್ಥಿತಿ

೪.೭ ಶಾಕ್ತಪಂಥ ದೇವಾಲಯಗಳು

ಪ್ರಾಚೀನ ಕಾಲದಿಂದಲೂ ಮಾತೃ (ಶಕ್ತಿ ದೇವತೆ) ದೇವತಾ ಆರಾಧನೆ ರೂಢಿಯಲ್ಲಿತ್ತು. ಸಿಂಧೂನಾಗರಿಕತೆಯಲ್ಲಿ ಮಾತ್ರ ದೇವತಾ ಆರಾಧನೆ ಪ್ರಚಲಿತವಿದ್ದ ಬಗ್ಗೆ ಕುರುಹುಗಳು ದೊರೆತಿವೆ. ಜನರ ಮನಸ್ಸಿನಲ್ಲೆ ಬೆರೆತುಹೋದ ಶಕ್ತಿಯ ಆರಾಧನೆ ಉಳಿದುಬೆಳೆದು ಈಕೆ ಜಗತ್ತನ್ನು ಸೃಷ್ಟಿಸಬೇಕೆಂಬ ಇಚ್ಛೆಯ ಮುನ್ನ ಇವಳು ಪ್ರಕೃತಿಯಲ್ಲಿ ತಾನೊಬ್ಬಳೇ ಅವ್ಯಕ್ತ ಸ್ವರೂಪದಲ್ಲಿದ್ದಳು. ತನ್ನ ಶರೀರದಿಂದಲೇ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸೃಷ್ಟಿಸಿದಳೆಂದಿದೆ.ಸೃಷ್ಟಿಕರ್ತ ಬ್ರಹ್ಮ, ಸ್ಥಿತಿಕರ್ತ ವಿಷ್ಣು, ಲಯಕರ್ತ ಶಿವ ಇವರೆಲ್ಲರೂ ಶಕ್ತಿದೇವತೆಯ ಪ್ರತೀಕವಾಗಿರುವರು.

ಸಮಸ್ತ ವಿಶ್ವದ ಸೃಷ್ಟಿಮಾಡಲು ದೇವಿ, ಐಶ್ವರ್ಯ ನಾಶ ಮಾಡಲು ಜ್ಯೇಷ್ಠಾದೇವಿ ಆದಳೆಂದು ಶಾಸ್ತ್ರಗ್ರಂಥಗಳು ತಿಳಿಸುತ್ತವೆ. ಕರ್ನಾಟಕದಲ್ಲಿ ಶಕ್ತಿಯ ರೂಪಗಳು ಕ್ರಿ.ಶ ೬ನೇ ಶತಮಾನದಲ್ಲಿ ಕಾಣಿಸಿಕೊಂಡವು. ಇಂದ್ರಾಣಿ, ವೈಷ್ಣವಿ, ವರಾಹಿ, ಬ್ರಾಹ್ಮಿಣಿ, ನಾರಸಿಂಹ,ರೌದ್ರಿ, ಮಹೇಶ್ವರಿ ಪ್ರಧಾನ ಒಂಬತ್ತು ದೇವತೆಗಳನ್ನು ಶಾಕ್ತದೇವತೆಗಳು ಎಂದು ಕರೆಯುತ್ತಾರೆ. ಈ ದೇವತೆಗಳ ಆಯುಧಗಳು ಚಾವಟಿ,ಭರ್ಜಿ, ಈಟಿ, ಶಕ್ತಿ,ಬಾಣ, ಕತ್ತಿ, ಧ್ವಜ, ದಂಡ ಮುಂತಾದವುಗಳಾಗಿವೆ.

ಶಕ್ತಿ ದೇವತೆಗಳಲ್ಲಿ ರೌದ್ರಿ ಹಾಗೂ ಮಹೇಶ್ವರಿ ದೇವತೆಗಳು, ಕಾಲಾಂತರದಲ್ಲಿ ಅಂಬಾಭವಾನಿ, ಕಾಳಿ, ಚಂಡಿ , ದುರ್ಗಿ, ಮಹಿಷಮರ್ದಿನಿ ಜನಪ್ರಿಯವಾದವು.

ದೇವಿಯ ಉಗಮದ ಬಗ್ಗೆ ಐತಿಹ್ಯಗಳಿವೆ. ದಾಕ್ಷಾಯಿಣಿ ತಂದೆಯಾದ ದಕ್ಷಬ್ರಹ್ಮನು ತನ್ನ ಅಳಿಯ ಶಿವ ಹಾಗೂ ಮಗಳು ದಾಕ್ಷಾಯಿಣಿಗೆ ಆಹ್ವಾನಿಸದೇ ಯಜ್ಞವನ್ನು ಕೈಗೊಂಡನು. ಆದರೆ ಯಜ್ಞಮಂಟಪಕ್ಕೆ ಮಗಳು ಹೋದಾಗ ದಕ್ಷಬ್ರಹ್ಮನು ಅವಳನ್ನು ಅವಮಾನಿಸುತ್ತಾನೆ. ಕೂಡಲೇ ಅವಳು ಯಜ್ಞಕುಂಡದಲ್ಲಿ ಬಿದ್ದು ಮರಣಹೊಂದಿದಳು. ಇದನ್ನು ತಿಳಿದ ಶಿವನು ತನ್ನ ಪತ್ನಿಯ ಶವವನ್ನು ಹೊತ್ತುಕೊಂಡು ಹೋಗುತಿದ್ದಾಗ ವಿಷ್ಣು ಅವನನ್ನು ಸಮಾಧಾನ ಪಡಿಸಿ ಆ ಶವವನ್ನು ಹೊಕ್ಕು ಅದನ್ನು ತುಂಡರಿಸಲು ಪ್ರಾರಂಭಿಸಿದನು. ಹೀಗೆ ತುಂಡರಿಸಲ್ಪಟ್ಟ ದೇಹದ ಭಾಗಗಳು ಬಿದ್ದ ಸ್ಥಳಗಳು ನೂರೆಂಟು ಶಕ್ತಿಪೀಠಗಳಾಗಿದ್ದುದು ಶಾಸ್ತ್ರಗಳಲ್ಲಿ ಉಲ್ಲೇಖಿತವಾಗಿದೆ.[೪೬] ಇದರಿಂದ ನೂರಾರು ಮಾತ್ರ ದೇವತಾ ಕಲ್ಪನೆಗೆ ದಾರಿಮಾಡಿಕೊಟ್ಟಿತು. ಸಾಂಖ್ಯರ ಪ್ರಕಾರ ಶಿವನಿಗಿಂತ ಮಿಗಿಲಾದವಳು ಅನ್ಯ ದೇವತೆಗಳ ಮಡದಿಯರೆಲ್ಲ ಶಕ್ತಿಯ ವಿವಿಧ ರೂಪಗಳಾಗಿವೆ.[೪೭] ಶಾಕ್ತ ಪಂಥದ ತತ್ವಗಳು ಭಾರತೀಯ ಸಂಸ್ಕೃತಿಯ ಸಮಸ್ತ ರೂಪಗಳಲ್ಲಿಯೂ ಅಡಕವಾಗಿದೆ. ಹೀಗೆ ಇದರ ಪ್ರಭಾವ ವಿವಿಧ ಧರ್ಮಗಳಲ್ಲಿ ಅಂದರೆ ಬೌದ್ಧರಲ್ಲಿ ತಾರಾಭಗವತಿ, ಜೈನರಲ್ಲಿ ಪದ್ಮಾವತಿ, ಜ್ವಾಲಾಮಾಲಿನಿ, ವೈಷ್ಣವರಲ್ಲಿ ಲಕ್ಷ್ಮೀ, ಶಾಕ್ತರಲ್ಲಿ ದುರ್ಗಿ, ಕಾಳಿ, ಎಲ್ಲಮ್ಮ, ಮಹಿಪಾಸುರಮರ್ದಿನಿ, ದೇವಾಲಯಗಳು ರೂಪಗೊಂಡವು ಈ ಹಿನ್ನಲೆಯಲ್ಲಿ ಪ್ರಸ್ತುತ ಕುಮಟಾ ತಾಲೂಕಿನಲ್ಲಿರುವ ಶಾಕ್ತ ದೇವಾಲಯಗಳಲ್ಲಿಪ್ರಮುಖ ಶಾಕ್ತ ದೇವಾಲಯಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

೧.	ಹೆಸರು	–	**ಭದ್ರಕಾಳಿ ದೇವಾಲಯ**
	ಸ್ಥಳ	–	ಗೋಕರ್ಣ, ಶಂಕರಮಠದ ಎದುರಿಗೆ
	ಕಾಲ	–	ಕ್ರಿ.ಶ. ೧೯–೨೦ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
	ಅಳತೆ	–	೧೩.೭೪ ಮೀ ಉದ್ದ, ೭.೨೫ ಮೀ ಅಗಲ

ಈ ದೇವಾಲಯ ಕುಮಟಾದಿಂದ ವಾಯುವ್ಯಕ್ಕೆ ೩೦ ಕಿ.ಮೀ ದೂರದಲ್ಲಿದೆ. ಪ್ರಸ್ತುತ ಇದು ಜೀರ್ಣೋದ್ಧಾರವಾಗಿದ್ದು, ದಕ್ಷಿಣಾಭಿಮುಖವಾಗಿದೆ. ಮತ್ತು ಇದು ನಿರಂಧಾರ ಮಾದರಿಯಯದಾಗಿದೆ. ಗರ್ಭಗೃಹ ಅರ್ಧಮಂಟಪ ಮತ್ತು ನವರಂಗವನ್ನು ಒಳಗೊಂಡಿದೆ. ದೇವಾಲಯದ ಗರ್ಭಗೃಹದ ಒಳಗೆ ಭದ್ರಕಾಳಿಯ ಮೂರ್ತಿಯಿದೆ. ಗರ್ಭಗೃಹದ ಬಾಗಿಲಿಗೆ ಸಂಪೂರ್ಣವಾಗಿ ಈಗ ಬೆಳ್ಳಿಯ ಕವಚವನ್ನು ಅಳವಡಿಸಲಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗಜಲಕ್ಷ್ಮಿಯು ಕಮಲದ ಮೇಲೆ ಕುಳಿತ್ತಿದ್ದು ಚತುರ್ಭುಜದಾರಿಯಾಗಿದ್ದಾಳೆ. ಎಡದಲ್ಲಿ ಒಂದನೇ ಕೈ ವರದ ಮುದ್ರೆಯಲಿದೆ. ಎರಡನೇ ಕೈಯಲ್ಲಿ ಭತ್ತದ ತೆನೆಯನ್ನು, ಬಲಗೈ ಒಂದನೇ ಕೈ ಅಭಯ ಮುದ್ರೆಯಲ್ಲಿದ್ದು, ಎರಡನೇ

ಕೈಯಲ್ಲಿ ಕಮಲವಿದೆ ಗಜಲಕ್ಷ್ಮಿಯ ಎಡ ಬಲಗಳಲ್ಲಿ ಆನೆಗಳು ಪುಷ್ಪಮಾಲೆಯನ್ನು ಹಿಡಿದು ಲಕ್ಷ್ಮಿಯ ತಲೆಯ ಮೇಲೆ ನೀರನ್ನು ಸುರಿಯುವಂತಿದೆ. ದೇವಾಲಯದ ಹೆಬ್ಬಾಗಿಲಿನ ಎಡ ಬಲಗಳಲ್ಲಿ ದ್ವಾರಪಾಲಕ ಮೂರ್ತಿಗಳಿವೆ. ಇವರು ಚತುರ್ಭುಜರಾಗಿದ್ದು ಶಂಖ, ಚಕ್ರ, ಗಧೆ ಹಾಗೂ ಶೂಲವನ್ನು ಹಿಡಿದಿದ್ದಾಳೆ. ದೇವಾಲಯದ ಮುಂದೆ ಚಿಕ್ಕದಾದ ಮಂದಿರವಿದೆ. ಇಲ್ಲಿ ಅಮ್ಮನವರ ಪಾದಗಳಿವೆ.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ ಮತ್ತು ಕಲಶವನ್ನೊಳಗೊಂಡಿದೆ. ಶಿಖರದ ಮೇಲೆ ಪಂಚಲೋಹದ ತಗಡಿನಿಂದ ಮೇಲ್ಹಾವಣಿಯನ್ನು ಮಾಡಲಾಗಿದೆ. ನಾಲ್ಕು ದಿಕ್ಕಿಗೂ ಆನೆಯ ಶಿಲ್ಪವಿದೆ. ಗೋಡೆಗಳ ಮೇಲೆ ಕಾವಿ ಬಣ್ಣದ ಶಿಲ್ಪವಿದೆ. ದೇವಾಲಯದ ಹೊರಗೆ ಎಡಭಾಗದಲ್ಲಿ ಬೃಹದಾಕಾರದ ಆಮೆಯ ಶಿಲ್ಪದ ಮೇಲೆ ತುಳಸಿಕಟ್ಟೆ ಇದೆ. ಮುಂಬದಿಗೆ ಹಾವಿನ ಹೆಡೆಯ ಮೇಲೆ ಕೃಷ್ಣನು ನಿಂತು ಕೊಳನ್ನು ಊದುತ್ತಿರುವಂತಿದೆ.

ಐತಿಹ್ಯ: ರಾವಣನು ಆತ್ಮಲಿಂಗವನ್ನು ತರಲಿಕ್ಕೆ ಕೈಲಾಸಕ್ಕೆ ಹೋಗಿ ತಪಸ್ಸು ಮಾಡಿದ ನಂತರ ಶಿವ ಪ್ರತ್ಯಕ್ಷನಾದಾಗ ಅದನ್ನು ಮರೆತು ಶಿವನ ಪಕ್ಕದಲ್ಲಿರುವ ಪಾರ್ವತಿಯನ್ನು ಕೇಳಿದ. ಶಿವ ಪಾರ್ವತಿಯನ್ನು ರಾವಣನ ಜೊತೆ ಕಳುಹಿಸಲು ಒಪ್ಪಿದನು. ಆಗ ಪಾರ್ವತಿ ರಾವಣನಿಗೆ ಮಾರ್ಗಮಧ್ಯದಲ್ಲಿ ನೀನು ಅನ್ಯಮನಸ್ಕನಾದರೆ ನಾನು ತಿರುಗಿ ಕೈಲಾಸಕ್ಕೆ ಹೋಗುತ್ತೇನೆ ಎಂದಳು. ಅದಕ್ಕೆ ರಾವಣ ಒಪ್ಪಿ ಪ್ರಯಾಣ ಮುಂದುವರೆಸಿದ ಈ ಸಂದರ್ಭದಲ್ಲಿ ಪಾತಾಳಲೋಕದ ಮಾಯಾಸುರನ ಮಗಳು ಮಂಡೋದರಿಯನ್ನು ಕಂಡು ಅವಳಲ್ಲಿ ಆಕರ್ಷಿತನಾದ ಅವಳು ತನ್ನವಳಾಗುವಂತೆ ಆಶೀರ್ವದಿಸಬೇಕೆಂದು ಪಾರ್ವತಿಯಲ್ಲಿ ಕೇಳಿದ ಅವಳು ಹರಿಸಿದಳು. ಕೊನೆಗೆ ಕೈಲಾಸಕ್ಕೆ ಹೋಗುವದಾಗಿ ಪಾರ್ವತಿ ಹೇಳಿದಾಗ ಬಲತ್ಕಾರದಿಂದ ಲಂಕೆಗೆ ಕರೆದುಕೊಂಡು ಹೋಗಲು ಮುಂದಾದನು.ಆಗ ಕಾಳಿ ರೂಪ ತಾಳಿದಳು ಇವಳೇ ಭದ್ರಕಾಳಿಯೆಂಬ ಪ್ರತೀತಿ ಇದೆ.[೪೮]

೨.	ಹೆಸರು	–	**ತಾಮ್ರಗೌರಿ ದೇವಾಲಯ**
	ಸ್ಥಳ	–	ಗೋಕರ್ಣ, ಮಹಾಬಲೇಶ್ವರ ದೇವಾಲಯದ ಹಿಂದುಗಡೆ
	ಕಾಲ	–	ಕ್ರಿ.ಶ. ೧೯–೨೦ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
	ಅಳತೆ	–	೧೨.೪೯ ಮೀ ಉದ್ದ, ೬.೩೩ ಮೀ ಅಗಲ

ಕುಮಟಾದಿಂದ ೩೧ ಕಿ.ಮೀ ದೂರದಲ್ಲಿ ತಾಮ್ರ ಗೌರಿ ದೇವಾಲಯವಿದೆ. ಈ ದೇವಾಲಯ ಜೀರ್ಣೋದ್ಧಾರವಾಗಿದ್ದು, ಪೂರ್ವಾಭಿಮುಖವಾಗಿದೆ. ದೇವಾಲಯ ನಿರಂಧಾರ

ಮಾದರಿಯಲ್ಲಿದೆ. ಗರ್ಭಗೃಹ, ನವರಂಗ ಒಳಗೊಂಡಿದ್ದು, ಗರ್ಭಗೃಹದಲ್ಲಿ ಅಷ್ಟಕೋನಾಕೃತಿಯ ಪೀಠದ ಮೇಲೆ ತಾಮ್ರಗೌರಿಯಸುಂದರ ವಿಗ್ರಹವಿದೆ.

ದ್ವಾರ: ಪ್ರಧಾನ ಪ್ರವೇಶ ದ್ವಾರದ ಎರಡು ಬದಿಗೆ ಜಾಲಂದ್ರಗಳಿವೆ. ಈ ಬಾಗಿಲನ್ನು ಮರದಿಂದ ಮಾಡಲಾಗಿದ್ದು ಅಲಂಕಾರ ರಹಿತವಾಗಿದೆ.

ದೇವಾಲಯದ ಹೊರಭಾಗದಲ್ಲಿ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ. ಕಲಶವನ್ನು ತಾಮ್ರದಿಂದ ಮಾಡಲಾಗಿದೆ. ದೇವಾಲಯದ ಪ್ರವೇಶ ದ್ವಾರದ ಬಲಭಾಗದಲ್ಲಿ ತುಳಸಿಕಟ್ಟೆ ಇದೆ. ಕಟ್ಟೆಯ ಮಧ್ಯದಲ್ಲಿ ಕೃಷ್ಣನ ಮೂರ್ತಿಯಿದೆ. ಮೇಲ್ಭಾಗದಲ್ಲಿ ನಾಗರ ಶಿಲ್ಪವಿದೆ.

ಐತಿಹ್ಯ: ಚತುರ್ಮುಖ ಬ್ರಹ್ಮನು ನಿರ್ಮಲ ಮನಸ್ಸಿನಿಂದ ಧ್ಯಾನ ಮಾಡುತ್ತ ಕುಳಿತಿರುವಾಗ ಅವನ ಬಲಗೈಯಿಂದ ಸ್ತ್ರೀ ಹುಟ್ಟಿದಳು. ಬ್ರಹ್ಮನು ಅವಳಿಗೆ ನೀನು ರುದ್ರನ ಮಡದಿಯಾಗುವಳೆಂದು ಹೇಳಿದಾಗ ಪರಮೇಶ್ವರನನ್ನು ಒಲಿಸಿಕೊಳ್ಳಲು ಸತ್ಯಲೋಕದಿಂದ ಗೋಕರ್ಣ ಸಮೀಪ ಇರುವ ಗೋಶೃಂಗ (ತಾಮ್ರ) ಪರ್ವತದ ಮೇಲೆ ಆಕಾಶದಿಂದಿಳಿದಳು. ಪರಮೇಶ್ವರನನ್ನು ಧ್ಯಾನಿಸುತ್ತ ಆಪರ್ವತದಲ್ಲಿ ಸಂಚರಿಸುತ್ತಿದ್ದಳು. ಪರಮೇಶ್ವರನು ಆಕೆಯನ್ನು ಕಂಡು ವಿಚಾರಿಸಿದಾಗ ತನ್ನ ಮನದ ಆಸೆಯನ್ನು ವಿವರಿಸಿದಳು. ಈ ವಿಷಯ ತಿಳಿದ ಪರಮೇಶ್ವರನು ಬ್ರಹ್ಮ ವಿಷ್ಣುವನ್ನು ಸ್ತುತಿಸಿ ಅವರನ್ನು ಬರಮಾಡಿಕೊಂಡನು. ಅವರ ಎದುರಿನಲ್ಲಿ ಆಶ್ವೀಜ ಚತುರ್ದಶಿ ಸ್ವಾತಿ ನಕ್ಷತ್ರ ಸೋಮವಾರದಂದು ಅವರಿಬ್ಬರ ಮದುವೆಯಾಯಿತು. ಅವಳಿಗೆ ಗೌರಿ ಎಂಬ ಹೆಸರಿದ್ದು. ತಾಮ್ರ ಪರ್ವತದ ಮೇಲೆ ಸಂಚರಿಸಿದ್ದರಿಂದ ತಾಮ್ರ+ಗೌರಿ=ತಾಮ್ರಗೌರಿ ಎಂಬ ಹೆಸರಿನಿಂದ ಕರೆಯಲಾಯಿತೆನ್ನಲಾಗಿದೆ. ಇಲ್ಲಿರುವ ನದಿಯಲ್ಲಿ ಸ್ನಾನ ಮಾಡಿ ಪಿಂಡ ಅಥವಾ ತಿಲೋಧಕ ಕೊಟ್ಟರೆ ಪಿತೃಗಳು ನರಕದಲ್ಲಿದ್ದರೂ ಸ್ವರ್ಗಕ್ಕೆ ಹೋಗುವರು ಎಂಬ ನಂಬಿಕೆಯಿದೆ. ಹುಣ್ಣಿಮೆಯ ದಿವಸ ಈ ನದಿಯಲ್ಲಿ ಸ್ನಾನಮಾಡಿ ಮಹಾಬಲೇಶ್ವರನನ್ನು ಪೂಜಿಸಿದರೆ ಹಿಂದಿನ ಮೂರು ಜನ್ಮದ ಪಾಪ ದೂರವಾಗುವದೆಂಬುದು ದಂತಕಥೆ. ಈ ತೀರ್ಥದಲ್ಲಿ ಅಸ್ಥಿಯನ್ನು ಬಿಟ್ಟರೆ ಅಸ್ಥಿಯ ಕಣಗಳು ತೀರ್ಥದಲ್ಲಿರುವರೆಗೂ ಆ ಮನುಷ್ಯ ಸ್ವರ್ಗದಲ್ಲಿರುವನು ಎಂಬ ನಂಬಿಕೆ ಈಗಲೂ ಬಹುಜನರು ಈ ನದಿಯಲ್ಲಿ ಅಸ್ಥಿ ಬಿಡುವಪದ್ಧತಿಯಿದೆ.

೩. **ಹೆಸರು – ಗಂಗಾ ದೇವಾಲಯ**

ಸ್ಥಳ – ನಾಡುಮಾಸ್ಕೇರಿ ಗ್ರಾಮದ ದಕ್ಷಿಣ ದಿಕ್ಕಿಗೆ

ಕಾಲ – ಕ್ರಿ.ಶ.೧೯–೨೦ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೨೮.೫ ಮೀ ಉದ್ದ, ೧೫ ಮೀ ಅಗಲ

ಗೋಕರ್ಣದಿಂದ ೭ ಕಿ.ಮೀ ದೂರದಲ್ಲಿ ಗಂಗಾ ದೇವಾಲಯ ಇದೆ. ಈ ದೇವಾಲಯ ಜೀರ್ಣೋದ್ಧಾರವಾಗಿದ್ದು, ಪಶ್ಚಿಮಾಭಿಮುಖವಾಗಿದೆ. ಗರ್ಭಗೃಹ, ನವರಂಗವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಗಂಗೆಯ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗಿದೆ. ಗರ್ಭಗೃಹದ ದ್ವಾರವು ಕಲ್ಲಿನಿಂದ ಮಾಡಲಾಗಿದ್ದು ದ್ವಾರದ ಇಕ್ಕೆಲೆಗಳಲ್ಲಿ ವಾದ್ಯಗಾರರು, ಯುದ್ಧದ ದೃಶ್ಯ, ನರ್ತಕಿಯರು, ಹಂಸದ ಕೆತ್ತನೆಗಳಿವೆ. ಲಲಾಟ ಬಿಂಬದಲ್ಲಿ ಸುಖಾಸನದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯು ಕಮಲದ ಮೇಲೆ ಕುಳಿತಿದ್ದು ಅಭಯ, ವರದ ಮುದ್ರೆಗಳಲಿದ್ದು ಇನ್ನೆರಡು ಕೈಗಳಲ್ಲಿ ಕಮಲವನ್ನು ಹಿಡಿದಿದ್ದಾಳೆ. ಆನೆಗಳು ಇಕ್ಕೆಲೆಗಳಲ್ಲಿವೆ. ಇವು ತಮ್ಮ ಸೊಂಡಿಲಿನಲ್ಲಿ ಹೂವಿನ ಹಾರವನ್ನು ಹಿಡಿದಿವೆ.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ ಮತ್ತು ಕಲಶವನ್ನೊಳಗೊಂಡಿದೆ. ಸುಖನಾಸಗಳಲ್ಲಿ ಕೀರ್ತಿಮುಖಗಳನ್ನು ಕಾಣಬಹುದು. ಮೇಲೆ ಸ್ತೂಪವಿದ್ದು, ತುದಿಯಲ್ಲಿ ಕಲಶವಿದೆ. ದೇವಾಲಯ ಪ್ರವೇಶಿಸಬೇಕಾದರೆ ಇತ್ತಿಚಿಗೆ ಇಲ್ಲಿ ದೊಡ್ಡದಾದ ಹೆಬ್ಬಾಗಿಲನ್ನು ನಿರ್ಮಿಸಿದ್ದಾರೆ. ನಡುವೆ ಗಂಗಾಮಾತೆಯ ಶಿಲ್ಪವಿದೆ ಕೆಳಗೆ ಆನೆಗಳನ್ನು ಕೆತ್ತಲಾಗಿದೆ.

೪.	ಹೆಸರು	–	**ಮಹಾಲಸಾ ನಾರಾಯಣಿ ಶ್ರೀ ಶಾಂತೇರಿ ದೇವಾಲಯ**
	ಸ್ಥಳ	–	ಮೂರೂಕಟ್ಟೆ ರಥಬೀದಿ, ಕುಮಟಾ
	ಕಾಲ	–	ಕ್ರಿ.ಶ. ೧೬ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೇಟರೈಟ್)
	ಅಳತೆ	–	೨೧.೩ಮೀ ಉದ್ದ, ೯.೧೭ಮೀ ಅಗಲ

ಕುಮಟಾದಿಂದ ೨ ಕಿ.ಮೀ ದೂರದಲ್ಲಿ ಶ್ರೀ ಮಹಾಲಸಾ ನಾರಾಯಣಿ, ಶ್ರೀ ಶಾಂತೇರಿ ದೇವಾಲಯ ಇದೆ. ಪುರಾಣದಲ್ಲಿ ಉಲ್ಲೇಖಿಸಿದಂತೆ ಸುರಾಸುರರ ಸಮುದ್ರ ಮಥನದ ಸನ್ನಿವೇಶದಲ್ಲಿ ಶ್ರೀ ಮಹಾಲಸಾ ನಾರಾಯಣಿ ದೇವಿಯ ಸೃಷ್ಟಿಯಾಯಿತು. ಮೂಲತಃ ಈ ದೇವಾಲಯ ಅಂದು ಗೋವಾ ರಾಜ್ಯದಲ್ಲಿತ್ತು. ಆದರೆ ಕ್ರಿ.ಶ ೧೪–೧೫ನೇ ಶತಮಾನದಲ್ಲಿ ಪೋರ್ಚುಗೀಸರ ವಶವಾದಾಗ ಅವರ ಆಡಳಿತ, ಮತ್ತು ದಬ್ಬಾಳಿಕೆ, ಮತಾಂತರ,ಘಟನೆಗಳಿಂದ ಬೇಸತ್ತು ಧರ್ಮಭೀರು ಬ್ರಾಹ್ಮಣ ಕುಟುಂಬದವರು ತಮ್ಮ ಆರಾದನಾ ದೇವರನ್ನು ತೆಗೆದುಕೊಂಡು ಕರ್ನಾಟಕದ ಕರಾವಳಿ ತೀರದ ಕುಮಟಾಕ್ಕೆ ಬಂದು ದೇವಾಲಯ ನಿರ್ಮಿಸಿದ್ದರೆನ್ನಲಾಗಿದೆ.

ಈ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ, ಸಭಾಮಂಟಪ ಒಳಗೊಂಡಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದೆ. ಗರ್ಭಗೃಹದಲ್ಲಿ

ಮಹಾಲಸಾ ನಾರಾಯಣಿ ಮೂರ್ತಿ ಇದೆ. ಅಂತರಾಳ ಮತ್ತು ಪ್ರದಕ್ಷಿಣಾಪಥವನ್ನು ಹೊಂದಿದೆ. ಸಭಾಮಂಟಪದಲ್ಲಿ ಸುಂದರವಾದ ವಿಷ್ಣುವಿನ ಮತ್ತು ಶಕ್ತಿ ದೇವತೆಯ ಶಿಲ್ಪಗಳ ಪಟ್ಟಿಕೆಗಳಿವೆ.

ಸಭಾಮಂಟಪದ ಇಕ್ಕೆಲಗಳಲ್ಲಿ ಕಾವಿಕಲೆಯಲ್ಲಿ ರೂಪಿತವಾದ ಸೂರ್ಯ ಮತ್ತು ಗರುಡಾರೂಡ ವಿಷ್ಣುವಿನ ಚಿತ್ರಗಳಿವೆ. ಸಭಾಗೃಹದ ಸ್ತಂಭಗಳಲ್ಲಿ ವಿಷ್ಣುವಿನ ದಶಾವತಾರವನ್ನು ನಿರೂಪಿಸುವ ಸುಡಾವೆ ಮಣ್ಣಿನ ಮೂರ್ತಿಗಳಿವೆ.ಮಹಾದ್ವಾರದ ಎಡಬಲಗಳಲ್ಲಿ ಮೋಹಿನಿಯ ಉದ್ಭವದ ಸಮುದ್ರ ಮಥನದ ಸನ್ನಿವೇಷದ ಚಿತ್ರಗಳನ್ನು ಕಾಣಬಹುದು.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ ಮತ್ತು ಕಲಶವನ್ನೊಳಗೊಂಡಿದೆ. ದೇವಾಲಯದ ಅಧಿಷ್ಠಾನ ಅರೆ ಸ್ತಂಭಗಳಿಂದ ನಿರ್ಮಿಸಲ್ಪಟ್ಟಿದೆ. ಸ್ತಂಭಗಳು ಜಂಬಿಟ್ಟಿಗೆ ಮತ್ತು ಗಾರೆಯನ್ನು ಬಳಸಿ ನಿರ್ಮಿಸಿರುವರು. ಪ್ರತಿಯೊಂದು ಸ್ತಂಭಗಳು ಕೂಡ್ಯ ಪಟ್ಟಿಕೆಗಳಿಂದ ರಚಿಸಲ್ಪಟ್ಟು ಮುಂದೆ ಎರಡು ಹಂತಗಳಲ್ಲಿ ಇದೆ. ಪ್ರತಿಯೊಂದು ಸ್ತಂಭಗಳ ಮಧ್ಯ ಕೋಷ್ಠಗಳು ಇವೆ. ಮತ್ತು ೨ ಕೋಷ್ಠಗಳ ಮಧ್ಯದಲ್ಲಿ ಜಾಲಂದ್ರ ಇವೆ. ಪ್ರತಿಯೊಂದು ಕೋಷ್ಠಗಳಲ್ಲಿ ಕಾವಿ ಚಿತ್ರಕಲೆಯಲ್ಲಿ ವಿಷ್ಣುವಿನ ಮತ್ತು ಪೌರಾಣಿಕ ದೃಶ್ಯಾವಳಿಗಳನ್ನು ಅಲಂಕರಿಸಲಾಗಿದೆ. ಭಿತ್ತಿಯನ್ನು ಹೊಂದಿಕೊಂಡಂತೆ ದೇವಾಲಯದ ಗೋಪುರ ನಿರ್ಮಿಸಲಾಗಿದ್ದು, ಅಷ್ಟ ಭುಜಾಕೃತಿಯ ಗೋಪುರದ ಗುಮ್ಮಟವು ತಾಮ್ರಪಟದಿಂದ ಆವ್ರತವಾಗಿದೆ. ಕೋಷ್ಠಗಳಲ್ಲಿ ಅಷ್ಟದಿಕ್ಪಾಲಕರ ಶಿಲ್ಪಗಳಿವೆ.

ದೇವಸ್ಥಾನದ ಪ್ರಾಕಾರಕ್ಕೆ ಹೋದರೆ ಎದುರಿಗೆ ಸುಂದರ ಯಜ್ಞಮಂಟಪ ಪಕ್ಕದಲ್ಲಿಯೇ, ಭಗವತಿ ದೇವಿಯ ಮಂದಿರ, ನಾಗ ಮಂದಿರ ಎಡಗಡೆಗೆ ಗ್ರಾಮಪುರುಷ, ಶಾಂತೇರಿ ದೇವಿಯ ಮಂದಿರಗಳು ಹಾಗೂ ಪಾಠಶಾಲೆ, ಹಾಗೆಯೇ ಮುಂದಕ್ಕೆ ಹೋದರೆ ದಾಡಶಂಕರ ದೇವರ ಗರ್ಭಗುಡಿ ಇದೆ.

೫. ಹೆಸರು – **ಶಾಂತೇರಿ ಕಾಮಾಕ್ಷಿ ದೇವಾಲಯ**

ಸ್ಥಳ – ಮೂರುಕಟ್ಟೆ ರಥಬೀದಿ ಕುಮಟಾ

ಕಾಲ – ಕ್ರಿ.ಶ. ೧೬ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೨೯.೨೬ ಮೀ ಉದ್ದ, ೧೩.೨೧ ಮೀ ಅಗಲ

ಕುಮಟಾದಿಂದ ೨ ಕಿ.ಮೀ ಅಂತರದಲ್ಲಿ ಶಾಂತೇರಿ ಕಾಮಾಕ್ಷಿ ದೇವಾಲಯ ಇದೆ. ಈ ದೇವಾಲಯ ಜೀರ್ಣೋದ್ಧಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಅರ್ಧಮಂಟಪ, ಅಂತರಾಳ, ಮುಖಮಂಟಪ ಹೊಂದಿದೆ. ಗರ್ಭಗೃಹ ಚೌಕಾಕಾರವಾಗಿದ್ದು

ಮಧ್ಯದಲ್ಲಿ ಶಾಂತೇರಿ ಕಾಮಾಕ್ಷಿ ಮೂರ್ತಿ ಇದೆ.ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ.

೬.	ಹೆಸರು	–	**ಕಾವೂರ ಕಾಮಾಕ್ಷಿ ದೇವಾಲಯ**
	ಸ್ಥಳ	–	ಮೂರುಕಟ್ಟೆ ರಥಬೀದಿ ಕುಮಟಾ
	ಕಾಲ	–	ಕ್ರಿ.ಶ. ೧೬ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
	ಅಳತೆ	–	೨೬.೨೧ ಮೀ ಉದ್ದ, ೮.೨೨ ಮೀ ಅಗಲ

ಕುಮಟಾದಿಂದ ೩ ಕಿ.ಮೀ ದೂರದಲ್ಲಿ ಕಾವೂರ ಕಾಮಾಕ್ಷಿದೇವಾಲಯ ಇದೆ. ಗೋಮಾಂತಕದಲ್ಲಿ ಅಲ್ಲಿನ ರಾಜಕೀಯ ಪರಿಸ್ಥಿತಿಯಲ್ಲಿ ಗೌಡ ಸಾರಸ್ವತ ಬ್ರಾಹ್ಮಣರು ಆ ಸ್ಥಳವನ್ನು ಬಿಟ್ಟು ಬರಬೇಕಾದರೆ ತಮ್ಮೊಡನೆ ದೇವರ ಮೂರ್ತಿಯನ್ನು ತಂದು ಕುಮಟಾದಲ್ಲಿ ಪ್ರತಿಷ್ಠಾಪಿಸಿದರೆಂಬ ಪ್ರತೀತಿ ಇದೆ.

ಈ ದೇವಾಲಯ ಈಗ ಜೀರ್ಣೋದ್ಧಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಅಂತರಾಳ, ಸಬಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ಕಾಲಭೈರವ ಮೂರ್ತಿ ಪ್ರತಿಷ್ಠಾಪಿಸಲಾಗಿದೆ.ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ.

೭.	ಹೆಸರು	–	**ದೇವಕಿ ಕೃಷ್ಣ ದೇವಾಲಯ**
	ಸ್ಥಳ	–	ಹೆರವಟ್ಟಾ ಗ್ರಾಮದ ಮಧ್ಯದಲ್ಲಿ
	ಕಾಲ	–	ಕ್ರಿ.ಶ. ೧೬ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
	ಅಳತೆ	–	೧೦.೬೬ ಮೀ ಉದ್ದ, ೬.೮೫ ಮೀ ಅಗಲ

ಕುಮಟಾದಿಂದ ೨ ಕಿ.ಮೀ ದೂರದಲ್ಲಿ ದೇವಕಿ ಕೃಷ್ಣ ದೇವಾಲಯಇದೆ.೧೬ನೇ ಶತಮಾನದಲ್ಲಿ ಗೋವಾ ಪೋರ್ಚುಗೀಸರ ವಶವಾದಾಗ ಗೋವಾದ ದೀಪವತಿಯ ಚೋಡ್ನೆಯಿಂದ ಲೋಹದ ಪ್ರತಿಮೆಗಳನ್ನು ಪೆಟ್ಟಿಗೆಯಲ್ಲಿಟ್ಟು ಸಮುದ್ರ ಮಾರ್ಗವಾಗಿ ಬಂದು ಕಮಟಾ ತಾಲೂಕಿನ ಹೆರವಟ್ಟಾದಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಿದರು.

ಈ ದೇವಾಲಯ ಜೀರ್ಣೋದ್ಧಾರವಾಗಿದ್ದು, ಪೂರ್ವಾಭಿಮುಖವಾಗಿದೆ. ದೇವಾಲಯದ ಒಳಭಾಗ ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ ಒಳಗೊಂಡಿದೆ. ಗರ್ಭಗೃಹದಲ್ಲಿ ದೇವಕಿ ಕೃಷ್ಣ ಮೂರ್ತಿ ಇದೆ.ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ.

೮.	ಹೆಸರು	–	**ದೇವಕಿ ಕೃಷ್ಣ ದೇವಾಲಯ**
ಸ್ಥಳ	–	ಕಾಗಲ
ಕಾಲ	–	ಕ್ರಿ.ಶ. ೧೬ನೇ ಶತಮಾನ
ವಸ್ತು	–	ಜಂಬಿಟ್ಟಿಗೆ (ಲೇಟರೈಟ್)
ಅಳತೆ	–	೩೨.೯೧ ಮೀ ಉದ್ದ, ೯.೧೪ ಮೀ ಅಗಲ

ಕುಮಟಾದಿಂದ ೨೩ ಕಿ.ಮೀ ದೂರದಲ್ಲಿ ದೇವಕಿಕೃಷ್ಣ ದೇವಾಲಯ ಇದೆ. ೧೬ನೇ ಶತಮಾನದಲ್ಲಿ ಪೋರ್ಚುಗೀಸರ ಬಲತ್ಕಾರದ ಫಲವಾಗಿ ಗೋವಾದ ಚೋಡ್ನೆಗ್ರಾಮದಿಂದ ದೇವಕಿ ಕೃಷ್ಣ ಮೂರ್ತಿಯನ್ನು ತಂದು ಕಾಗಲದಲ್ಲಿ ಸ್ಥಾಪಿಸಿದರು.

ಈ ದೇವಾಲಯ ಜೀರ್ಣೋದ್ಧಾರವಾಗಿದ್ದು ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ ಹೊಂದಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ದೇವಕಿಕೃಷ್ಣ ಮೂರ್ತಿ ಇದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಮತ್ತು ಕಲಶವನ್ನೊಳಗೊಂಡಿದೆ.

೯.	ಹೆಸರು	–	**ಮಹಾಲಕ್ಷ್ಮಿ–ರವಳನಾಥ ದೇವಾಲಯ**
ಸ್ಥಳ	–	ಹಿರೇಗುತ್ತಿ, ರಾಷ್ಟ್ರೀಯಹೆದ್ದಾರಿಯ ಪಕ್ಕ
ಕಾಲ	–	ಕ್ರಿ.ಶ.೧೬ನೇ ಶತಮಾನ
ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
ಅಳತೆ	–	೧೬.೪೨ ಮೀ ಉದ್ದ, ೭.೩೨ ಮೀ ಅಗಲ

ಕುಮಟಾದಿಂದ ೧೮ ಕಿ.ಮೀ ದೂರದಲ್ಲಿ ಮಹಾಲಕ್ಷ್ಮಿ ರವಳನಾಥ ದೇವಾಲಯ ಇದೆ. ಕ್ರಿ.ಶ.೧೫೪೦ರಲ್ಲಿ ಪೋರ್ಚುಗೀಸರು ಗೋವಾದಲ್ಲಿ ದೇವಾಲಯ ನಾಶಪಡಿಸುವ ಮೊದಲು ಮಹಾಲಕ್ಷ್ಮಿರವಳನಾಥ ಮೂರ್ತಿ ತಂದು ಹಿರೇಗುತ್ತಿ ಗ್ರಾಮದಲ್ಲಿ ಪ್ರತಿಷ್ಠಾಪಿಸಿದರು. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಒಳಗೊಂಡಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ಮಹಾಲಕ್ಷ್ಮಿ ರವಳನಾಥ ಮೂರ್ತಿ ಸ್ಥಾಪಿಸಲಾಗಿದೆ. ನವರಂಗದಲ್ಲಿ ಆರು ಸ್ಥಂಭಗಳಿಂದ ಇದನ್ನು ನವೀಕರಿಸಿರುತ್ತಾರೆ. ಲಲಾಟಬಿಂಬದಲ್ಲಿ ವೇಣುಗೋಪಾಲನ ಶಿಲ್ಪವಿದೆ. ದ್ವಾರದ ಬಲಭಾಗದಲ್ಲಿ ಓಂ, ಶಂಖ, ಗಧೆ, ಆನೆಯ ಶಿಲ್ಪವನ್ನು ಕೆತ್ತಿದ್ದಾರೆ. ಎಡ ಬಾಗಿಲಲ್ಲಿ ಶ್ರೀ, ಶಂಖ, ಕಮಲ ಮತ್ತು ಆನೆಯನ್ನು ಕೆತ್ತಲಾಗಿದೆ. ನವರಂಗದ ಮುಂದೆ ಸಭಾ ಮಂಟಪವಿದೆ. ಸಭಾ ಮಂಟಪದ ಮುಂದೆ ಹೆಬ್ಬಾಗಿಲು ಇದೆ. ಬಲಭಾಗದಲ್ಲಿ ರಾಮ, ಸೀತಾ, ಹನುಮ ವಿಗ್ರಹಗಳು, ಎಡಭಾಗದಲ್ಲಿ ಕೈಲಾಸ ಪ್ರವೇಶ ಹಾಗೂ ಗಣಪತಿ, ಈಶ್ವರ, ಪಾರ್ವತಿ, ಷಣ್ಮುಖ, ನಂದಿ ಮುಂತಾದ ಶಿಲ್ಪಗಳಿವೆ.

ಸಭಾಮಂಟಪದ ಗೋಡೆಯ ಬಲಬದಿಗೆ ಮಾರುತಿಯ ಕೈಮುಗಿದುಕೊಂಡು ಕುಳಿತ ಮೂರ್ತಿಯಿದೆ. ಎಡಬದಿಗೆ ಗರುಡನ ಮೂರ್ತಿಇದೆ. ಮುಂದೆ ದ್ವಾರಪಾಲಕ ಮೂರ್ತಿಇದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ. ದೇವಾಲಯದ ಹೊರಗೆ ಮುಂದೆ ಬಲಬದಿಗೆ ಬೃಹದಾಕಾರದ ಕೃಷ್ಣನ ಮೂರ್ತಿಇದೆ. ಹೆಬ್ಬಾಗಿಲಿನ ಮೇಲಕ್ಕೆ ಭಿತ್ತಿಯಲ್ಲಿ ಬಲಬದಿಗೆ ಕಾಳಿಂಗಮರ್ಧನ, ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ಬಲಿಚಕ್ರವರ್ತಿ ಮೂರ್ತಿಇದೆ.ಎಡಬದಿಗೆ ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಅವತಾರ ಶಿಲ್ಪಗಳಿವೆ.

೧೦.	ಹೆಸರು	–	**ಶಾಂತಿಕಾ ಪರಮೇಶ್ವರಿ ದೇವಾಲಯ**
	ಸ್ಥಳ	–	ಹೆಗಡೆ, ಬಸ್ ನಿಲ್ದಾಣದ ಹತ್ತಿರ
	ಕಾಲ	–	ಕ್ರಿ.ಶ.೧೬–೧೭ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
	ಅಳತೆ	–	–

ಕುಮಟಾ ತಾಲೂಕಿನಿಂದ ೪ ಕಿ.ಮೀ ಉತ್ತರಕ್ಕೆ ಅಘನಾಶಿನಿ ನದಿಯ ದಕ್ಷಿಣ ದಂಡೆಯ ಮೇಲೆ ಹೆಗಡೆ ಗ್ರಾಮವಿದೆ. ಇಲ್ಲಿ ಶಾಂತಿಕಾಪರಮೇಶ್ವರಿ ದೇವಾಲಯ ಇದೆ. ಈ ದೇವಾಲಯ ಪೂರ್ವಾಭಿಮುಖವಾಗಿದೆ.ಗರ್ಭಗೃಹ, ನವರಂಗ, ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಮಹಿಷಾಸುರಮರ್ದಿನಿಯ ಮೂರ್ತಿಇದೆ. ಗರ್ಭಗೃಹದ ಬಾಗಿಲಿಗೆ ಬೆಳ್ಳಿಯ ಹೊದಿಕೆಯನ್ನು ಅಳವಡಿಸಲಾಗಿದೆ.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ. ಭಿತ್ತಿಯ ಮೇಲೆ ಸುಂದರವಾದ ಕಾವಿ ಚಿತ್ರಗಳಿದ್ದು ಸಮಕಾಲೀನವಾದ ಸಾಮಾಜಿಕ ಸ್ಥಿತಿಯ ಮೇಲೆ ಪ್ರಭಾವ ಬೀರುತ್ತವೆ.ಗರ್ಭಗೃಹದ ಮೇಲೆ ಅಷ್ಟಕೋನಗಳುಳ್ಳ ಗೋಪುರ ೩೦ ಅಡಿಗಳಷ್ಟು ಎತ್ತರವಿದ್ದು ತಾಮ್ರದ ಮೇಲ್ಛಾವಣಿ ಹೊಂದಿದೆ. ತಾಮ್ರದ ಮೇಲ್ಛಾವಣಿಯ ೮ ಮೂಲೆಗಳಲ್ಲಿ ನಾಗರ ಹೆಡೆಗಳನ್ನು ಕಾಣಬಹುದು. ಶಿಖರದ ಮೇಲೆ ಕಲಶವಿದ್ದು, ಚಿನ್ನದ ಲೇಪನ ಮಾಡಲಾಗಿದೆ.

ದೇವಾಲಯದ ಸುತ್ತಲೂ ಬಲಿಕಲ್ಲುಗಳಿವೆ. ಎಡಬದಿಗೆ ಕ್ಷೇತ್ರಪಾಲ ಮತ್ತು ತುಳಸಿಕಟ್ಟೆಯಿದೆ. ಭಿತ್ತಿಯ ಮೇಲೆ ಕಾವಿಚಿತ್ರಗಳಿದ್ದು ವಿಷ್ಣುವಿನ ದಶಾವತಾರ, ದೇವಿಯ ವಿವಿಧ ಲೀಲೆಗಳನ್ನು ಹೇಳುವ ಪೌರಾಣಿಕ ಕಥಾ ನಿರೂಪಕ ಚಿತ್ರಗಳು, ಮತ್ತು ದ್ವಾರಪಾಲಕ ಮತ್ತು ಸೇವಕರಂತಹ ಸಾಮಾನ್ಯ ವರ್ಗದ ಜನರನ್ನು ಬಿಂಬಿಸುವ ಚಿತ್ರಗಳಿವೆ.

೧] **ವಿಷ್ಣುವಿನ ದಶಾವತಾರಗಳು**

ದೇವಾಲಯದ ಸುತ್ತಲಿನ ಭಿತ್ತಿಯ ಮೇಲೆ ವಿಷ್ಣುವಿನ ಅವತಾರಗಳನ್ನು ಚಿತ್ರಿಸಲಾಗಿದೆ. ಎರಡನೇ ಫಲಕ ಮತ್ಸಾವತಾರವನ್ನು ನಂತರದ ಫಲಕಗಳಲ್ಲಿ ನಾಲ್ಕನೇಯ ಫಲಕ ಕುರ್ಮಾವತಾರ. ಒಂಬತ್ತನೇಯ ಫಲಕದಲ್ಲಿ ವರಾಹವತಾರ, ಹದಿಮೂರನೆಯ ಫಲಕದಲ್ಲಿ ನರಸಿಂಹಾವತಾರದಲ್ಲಿ ಶೇಷಷಾಹಿ, ಇಪ್ಪತ್ಮೂರನೇ ಫಲಕದಲ್ಲಿ ರಾವಣ, ಇಪ್ಪತ್ನಾಲ್ಕನೇ ಫಲಕದಲ್ಲಿ ನರಸಿಂಹಾವತಾರದಲ್ಲಿ ಹನುಮಂತ, ಇಪ್ಪತ್ತಾರನೇ ಫಲಕದಲ್ಲಿ ದತ್ತಾತ್ರೇಯ, ಇಪ್ಪತ್ತೊಂಬತ್ತನೇ ಫಲಕದಲ್ಲಿ ಚಂಡಿಕಾಮುಖ, ಮೂವತ್ತನೇ ಫಲಕದಲ್ಲಿ ಬೌದ್ಧಾವತಾರ, ಮೂವತ್ಮೂರನೇ ಫಲಕದಲ್ಲಿ ಕಲ್ಕಿ ಅವತಾರ ಇದೆ.

ಮತ್ಸ್ಯ ಮತ್ತು ಕುರ್ಮಾವತಾರ ಫಲಕಗಳ ವಿಶೇಷತೆ ಎಂದರೆ ಸೊಂಟಕ್ಕಿಂತ ಮೇಲೆ ವಿಷ್ಣುವಿನ ಚಿತ್ರವಿದ್ದು ಚತುರ್ಭುಜಗಳಲ್ಲಿ ಶಂಕ, ಗಧಾ, ಚಕ್ರ ಮತ್ತು ಪದ್ಮಗಳನ್ನು ಹಿಡಿದಿದ್ದಾನೆ. ಕೆಳಬದಿಯಲ್ಲೂ ಮೀನು ಮತ್ತು ಆಮೆಗಳನ್ನು ಚಿತ್ರಿಸಲಾಗಿದೆ. ನರಸಿಂಹಾವತಾರವು ಸಿಂಹದ ಮುಖವನ್ನು ಹೊಂದಿದೆ. ಕಾಲಮೇಲೆ ಹಿರಣ್ಯಕಶ್ಯಪನನ್ನು ಮಲಗಿಸಿ ಕೊಲ್ಲುತ್ತಿರುವಂತಿದೆ. ವಾಮನಾವತಾರದಲ್ಲಿ ಬಾಲವಟು ವಾಮನನು ಕೈಯಲ್ಲಿ ಛತ್ರಿಯನ್ನು ಹಿಡಿದು ಬಲಿಚಕ್ರವರ್ತಿಯ ಬಲಿದಾನವನ್ನು ಕೇಳುವಂತಿದೆ. ಪರಶುರಾಮ ಅವತಾರವು ಕೈಯಲ್ಲಿಛತ್ರಿಯನ್ನು ಹಿಡಿದು ರಾಮನನ್ನು ಚಿತ್ರಿಕರಿಸಲಾಗಿದೆ. ಅವನ ಬಲಗಡೆ ದಶಕಂಠ ರಾವಣನ ಫಲಕವಿದೆ. ಹಾಗೂ ಎಡಗಡೆ ಸಂಜೀವಿನಿ ಪರ್ವತವನ್ನು ಹೊತ್ತುತರುತ್ತಿರುವ ಹನುಮಂತನ ಫಲಕವಿದೆ. ಕೃಷ್ಣಾವತಾರದಲ್ಲಿ ಕೃಷ್ಣನು ಸಿಂಹಾಸನದ ಮೇಲೆ ಕುಳಿತಿರುವ ಕಂಸನನ್ನು ಕೊಲ್ಲುತ್ತಿರುವ ಫಲಕವಿದೆ. ಬೌದ್ಧಾವತಾರದ ವಿಶೇಷವೆಂದರೆ ಬುದ್ದನ ಬದಲು ಜಿನನ ಫಲಕವಿದ್ದು ತಲೆಗೆ ಕಿರೀಟವನ್ನು ಹಾಕಲಾಗಿದೆ. ಕೊನೆಯದಾಗಿ ಕುದುರೆಯ ಮೇಲೆ ಕುಳಿತು ದುಷ್ಟ ಶಿಕ್ಷೆಯನ್ನು ನೀಡುತ್ತಿರುವ ಕಲ್ಕಿಯ ಫಲಕವಿದೆ.

೨] **ದೇವಿಯ ವಿವಿಧ ಲೀಲೆಗಳನ್ನು ಹೇಳುವ ಚಿತ್ರಗಳು**

ಎರಡನೇಯ ಬಗೆಯ ಫಲಕಗಳಲ್ಲಿ ದೇವಿಯ ವಿವಿಧ ಲೀಲೆಗಳ ಫಲಕಗಳನ್ನು ಚಿತ್ರಿಸಲಾಗಿದೆ. ಅವುಗಳಲ್ಲಿ ಮೂರನೇಯ ಫಲಕದಲ್ಲಿ ದೇವಿ ಮಹಿಷನನ್ನು ಮರ್ದನ ಮಾಡುತ್ತಿರುವುದು. ಐದನೇ ಫಲಕದಲ್ಲಿ ದಶಮುಖ ದೇವಿ, ಆರನೇ ಫಲಕದಲ್ಲಿ ಸಿಂಹವಾಹಿನಿ. ಏಳನೇಯ ಫಲಕದಲ್ಲಿ ಮಹಿಷಾಸುರಮರ್ದಿನಿ, ಇಪ್ಪತ್ತೊಂದನೇಫಲಕದಲ್ಲಿ ಚಂಡ, ಮುಂಡರನ್ನು ಮರ್ಧನ ಮಾಡುತ್ತಿರುವ ಚಾಮುಂಡಿ, ದುರ್ಗಿಯಾಗಿ. ದುರ್ಗಿಯ ವಿವಿಧ ಅವತಾರಗಳನ್ನು ಹಾಗೂ ಅವಳಿಂದ ಸಂಹರಿಸಲ್ಪಟ್ಟ ಮಹಿಷನನ್ನು ಚಿತ್ರಿಸಲಾಗಿದೆ. ಎಲ್ಲಾ ಚಿತ್ರಗಳು ಕಲಾತ್ಮಕವಾಗಿದ್ದು ಕಲಾವಿದನ ಅದ್ಭುತ ಕಲ್ಪನಾ ಕಲೆಗೆ ಸಾಕ್ಷಿಗಳಾಗಿವೆ. ಇಪ್ಪತ್ತೈದನೇಫಲಕದಲ್ಲಿ ಮುಂಡ ಬೇರ್ಪಡಿಸಿದ ಶಿರ ಹೊಂದಿರುವ ಚಂಡಕಾಸುರನು

ಕುದುರೆಯ ಮೇಲೆ ಕುಳಿತಿರುವನು. ಆತನ ರಕ್ತ ಬಸಿಯುತ್ತಿರುವ ಶಿರವು ದೇವಿಯ ಕೈಯಲ್ಲಿರುವಂತೆ ಚಿತ್ರಿತವಾಗಿದೆ.

೩] **ಇತರ ಪೌರಾಣಿಕ ವ್ಯಕ್ತಿಗಳ ಚಿತ್ರಗಳು**

ಎಂಟನೇಫಲಕದಲ್ಲಿ ಅಂಧಕಾಸುರನನ್ನು ಕೊಲ್ಲುತ್ತಿರುವ ಶಿವ, ಇಪ್ಪತ್ತಾರನೇ ಫಲಕದಲ್ಲಿ ಗೋಮಾತೆಯ ಬಳಿಯಲ್ಲಿ ನಿಂತಿರುವ ದತ್ತಾತ್ರೇಯ, ಮೂವತ್ತೇರಡನೆಯ ಫಲಕದಲ್ಲಿ ಮಾರ್ಕಂಡೇಯನ ಕಥೆಯನ್ನು ಹೇಳುವ ಚಿತ್ರವಿದೆ. ಇಪ್ಪತ್ತನೇ ಫಲಕದಲ್ಲಿ ಐರಾವತದ ಮೇಲೆ ಇರುವ ಇಂದ್ರ ಇವು ಕಲಾಕಾರನ ಕೌಶಲ್ಯವನ್ನು ಎತ್ತಿ ತೋರುತ್ತದೆ.

೪] **ದ್ವಾರಪಾಲಕ ಮತ್ತು ಸೇವಕರಂತಹ ಸಾಮಾನ್ಯವಾದ ಜನರನ್ನು ಚಿತ್ರಿಸುವ ಚಿತ್ರಗಳು**

ದೇವಾಲಯದ ಭಿತ್ತಿಯಲ್ಲಿ ಸಾಮಾನ್ಯ ಜನರನ್ನು ಪ್ರತಿನಿಧಿಸುವ ಫಲಕಗಳಿವೆ. ಒಂದು ಮತ್ತು ಮುವತ್ತನಾಲ್ಕರಲ್ಲಿ ಇಬ್ಬರು ದ್ವಾರಪಾಲಕರ ಚಿತ್ರ. ೧೬ನೇ ಚಿತ್ರದಲ್ಲಿ ಮತ್ತು ಹದಿನೆಂಟನೇಯ ಫಲಕದಲ್ಲಿ ಧೂತನನ್ನು ಚಿತ್ರಿಸಲಾಗಿದೆ.

೧೧.	ಹೆಸರು	–	**ಶಾಂತಿಕಾ ಪರಮೇಶ್ವರಿ**
	ಸ್ಥಳ	–	ಊರಕೇರಿ ಗಣಪತಿ ದೇವಸ್ಥಾನಕ್ಕಿಂತ ಸ್ವಲ್ಪ ದೂರದಲ್ಲಿದೆ.
	ಕಾಲ	–	ಕ್ರಿ.ಶ. ೧೬–೧೭ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
	ಅಳತೆ	–	೧೧.೧೨ ಮೀ ಉದ್ದ, ೯.೨೯ ಮೀ ಅಗಲ

ಕುಮಟಾದಿಂದ ೮ ಕಿ.ಮೀ ದೂರದಲ್ಲಿ ಶಾಂತಿಕಾ ಪರಮೇಶ್ವರಿ ದೇವಾಲಯ ಇದೆ. ಈ ದೇವಾಲಯ ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಅಂತರಾಳ, ಒಳಗೊಂಡಿದ್ದು, ಗರ್ಭಗೃಹದಲ್ಲಿ ಶಾಂತಿಕಾ ಪರಮೇಶ್ವರಿ ಮೂರ್ತಿ ಇದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ. ದುರ್ಗಾಮೂರ್ತಿಯ ಎದುರಿಗೆ ದುರ್ಗೆಯ ಹುಲಿ ವಾಹನವಿದೆ. ಇದರ ಪಕ್ಕದಲ್ಲಿ ಜಟಗ ಸ್ಥಾಪಿಸಲಾಗಿದೆ. ಮತ್ತು ಬಲ ಮತ್ತು ಎಡ ಪಾರ್ಶ್ವಗಳಲ್ಲಿ ಸದಾಶಿವ ಎಂಬ ಶಿವಲಿಂಗವಿದೆ.

೧೨.	ಹೆಸರು	–	**ವನದುರ್ಗಾ ದೇವಾಲಯ**
	ಸ್ಥಳ	–	ನೀಲಕೋಡ ಗ್ರಾಮದ ಕೊನೆಯಲ್ಲಿ
	ಕಾಲ	–	ಕ್ರಿ.ಶ. ೧೯–೨೦ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
	ಅಳತೆ	–	೪ ಮೀ ಉದ್ದ, ೩ ಮೀ ಅಗಲ

ಕುಮಟಾದಿಂದ ೧೫ ಕಿ.ಮೀ ದೂರದಲ್ಲಿ ವನದುರ್ಗಾ ದೇವಾಲಯ ಇದೆ. ಈ ದೇವಾಲಯ ಜೀರ್ಣೋದ್ಧಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಒಳಭಾಗದಲ್ಲಿ

ಗರ್ಭಗೃಹ, ಅಂತರಾಳ, ಮತ್ತು ಪ್ರದಕ್ಷಿಣಾಪಥವಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು, ಮಧ್ಯದಲ್ಲಿ ವನದುರ್ಗಾ ಮೂರ್ತಿ ಇದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ.

ಐತಿಹ್ಯ: ಮೊದಲು ವನದುರ್ಗಾ ದೇವಿಯು ನೀಲಕೋಡ ಗ್ರಾಮದ ಮಧ್ಯದಲ್ಲಿ ನೆಲೆಸಿದ್ದಳು. ಹೀಗಾಗಿ ಇಂದು ಆ ಸ್ಥಳವನ್ನು ಆದಿ ದೇವತೆಯ ಗುತ್ತ ಎಂದು ಕರೆಯುವರು. ನಂತರ ಊರಹೊರಗಿನ ಸ್ಥಳವನ್ನು ಆರಿಸಿ ಅಲ್ಲಿ ನೆಲೆಸಿತೆಂದು ಹೇಳಲಾಗುತ್ತದೆ. ಈ ವಿಚಾರವಾಗಿ ದೇವಿಯ ಮಹಿಮೆಯ ಕುರಿತು ಭಕ್ತರಲ್ಲೊಬ್ಬರು ಸೊಪ್ಪು ತರಬೇಕೆಂದು ಬೆಟ್ಟಕ್ಕೆ ಹೋದಾಗ ಅವರು ಸೊಪ್ಪು ಕೊಯ್ದು ಆದ ಮೇಲೆ ಹೊರೆಯನ್ನು ಕಟ್ಟಿ ಸ್ವಲ್ಪ ವಿಶ್ರಾಂತಿಗಾಗಿ ತಾಂಬೂಲ ಹಾಕಲು ಕುಳಿತರು. ನಂತರ ಸೊಪ್ಪಿನ ಹೊರೆಯನ್ನು ತಲೆಯ ಮೇಲೆ ತೆಗೆದುಕೊಳ್ಳಲು ಪ್ರಯತ್ನಿಸಿದರ. ಆದರೆ ಅದು ಸಾಧ್ಯವಾಗಲಿಲ್ಲ. ನಂತರ ಈ ವಿಷಯವನ್ನು ತಮ್ಮ ಊರಿನ ಜನತೆಗೆ ತಿಳಿಸಿದಾಗ ಅವರು ಬಂದು ನೋಡಿದರು. ಅಲ್ಲಿ ಸೊಪ್ಪಿನ ಹೊರೆ ಇರಲಿಲ್ಲಾ. ಅದರ ಬದಲಾಗಿ ಆ ಸ್ಥಳದಲ್ಲಿ ರೋಹಿಣಿ (ಹುತ್ತ) ಮೂಡಿತು. ಇನ್ನೇನು ಮಾಡುವದು ಎಂದು ವಿಚಾರಿಸುತ್ತ ಊರ ಜನರು ತಮ್ಮ ತಮ್ಮ ಮನೆಗೆ ತೆರಳಿದರು. ರಾತ್ರಿಯ ಸಮಯದಲ್ಲಿ ಮಲಗಿದಾಗ ಭಕ್ತನಿಗೆ ದೇವಿ ಕನಸಿನಲ್ಲಿ ಬಂದು ಊರ ಹೊರಗೆ ಇರುತ್ತೇನೆ ತನಗೆ ಗುಡಿಕಟ್ಟಿಕೊಡಬೇಕೆಂದು ಹೇಳಿದಂತಾಯಿತು. ಅದರಂತೆ ಗುಡಿಕಟ್ಟಿಕೊಡಲಾಯಿತು. ಈ ದೇವಿಯು ವನದಲ್ಲಿ ನೆಲೆಸಿ ಊರ ಜನರನ್ನು ರಕ್ಷಿಸುತ್ತ ಬಂದಿದ್ದರಿಂದ ವನದುರ್ಗಾ ದೇವಿ ಎಂದು ಕರೆಯತೊಡಗಿದರು.

ಹಿಂದೆ ದೇವಿಗೆ ನೈವೇದ್ಯದ ಸಲುವಾಗಿ ಉಪಹಾರ ತಯಾರಿಸುವಾಗ ನಡೆಯುವ ಘಟನೆ ಬಹಳ ಕುತೂಹಲಕಾರಕವಾಗಿ ಹೇಳಲಾಗುತ್ತದೆ. ಆ ಸಮಯದಲ್ಲಿ ಅರ್ಚಕರು ಅಕ್ಕಿಯನ್ನು ತೊಳೆದು ನೀರು ಹಾಕಿ ಒದ್ದೆ ಬಟ್ಟೆಯಲ್ಲಿ ಆ ಪಾತ್ರೆಯನ್ನು ಕಟ್ಟಿ ದೇವಾಲಯಕ್ಕೆ ಬರುವ ವಾಡಿಕೆಯಿತ್ತು. ಹೀಗೆ ದೇವಾಲಯಕ್ಕೆ ಬಂದು ಬಟ್ಟೆಯನ್ನು ಬಿಚ್ಚಿ ಪಾತ್ರೆಯಲ್ಲಿ ನೋಡಿದಾಗ ಅನ್ನವಾಗುತ್ತಿತ್ತಂತೆ ಅದರಿಂದಾಗಿ ಈ ದೇವಿಗೆ 'ಅರಳಕ್ಕಿದೇವತೆ' ಎಂಬ ಇನ್ನೊಂದು ಹೆಸರು ಬಂದಿದೆ ಎಂಬ ಪ್ರತೀತಿ ಇದೆ.

೧೩.	ಹೆಸರು	–	**ಕೆಂಗಳಾಪರಮೇಶ್ವರಿ ದೇವಾಲಯ**
	ಸ್ಥಳ	–	ದೇವರಬಾವಿ, ಬಸ್ ನಿಲ್ದಾಣದಿಂದ ಸುಮಾರು ಅರ್ಧ ಕಿ.ಮೀ ದೂರದಲ್ಲಿದೆ.
	ಕಾಲ	–	ಕ್ರಿ.ಶ. ೧೯–೨೦ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೇಟರೈಟ್)
	ಅಳತೆ	–	೧೯.೦೫ ಮೀ ಉದ್ದ, ೮.೮೬ಮೀ ಅಗಲ

ಕುಮಟಾದಿಂದ ೨೫ ಕಿ.ಮೀ ದೂರದಲ್ಲಿ ಕೆಂಗಳಾಪರಮೇಶ್ವರಿ ದೇವಾಲಯ ಇದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ ಒಳಗೊಂಡಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ಕೆಂಗಳಾಪರಮೇಶ್ವರಿ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ. ರೇಖಾನಾಗರ ಶೈಲಿಯ ಶಿಖರವಿದ್ದು, ಪಂಚಲೋಹದಿಂದ ನಿರ್ಮಿಸಿದ ಕಲಶವನ್ನು ಹೊಂದಿದೆ.

೧೪. ಹೆಸರು – **ಶಾಂತಿಕಾ ಪರಮೇಶ್ವರಿ ದೇವಾಲಯ**

ಸ್ಥಳ – ದೇವರ ಹಕ್ಕಲು

ಕಾಲ – ಕ್ರಿ.ಶ.೧೯–೨೦ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೨೭.೯೮ ಮೀ ಉದ್ದ, ೨೩.೫೧ ಮೀ ಅಗಲ

ಕುಮಟಾದಿಂದ ೨ ಕಿ.ಮೀ ದೂರದಲ್ಲಿ ಶಾಂತಿಕಾಪರಮೇಶ್ವರಿ ದೇವಾಲಯ ಇದೆ. ಈ ದೇವಾಲಯ ಜೀರ್ಣೋದ್ಧಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ ಒಳಗೊಂಡಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಗರ್ಭಗೃಹದಲ್ಲಿ ಶ್ರೀ ಶಾಂತಿಕಾಪರಮೇಶ್ವರಿಯ ಮೂರ್ತಿ ಇದೆ.ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ.

ದೇವಿಯ ಪರಿವಾರ ದೇವತೆಗಳು

೧) ಮಾರಿಕಮ್ಮ– ಶ್ರೀ ದೇವಿಯ ಬಲಕ್ಕೆ "ಮಾರಿಕಮ್ಮ" ನ ಪೀಠವಿದೆ. ಮಾರಿಕಮ್ಮ (ಮಾರಿ ರೋಗ) ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವ ಅಧಿದೇವತೆ. ರೋಗಗಳು ಬಂದಾಗ ಪಿಡುಗು ನಿವಾರಣೆ ಮಾಡುತ್ತಾಳೆಂಬ ನಂಬಿಕೆ ಇದೆ.

೨) ಮೂರ್ತಿಯ ಎಡಮಗ್ಗುಲಿಗೆ ಪೀಠವಿರುತ್ತದೆ. ಈ ದೇವಾಲಯದ ಸಾಮಾನ್ಯ ಆಡಳಿತ ದೇವಿಯ ಪೂಜೆಪುನಸ್ಕಾರದ ಎಲ್ಲ ವ್ಯವಸ್ಥೆಗಳನ್ನು ನೋಡುವವನೆಂದು ಭಾವನೆ.

೩) ಬಾಗಿಲುಬಂಟ– ಗರ್ಭಗುಡಿಯ ಹೊರಮಗ್ಗುಲಲ್ಲಿ ಬಲಬದಿಗೆ ಬಾಗಿಲ ಬಂಟನಿದ್ದಾನೆ. ಬಾಗಿಲು ಬಂಟ ಎಂದರೆ "ದ್ವಾರ ಪಾಲಕ" ಪ್ರವೇಶವನ್ನು ನಿಯಂತ್ರಿಸುವವನು. ತಾಯಿಯ ಆದೇಶದ ಮೇರೆಗೆ ರಕ್ಷಣೆಯ ಕಾರ್ಯ ಮಾಡುವದು ಅವನ ಕೆಲಸ.

೪) ಕ್ಷೇತ್ರಪಾಲ–ಬಾಗಿಲಬಂಟನ ಪಕ್ಕದಲ್ಲಿಯೇ "ಕ್ಷೇತ್ರಪಾಲ" ನಿದ್ದಾನೆ. ಶಾಂತಿಕಾ ಪರಮೇಶ್ವರಿ ಇರುವ ಭೂಭಾಗದ ರಕ್ಷಣೆ ಮಾಡುವದೇ ಇವನ ಕಾರ್ಯ.

೫) ಭೂತಗಣ–ದೇವಿಯ ಎಡಮಗ್ಗುಲಲ್ಲಿ ಒಂದು ಭೂತಗಣನಿದ್ದಾನೆ. ಭೂತಮ ನೀಚ ಮತ್ತು ಕೀಳುವರ್ಗದವರಿಂದ ಉಂಟಾದ ಕಿರುಕುಳ ಮತ್ತು ಉಪದ್ರವಗಳನ್ನು ಬಾಗಿಲಬಂಟನ ಆದೇಶದಮೇರೆಗೆ ಪರಿಹಾರ ಮಾಡುತ್ತಾನೆಂಬುದು ಸ್ಥಳೀಯ ಪ್ರತೀತಿ.

೬) ನಾಗರ ಮೂರ್ತಿಗಳು ಇರುವ ಸ್ಥಾನಕ್ಕೆ ಬ್ರಹ್ಮಚಾರಿಸ್ಥಾನವೆಂದು ಹೆಸರು, ಸ್ಥಳ ರಕ್ಷಣೆ, ಧನರಕ್ಷಣೆ, ಮತ್ತು ಸಂತಾನ ಪ್ರಧಾನ ಕಾರ್ಯಗಳು ಇವು ನಾಗದೇವತೆಗಳ ಕಾರ್ಯಗಳಾಗಿವೆ.

ಐತಿಹ್ಯ: ವಿಷ್ಣುವಿನ ಹತ್ತು ಅವತಾರಗಳಲ್ಲಿ ಪರಶುರಾಮನ ಅವತಾರವೂ ಒಂದು. ಪರಶುರಾಮನು ತನ್ನ ತಂದೆಯ ಆಜ್ಞೆಯ ಮೇರೆಗೆ ತಪಸ್ಸಿಗಾಗಿ ಪ್ರಶಾಂತ ಮತ್ತು ಪ್ರಸನ್ನ ಸ್ಥಳವನ್ನು ಪರಿಶೋಧಿಸುತ್ತಿರಲು ಹಚ್ಚಹಸಿರಾಗಿರುವ ಸಹ್ಯಾದ್ರಿಪರ್ವತ, ಮತ್ತು ವಿಶಾಲವಾದ ಅರಬ್ಬಿ ಸಮುದ್ರ ನೋಡಿ ಇದೆ ತನಗೆ ತಕ್ಕ ಸ್ಥಳವೆಂದು, ತಪಸ್ಸನ್ನು ಮಾಡಬಹುದೆಂದು ಭಾವಿಸಿ ಆ ಸ್ಥಳವನ್ನು ಗುರುತಿಸುವದಕ್ಕಾಗಿ ಅಕ್ಷತೆಗಳನ್ನು ಅಭಿಮಂತ್ರಿಸಿ ಅಷ್ಟದಿಕ್ಕುಗಳಲ್ಲಿ ಪ್ರಕ್ಷೇಪಿಸಿದನಂತೆ. ಹೀಗೆ ಅವನು ಗುರುತಿಸಿದ ಭೂಮಿಗೆ ಪರಶುರಾಮ ಸೃಷ್ಟಿಯೆಂದು ಇಂದಿಗೂ ಹೆಸರಿದೆ. (ಇಲ್ಲಿ ಜಲಪ್ರಳಯದ ಭಯವಿಲ್ಲವೆಂದು ಭಾವಿಸುತ್ತಾರೆ) ಹೀಗೆ ಪರಶುರಾಮನ ಕೈಯಿಂದ ಬಿದ್ದ ಒಂದೊಂದು ಅಕ್ಷತೆಕಾಳಿನಿಂದ ಒಂದೊಂದು ಗ್ರಾಮದೇವತೆ ಹುಟ್ಟಿತೆಂದು ಅವುಗಳಲ್ಲಿ ಶಾಂತಿಕಾಪರಮೇಶ್ವರಿ ದೇವತೆಯೂ ಕೂಡ ಒಂದಾಗಿದೆ.

ಇನ್ನೊಂದು ಐತಿಹ್ಯ ಉದ್ದಾಲಕನೆಂಬ ಮಹಾಮುನಿಯು "ಕುಂಭಾಸುರ" ನೆಂಬ ಒಬ್ಬ ದೈತ್ಯನಿಂದ ಪೀಡಿತನಾಗಲೂ ದೇವಿಯಲ್ಲಿ ಮೊರೆಯಿಟ್ಟನು. ಆಗ ಅವಳು ಕುರುಣೆತೋರಿ ಅವನಿಗೆ ತನ್ನ ವಲ್ಮೀಕದಲ್ಲಿ (ಒರಲೇ ಹುತ್ತಿನಲ್ಲಿ) ಆಶ್ರಯವಿತ್ತಳು. ಕುಂಭಾಸುರನನ್ನು ಕೊಂದು ಈ ಪ್ರದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಿದಳು. ಹೀಗಾಗಿ "ಶಾಂತಿಕಾಂಬಾ" "ಶಾಂತಿಕಾಪರಮೇಶ್ವರಿ" ಹೆಸರು ಬಂದಿತೆಂಬ ಪ್ರತೀತಿ ಇದೆ. ದೇವಿಯು ಭೂಮಿಯಿಂದಲೇ ಸ್ವಯಂಭೂ ಆಗಿ ಹುಟ್ಟಿ ಬಂದುದರಿಂದಲೂ ಈ ಭಾಗದ ಎಲ್ಲ ಕೃಷಿಕಾರ್ಯಗಳು ವಿಶೇಷವಾಗಿ ಬಿತ್ತನೆ ಕಾರ್ಯಗಳು "ಬಂಡಿ ಹಬ್ಬದ" ನಂತರವೇ ಆಗುವದರಿಂದ ಈ ದೇವಿಗೆ "ಭೂಮಿ ದೇವತೆ" ಎಂತಲೂ ಹೆಸರಿದೆ.

೧೫.	ಹೆಸರು	–	**ಕಾಂಚಿಕಾ ಪರಮೇಶ್ವರಿ ದೇವಾಲಯ**
	ಸ್ಥಳ	–	ಬಾಡ, ಗ್ರಾಮದ ಮಧ್ಯದಲ್ಲಿ
	ಕಾಲ	–	ಕ್ರಿ.ಶ.೨೦ ನೇ ಶತಮಾನ
	ವಸ್ತು	–	ಜಂಬಿಟ್ಟಿಗೆ (ಲೆಟರೈಟ್)
	ಅಳತೆ	–	೪೫.೭ ಮೀ ಉದ್ದ, ३೦.೪೮ ಮೀ ಅಗಲ

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ. ಭಿತ್ತಿಯಲ್ಲಿ ಲಕ್ಷ್ಮಿ, ಪಾರ್ವತಿ ಹಾಗೂ ಮಹಿಷಾಸುರಮರ್ದಿನಿ, ಕಾಳಿ, ಪಾರ್ವತಿ, ಸರಸ್ವತಿ ಮುಂತಾದ ಚಿಕ್ಕ ಶಿಲ್ಪಗಳಿವೆ. ಶಿಖರವು ಅಷ್ಟಭುಜಾಕೃತಿಯಲ್ಲಿದೆ. ದ್ರಾವಿಡ ಮಾದರಿಯಲ್ಲಿದ್ದು, ಮೇಲೆ ಪಂಚಲೋಹದಿಂದ ಮಾಡಿದ ಕಲಶವಿದೆ.

ಐತಿಹ್ಯ: ಕಲಭ ಎಂಬ ರಾಜನು ಸಹಸ್ರಾರು ವರ್ಷಗಳ ಪೂರ್ವದಲ್ಲಿ ಗೋಕರ್ಣ ಮಂಡಳದ ಅರಸನಾಗಿ ರಾಜ್ಯವಾಳುತ್ತಿದ್ದನು. ದೈವಭಕ್ತನಾಗಿದ್ದ ಈತನು ಪ್ರಜೆಗಳ ಹಿತಚಿಂತನೆಗಾಗಿ ದೇವರಲ್ಲಿ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದನು. ಕಲಭರಾಜನಿಗೆ ಒಂದು ದಿವ್ಯ ಸ್ವಪ್ನದಲ್ಲಿ ಕಾಗಲ–ಅಘನಾಶಿನಿ ಗುಡ್ಡದಲ್ಲಿರುವ ಅಗಸ್ತ್ಯಾಶ್ರಮದ ದಕ್ಷಿಣಕ್ಕೆ ಸಾಗರತಡಿಯಲ್ಲಿ ಕಿರುಗುಡ್ಡದ ಅಂಚಿಗೆ ಚಾಕ್ರಯಣಿ ಕ್ಷೇತ್ರವಿದೆ. ಅಲ್ಲಿಯೇ ಗುಡಿಯನ್ನು ಕಟ್ಟಿಸಿ ಶ್ರೀದೇವಿಯ ಮೂರ್ತಿಯನ್ನು ಸ್ಥಾಪಿಸು ಪ್ರಜೆಗಳಿಗೆ ಕಲ್ಯಾಣವಾಗುವುದು ಎಂದು ದೃಷ್ಠಾಂತವಾಯಿತು. ಅದರಂತೆ ರಾಜಪರಿವಾರ ಆ ಸ್ಥಳಕ್ಕೆ ಬಂದು ನಂತರ ಮಹಿಷಮರ್ದಿನಿಯ ಮೂರ್ತಿಯನ್ನು ಕಂಚಿಯಿಂದ ತಂದು ಪ್ರತಿಷ್ಠಾಪಿಸಿದರು. ಹೀಗಾಗಿ ಕಾಂಚಿಕಾಂಬಾ ಎಂಬ ಹೆಸರು ಬರಲು ಕಾರಣವಾಯಿತು ಎಂಬುದು ಇಲ್ಲಿಯ ಸ್ಥಳೀಯ ಪ್ರತೀತಿಯಾಗಿದೆ.

ಐತಿಹ್ಯ: ಒಬ್ಬ ಹಳ್ಳೀರ (ಪಂಚಮ) ಮಹಿಳೆಯು ಸಮುದ್ರ ತಡಿಯಲ್ಲಿ ಗಾಳಿಮರದ ತರಕು (ಒಣಗಿದ ಎಲೆ) ಚೂಳಿಯಲ್ಲಿ ತುಂಬುತ್ತ ಇದ್ದಳು. ಆಗ ಅವಳಿಗೊಂದು ಗೊಂಬೆ ಸಿಕ್ಕಿತು. ಹುಡುಗರಿಗೆ ಆಡಲು ಆಗಬಹುದೆಂದು ಆ ಹೆಂಗಸು ಗೊಂಬೆಯನ್ನು ಎತ್ತಿ ತರಕು ತುಂಬಿದ ಚೂಳಿಯಲ್ಲಿಟ್ಟುಕೊಂಡು ತರಕನ್ನು ತುಂಬುತ್ತ ಬಂದಳು. ಚೂಳಿ ತುಂಬಿತು. ನಂತರ ತಲೆಯ ಮೇಲೆ ಹೊತ್ತಕೊಂಡು ಹೋಗುವಾಗ ಭಯಂಕರ ಭಾರವಾಗತೊಡಗಿತು. ಹೀಗಾಗಿ ಸ್ವಲ್ಪ ದೂರ ಆಲದ ಕಟ್ಟೆಯ ಮೇಲೆ ಚೂಳಿಯನ್ನು ಇಟ್ಟಳು. ಸ್ವಲ್ಪ ಸಾವರಿಸಿಕೊಂಡು ಪುನಃ ಚೂಳಿಗೆ ತಲೆ ಕೊಟ್ಟರೆ ಅಲುಗಾಡಿಸಲು ಸಾಧ್ಯವಾಗಲಿಲ್ಲ. ಆಗ ಅವಳಿಗೆ ತರಕು ತುಂಬುವಾಗ ಸಿಕ್ಕಿದ ಗೊಂಬೆಯ ನೆನಪಾಯಿತು. ಕೂಡಲೇ ಚೂಳಿಯಿಂದ ತರಕು ಖಾಲಿ ಮಾಡಿದಳು. ಗೊಂಬೆಯನ್ನು ಹೊರತೆಗೆದು ನೋಡಿದಳು. ಆಗ ಅವಳಿಗೆ ಗೊಂಬೆ ಅಷ್ಟೊಂದು ಭಾರವೆನಿಸಲಿಲ್ಲ. ಹೆಣ್ಣು ಗೊಂಬೆ ಸುಂದರವಾಗಿದೆ. ಕಾಲಿನ ಅಡಿಯಲ್ಲಿ ಕೋಣ, ಕೋಣನನ್ನು ಮೆಟ್ಟಿ ತ್ರಿಶೂಲದಿಂದ ಇರಿಯುವ ಭಂಗಿ, ಹಳ್ಳಿರ ಜಾತಿಯ ಮಹಿಳೆ ಗೊಂಬೆಯನ್ನು ಅಲ್ಲಿಯೇ ಕಟ್ಟೆಯ ಮೇಲೆ ಇಟ್ಟಳು. ಚೂಳಿಗೆ ಪುನಃ ತರಕು ತುಂಬಿದಳು. ನಂತರ ಎತ್ತಿಕೊಂಡಾಗ ಹೂವಿನಷ್ಟು ಹಗುರವಾಗಿತ್ತು. ನಂತರ ಬ್ರಾಹ್ಮಣರು ಬಂದು ಪೂಜೆ ಮಾಡಲಾರಂಭಿಸಿದರು. ಆ ಹಳ್ಳಿರ ಮಹಿಳೆ ಗೊಂಬೆಯಿಟ್ಟ ಕಟ್ಟೆಯೇ ಗೊಂಬೆ ಕಟ್ಟೆಯಾಗಿ ಇಂದಿಗೂ ಇದೆ. ನಂತರ ಕಟ್ಟೆಯ ಮೇಲಿದ್ದ ಮೂರ್ತಿಯ ತದ್ರೂಪದ ಶಿಲಾ ಮೂರ್ತಿಯನ್ನು ಗುಡ್ಡದ ಮೇಲೆ ಪ್ರತಿಷ್ಠಾಪಿಸಲಾಯಿತು.

ಕುಮಟಾದಿಂದ ೧೩ ಕಿ.ಮೀ ದೂರದಲ್ಲಿ ಕಾಂಚಿಕಾ ಪರಮೇಶ್ವರಿ ದೇವಾಲಯ ಇದೆ. ಈ ದೇವಾಲಯ ಜೀರ್ಣೋದ್ಧಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಅಂತರಾಳ, ನವರಂಗ ಒಳಗೊಂಡಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ಕಾಂಚಿಕಾ ಪರಮೇಶ್ವರಿಯ ಮೂರ್ತಿ ಪ್ರತಿಷ್ಠಾಪಿಸಲಾಗಿದೆ.

೧೬. ಹೆಸರು – **ಶಾಂತಿಕಾಪರಮೇಶ್ವರಿ ದೇವಾಲಯ**

ಸ್ಥಳ – ಪಡುವಣಿ ಗ್ರಾಮದ ಈಶಾನ್ಯ ದಿಕ್ಕಿಗೆ

ಕಾಲ – ಕ್ರಿ.ಶ.೨೦ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೇಟರೈಟ್)

ಅಳತೆ – ೩೫.೯ ಮೀ ಉದ್ದ, ೩೧.೮ ಮೀ ಅಗಲ

ಕುಮಟಾದಿಂದ ೧೫ ಕಿ.ಮೀ ದೂರದಲ್ಲಿ ಶಾಂತಿಕಾಪರಮೇಶ್ವರಿ ದೇವಾಲಯ ಇದೆ. ಈ ದೇವಾಲಯ ಪೂವಾಭಿಮುಖವಾಗಿದ್ದು ಗರ್ಭಗೃಹ, ನವರಂಗ, ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ಶಾಂತಿಕಾಪರಮೇಶ್ವರಿ ಮೂರ್ತಿ ಇದೆ. ಗರ್ಭಗೃಹದ ಬಾಗಿಲು ಕಾಷ್ಟದಿಂದ ನಿರ್ಮಿತವಾಗಿದೆ. ಲಲಾಟಬಿಂಬದಲ್ಲಿ ಗಜತೋರಣವಿದ್ದು ನವರಂಗದಲ್ಲಿ ಸುಖಾಸನ ಗಣಪತಿಯ ಮೂರ್ತಿಇದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನು ಒಳಗೊಂಡಿದೆ. ಭಿತ್ತಿಯಲ್ಲಿ ಪದ್ಮದಳದ ಫಲಕವಿದೆ. ಶಿಖರ ನಾಗರಶೈಲಿಯದಾಗಿದೆ. ಶಿಖರದ ಮೇಲೆ ಕಲಶವಿದ್ದು ಪಂಚಲೋಹದಿಂದ ಮಾಡಲಾಗಿದೆ.

ಒಟ್ಟಾರೆ ಶಾಕ್ತಪಂಥಕ್ಕೆ ಸಂಬಂಧಿಸಿದಂತೆ ಶಾಕ್ತ ಪಂಥದ ದೇವಾಲಯಗಳಲ್ಲಿ ವೈವಿಧ್ಯತೆ ಇದೆ. ಭದ್ರಕಾಳಿ ದೇವಾಲಯ, ತಾಮ್ರಗೌರಿ ದೇವಾಲಯ, ಗಂಗಾ ದೇವಾಲಯ, ಶಾಂತೇಶ್ವರಿ ದೇವಾಲಯ, ದೇವಕೀ ಕೃಷ್ಣ ರವಳನಾಥ ದೇವಾಲಯ, ಕೆಂಗಳಾಪರಮೇಶ್ವರೀ ದೇವಾಲಯ ಹೀಗೆ ವೈವಿಧ್ಯತೆಗಳನ್ನು ಒಳಗೊಂಡಿದೆ. .ಶಾಕ್ತಪಂಥದ ದೇವಾಲಯಗಳೆಲ್ಲಾ ವಿಜಯನಗರೋತ್ತರ ಕಾಲಕ್ಕೆ ಮತ್ತು ಆಧುನಿಕ ಕಾಲಕ್ಕೆ ಸೇರಿವೆ.

ಶಾಕ್ತ ದೇವಾಲಯಗಳು

ಕ್ರ.ಸಂ	ಸ್ಥಳ	ಹೆಸರು	ಕಾಲ	ಸ್ಥಿತಿ
೧.	ಮೂರುಕಟ್ಟೆ, ರಥಬೀದಿ ಕುಮಟಾ	ಮಹಾಲಸಾ ನಾರಾಯಣೀ ಶಾಂತೇರಿ ದೇವಸ್ಥಾನ	ಕ್ರಿ.ಶ ೧೬ನೇ ಶತಮಾನ	ಜೀರ್ಣೋದ್ಧಾರ
೨.	ಮೂರುಕಟ್ಟೆ, ರಥಬೀದಿ ಕುಮಟಾ	ಶಾಂತೇರಿ ಕಾಮಾಕ್ಷಿ ದೇವಸ್ಥಾನ	ಕ್ರಿ.ಶ ೧೬ನೇ ಶತಮಾನ	ಜೀರ್ಣೋದ್ಧಾರ
೩.	ಹೆರವಟ್ಟಾ ಗ್ರಾಮದ ಮಧ್ಯದಲ್ಲಿ	ದೇವಕಿಕೃಷ್ಣ ದೇವಾಲಯ	ಕ್ರಿ.ಶ ೧೬ನೇ ಶತಮಾನ	ಜೀರ್ಣೋದ್ಧಾರ

೪.	ಕಾಗಲ	ದೇವಕಿಕೃಷ್ಣ ದೇವಾಲಯ	ಕ್ರಿ.ಶ ೧೬ನೇ ಶತಮಾನ	ಜೀರ್ಣೋದ್ಧಾರ
೫.	ಹಿರೇಗುತ್ತಿ, ರಾಷ್ಟ್ರೀಯ ಹೆದ್ದಾರಿಯ ಪಕ್ಕ	ಮಹಾಲಕ್ಷ್ಮಿ ರವಳನಾಥ ದೇವಾಲಯ	ಕ್ರಿ.ಶ ೧೬ನೇ ಶತಮಾನ	ಜೀರ್ಣೋದ್ಧಾರ
೬.	ಹೆಗಡೆ, ಬಸನಿಲ್ದಾಣದ ಹತ್ತಿರ	ಶಾಂತಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೧೬–೧೭ನೇ ಶತಮಾನ	ಜೀರ್ಣೋದ್ಧಾರ
೭.	ಊರಕೇರಿ, ಗಣಪತಿ ದೇವಸ್ಥಾನದಿಂದ ಸ್ವಲ್ಪ ದೂರ	ಶಾಂತಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೧೬–೧೭ನೇ ಶತಮಾನ	ಶಿಥಿಲಾವಸ್ಥೆ
೮.	ಮಹಾಬಲೇಶ್ವರ ದೇವಾಲಯ ಹಿಂದುಗಡೆ, ಗೋಕರ್ಣ	ತಾಮ್ರಗೌರಿ ದೇವಾಲಯ	ಕ್ರಿ.ಶ ೧೯–೨೦ನೇ ಶತಮಾನ	ಸುಸ್ಥಿತಿ
೯.	ಶಂಕರ ಮಠದ ಎದುರಿಗೆ ಗೋಕರ್ಣ	ಭದ್ರಕಾಳಿ ದೇವಾಲಯ	ಕ್ರಿ.ಶ ೧೯–೨೦ನೇ ಶತಮಾನ	ಸುಸ್ಥಿತಿ
೧೦.	ನಾಡುಮಾಸ್ಕೇರಿ ಗ್ರಾಮದ ದಕ್ಷಿಣ ದಿಕ್ಕಿಗೆ	ಗಂಗಾ ದೇವಸ್ಥಾನ	ಕ್ರಿ.ಶ ೧೯–೨೦ನೇ ಶತಮಾನ	ಜೀರ್ಣೋದ್ಧಾರ
೧೧.	ನಿಲಕೋಡ ಗ್ರಾಮದ ಕೊನೆಯಲ್ಲಿ	ವನದುರ್ಗಾ ದೇವಾಲಯ	ಕ್ರಿ.ಶ ೧೯–೨೦ನೇ ಶತಮಾನ	ಜೀರ್ಣೋದ್ಧಾರ
೧೨.	ದೇವರಬಾವಿ ಬಸನಿಲ್ದಾಣದಿಂದ ಅರ್ಧ ಕಿ.ಮೀ ದೂರದಲ್ಲಿದೆ	ಕೆಂಗಳಾ ಪರಮೇಶ್ವರಿ ದೇವಾಲಯ	ಕ್ರಿ.ಶ ೧೯–೨೦ನೇ ಶತಮಾನ	ಜೀರ್ಣೋದ್ಧಾರ
೧೩.	ದೇವರಹಕ್ಕಲು	ಶಾಂತಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೧೯–೨೦ನೇ ಶತಮಾನ	ಜೀರ್ಣೋದ್ಧಾರ
೧೪.	ಅಘನಾಶಿನಿ ಊರ ಕೊನೆಯಲ್ಲಿ	ಗಂಗಾಮಾತಾ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೧೫.	ಬರ್ಗಿ ಗ್ರಾಮದ ಊರ ಒಳಗೆ	ಶಾಂತಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೧೬.	ಬೆಟಗುಳಿ ಊರಮಧ್ಯ ಪೂರ್ವ ದಿಕ್ಕಿಗೆ	ದುರ್ಗಾದೇವಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ

೧೭.	ಬೆಟಗುಳಿ ದಕ್ಷಿಣ ದಿಕ್ಕಿಗೆ	ಲಕ್ಷ್ಮಿನಾರಾಯಣ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೧೮.	ಬಾವಿಕೊಡ್ಲ ಗ್ರಾಮದ ಪೂರ್ವ ದಿಕ್ಕಿಗೆ	ಧರ್ಮದೇವಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೧೯.	ಗೋಕರ್ಣ ರುದ್ರ ಭೂಮಿಯ ಬಲಪಕ್ಕದಲ್ಲಿ	ಸ್ಮಶಾನ ಕಾಳಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೨೦.	ಹನಿಹಳ್ಳಿ ಗ್ರಾಮದ ಪೂರ್ವ ದಿಕ್ಕಿಗೆ ಇರುವ ಪ್ರೌಢಶಾಲೆಯ ಹತ್ತಿರ	ಅಮ್ಮನವರ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೨೧.	ಹೆಗಡೆ ಗ್ರಾಮದ ಹೊರಭಾಗದಲ್ಲಿ	ಕಾನಮ್ಮ ದುರ್ಗಾಪರಮೇಶ್ವರಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಜಿರ್ಣೋದ್ದಾರ
೨೨.	ಮಿರ್ಜಾನ ಗ್ರಾಮದ ಪಶ್ಚಿಮ ದಿಕ್ಕಿಗೆ ಸುಮಾರು ೧ಕಿ.ಮೀ ದೂರದಲ್ಲಿ	ಶಾಂತಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಸುಸ್ಥಿತಿ
೨೩.	ಸಂತೆಗುಳಿ ಊರಪ್ರಾರಂಭದಲ್ಲಿ	ಶಾಂತಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಜಿರ್ಣೋದ್ದಾರ
೨೪.	ಸಾಂತಗಲ್ ಗ್ರಾಮದ ಪ್ರಾರಂಭದಲ್ಲಿ	ಶಾಂತಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಜಿರ್ಣೋದ್ದಾರ
೨೫.	ವಾಲಗಳ್ಳಿ ಊರ ಪ್ರಾರಂಭದಲ್ಲಿ	ಕನ್ನಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಜಿರ್ಣೋದ್ದಾರ
೨೬.	ಹೆರವಟ್ಟಾ ಊರ ಕೊನೆಯ ಭಾಗದಲ್ಲಿ	ಶಾಂತಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೧೯–೨೦ ನೇ ಶತಮಾನ	ಜಿರ್ಣೋದ್ದಾರ
೨೭.	ಬಾಡಾ ಗ್ರಾಮದ ಮದ್ಯದಲ್ಲಿ	ಕಾಂಚಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೨೦ ನೇ ಶತಮಾನ	ಜಿರ್ಣೋದ್ದಾರ
೨೮.	ಪಡುವಣಿ ಗ್ರಾಮದ ಈಶಾನ್ಯ ದಿಕ್ಕಿಗೆ	ಶಾಂತಿಕಾ ಪರಮೇಶ್ವರಿ ದೇವಾಲಯ	೨೦ ನೇ ಶತಮಾನ	ಜಿರ್ಣೋದ್ದಾರ
೨೯.	ಹಿರೇಗುತ್ತಿ ಗ್ರಾಮದ ಕೊನೆಯಲ್ಲಿ	ಲಕ್ಷ್ಮಿನಾರಾಯಣ ದೇವಾಲಯ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ

೩೦.	ನುಶಿಕೋಟೆ	ಅಮ್ಮನವರ ದೇವಾಲಯ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ
೩೧.	ಕೊಡಕಣಿ ಊರ ಪ್ರಾರಂಭದಲ್ಲಿ	ಶಾಂತಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ
೩೨.	ಕೂಜಳ್ಳಿ ಊರ ಪ್ರಾರಂಭದಲ್ಲಿ	ಅಮ್ಮನವರ ದೇವಾಲಯ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ
೩೩.	ಮೂರುರು ಊರಭಾಗದಲ್ಲಿರುವ ಗದ್ದೆಯಲ್ಲಿ	ದುರ್ಗದೇವಾಲಯ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ
೩೪.	ನಾಡುಮಾಸ್ಕೇರಿ ಗ್ರಾಮದ ಪಶ್ಚಿಮ ದಿಕ್ಕಿಗೆ ಇರುವ ಗುಡ್ಡದ ಮೇಲೆ	ಶಾಂತಿಕಾ ಪರಮೇಶ್ವರಿ ದೇವಾಲಯ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ
೩೫.	ಸಂಡಳ್ಳಿ ಊರ ಮಧ್ಯದಲ್ಲಿ ಇದೆ	ಅಮ್ಮನವರ ದೇವಾಲಯ	ಕ್ರಿ.ಶ ೨೦ ನೇ ಶತಮಾನ	ಸುಸ್ಥಿತಿ

೪.೮ ವೈಷ್ಣವ ದೇವಾಲಯಗಳು

ವಿಷ್ಣು ಎಂದರೆ ಸರ್ವವ್ಯಾಪಿಯಾಗಿರುವನು ಎಂದರ್ಥ. ಎಲ್ಲ ಜೀವಿಗಳ ಪರಿಪಾಲನೆ ವಿಷ್ಣುವಿನ ಕರ್ತವ್ಯ. ವೈಷ್ಣವ ಧರ್ಮದಲ್ಲಿ ಭಾಗವತ ಪಂಥವು ಪ್ರಮುಖವಾಗಿದೆ. ಈ ಧರ್ಮದ ಸ್ಥಾಪಕ ಕ್ಷತ್ರಿಯನಾದ ಕೃಷ್ಣ, ವಾಸುದೇವ ತನ್ನ ಆರಾಧ್ಯ ದೈವವನ್ನು ಭಾಗವತ ಎಂದು ಕರೆದನು. ಈ ಅನುಯಾಯಿಗಳು ಕೃಷ್ಣನಿಗೆ ದೇವಪಟ್ಟ ಕಟ್ಟಿ ಅವನು ಒಂದು ಅವತಾರವೆಂದು ಭಾವಿಸಿದರು. ದೇವತೆಗಳಿಗೆಲ್ಲಾ ವಿಷ್ಣುವೇ ವರಿಷ್ಠ ದೇವತೆ. ವೈಷ್ಣವ ಧರ್ಮದ ಪ್ರಾಚೀನತೆಯನ್ನು ಗಮನಿಸಿದಾಗ ಕ್ರಿ.ಪೂ ೩ ನೇ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಹೆಲಿಯೋಡೋರಸ್ ವಿಧಿಶೆಯಲ್ಲಿ ಸ್ಥಾಪಿಸಿದ ಗರುಡಸ್ತಂಭ ಮಧ್ಯಪ್ರದೇಶದ ಭಿಲ್ಸಾ ನಗರದ ಹತ್ತಿರವಿದೆ. ಇದು ಮೊದಲ ಐತಿಹಾಸಿಕ ಪುರಾವೆಯಾಗಿದೆ.

ಶಾತವಾಹನರ ರಾಣಿ ನಾಗಮೂಲನಿಕಾಳ ನಾನಾಘಾಟ ಗುಹಾಶಾಸನವು ದಖ್ಖನ ಭಾಗದಲ್ಲಿ ಕ್ರಿ.ಪೂ ೩ ನೇ ಶತಮಾನದಲ್ಲಿ ವೈಷ್ಣವ ಪಂಥವು ಅಸ್ತಿತ್ವದಲ್ಲಿದ್ದನ್ನು ತಿಳಿಸುತ್ತದೆ.[೫೦] ವಾಯುಪುರಾಣದಲ್ಲಿ ಪಂಚವೀರರ ಹೆಸರುಗಳಿವೆ. ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ ಮತ್ತು ಸಾಂಬ ಮೂರ್ತಿರೂಪದಿಂದ ಆರಾಧಿಸುತ್ತಿದ್ದ ಅಂಶವು ಪುರಾತತ್ವ ಕುರುಹುಗಳಿಂದ ಸ್ಪಷ್ಟವಾಗುತ್ತದೆ.[೫೧] ಬನವಾಸಿ ಕದಂಬರು, ತಲಕಾಡಿನ ಗಂಗರು ಬಾದಾಮಿ ಚಾಲುಕ್ಯ ಅರಸರು ವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ ಇವರು ನಿರ್ಮಿಸಿದ ಗುಹಾ ದೇವಾಲಯಗಳಲ್ಲಿ ವಿಷ್ಣುವಿನ ಶಿಲ್ಪವಿದೆ. ಉತ್ತರ ಕನ್ನಡಜಿಲ್ಲೆ ಹೊನ್ನಾವರ ತಾಲೂಕಿನ ಕೊಂತಪಾಲದ ದ್ವಿಭುಜ ವಿಷ್ಣು ಶಿಲ್ಪ [೫೨] ವೈಷ್ಣವ ಪಂಥದ ಪ್ರಾಚೀನತೆಗೆ ಸಾಕ್ಷಿಯಾಗಿದೆ. ಪ್ರಸ್ತುತ ಈ ಮೂರ್ತಿಶಿಲ್ಪ ಶಿರಾಲಿ, (ತಾ:ಭಟ್ಕಳ ಉ.ಕ)

ಪ್ರಸ್ತುತ ಕುಮಟಾ ತಾಲೂಕಿನಲ್ಲಿರುವ ವಿಷ್ಣು ದೇವಾಲಯಗಳಲ್ಲಿ ಪ್ರಮುಖ ದೇವಾಲಯಗಳು ಇಲ್ಲಿ ಪ್ರಸ್ತಾಪಿಸಲಾಗಿದೆ.

೧. ಹೆಸರು – **ವೆಂಕಟ್ರಮಣ ದೇವಾಲಯ**

ಸ್ಥಳ – ಗೋಕರ್ಣ, ಬಸ್ ನಿಲ್ದಾಣದ ಎದುರಿಗೆ

ಕಾಲ – ಕ್ರಿ.ಶ. ೧೬–೧೭ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೩೨.೬೧ ಮೀ ಉದ್ದ, ೯.೧೭ ಮೀ ಅಗಲ

ಕುಮಟಾದಿಂದ ೩೨ ಕಿ.ಮೀ ದೂರದಲ್ಲಿ ವೆಂಕಟ್ರಮಣ ದೇವಾಲಯವಿದೆ. ಈ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹ, ನವರಂಗ, ಸಭಾಮಂಟಪ ಒಳಗೊಂಡಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ಲಕ್ಷ್ಮಿ ವೆಂಕಟ್ರಮಣ ಮೂರ್ತಿ ಸ್ಥಾಪಿಸಲಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಮೂರ್ತಿಯನ್ನು ಕಾಣಬಹುದು. ಚತುರ್ಭುಜದಾರಿಯಾಗಿದ್ದು ಸುಖಾಸನ ಭಂಗಿಯಲ್ಲಿ ಕಮಲದ ಮೇಲೆ ಕುಳಿತುಕೊಂಡಿದೆ. ಎಡಬಲಗಳಲ್ಲಿ ಆನೆಗಳು ಸೊಂಡಿಲಲ್ಲಿ ಮಾಲೆಯನ್ನು ಹಿಡಿದು ನಿಂತಿವೆ. ಹಾಗೂ ಬಾಗಿಲುಗಳ ಮೇಲೆ ಹೂಲತೆ ಬಳ್ಳಿಗಳ ಅಚ್ಚುಕಟ್ಟಾದ ಕೆತ್ತನೆಗಳನ್ನು ಕಾಣಬಹುದು.

ನಾಲ್ಕನೇ ದ್ವಾರದ ಸಭಾಂಗಣದಲ್ಲಿ ನಾಲ್ಕು ಕಲ್ಲಿನ ಸ್ತಂಭಗಳಿವೆ. ಈ ಸ್ತಂಭಗಳು ಚೌಕಾಕೃತಿಯಲ್ಲಿ ಕೆತ್ತಲ್ಪಟ್ಟವುಗಳಾಗಿವೆ. ಶಂಖ. ಚಕ್ರ. ಗರುಡ. ನರ್ತಕಿಯರು, ನರ್ತಕರು, ನರಸಿಂಹ, ಕೃಷ್ಣ. ಕಾಳಿಂಗಮರ್ದನ ಶಿಲ್ಪಗಳನ್ನು ಸ್ತಂಭಗಳಲ್ಲಿ ಕಾಣಬಹುದಾಗಿದೆ. ಸಭಾಂಗಣದ ಮೇಲ್ಭಾಗದಲ್ಲಿ ಕಲ್ಲಿನಲ್ಲಿ ಕೆತ್ತಲ್ಪಟ್ಟ ಪುಷ್ಪದಳಗಳನ್ನು ಕಾಣಬಹುದು.

ಐದನೆ ದ್ವಾರದ ಲಲಾಟಬಿಂಬದಲ್ಲಿ ಸುಖಾಸನ ಗಣಪತಿಯ ಮೂರ್ತಿಯನ್ನು ಕಾಣಬಹುದು. ಬಾಗಿಲ ಇಕ್ಕೆಲಗಳಲ್ಲಿ ದ್ವಾರಪಾಲಕರನ್ನು ಕಾಣಬಹುದು. ಇವರು ಕಿರೀಟ ಮಕುಟಧಾರಿಯಾಗಿದ್ದು ಕಂಠಹಾರ, ಯಜ್ಞೋಪವೀತ, ಪಾದಸರ, ಕಟಿಸೂತ್ರವನ್ನು ಧರಿಸಿ ಚರ್ತುಭುಜದಾರಿಯಾಗಿದ್ದಾರೆ. ಎಡಗಡೆಯ ಒಂದು ಕೈ ಅಭಯ, ಇನ್ನೊಂದು ಕೈಯಲ್ಲಿ ಶಂಖ, ಬಲಗಡೆಯ ಒಂದು ಕೈಯಲ್ಲಿ ಗಧೆ, ಇನ್ನೊಂದು ಕೈಯಲ್ಲಿ ಚಕ್ರವನ್ನು ಹಿಡಿದಿದ್ದಾನೆ.ನವರಂಗದಲ್ಲಿ ಎರಡು ಸ್ತಂಭಗಳಿದ್ದು ಅದರಲ್ಲಿ ನರ್ತಕೀಯರು, ಮಾರುತಿ, ಸಿಂಹ, ಶಿಲ್ಪಗಳಿವೆ. ನವರಂಗ ಮಂಟಪದ ಬಲಬದಿಗೆ ಚಿಕ್ಕದಾದ ಮಂದಿರವಿದ್ದು ಅಲ್ಲಿ ಶ್ರೀದೇವಿ ಮತ್ತು ಎಡಗಡೆ ಭೂದೇವಿಯರ ಮೂರ್ತಿಗಳಿವೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ.

೨. ಹೆಸರು – **ವೆಂಕಟರಮಣ ದೇವಾಲಯ**

ಸ್ಥಳ – ಮಿರ್ಜಾನ, ಈಶ್ವರ ದೇವಸ್ಥಾನದಿಂದ ಸುಮಾರು ೫೦ ಮೀಟರ ಬಲ ಪಕ್ಕದಲ್ಲಿ

ಕಾಲ – ಕ್ರಿ.ಶ. ೧೬–೧೭ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೧೫.೩೬ಮೀ ಉದ್ದ, ೬.೮೮ಮೀ ಅಗಲ

ಕುಮಟಾದಿಂದ ೧೦ ಕಿ.ಮೀ ದೂರದಲ್ಲಿ ವೆಂಕಟರಮಣ ದೇವಾಲಯವಿದೆ. ಈ ದೇವಾಲಯ ಪಶ್ಚಿಮಾಭಿಮುಖವಾಗಿದ್ದು ಗರ್ಭಗೃಹ, ನವರಂಗ, ಸಭಾಮಂಟಪ ಒಳಗೊಂಡಿದೆ. ಇದು ಸಾಂಧಾರ ಮಾದರಿಯ ದೇವಾಲಯವಾಗಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಗರ್ಭಗೃಹದಲ್ಲಿ ವೆಂಕಟರಮಣ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಬೃಹದಾಕಾರದ ಚೌಕಾಕಾರಧ ಕಮಾನುಗಳುಳ್ಳ ಸ್ತಂಭಗಳಿವೆ. ದೇವಾಲಯದ ಹೊರಭಾಗ– ಅಧಿಷ್ಠಾನ, ಭಿತ್ತಿ, ಒಳಗೊಂಡಿದ್ದು ಇದರ ಮೇಲೆ ಹಂಚಿನ ಮೇಲ್ಚಾವಣಿ ಇದೆ. ಮೇಲೆ ಕಲಶವಿದೆ.

೩. ಹೆಸರು – **ಲಕ್ಷ್ಮಿ ನಾರಾಯಣ ದೇವಾಲಯ**

ಸ್ಥಳ – ಮಿರ್ಜಾನ, ಶಾಂತಿಕಾ ಪರಮೇಶ್ವರಿ ದೇವಾಲಯಕ್ಕೆ ಹೋಗುವ ದಾರಿಯಲ್ಲಿ

ಕಾಲ – ಕ್ರಿ.ಶ. ೧೬–೧೭ ನೇ ಶತಮಾನ

ವಸ್ತು – ಜಂಬಿಟ್ಟಿಗೆ.(ಲೆಟರೈಟ್)

ಅಳತೆ – ೧೦.೪೨ಮೀ ಉದ್ದ, ೬.೭೬ಮೀ ಅಗಲ

ಕುಮಟಾದಿಂದ ೧೦ ಕಿ.ಮೀ ದೂರದಲ್ಲಿ ಲಕ್ಷ್ಮಿ ನಾರಾಯಣ ದೇವಾಲಯ ಇದೆ. ಈ ದೇವಾಲಯ ಪಶ್ಚಿಮಾಭಿಮುಖವಾಗಿದ್ದು ಗರ್ಭಗೃಹ, ನವರಂಗ, ಸಭಾಮಂಟಪ ಇದೆ. ಇದು ನಿರಂಧಾರ ಮಾದರಿಯ ದೇವಾಲಯವಾಗಿದೆ. ಗರ್ಭಗೃಹದಲ್ಲಿ ಲಕ್ಷ್ಮಿ ನಾರಾಯಣ ಮೂರ್ತಿಇದೆ. ನವರಂಗದಲ್ಲಿ ಹೂಲತಾ ಬಳ್ಳಿಯ ಕಾವಿ ಚಿತ್ರಗಳಿವೆ. ಗರ್ಭಗೃಹದ ಪ್ರವೇಶ ದ್ವಾರದಲ್ಲಿ ಖಾವಿ ಚಿತ್ರಗಳಲ್ಲಿ ತೆಗೆದ ದ್ವಾರಪಾಲಕರ ಮೂರ್ತಿಗಳಿವೆ. ಇವರು ಚತುರ್ಭುಜದಾರಿಗಳಾಗಿದ್ದು, ಶಂಖ. ಚಕ್ರ. ಗಧಾ. ಪದ್ಮವನ್ನು ಹಿಡಿದಿದ್ದಾರೆ.ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಇದರ ಮೇಲೆ ಹಂಚಿನ ಮೇಲ್ಛಾವಣಿಇದೆ. ಮೇಲೆ ಕಲಶವಿದೆ.

೪. ಹೆಸರು – **ಜನಾರ್ಧನ ದೇವಾಲಯ**

ಸ್ಥಳ – ತಲಗೋಡ ಗ್ರಾಮದ ದಕ್ಷಿಣ ದಿಕ್ಕು

ಕಾಲ – ಕ್ರಿ.ಶ. ೧೬–೧೭ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೮.೩೮ ಮೀ ಉದ್ದ, ೪.೮೭ ಮೀ ಅಗಲ

ಕುಮಟಾದಿಂದ ೧೫ ಕಿ.ಮೀ ದೂರದಲ್ಲಿ ಜನಾರ್ಧನ ದೇವಾಲಯವಿದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ, ನವರಂಗ ಒಳಗೊಂಡಿದೆ. ಗರ್ಭಗೃಹದಲ್ಲಿಜನಾರ್ಧನ ಮೂರ್ತಿ ಇದೆ. ದೇವಾಲಯದ ಮುಂಭಾಗದಲ್ಲಿ ಗರುಡ ಮೂರ್ತಿಯಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿಯನ್ನೊಳಗೊಂಡಿದ್ದು ಅದರ ಮೇಲೆ ಹಂಚಿನ ಮೇಲ್ಛಾವಣಿಯನ್ನು ಒಳಗೊಂಡಿದೆ. ಮೇಲೆ ಕಲಶವಿದೆ.ಪ್ರಸ್ತುತ ಈ ದೇವಾಲಯ ಜೀರ್ಣೋದ್ಧಾರವಾಗಿದ್ದು ಗರ್ಭಗೃಹ ಹಳೆಯದಾಗಿದೆ. ಇನ್ನಿತರ ಭಾಗವನ್ನು ಹೊಸದಾಗಿ ನಿರ್ಮಾಣಮಾಡಲಾಗಿದೆ.

೫. ಹೆಸರು – **ಲಕ್ಷ್ಮೀ ನಾರಾಯಣ**

ಸ್ಥಳ – ಹೆಬ್ಬೈಲ್ ಗ್ರಾಮದ ಕೊನೆಯಲ್ಲಿ

ಕಾಲ – ಕ್ರಿ.ಶ. ೧೬–೧೭ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೪.೮೭ ಮೀ ಉದ್ದ, ೪.೮೭ ಮೀ ಅಗಲ

ಕುಮಟಾದಿಂದ ೩೨ ಕಿ.ಮೀ ದೂರದಲ್ಲಿ ಲಕ್ಷ್ಮೀ ನಾರಾಯಣ ದೇವಾಲಯ ಇದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ನವರಂಗ ಒಳಗೊಂಡಿದೆ. ಗರ್ಭಗೃಹದಲ್ಲಿ ಲಕ್ಷ್ಮೀ ನಾರಾಯಣ ಮೂರ್ತಿಇದೆ.

ದೇವಾಲಯದ ಹೊರಭಾಗ ಅಧಿಷ್ಠಾನ ಅದರಲ್ಲಿ ಜಗತಿ, ಉಪಾನ, ಕಪೋತ ಪಟ್ಟಿಗಳಿಂದ, ಭಿತ್ತಿ ಅರ್ಧಗಂಬಗಳಿಂದ ಅಲಂಕೃತಗೊಂಡಿದೆ. ಶಿಖರವು ರೇಖಾ ಮಾದರಿಯದಾಗಿದ್ದು ಶಿಖರದ ಮೂರೂ ಬದಿಗಳಲ್ಲಿ ಪದ್ಮಗಳಿವೆ. ಶಿಖರದ ಮೇಲಿನ ಕಲಶವು ಪಂಚಲೋಹದಿಂದ ಮಾಡಲ್ಪಟ್ಟಿದೆ ಪ್ರಸ್ತುತ ಈ ದೇವಾಲಯ ಶಿಥಿಲಾವ್ಯಸ್ಥೆಯಲ್ಲಿದೆ.

೬. ಹೆಸರು – **ಕೇಶವ ದೇವಾಲಯ**

ಸ್ಥಳ – ಕುಂದಗುಣಿ ಗ್ರಾಮ

ಕಾಲ – ಕ್ರಿ.ಶ. ೧೯–೨೦ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೆಟರೈಟ್)

ಅಳತೆ – ೪.೬೫ ಮೀ ಉದ್ದ, ೪.೬೫ ಮೀ ಅಗಲ

ಕುಮಟಾದಿಂದ ೧೨ ಕಿ.ಮೀ ದೂರದಲ್ಲಿ ಕೇಶವ ದೇವಾಲಯ ಇದೆ. ಈ ದೇವಾಲಯ ಪೂರ್ವಾಭಿಮುಖವಾಗಿದೆ. ಈ ದೇವಾಲಯ ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥವನ್ನು ಒಳಗೊಂಡಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ

ಕೇಶವ ಮೂರ್ತಿ ಇದೆ.ದೇವಾಲಯದ ಹೊರಭಾಗ, ಅಧಿಷ್ಠಾನ, ಭಿತ್ತಿ ಅದರ ಮೇಲೆ ಹಂಚಿನ ಮೇಲ್ಛಾವಣಿ ಒಳಗೊಂಡಿದೆ. ಮೇಲೆ ಕಲಶವಿದೆ. ಪ್ರಸ್ತುತ ದೇವಾಲಯ ಜೀರ್ಣೋದ್ಧಾರವಾಗಿದೆ.

೭. ಹೆಸರು – **ವಿಷ್ಣು ದೇವಾಲಯ**
ಸ್ಥಳ – ಉಂಚಗಿ–ವಾಲಗಳ್ಳಿ ಗ್ರಾಮ
ಕಾಲ – ಕ್ರಿ.ಶ.೧೯–೨೦ ನೇ ಶತಮಾನ
ವಸ್ತು – ಜಂಬಿಟ್ಟಿಗೆ (ಲೆಟರೈಟ್)
ಅಳತೆ – ೬.೭೬ ಮೀ ಉದ್ದ, ೬ ಮೀ ಅಗಲ

ಕುಮಟಾದಿಂದ ೪ ಕಿ.ಮೀ ದೂರದಲ್ಲಿ ವಿಷ್ಣು ದೇವಾಲಯ ಇದೆ. ಪ್ರಸ್ತುತ ದೇವಾಲಯ ಜೀರ್ಣೋದ್ಧಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ ಒಳಗೊಂಡಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ವಿಷ್ಣು ಮೂರ್ತಿ ಇದೆ. ದೇವಾಲಯದ ಹೊರಭಾಗವು ಅಧಿಷ್ಠಾನ, ಭಿತ್ತಿ, ಶಿಖರ, ಕಲಶವನ್ನೊಳಗೊಂಡಿದೆ.

೮. ಹೆಸರು – **ಶಂಕರ ನಾರಾಯಣ ದೇವಾಲಯ**
ಸ್ಥಳ – ಬಸ್ತಿಪೇಟೆ ಹತ್ತಿರ
ಕಾಲ – ಕ್ರಿ.ಶ. ೧೯–೨೦ ನೇ ಶತಮಾನ
ವಸ್ತು – ಜಂಬಿಟ್ಟಿಗೆ (ಲೆಟರೈಟ್)
ಅಳತೆ – ೯.೯ ಮೀ ಉದ್ದ, ೪.೪ ಮೀ ಅಗಲ

ಕುಮಟಾದ ಬಸ್ ನಿಲ್ದಾಣದಿಂದ ೨ ಕಿ.ಮೀ ದೂರದಲ್ಲಿ ಶಂಕರ ನಾರಾಯಣ ದೇವಾಲಯ ಇದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ ಹೊಂದಿದೆ. ಗರ್ಭಗೃಹದಲ್ಲಿ ಎರಡು ಮುಖದ ಶಂಕರ ನಾರಾಯಣ ಮೂರ್ತಿ ಇದೆ. ಎದುರಿನಲ್ಲಿ ಈಶ್ವರ ಲಿಂಗವಿದೆ. ಈ ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಹಂಚಿನ ಮೇಲ್ಛಾವಣಿ ಹೊಂದಿದೆ.

೯. ಹೆಸರು – **ಶಂಕರ ನಾರಾಯಣ ದೇವಾಲಯ**
ಸ್ಥಳ – ಗೋಕರ್ಣ, ಕೋಟಿತೀರ್ಥದ ಆಗ್ನೇಯಕ್ಕೆ ಇದೆ.
ಕಾಲ – ಕ್ರಿ.ಶ.೧೯–೨೦ ನೇ ಶತಮಾನ
ವಸ್ತು – ಜಂಬಿಟ್ಟಿಗೆ (ಲೆಟರೈಟ್)
ಅಳತೆ – ೬.೩೦ ಮೀ ಉದ್ದ, ೬.೩೦ ಮೀ ಅಗಲ

ಕುಮಟಾದಿಂದ ೩೨ ಕಿ.ಮೀ ದೂರದಲ್ಲಿ ಶಂಕರ ನಾರಾಯಣ ದೇವಾಲಯ ಇದೆ. ಈ ದೇವಾಲಯ ಪಶ್ಚಿಮಾಭಿಮುಖವಾಗಿದ್ದು ಗರ್ಭಗೃಹ ಮತ್ತು ನವರಂಗ ಒಳಗೊಂಡಿದೆ.

ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು ಮಧ್ಯದಲ್ಲಿ ಶಂಕರ ನಾರಾಯಣ ಮೂರ್ತಿ ಇದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ ಹಂಚಿನ ಮೇಲ್ಛಾವಣಿ ಹೊಂದಿದೆ. ಮೇಲ್ಭಾಗದಲ್ಲಿ ಕಲಶವಿದೆ.

ಐತಿಹ್ಯ: ಹಿರಣ್ಯಕಶ್ಯಪನ ವಂಶಜನಾದ ಖರನೆಂಬ ರಾಕ್ಷಸ (ಭಸ್ಮಾಸುರ) ತಪಸ್ಸು ಮಾಡಿ ಶಿವನನ್ನೇ ಒಲಿಸಿಕೊಂಡು ತಾನು ಯಾರತಲೆಯ ಮೇಲೆ ಕೈ ಇಡುವನೋ ಅವನು ಭಸ್ಮವಾಗಲೆಂಬ ವರ ಪಡೆದು ಲೋಕಕಂಟಕನಾದನೆಂಬ ಪ್ರತೀತಿ ಇದೆ. ಒಂದು ದಿನ ಭಸ್ಮಾಸುರ ಶಿವನನ್ನೇ ಭಸ್ಮ ಮಾಡಲು ಮುಂದಾದಾಗ ಈ ವಿಷಯ ವಿಷ್ಣುವಿಗೂ ತಿಳಿದು ಭಸ್ಮಾಸುರನನ್ನು ಕೊಲ್ಲಲು ಸ್ತ್ರೀ ರೂಪವನ್ನು ಧರಿಸಿದನೆಂಬುದು ದಂತಕಥೆಯಾಗಿದೆ.

ಶತಶೃಂಗ ಪರ್ವತದಲ್ಲಿ ಅಪೂರ್ವ ಸೌಂದರ್ಯವತಿಯನ್ನು ಕಂಡ ಖರ ತನ್ನ ತನವನ್ನು ಕಳೆದುಕೊಂಡು ಸಂಪೂರ್ಣ ಆಕೆಯ ವಶನಾದನು. ಆಗ ಶಿವ ನೀಡಿದ ವರವನ್ನುತಾನು ತೆಗೆದುಕೊಂಡಿದ್ದರಿಂದ ಮೋಹಿನಿ ರೂಪದಲ್ಲಿ ವಿಷ್ಣು ಭಸ್ಮಾಸುರನನ್ನು ಸಂಹರಿಸಿದನು. ಹೀಗೆ ವಿಷ್ಣುವಿನಿಂದ ಭಸ್ಮಾಸುರ ಭಸ್ಮಾನಾದನು. ಮೋಹಿನಿಯಆ ರೂಪಕಂಡ ಹರ, ಹರಿಯನ್ನು ಆಲಂಗಿಸಿಕೊಂಡ. ಈ ಅಪ್ಪುಗೆಯ ನೆನಪೆ ಈ ಶಂಕರನಾರಾಯಣ ದೇವಾಲಯವಾಗಿದೆ. ಅರ್ಧ ಪುರುಷನು ಅರ್ಧ ನಾರಿಯೂ ಆಗಿರುವ ಈ ಮೂರ್ತಿಗೆ ಅರ್ಧನಾರೀಶ್ವರ ಎಂದು ಹೆಸರೂ ಇದೆ.[೫೩]

ಒಟ್ಟಾರೆ ವೈಷ್ಣವ ಪಂಥಕ್ಕೆ ಸಂಬಂಧಿಸಿದ ಒಟ್ಟು ೧೫ ದೇವಾಲಯಗಳಿದ್ದು ದೇವಾಲಯಗಳಲ್ಲಿ ವೈವಿಧ್ಯತೆ ಇದೆ. ಉದಾ ವೆಂಕಟ್ರಮಣ ದೇವಾಲಯ, ಜನಾರ್ಧನ ದೇವಾಲಯ, ಶಂಕರನಾರಾಯಣ ದೇವಾಲಯ, ಗೋಪಾಲಕೃಷ್ಣ ದೇವಾಲಯಗಳಿವೆ. ಇಲ್ಲಿ ಕ್ರಿ.ಶ ೧೫ ರಿಂದ ೨೦ನೇ ಶತಮಾನದವರೆಗಿನ ವೈಷ್ಣವ ಪಂಥದ ದೇವಾಲಯಗಳಿವೆ.

ವೈಷ್ಣವ ದೇವಾಲಯಗಳು

ಕ್ರ.ಸಂ	ಸ್ಥಳ	ಹೆಸರು	ಕಾಲ	ಸ್ಥಿತಿ
೧.	ಗೋಕರ್ಣ, ಬಸನಿಲ್ದಾಣದ ಎದುರಿಗೆ	ವೆಂಕಟರಮಣ ದೇವಾಲಯ	ಕ್ರಿ.ಶ ೧೬–೧೭ ನೇ ಶತಮಾನ	ಸುಸ್ಥಿತಿ
೨.	ಮಿರ್ಜಾನ, ಈಶ್ವರ ದೇವಸ್ಥಾನದಿಂದ ಸುಮಾರು ೫೦ಮೀ ಬಲಪಕ್ಕದಲ್ಲಿ	ವೆಂಕಟರಮಣ ದೇವಾಲಯ	ಕ್ರಿ.ಶ ೧೬–೧೭ ನೇ ಶತಮಾನ	ಸುಸ್ಥಿತಿ
೩.	ಮಿರ್ಜಾನ, ಶಾಂತಿಕಾ ಪರಮೇಶ್ವರಿ ದೇವಾಲಯಕ್ಕೆ ಹೋಗುವ ದಾರಿಯಲ್ಲಿ	ಲಕ್ಷ್ಮಿನಾರಾಯಣ ದೇವಾಲಯ	ಕ್ರಿ.ಶ ೧೬–೧೭ ನೇ ಶತಮಾನ	ಶಿಥಿಲಾವಸ್ಥೆ

೪.	ತಲಗೋಡ, ಗ್ರಾಮದ ದಕ್ಷಿಣ ದಿಕ್ಕಿಗಿದೆ	ಜನಾರ್ಧನ ದೇವಾಲಯ	ಕ್ರಿ.ಶ ೧೬-೧೭ ನೇ ಶತಮಾನ	ಜೀರ್ಣೋದ್ಧಾರ
೫.	ಹೆಬೈಲ್	ಲಕ್ಷ್ಮಿನಾರಾಯಣ	ಕ್ರಿ.ಶ ೧೬-೧೭ ನೇ ಶತಮಾನ	ಜೀರ್ಣೋದ್ಧಾರ
೬.	ಕುಂದಗಣಿ ಗ್ರಾಮ	ಕೇಶವ ದೇವಾಲಯ	ಕ್ರಿ.ಶ ೧೯-೨೦ ನೇ ಶತಮಾನ	ಜೀರ್ಣೋದ್ಧಾರ
೭.	ಉಂಚಗಿ, ವಾಲಗಳ್ಳಿ ಗ್ರಾಮ	ವಿಷ್ಣು ದೇವಾಲಯ	ಕ್ರಿ.ಶ ೧೯-೨೦ ನೇ ಶತಮಾನ	ಜೀರ್ಣೋದ್ಧಾರ
೮.	ಬಸ್ತಿಪೇಟೆ ಹತ್ತಿರ	ಶ್ರೀಶಂಕರ ನಾರಾಯಣ ದೇವಾಲಯ	ಕ್ರಿ.ಶ ೧೯-೨೦ ನೇ ಶತಮಾನ	ಜೀರ್ಣೋದ್ಧಾರ
೯.	ಗೋಕರ್ಣ, ಕೋಟಿತೀರ್ಥದ ಆಗ್ನೇಯಕ್ಕೆ	ಶ್ರೀಶಂಕರ ನಾರಾಯಣ ದೇವಾಲಯ	ಕ್ರಿ.ಶ ೧೯-೨೦ ನೇ ಶತಮಾನ	ಸುಸ್ಥಿತಿ
೧೦.	ಮೂರುರು ಗ್ರಾಮದ ಉತ್ತರ ದಿಕ್ಕಿಗೆ	ವಿಷ್ಣು ದೇವಾಲಯ	ಕ್ರಿ.ಶ ೧೯-೨೦ ನೇ ಶತಮಾನ	ಸುಸ್ಥಿತಿ
೧೧.	ಮೊರಬಾ ಗ್ರಾಮದ ನಡುವೆ ಇದೆ	ಲಕ್ಷ್ಮಿನಾರಾಯಣ ದೇವಾಲಯ	ಕ್ರಿ.ಶ ೧೯-೨೦ ನೇ ಶತಮಾನ	ಸುಸ್ಥಿತಿ
೧೨.	ಗೋರೆ, ಮಾಸ್ತಿ ಮನೆಯಿಂದ ಸ್ವಲ್ಪ ದೂರದಲ್ಲಿದೆ	ಗೋಪಾಲಕೃಷ್ಣ ದೇವಾಲಯ	ಕ್ರಿ.ಶ ೨೦ ನೇ ಶತಮಾನ	ಜೀರ್ಣೋದ್ಧಾರ
೧೩.	ಹೊಸಾಡ, ಗ್ರಾಮದ ಮಧ್ಯಭಾಗದಲ್ಲಿ	ಗೋಪಾಲಕೃಷ್ಣ ದೇವಾಲಯ	ಕ್ರಿ.ಶ ೨೦ ನೇ ಶತಮಾನ	ಜೀರ್ಣೋದ್ಧಾರ
೧೪.	ಸಾಣೆಕಟ್ಟಾ	ವೆಂಕಟರಮಣ ದೇವಾಲಯ	ಕ್ರಿ.ಶ ೨೧ ನೇ ಶತಮಾನ	ಸುಸ್ಥಿತಿ

ಇತರೆ ದೇವಾಲಯ:

೧೦. ಹೆಸರು – **ಭರತ ದೇವಾಲಯ**

ಸ್ಥಳ – ಗೋಕರ್ಣ, ರಾಮ ಸೀತಾ ಲಕ್ಷ್ಮಣ ಮಂದಿರದ ಮೇಲ್ಭಾಗದಲ್ಲಿ

ಕಾಲ – ಕ್ರಿ.ಶ. ೧೭-೧೮ ನೇ ಶತಮಾನ

ವಸ್ತು – ಜಂಬಿಟ್ಟಿಗೆ (ಲೇಟರೈಟ್)

ಅಳತೆ – ೯.೬೦ ಮೀ ಉದ್ದ, ೭.೩೧ ಮೀ ಅಗಲ

ಕುಮಟಾದಿಂದ ೩೩ ಕಿ.ಮೀ ದೂರದಲ್ಲಿ ಭರತ ದೇವಾಲಯ ಇದೆ. ಈ ದೇವಾಲಯ ಉತ್ತರಾಭಿಮುಖವಾಗಿದೆ. ದೇವಾಲಯದ ಒಳಭಾಗ ಗರ್ಭಗೃಹ, ಅಂತರಾಳ, ಮತ್ತು ನವರಂಗವನ್ನು ಹೊಂದಿದೆ.

ಗರ್ಭಗೃಹದಲ್ಲಿ ಭರತನ ನಿಂತ ಭಂಗಿಯ ಮೂರ್ತಿಇದೆ. ಇದು ನಿರಂಧಾರ ಮಾದರಿಯ ದೇವಾಲಯವಾಗಿದ್ದು ಚೌಕಾಕಾರವಾಗಿದೆ. ದೇವಾಲಯದ ಹೊರಭಾಗ ಅಧಿಷ್ಠಾನ,ಭಿತ್ತಿ ಮುಂಭಾಗ ತ್ರಿಭುಜಾಕೃತಿಯಲ್ಲಿದೆ. ಹಿಂಭಾಗ ಆಯತಾಕೃತಿಯಲ್ಲಿದ್ದು ಮೇಲೆ ಸ್ತೂಪಾಕಾರದ ಗುಮ್ಮಟ ಇದೆ. ಇದು ಮಧ್ಯಕಾಲೀನ ವಾಸ್ತುಶಿಲ್ಪವನ್ನು ಹೋಲುವ ಹಿಂದೂ ದೇವಾಲಯವಾಗಿದೆ. ಇಂಡೋಇಸ್ಲಾಮಿಕ ಶೈಲಿಯನ್ನು ಹೋಲುವ ಈ ದೇವಾಲಯ ಮಸೀದಿಯ ಆಕಾರದಲ್ಲಿದೆ.

ಒಟ್ಟಾರೆಯಾಗಿ ಈ ಅಧ್ಯಾಯದಿಂದ ಕಂಡುಬರುವ ಅಂಶವೆನೆಂದರೆ ಇಲ್ಲಿ ಆಳ್ವಿಕೆ ನಡೆಸಿದ ಅರಸರು ಹಾಗೂ ಮಹಾಮಂಡಳೇಶ್ವರರ ಪ್ರೋತ್ಸಾಹ ದೇವಾಲಯಗಳ ನಿರ್ಮಾಣಕ್ಕೆ ಕಾರಣವಾಯಿತು. ಇಲ್ಲಿಯ ಪರಿಸರದಲ್ಲಿ ವಾಸ್ತು ನಿರ್ಮಾಣಕ್ಕೆ ಬೇಕಾದ ಗ್ರಾನೈಟ್ ಅಥವಾ ಸಿಸ್ಟ (ಬಳಪದ ಕಲ್ಲು) ಅಲಭ್ಯತೆಯಿಂದಾಗಿ ದೇವಾಲಯದ ಪೋಷಕರು ಮತ್ತು ಕಲಾಕಾರರು ಇತ್ತೀಚಿಗೆ ಮರವನ್ನು ಹೆಚ್ಚಾಗಿ ಬಳಸಿ ಜೀರ್ಣೋದ್ಧಾರ ಮಾಡುವಾಗ ಇಳಿಜಾರಾದ ಮಾಡನ್ನು ನಿರ್ಮಿಸುತ್ತಿದ್ದರು.

ಇಲ್ಲಿನ ಒಟ್ಟು ೩೫ ಶೈವದೇವಾಲಯಗಳು, ೧೬ ಗಾಣಪತ್ಯ ದೇವಾಲಯಗಳು, ೩೬ ಶಾಕ್ತ ದೇವಾಲಯಗಳು, ೧೪ ವೈಷ್ಣವ ದೇವಾಲಯಗಳು, ೨ ಜೈನ ಬಸದಿಗಳ ಬಗ್ಗೆ ದಾಖಲಿಸಲಾಗಿದೆ. ಇಲ್ಲಿನ ಪ್ರಾಚೀನ ದೇವಾಲಯವೆಂದರೆ ಧಾರೇಶ್ವರದ ಆದಿಧಾರೇಶ್ವರ, ಮತ್ತು ಧಾರನಾಥ ದೇವಾಲಯಗಳಾಗಿವೆ. ಧಾರನಾಥ ದೇವಾಲಯ ಕ್ರಿ.ಶ. ೧೧ನೇ ಶತಮಾನಕ್ಕೆ ಸೇರಿದ್ದು ಕಲ್ಯಾಣ ಚಾಲುಕ್ಯರ ವಾಸ್ತುಶೈಲಿಯ ಪ್ರಭಾವ ಕಂಡುಬರುತ್ತದೆ. ಉದಾ-ಧಾರೇಶ್ವರ ದೇವಾಲಯದ ಮೇಲ್ಕಟ್ಟಡ ಕಲ್ಯಾಣ ಚಾಲುಕ್ಯರ ದ್ರಾವಿಡ ವಿಮಾನ ರೀತಿಯದಾಗಿದೆ. ಆದಿಧಾರೇಶ್ವರ ದೇವಾಲಯ ಧಾರನಾಥ ದೇವಾಲಯಕ್ಕಿಂತ ಪೂರ್ವದ್ದು ಎನ್ನುವದಕ್ಕೆ ಇಲ್ಲಿ ದೊರೆತ್ತಿರುವ ಕ್ರಿ.ಶ. ೮ನೇ ಶತಮಾನದ ಹೈವಣ್ಣರಸನ ಶಾಸನ ಸಾಕ್ಷಿಯಾಗಿದೆ. ಗೋಕರ್ಣದ ಮಹಾಬಲೇಶ್ವರ ದೇವಾಲಯವು ದ್ರಾವಿಡ ಶೈಲಿಯಲ್ಲಿದೆ. ಕುಮಟಾದ ಕುಂಭೇಶ್ವರ ದೇವಾಲಯ ಪ್ರಾಚೀನ ದೇವಾಲಯವಾಗಿದ್ದು ಚಂದಾವರ ಕಾದಂಬರ ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ ಗೋಕರ್ಣದ ಉಮಾಮಹೇಶ್ವರಿ ಪ್ರಭಾವಳಿ ಶಾಸನ ಈ ದೇವಾಲಯದ ಪ್ರಾಚೀನತೆಯನ್ನು ಉಲ್ಲೇಖಿಸುತ್ತದೆ.


ಗೋಕರ್ಣ ಪ್ರದೇಶದ ಕ್ಷೇತ್ರಕಾರ್ಯದಲ್ಲಿ ದಾಖಲಿಸಿದ ಆದಿಗೋಕರ್ಣ, ಸಾಕ್ಷೇಶ್ವರ, ವೀರಭದ್ರ ದೇವಾಲಯಗಳು ಅತ್ಯಂತ ಪ್ರಾಚೀನ ದೇವಾಲಯ ಇವೆಲ್ಲವು ಶಿಥಿಲಾವಸ್ಥೆಯಲ್ಲಿವೆ. ಇಲ್ಲಿ ಆರಾಧಿಸಲ್ಪಡುವ ಪ್ರಧಾನ ದೇವತಾ ಪ್ರತಿಮೆಗಳಿಂದ ಮಾತ್ರ ಕಾಲಮಾನ ನಿರ್ಣಯಿಸಿದರೆ ಇವುಗಳು ಸುಮಾರು ಕ್ರಿ.ಶ. ೧೨ನೇ ಶತಮಾನದಿಂದ ಕ್ರಿ.ಶ. ೧೫ನೇ ಶತಮಾನಕ್ಕೆ ಸೇರುತ್ತವೆ. ಈ ಪ್ರದೇಶದ ದೇವಾಲಯಗಳು ಸ್ಥಳೀಯ ಕಟ್ಟಡ ಸಾಮಗ್ರಿಗಳಿಂದ, ಜಂಬಿಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಿದ್ದರಿಂದ ಕೆತ್ತನೆ ಕೈಕುಸುರಿ ಕೆಲಸಗಳು ಮಾಡಲು

ಶಿಲ್ಪಿಗೆ ಅಸಾಧ್ಯವಾಗಿರಬಹುದು. ಆದುದರಿಂದ ಈ ದೇವಾಲಯಗಳು ಸರಳತೆಯಿಂದ ಕೂಡಿವೆ.ಈ ಪ್ರದೇಶದ ವಾಸ್ತುಶಿಲ್ಪದ ಇನ್ನೊಂದು ವಿಶೇಷವೆಂದರೆ ಶಿಲ್ಪಿಯು ಸ್ಥಳೀಯ ಶೈಲಿಯಲ್ಲಿ ದೇವಾಲಯ ನಿರ್ಮಿಸಿರುವದು ಕಂಡುಬರುತ್ತದೆ. ಹಿರೇಗುತ್ತಿಯ ಮಹಾಲಿಂಗೇಶ್ವರ, ಗೋಕರ್ಣದ ಭರತದೇವಾಲಯದಲ್ಲಿ ಇಂಡೊ ಇಸ್ಲಾಮಿಕ್ ಶೈಲಿಯ ಪ್ರಭಾವವನ್ನು ಕಾಣುತ್ತೇವೆ.

ಕುಮಟಾದ ಮಹಾಲಸಾ ನಾರಾಯಣಿ ದೇವಾಲಯದ ಇಕ್ಕೆಲಗಳಲ್ಲಿ ಕಾವಿಕಲೆಯಲ್ಲಿ ರೂಪಿತವಾದ ಸೂರ್ಯ, ಗರುಡಾರೂಢ ವಿಷ್ಣುವಿನ ಚಿತ್ರಗಳಿವೆ. ಸಭಾಗೃಹದ ಸ್ತಂಭಗಳಲ್ಲಿ ವಿಷ್ಣುವಿನ ದಶಾವತಾರವನ್ನು ನಿರೂಪಿಸುವ ಸುಡಾವೆ ಮಣ್ಣಿನ ಮೂರ್ತಿಗಳಿವೆ. ಮಹಾದ್ವಾರದ ಎಡಬಲಗಳಲ್ಲಿ ವಿಷ್ಣುವಿನ ಮೋಹಿನಿಯ ರೂಪ ಸಮುದ್ರ ಮಥನದ ಸನ್ನಿವೇಶವಿದೆ. ಹೆಗಡೆಯ ಶಾಂತಿಕಾಪರಮೇಶ್ವರಿ ದೇವಾಲಯದ ಭಿತ್ತಿಯಲ್ಲಿ ವಿಷ್ಣುವಿನ ದಶಾವತಾರಗಳು, ದೇವಿಯ ವಿವಿಧ ಲೀಲೆಗಳನ್ನು ಹೇಳುವ ಭಿತ್ತಿ ಚಿತ್ರಗಳು, ಇತರ ಪೌರಾಣಿಕ ವ್ಯಕ್ತಿಗಳ ಚಿತ್ರಗಳು, ದ್ವಾರಪಾಲಕ ಮತ್ತು ಸೇವಕರಂತಹ ಸಾಮಾನ್ಯವಾದ ಜನರನ್ನು ಚಿತ್ರಿಸುವ ಚಿತ್ರಗಳು ಅಂದಿನ ಕಾಲದ ಕಲೆಯನ್ನು ಬಿಂಬಿಸಿವೆ.

ದೇವಾಲಯಗಳು

೧	ಜೈನ ಬಸದಿಗಳು	೦೨
೨	ಗಾಣಪತ್ಯ ದೇವಾಲಯಗಳು	೧೬
೩	ಶೈವ ದೇವಾಲಯಗಳು	೩೫
೪	ಶಾಕ್ತ ದೇವಾಲಯಗಳು	೩೫
೫	ವೈಷ್ಣವ ದೇವಾಲಯಗಳು	೧೪



ಅಡಿಟಿಪ್ಪಣಿಗಳು

೧. ಬನ್ರೋಡೆಗೆನ್ಸ್., ಮಯಮತ, ೧೯೮೫, ಪು. ೩೫.

೨. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೧೯೯೭, ಪು. ೫೨೬.

೩. ಅದೇ, ಪು. ೫೨೭.

೪. ರಾಮಚಂದ್ರರಾವ್ ಎಸ್.ಕೆ., "ಗುಡಿಜನರ ಜೀವನಾಡಿ", ೧೯೯೪, ಪು. ೧.

೫. ಚಿದಾನಂದ ಮೂರ್ತಿ ಎಂ., "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ೧೯೭೯, ಪು. ೧೭೫–೧೭೬.

೬. ಆನಂದ ಭೈರಾಪುರ., "ರಾಯಲ ಸೀಮೆಯ ವಿಜಯ ನಗರ ಕಾಲದ ದೇವಾಲಯಗಳು ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಅಧ್ಯಯನ", (ಅಪ್ರಕಟಿತ ಪಿಎಚ್,ಡಿ. ಪ್ರಬಂಧ) ೨೦೦೭, ಪು. ೩೭೫.

೭. ಅದೇ, ಪು. ೩೭೮.

೮. ಕರ್ಮವೀರ ವಾರಪತ್ರಿಕೆ, ೧–೨–೨೦೦೧, ಪು. ೬೯.

೯. ರಘುನಾಥ ಭಟ್, ಎಚ್,ಆರ್,."ಪ್ರಾಚೀನ ಕರ್ನಾಟಕ ವಾಸ್ತು ಶಿಲ್ಪ ಕಲೆ" ಕನಕಸಿರಿ, ೧೯೯೯, ಪು. ೫೬೭.

೧೦. ಪ್ರಭಾಕರ ಎಂ.ಎಸ್.,"ದೇವಾಲಯ ವಾಸ್ತು ಚಂದ್ರಿಕೆ", ೨೦೦೦, ಪು. ೩೭.

೧೧. ಡಾ. ಕೆ. ಎಂ. ಎ., "ದಿ. ಇಂಡಿಯನ ಟೆಂಪಲ್ ಫಾರ್ಮ್ಸ್ ಇನ್ ಕರ್ನಾಟಕ ಇನ್‌ಸ್ಕ್ರಿಪಶನಲ್ಯಂಡ ಆರ್ಕಿಟೆಕ್ಚರ", ೧೯೭೭, ಪು.೧೪.

೧೨. ಅದೇ. ಪು. ೧೩.

೧೩. ಅದೇ, ಪು. ೨೧.

೧೪. ಅದೇ, ಪು. ೧೨.

೧೫. "ಕರ್ಮವೀರ ವಾರಪತ್ರಿಕೆ"., (ಫೆಬ್ರವರಿ–೧) ೨೦೦೧, ಪು. ೬೯.

೧೬. ಎ.ಇ., ಸಂ. XXIII, ಪು.೭೦–೭೫

೧೭. ಮಿರ್ಜಿ ಅಣ್ಣರಾಯ., ಜೈನ ಧರ್ಮ, ೧೯೯೭, ಪು. ೧೩–೨೧.

೧೮. ಶೆಟ್ಟಿ ಎಸ್. ಡಿ., "ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ", ೨೦೦೨, ಪು. ೧೯೨೨.

೧೯. ಅ. ಸುಂದರ., "ಉತ್ತರ ಕನ್ನಡ ಜಿಲ್ಲೆಯ ಕೆಲವು ಅಪೂರ್ವ ಶಿಲ್ಪಗಳು", ಮಾನವಿಕ ಭಾರತಿ, ಸಂಪುಟ. ೧, ಸಂ ೨, ಪು. ೩–೪.

೨೦. ಶ್ರೀಧರ ಬಿ. ಎಚ್., "ಹೈವನಾಡಿನ ಚರಿತ್ರೆ", ಕುಮಟಾ ಕೃಷಿ ಕ್ಷೇತ್ರ ಶಾಲೆಯ ಸುವರ್ಣ ಮಹೋತ್ಸವದ ಸ್ಮರಣ ಸಂಚಿಕೆ, ೧೯೭೩, ಪು. ೮.

೨೧. ಅ.ಸುಂದರ., ಪೂರ್ವೋಕ್ತ, ಪು.೨.

೨೨. ಕೆ. ಜಿ. ಭಟ್ಟಸೂರಿ., "ಕರ್ಕಿಯ ಐತಿಹಾಸಿಕ ಪರಂಪರೆ", ೨೦೧೬, ಪು. ೭೯.

೨೩. ಅದೇ, ಪು. ೨೧.

೨೪. ಅದೇ, ಪು. ೨೧.

೨೫. ಅದೇ, ಪು. ೩೩–೩೪.

೨೬. ಜಿ.ಜಿ. ಶಾಸ್ತ್ರೀ., "ಸ್ವಯಂಭೂ ವಿನಾಯಕ ದೇವರು", ೨೦೧೨, ಪು. ೬೯–೭೧.

೨೭. ಅದೇ, ಪು. ೨೨.

೨೮. ಎ.ಇ., ಸಂ. XXIV, ಪು. ೧೪೩-೧೪೫.

೨೯. ಎ.ಇ., ಸಂ. XXXI, ಪು. ೨೩೨-೨೩೬.

೩೦. ಎ.ಇ., ಸಂ. XXXI, ಪು. ೨೩೪-೨೩೬.

೩೧. ಕೆ. ಜಿ. ಭಟ್‌ಸೂರಿ, ಧಾರನಾಥ ದೇವಾಲಯ, ೧೯೯೬, ಪು.೭-೮.

೩೨. ಗೆಳೆಯರ ಬಳಗ., "ಶ್ರೀ ಕ್ಷೇತ್ರ ಗೋಕರ್ಣ ಸ್ಥಳ ಪುರಾಣ", ಪು. ೧೨-೧೩.

೩೩. ಅದೇ, ಪು. ೯-೧೦.

೩೪. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕದಂಬರು, ೨೦೦೮,ಪು.೧೧೧-೧೧೨.

೩೫. ಅದೇ, ಪು. ೩೭.

೩೬. ಸುಬ್ರಾಯ ಶಂಕರ ಶೆಟ್ಟಿ., "ಗೋಕರ್ಣ ಕ್ಷೇತ್ರ ಮಹಾತ್ಮೆ", ಪು. ೪.

೩೭. ಅದೇ, ಪು. ೪.

೩೮. ಅದೇ, ಪು. ೧೪-೧೫.

೩೯. ಗಣಪತಿ ದತ್ತಾತ್ರೇಯ ಭಟ್., "ಶ್ರೀ ಕುಂಭೇಶ್ವರ ಪುರಾಣ", ೧೯೯೮, ಪು. ೧೦.

೪೦. ಮಂಜುನಾಥ ಭಾಗವತ., ಪೂರ್ವೋಕ್ತ, ೨೦೧೨, ಪು. ೧೦.

೪೧. ಮಂಜುನಾಥ ಭಾಗ್ವತ., - "ಶ್ರೀ ಭೈರವ ಕ್ಷೇತ್ರ ಯಾಣ", ೨೦೧೨, ಪು. ೮.

೪೨. ಅದೇ, ಪು. ೮.

೪೩. ವೆಂಕಟರಂಗೋಕಟ್ಟಿ., "ಧಾರವಾಡ ಬೆಳಗಾಂ, ಬಿಜಾಪುರ, ಕಾರವಾರ ಕಾನಡಾ, ಜಿಲ್ಲೆಗಳ ಗ್ಯಾಜಿಟಿಯರ್", ೧೯೮೪, ಪು. ೫೮೭.

೪೪. ಕೆ. ಜಿ. ಭಟ್‌ಸೂರಿ., (ಸಂ) ಶಾಸನ ಅಧ್ಯಯನ ಸಂಪುಟ ೮, ಸಂಚಿಕೆ ೨, ಜುಲೈ-ಡಿಸೆಂಬರ ೨೦೧೧, ಪು. ೯೩-೯೫.

೪೫. ಸುಬ್ರಾಯ, ಶಂಕರ ಶೆಟ್ಟ., ಪೂರ್ವೋಕ್ತ. ಪು. ೧೩-೧೪.

೪೬. ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ೧೯೭೫, ಪು. ೧೭೨-೧೭೬.

೪೭. ಅದೇ, ಪು. ೧೯೮.

೪೮. ಸುಬ್ರಾಯ ಶಂಕರ ಶೆಟ್ಟಿ., ಪೂರ್ವೋಕ್ತ, ಪು. ೧೨-೧೩.

೪೯. ಅದೇ, ಪು. ೧೯.

೫೦. ಸರ್ಕಾರ ಡಿ.ಸಿ., ಸಿಲೆಕ್ಟೆಡ್ ಇನ್ಸಕ್ರಿಪಶನ್ಸ್ ಬಿಯರಿಂಗ್ ಆನ್ ಇಂಡಿಯನ್ ಹಿಸ್ಟ್ರಿ,ಸಂ.೧, ನಂ.೮೨, ಪು. ೧೯೩.

೫೧. ಪಾಡಿಗಾರ ಶ್ರೀನಿವಾಸ., ಬಾದಾಮಿ ಮತ್ತು ವೈಷ್ಣವ ಧರ್ಮ, ೧೯೮೯, ಪು. ೧೦೭.

೫೨. ಸುಂದರ ಅ., ಇತ್ತೀಚಿನ ಕೆಲವು ಪುರಾತತ್ವ ಶೋಧನೆಗಳು ಕರ್ನಾಟಕ ಭಾರತಿ, ಸಂ.೮/೨, ಪು.೧೫.

೫೩. ಗೆಳೆಯರ ಬಳಗ, ಪೂರ್ವೋಕ್ತ, ಪು. ೨೪.

ಅಧ್ಯಾಯ ಐದು

ಮೂರ್ತಿಶಿಲ್ಪ

೫.೧ ಪೀಠಿಕೆ

ದೇವಾಲಯಗಳನ್ನು ಕಟ್ಟುವದು ಮೂರ್ತಿ ಪೂಜೆಗಾಗಿ. "ಮೂರ್ತಿ" ಶಬ್ದವನ್ನು ದೇವತಾ ವಿಗ್ರಹಗಳಿಗೂ ಪರ್ಯಾಯವಾಗಿ ಬಳಸಲಾಗುತ್ತದೆ. ಒಂದು ಪ್ರಮಾಣದ ಮೂಲಕ ಅದರ ಉದ್ದ, ಅಗಲ, ದಪ್ಪ ತೋರಿಸುವ ಕಾಲ್ಪನಿಕ ಆಕೃತಿಗಳನ್ನು ರೂಪಿಸುವ ಕಲೆಯೇ "ಮೂರ್ತಿಶಿಲ್ಪ".[೧] ಈ ಪದ ಕಲ್ಲಿನ ಮೂರ್ತಿಗೆ ಅನ್ವಯವಾಗುತ್ತದೆ. ಆದರೆ ವಿಗ್ರಹ ಪದ ಕಂಚಿನ ಅಥವಾ ತಾಮ್ರದ ವಿಗ್ರಹಕ್ಕೆ ಅನ್ವಯವಾಗುತ್ತದೆ. ಮೂರ್ತಿ ಶಿಲ್ಪದ ಕಲ್ಪನೆಗಳು ಭಾರತದಲ್ಲಿ ಸಿಂಧೂನಾಗರಿಕತೆಯ ಕಾಲದಿಂದಲೂ ಬಂದಿದೆ. ಸಿಂಧು ನಾಗರಿಕತೆಯ ಉತ್ಖನನದಲ್ಲಿ ದೊರೆತ ಬಳಪದ ಮುದ್ರೆಗಳ ಮೇಲೆ ಕಾಡುಪ್ರಾಣಿಗಳ, ಪಶುದೇವತೆಗಳ, ನಿಸರ್ಗವಸ್ತುಗಳ ಜೊತೆಗೆ ಆಟಿಕೆಗಳು, ಸ್ತ್ರೀ ವಿಗ್ರಹ, ಗಡ್ಡದಾರಿ ಮನುಷ್ಯನ ವಿಗ್ರಹಗಳು ಕಂಡುಬರುತ್ತವೆ. ಇವುಗಳೇ ಬಹುಶಃ ಶಿಲ್ಪಶಾಸ್ತ್ರದ ಆರಂಭದ ಕಾಲವೆಂದು ಹೇಳಿದರೆ ತಪ್ಪಾಗಲಾರದು. ದೇವರು ದೇವತೆಗಳೆಷ್ಟು ಪ್ರಶ್ನೆ ಉದ್ಭವಿಸಿದಲ್ಲಿ ಇದಕ್ಕೆ ಉತ್ತರ ಸಿಗುವುದು ಕಷ್ಟ ಆದರೆ ಋಗ್ವೇದದಲ್ಲಿ ಇದನ್ನು "ಏಕಂ ಸತ್ ವಿಪ್ರಃ ಬಹುಧಾವದಂತಿ" 'ಶಕ್ತಿ ಒಂದೇ' ಎಂಬುದು ಸತ್ಯ.[೨]

ಆರಂಭದ ದಿನಗಳಲ್ಲಿ ಮಣ್ಣಿನಿಂದ ಮರದ ಗೊಂಬೆಗಳನ್ನು ತಯಾರಿಸಿ ಮರದ ಬುಡದಲ್ಲಿ, ಕಟ್ಟೆಯ ಮೇಲೆ, ಕಲ್ಲು ಚಪ್ಪಡಿಯ ಮೇಲೆ, ಗುಡಿಯಲ್ಲಿ ಇಟ್ಟು ತಮಗೆ ತೋರಿದ ರೀತಿಯಲ್ಲಿ ಪೂಜಿಸುತ್ತಿದ್ದರು.[೩] ಪರಮಾತ್ಮನಿಗೆ ಯಾವುದೇ ಒಂದು ನಿರ್ದಿಷ್ಟ ಆಕಾರವಿಲ್ಲ. ಇದು ಸತ್ಯ. ಒಂದೊಂದು ದೇವರ ಮೂರ್ತಿಯು ಒಂದೊಂದು ಆಧ್ಯಾತ್ಮಿಕ ತತ್ವದಡಿಯಲ್ಲಿ ರಚನೆಯಾಗಿದೆ. ಮೂರ್ತಿಯ ರೂಪವನ್ನು ಮನದಲ್ಲಿ ಕಲ್ಪಿಸಿಕೊಂಡು ವಸ್ತು ಆಯ್ಕೆ ಮಾಡಿಕೊಂಡು ಆ ವಸ್ತುವಿನಲ್ಲಿ ದೇವರ ರೂಪ ಕಲ್ಪಸಿ ರಚನೆಗೊಂಡಿರುವುದು ಮೂರ್ತಿ ಶಿಲ್ಪದ ಉಗಮಕ್ಕೆ ಕಾರಣವಾಗಿರಬೇಕು. ಶಿಲ್ಪಶಾಸ್ತ್ರ ಗ್ರಂಥಗಳಾದ ಮಯಮತ, ಮಾನಸಾರ, ಅಂಶುಮದ್ಬೇಗಾಮನ, ಶಿಲ್ಪ ಸಂಗ್ರಹ ಇವು ದೇವಾನು ದೇವತೆಗಳನ್ನು ಉಲ್ಲೇಖಿಸುತ್ತವೆ. ಮೂರ್ತಿ ಶಿಲ್ಪ ಶಿಲೆಯಾಗಿರಬಹುದು, ಲೋಹವಾಗಿರಬಹುದು, ಮಣ್ಣು ಆಗಿರಬಹುದು, ಒಟ್ಟಿನಲ್ಲಿ ಒಂದು ಮಾಧ್ಯಮದ ಮೂಲಕ, ಪ್ರಮಾಣದ ಮೂಲಕ ಉದ್ದ, ಅಗಲ, ದಪ್ಪವನ್ನು ತೋರಿಸುವ ಆಕೃತಿಯೇ ಮೂರ್ತಿಶಿಲ್ಪ.[೪]

ಮೂರ್ತಿಶಿಲ್ಪಗಳನ್ನು ದೇವಾಲಯದ ಗರ್ಭಗ್ರಹ, ನವರಂಗ, ದೇವಕೋಷ್ಠ, ಶಿಖರದ ಭಾಗ ದೇವಾಲಯದ ಹೊರಾಭಾಗ ಹೀಗೆ ಹಲವು ಕಡೆ ಪ್ರತಿಷ್ಠಾಪಿಸಿರುವುದು ಕಂಡುಬರುತ್ತದೆ. ಈ ಶಿಲ್ಪಗಳು ಪ್ರಾಣಿ, ಪಕ್ಷಿ, ಗಿಡಮರ ಹಾಗೂ ಬೇರೆ ಬೇರೆ ನಮೂನೆಯ

ಶಿಲ್ಪಗಳು, ದೇವಾಲಯದ ಬೇರೆ ಬೇರೆ ಭಾಗಗಳಲ್ಲಿ ಬಿಡಿಬಿಡಿಯಾಗಿ ಕಾಣುತ್ತೇವೆ. ರಾಮಾಯಣ, ಮಾಹಾಭಾರತ ಹಾಗೂ ಇನ್ನಿತರ ಪೌರಾಣಿಕ ಕಥೆಗಳನ್ನು ನಿರೂಪಿಸುವ ಶಿಲ್ಪಗಳನ್ನು ನೋಡಬಹುದು. ಲೌಕಿಕ ಮತ್ತು ಅಲೌಕಿಕ ಶಿಲ್ಪಗಳು ದೇವಾಲಯಗಳಲ್ಲಿ ಇರುತ್ತಿದ್ದವು. ಇದರಲ್ಲಿ ಶಿಲ್ಪಿಯ ಕೈಚಳಕ ಪ್ರಧಾನ. ಇಂತಹ ಶಿಲ್ಪಗಳನ್ನು ಕೆತ್ತುವ ಉದ್ದೇಶವಾದರು ಏನು? ಎಂಬ ಪ್ರಶ್ನೆ ಮೂಡುವುದು ಸಹಜ. ಸಾಮಾನ್ಯವಾಗಿ ದೇವಾಲಯದ ಗರ್ಭಗುಡಿಯಲ್ಲಿರುವ ಮೂಲದೇವತೆಗೆ ಸಂಬಂಧಿಸಿದಂತೆ ಉಪದೇವತೆಗಳನ್ನೂ ಕೆತ್ತುತ್ತಿದ್ದರು. ದೇವಾಲಯಕ್ಕೆ ಹೆಚ್ಚಿನ ಸೌಂದರ್ಯ ಬರಲಿ ಎಂಬುದರ ಹೊರತಾಗಿ ಇದಕ್ಕೆ ಧಾರ್ಮಿಕ ಹಿನ್ನಲೆ ಇದೆ. ಕೆಲವು ಶಿಲ್ಪಗಳು ಧಾರ್ಮಿಕತೆಯನ್ನು ಪ್ರತಿಬಿಂಬಿಸಿದರೆ, ಇನ್ನು ಕೆಲವು ಶಿಲ್ಪಗಳು ಅಲೌಕಿಕ ಜೀವನದ ಮೌಲ್ಯಗಳನ್ನು ಸ್ಪಷ್ಟಪಡಿಸುತ್ತವೆ.

ಪ್ರಸ್ತುತ ಕುಮಟಾ ತಾಲೂಕಿನಲ್ಲಿರುವ ಮೂರ್ತಿಶಿಲ್ಪಗಳನ್ನುಅವಲೋಕಿಸಿ ಪಂಥಾನುಸಾರ ಅವುಗಳ ಲಕ್ಷಣಗಳನ್ನು ಇಲ್ಲಿ ದಾಖಲಿಸಲಾಗಿದೆ.

೫.೧.೨ ಶಿಲ್ಪಗಳಲ್ಲಿ ಆಸನಗಳು

ಆಸನಗಳಲ್ಲಿ ಮೂರು ಪ್ರಕಾರ ಇದೆ. ಸ್ಥಾನಿಕ ಅಂದರೆ ನಿಂತಿರುವುದು. ಆಸನ ಅಂದರೆ ಕುಳಿತಿರುವುದು. ಶಯನ ಮಲಗಿರುವುದು ಯಾನಕ ಪ್ರಭೇದವನ್ನು ಗುರುತಿಸಬಹುದು[೫]. ಮೂರ್ತಿಶಿಲ್ಪಗಳಲ್ಲಿ ಸಮಭಂಗಿ, ದ್ವಿಭಂಗಿ,ತ್ರಿಭಂಗಿ, ಅತಿಭಂಗಿ, ನೃತ್ಯಭಂಗಿ ಪ್ರಕಾರಗಳನ್ನು ಗುರುತಿಸಬಹುದಾಗಿದೆ.[೬] ಸ್ಥಾನಿಕ ಭಂಗಿಯಲ್ಲಿ ಚಕ್ರಪ್ರಧಾನ ವಿಷ್ಣುವಿನ ಶಿಲ್ಪಗಳನ್ನು ಉದಾಹರಿಸಬಹುದು. ಆಸೀನ ಭಂಗಿಯಲ್ಲಿ ದಕ್ಷಿಣಾಮೂರ್ತಿ, ಮೈಲಾರಲಿಂಗ,ಶಿವನ ಶಿಲ್ಪಗಳು, ಪಟ್ಟಾಭಿರಾಮ, ಯೋಗನಾರಾಯಣ, ನರಸಿಂಹ, ಲಕ್ಷ್ಮಿನಾರಾಯಣ ಮೊದಲಾದ ವಿಷ್ಣುವಿನ ಶಿಲ್ಪಗಳು, ಗಣಪತಿ, ಗಜಲಕ್ಷ್ಮಿ, ಸಪ್ತಮಾತ್ರಕೆಯರ ಶಿಲ್ಪಗಳಿರುತ್ತವೆ. ಜೈನಪರಂಪರೆಯ ಚವ್ವಿಸ್ ಜಿನತೀರ್ಥಂಕರರ ಶಿಲ್ಪಗಳನ್ನು ಆಸೀನ ಮೂರ್ತಿಗಳಿಗೆ ಉದಾಹರಿಸಬಹುದಾಗಿದೆ. ಈ ಮೇಲಿನ ಶಿಲ್ಪಗಳು ವೀರಾಸನ, ಸುಖಾಸನ, ಯೋಗಾಸನ, ಪದ್ಮಾಸನ, ಭದ್ರಾಸನ, ಆಲಿಡ್ಯಾಸನ, ವಾಮಲಲಿತಾಸನ, ಮೊದಲಾದ ಭಂಗಿಯಲ್ಲಿರುತ್ತವೆ.[೭] ಶಯನಭಂಗಿಗೆ ವಿಷ್ಣುವಿನ ಮೂರ್ತಿಶಿಲ್ಪವನ್ನು ಉದಾಹರಿಸಬಹುದು. ಜೈನಪರಂಪರೆಯ ಶಿಲ್ಪಗಳಲ್ಲಿ, ಸಾಮಾನ್ಯವಾಗಿ ಪದ್ಮಾಸನ, ಕಾರ್ಯೋತ್ಸರ್ಗ,ಖಡ್ಗಾಸನ, ಭಂಗಿಗಳು ಕಂಡುಬರುತ್ತವೆ.[೮]

ಪ್ರಸ್ತುತ ಕುಮಟಾ ತಾಲೂಕಿನಲ್ಲಿ ವೀರಾಸನ ಭಂಗಿಯಲ್ಲಿರುವ ಮೂರ್ತಿಶಿಲ್ಪಕ್ಕೆ ಉದಾಹರಣೆ ಗೋಕರ್ಣದ ವೀರಭದ್ರ ದೇವಸ್ಥಾನದಲ್ಲಿರುವ ವೀರಭದ್ರ ಶಿಲ್ಪ, ಕತಗಾಲ ಹೈಸ್ಕೂಲಿನಲ್ಲಿರುವ ಮಹಿಷಾಸುರ ಮರ್ದಿನಿಯ ಬಿಡಿ ಶಿಲ್ಪ, ಗೋಕರ್ಣದ ಈಶ್ವರ

ದೇವಸ್ಥಾನದ ಗರ್ಭಗೃಹದ ಹೊರಗಿನ ಮಹಿಷಾಸುರ ಮರ್ದಿನಿ ಶಿಲ್ಪ ಇತ್ಯಾದಿ. ಸುಖಾಸನ ಭಂಗಿಗೆ ಕತಗಾಲ ಶಂಭುಲಿಂಗೇಶ್ವರ ದೇವಾಲಯದ ಗರ್ಭಗೃಹದ ಬಲಬದಿಗೆ ಇರುವ ಗಣಪತಿ ಶಿಲ್ಪ, ಗೋಕರ್ಣದ ಸ್ಮಶಾನಕಾಳಿ ದೇವಾಲಯದ ಗರ್ಭಗೃಹದಲ್ಲಿರುವ ಗಣಪತಿ ಶಿಲ್ಪ, ನಾಡಮಾಸ್ಕೇರಿ ಗಂಗಾಮಾತಾ ದೇವಸ್ಥಾನದ ಗರ್ಭಗೃಹದಲ್ಲಿರುವ ಗಂಗಾಮಾತೆ ಶಿಲ್ಪ, ವೈತರಣಿ ದೇವಾಲಯದ ಗರ್ಭಗೃಹದಲ್ಲಿರುವ ವೈತರಣಿ(ಪಾರ್ವತಿ) ಶಿಲ್ಪ, ಗೋಕರ್ಣದ ವೆಂಕಟರಮಣ ದೇವಾಲಯದ ಸಭಾಂಗಣದ ಬಲಬದಿಗೆ ಇರುವ ಲಕ್ಷ್ಮಿ ಶಿಲ್ಪ ಇತ್ಯಾದಿ.

ಯೋಗಾಸನ ಭಂಗಿಗೆ ಧಾರೇಶ್ವರ ದೇವಾಲಯದ ಮುಂದೆ ಪುಷ್ಕರಣಿಯಲ್ಲಿರುವ ಯೋಗನರಸಿಂಹ ಶಿಲ್ಪವನ್ನುಉದಾಹರಿಸಬಹುದು. ಪದ್ಮಾಸನ ಭಂಗಿಗೆ ಗೋಕರ್ಣದ ಈಶ್ವರ ದೇವಸ್ಥಾನದ ಮುಖಮಂಟಪದ ಬಲಬದಿಗೆ ಇರುವ ಗಣಪತಿ ಶಿಲ್ಪ, ಊರಕೇರಿ ಶಾಂತಿಕಾ ಪರಮೇಶ್ವರಿ ದೇವಾಲಯದ ಗರ್ಭಗೃಹದಲ್ಲಿರುವ ಶಾಂತಿಕಾ ಪರಮೇಶ್ವರಿಶಿಲ್ಪ ಉದಾಹರಿಸಬಹುದು. ತ್ರಿಭಂಗಿಯಲ್ಲಿರುವ ಮೂರ್ತಿಶಿಲ್ಪಕ್ಕೆ ಉದಾಹರಣೆ ಗೋಕರ್ಣ ವೇಣುಗೋಪಾಲ ದೇವಾಲಯದ ಗರ್ಭಗೃಹದಲ್ಲಿರುವ ವೇಣುಗೋಪಾಲಶಿಲ್ಪ, ಧಾರೇಶ್ವರದ ಧಾರನಾಥ ದೇವಾಲಯದ ಮೊಗಸಾಲೆಯಲ್ಲಿರುವ ವೇಣುಗೋಪಾಲಶಿಲ್ಪ, ಯಾಣದ ಗೋಪಾಲಕೃಷ್ಣ ದೇವಾಲಯದ ಗರ್ಭಗೃಹದಲ್ಲಿರುವ ಗೋಪಾಲಕೃಷ್ಣಶಿಲ್ಪ, ಹೊಸಾಡ ಗೋಪಾಲಕೃಷ್ಣ ದೇವಾಲಯದ ಗರ್ಭಗೃಹದಲ್ಲಿರುವ ಗೋಪಾಲಕೃಷ್ಣ ಶಿಲ್ಪವಾಗಿದೆ.

ಕಾರ್ಯೋತ್ಸರ್ಗ ಭಂಗಿಗೆ ಬಸದಿಗದ್ದೆ (ಮೇದನಿ) ಶಾಂತೇಶ್ವರ ಸ್ವಾಮಿ ಶಿಲ್ಪ ಉದಾಹರಿಸಬಹುದು. ಲಲಿತ ಸವ್ಯಾಸನ ಭಂಗಿಗೆ ಕಲ್ಲಬ್ಬೆ ನಂದಿಕೇಶ್ವರ ದೇವಾಲಯದ ಗರ್ಭಗೃಹದ ಹೊರಗೆ ಬಲಭಾಗದಲ್ಲಿರುವ ಗಣಪತಿಶಿಲ್ಪ, ಮಿರ್ಜಾನ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಗರ್ಭಗೃಹದ ಹೊರಗೆ ಇರುವ ಗಣಪತಿ ಶಿಲ್ಪ, ನಾಗೂರ ವಿಷ್ಣು ದೇವಾಲಯದ ಹತ್ತಿರ ಇರುವ ಗಣಪತಿ ಬಿಡಿಶಿಲ್ಪ ಉದಾರಣೆಯಾಗಿದೆ.

೫.೧.೩ ಶಿಲ್ಪಗಳಲ್ಲಿ ಆಯುಧಗಳು

ಹಲವು ಪ್ರಕಾರದ ಆಯುಧಗಳು ಶಿಲ್ಪಗಳ ಕೈಯಲ್ಲಿರುತ್ತವೆ. ಮೂರ್ತಿ ಶಿಲ್ಪಗಳಿಗೆ ೨ ರಿಂದ ೧೨ ಕೈಗಳಿರುತ್ತವೆ. ಶಾಂತ, ಸಾತ್ವಿಕ, ವೀರ ಶಿಲ್ಪಗಳಲ್ಲಿ ೨ ಇಲ್ಲವೇ ೪ ಕೈಗಳಿರುತ್ತವೆ. ರಜತ ಮತ್ತು ತಾಮಸ ಶಿಲ್ಪಗಳಲ್ಲಿ ೬ ರಿಂದ ೮ ಕೈಗಳಿರುತ್ತವೆ. ಉಗ್ರಸಂಹಾರ ತಾಮಸ ಶಿಲ್ಪಗಳಲ್ಲಿ ೧೦ ರಿಂದ ೧೬ ಕೈಗಳಿರುತ್ತವೆ. ಎಲ್ಲಾ ಶಿಲ್ಪಗಳ ಕೈಯಲ್ಲಿ ಶಂಖ, ಚಕ್ರ,ಗಧಾ, ತ್ರಿಶೂಲ, ಡಮರು, ಟಂಕ, ಶೂಲ,ಖಟಾಂಗ, ಅಂಕುಶ, ಖಡ್ಗ, ಧನಸ್ಸು, ಬಾಣ, ನೇಗಿಲು, ಅಗ್ನಿ, ಇನ್ನು ಅನೇಕ ಆಯುಧಗಳು ಕಂಡುಬರುತ್ತವೆ. ಶಿಲ್ಪಗಳ ಕೈಯಲ್ಲಿರುವಆಯುಧಗಳ ಮೇಲಿಂದ ಮೂರ್ತಿಶಿಲ್ಪ ಸುಲಭವಾಗಿ ಪತ್ತೆ ಹಚ್ಚಬಹುದು. ಶಿವನಿಗೆ-ತ್ರಿಶೂಲ, ಡಮರು. ಗಣಪತಿಗೆ-ಪಾಶ, ಅಂಕುಶ. ಕಾರ್ತಿಕೇಯನಿಗೆ-ವಜ್ರ, ಟಂಕ, ಶೂಲ, ಪರಶುರಾಮನಿಗೆ-

ಪರಶು. ಬಲರಾಮನಿಗೆ–ನೇಗಿಲು. ಕಾಳಿಗೆ–ರುಂಡಮಾಲೆ, ಸರಸ್ವತಿಗೆ–ವೀಣೆ, ಪುಸ್ತಕ, ಅಕ್ಷರಮಾಲೆ. ಲಕ್ಷ್ಮಿಗೆ–ಪದ್ಮ. ವಿಷ್ಣು–ಶಂಖ, ಚಕ್ರ, ಗಧೆ, ಪದ್ಮ. ಬ್ರಹ್ಮನಿಗೆ–ಕಮಂಡಲ, ಅಕ್ಷಮಾಲೆ ಇತ್ಯಾದಿ ಆಯುಧಗಳನ್ನು ಕೈಯಲ್ಲಿ ಹಿಡಿದಿರುವುದನ್ನು ಕಾಣಬಹುದು. ಕೆಲವು ಆಯುಧಗಳಿಗೆ ಪ್ರತ್ಯೇಕವಾದ ಮೂರ್ತಿರೂಪ ಕೊಟ್ಟು ಅವುಗಳಿಗೆ ಆಯುಧಪುರುಷವೆಂದು ಕರೆಯಲಾಗಿದೆ.[೧೦] ಶಿವ ದೇವಾಲಯಗಳಲ್ಲಿ ತ್ರಿಶೂಲ, ವಿಷ್ಣು ದೇವಾಲಯಗಳಲ್ಲಿ ಚಕ್ರ, ಕಾರ್ತಿಕೇಯ ದೇವಾಲಯಗಳಲ್ಲಿ ಶಕ್ತಿ, ಹೀಗೆ ಆಯುಧ ಪುರುಷರೆಂದು ಪೂಜಿಸಲಾಗುತ್ತದೆ.[೧೧] ಮೇಲ್ಕಂಡ ಆಯುಧಗಳು ತನ್ನದೇ ಆದ ವೈವಿಧ್ಯತೆಯಿಂದ ಕೂಡಿದ್ದು ಶಂಖ–ಅಜ್ಞಾನನಾಶಕ ಶಕ್ತಿಯನ್ನು, ಚಕ್ರ ಕಾಲಚಕ್ರವನ್ನು, ಬಾಣಗಳು ಕರ್ಮೇಂದ್ರಿಯ ಜ್ಞಾನೇಂದ್ರಿಯಗಳನ್ನು, ತ್ರಿಶೂಲ ತಮೋಗುಣವನ್ನು, ಖಡ್ಗ ಶೌರ್ಯವನ್ನು, ಪರಶು ದೈವಶಕ್ತಿಯನ್ನು, ಪಾಶ ತ್ರಿಗುಣಾತ್ಮಕವಾದ ಬಂಧನವನ್ನು, ಗಧಾ ಅಧರ್ಮನಾಶಕ ಶಕ್ತಿಯನ್ನು, ಅಂಕುಶ ಆತ್ಮನಿಗೆ ಬೇಕಾದುದನ್ನು ಆರಿಸಿಕೊಳ್ಳುವ ಶಕ್ತಿಯನ್ನು ಹೊಂದಿರುವಂತೆ ಗುರುತಿಸಲಾಗಿದೆ.[೧೨]

ಕುಮಟಾ ತಾಲೂಕಿನಲ್ಲಿ ಇಂತಹ ಆಯುಧಗಳನ್ನು ಹೊಂದಿರುವ ಶಿಲ್ಪಕ್ಕೆ ಉದಾಹರಣೆಗಳೆಂದರೆ ದಾರೇಶ್ವರದ ಧಾರನಾಥ ದೇವಾಲಯದ ಉತ್ತರ ದಿಕ್ಕಿನ ಫಲಕಕ್ಕೆ ಇರುವ ತಾಂಡವ ಶಿಲ್ಪದ ಕೈಯಲ್ಲಿ ಖಡ್ಗ, ತ್ರಿಶೂಲ , ಪಾಣಿಪಾತ್ರೆ ಡಮರುಗಳಿವೆ. ಗಾಣಪತ್ಯ ಶಿಲ್ಪಕ್ಕೆ ಉದಾಹರಣೆ ಕಲ್ಲಬ್ಬೆ ನಂದಿಕೇಶ್ವರ ದೇವಾಲಯದ ಗರ್ಭಗೃಹದ ಹೊರಗೆ ಬಲಭಾಗದಲ್ಲಿರುವ ಗಣಪತಿ ಶಿಲ್ಪದ ಕೈಯಲ್ಲಿ ದಂಡ, ಅಂಕುಶ, ಮೋದಕಪಾತ್ರೆ, ಪಾಶವಿದೆ.ಕಾಳಿಶಿಲ್ಪಕ್ಕೆ ಉದಾಹರಣೆ ಗೋಕರ್ಣ ಭದ್ರಕಾಳಿ ದೇವಾಲಯದ ಗರ್ಭಗೃಹದಲ್ಲಿರುವ ಭದ್ರಕಾಳಿ ಶಿಲ್ಪ, ಖಡ್ಗ, ತ್ರಿಶೂಲ, ಡಮರು, ರುಂಡಮಾಲೆಗಳಿಂದ ಅಲಂಕರಿಸಲ್ಪಟ್ಟಿದೆ.

ವಿಷ್ಣು ಮೂರ್ತಿಶಿಲ್ಪಕ್ಕೆ ಉದಾಹರಣೆ ಊರಕೇರಿಯ ಜನಾರ್ಧನ ದೇವಾಲಯದ ಗರ್ಭಗೃಹದಲ್ಲಿರುವಜನಾರ್ಧನ ಶಿಲ್ಪ ಶಂಖ, ಚಕ್ರ, ಗಧೆ, ಪದ್ಮವನ್ನು ಹೊಂದಿದೆ.

೩.೧.೪ ಶಿಲ್ಪಗಳಲ್ಲಿ ಆಭರಣಗಳು

ಶಿಲ್ಪಗಳಿಗೆ ಆಭರಣವನ್ನು ತೊಡಿಸಿದರೆ ಯಾವುದೋ ಒಂದು ಅದ್ಭುತವಾದ ಶಕ್ತಿ ಬರುತ್ತದೆ. ಎಂಬ ನಂಬಿಕೆ ಇದೆ. ಶಿಲ್ಪಶಾಸ್ತ್ರಗಳು, ಹೇಳುವ ಪ್ರಕಾರ ಮೂರ್ತಿಶಿಲ್ಪಗಳು ವಸ್ತ್ರಾಭರಣ ಭೂಷಿತವಾಗಿರಬೇಕೆಂದು ಸೂಚಿಸುತ್ತವೆ.[೧೩] ದೇವತಾ ಶಿಲ್ಪಗಳಲ್ಲಿ ಕಿರೀಟ ಮಕುಟ, ಜಟಾಬಂಧ, ಕೇಶಬಂಧ, ಮಹಾಕುಂಡಲ, ಪತ್ರಕುಂಡಲ, ರತ್ನಮಾಲೆ, ಮಣಿಸರ, ಕಂಠಹಾರ, ಶ್ರೀವತ್ಸ, ಉದರಬಂಧ, ಉಪವೀತ, ಕಟಿಸೂತ್ರ, ಬಾಹುಬಂಧ, ಕಂಕಣ, ಮಣಿಬಂಧ, ವೈಜಯಂತಿ, ಪ್ರಭಾಮಂಡಲ, ಕೊರಳಸರ, ಬೆರಳುಂಗುರ, ಮೊದಲಾದ

ವಸ್ತ್ರಾಭರಣಗಳು ಕಂಡುಬರುತ್ತವೆ. ಹಾಗೆಯೇ ಜೈನಪರಂಪರೆಯಲ್ಲಿ ದಿಗಂಬರ ತೀರ್ಥಂಕರರ ಶಿಲ್ಪಗಳು ನಿರಾಭರಣವಾಗಿರುತ್ತವೆ. ಶ್ವೇತಾಂಬರ ಪಂಥದಲ್ಲಿರುವ ತೀರ್ಥಂಕರ ಶಿಲ್ಪಗಳು ಯಕ್ಷ-ಯಕ್ಷಿಯರ ಶಿಲ್ಪಗಳು ಅಲಂಕೃತಗೊಂಡಿರುತ್ತವೆ.[೧೪]

ಗಾಣಪತ್ಯ ಶಿಲ್ಪಕ್ಕೆ ಉದಾಹರಣೆ ಕತಗಾಲ ಹೈಸ್ಕೂಲಿನಲ್ಲಿರುವ ಗಣಪತಿಯ ಬಿಡಿಶಿಲ್ಪ ಕಿರೀಟ, ಕಂಠಹಾರ, ಮಣಿಸರ, ತೋಳ್ಬಂದಿ, ಗೆಜ್ಜೆಸರ, ಕೈಬಳೆ, ಕಟಿವಸ್ತ್ರ, ಯಜ್ಞೋಪವೀತ ಧರಿಸಿದೆ.

ಶಾಕ್ತಶಿಲ್ಪಕ್ಕೆ ಉದಾಹರಣೆಯೆಂದರೆ ಊರಕೇರಿ ಶಾಂತಿಕಾಪರಮೇಶ್ವರಿ ದೇವಸ್ಥಾನದ ಗರ್ಭಗೃಹದಲ್ಲಿರುವ ಶಾಂತಿಕಾಪರಮೇಶ್ವರಿ ಶಿಲ್ಪ ಕಿರೀಟಮಕುಟ, ವೈಜಯಂತಿಮಾಲೆ, ಕೈಕಡಗ, ಕಾಲ್ಗಡಗ, ಕರ್ಣಕುಂಡಲ ಇತ್ಯಾದಿ ಆಭರಣಗಳಿಂದ ಅಲಂಕರಿಸಲ್ಪಟ್ಟಿದೆ.ಶೈವ ಶಿಲ್ಪವನ್ನು ಹೆಚ್ಚಿನ ಮಟ್ಟಿಗೆ ಲಿಂಗರೂಪದಲ್ಲೇ ಪೂಜಿಸಲಾಗುತ್ತದೆ ನಿರಾಭರಣವಾಗಿದೆ.

ವೈಷ್ಣವ ಶಿಲ್ಪಕ್ಕೆ ಉದಾಹರಣೆಯೆಂದರೆ ಊಳ್ಳುರುಮಠದ ಗಣಪತಿ ದೇವಸ್ಥಾನದ ಗರ್ಭಗೃಹದ ಹೊರಗೆ ಮರದ ಕೆಳಗಿರುವ ವಿಷ್ಣು ಶಿಲ್ಪ ಕರಂಡಮುಕುಟ, ಮಣಿಹಾರ, ಕೇಯೂರ, ಅಲಂಕೃತಯಜ್ಞೋಪವೀತ, ಸೊಂಟಪಟ್ಟಿ, ಕರ್ಣಕುಂಡಲ, ಕೈಕಡಗ, ವೈಜಯಂತಿಹಾರ ಧರಿಸಿದೆ.

೫.೧.೫ ಲಾಂಛನಗಳು

ಸಾಮಾನ್ಯವಾಗಿ ಪ್ರತಿಯೊಂದು ಮೂರ್ತಿಶಿಲ್ಪಗಳೂ ವಾಹನಗಳನ್ನು ಅಥವಾ ಲಾಂಛನಗಳನ್ನು ಹೊಂದಿರುತ್ತವೆ. ಶಿವನಿಗೆ ನಂದಿ, ವಿಷ್ಣುವಿಗೆ ಗರುಡ, ಬ್ರಹ್ಮನಿಗೆ ಹಂಸ, ಲಕ್ಷ್ಮಿಗೆ ಪದ್ಮ, ಸರಸ್ವತಿಗೆ ನವಿಲು, ಬ್ರಾಹ್ಮಿಗೆ ಹಂಸ, ವರಾಹಿಗೆ ಮಹಿಷ, ಕೌಮಾರಿಗೆ ಮಯೂರ, ಇಂದ್ರನಿಗೆ ಗಜ, ಚಾಮುಂಡಿಗೆ ನರಿ, ಗಣಪತಿಗೆ ಮೂಷಿಕ, ಕಾರ್ತಿಕೇಯನಿಗೆ ನವಿಲು, ಮೈಲಾರಲಿಂಗನಿಗೆ ಕುದುರೆ, ದತ್ತಾತ್ರೇಯನಿಗೆ ನಾಯಿ, ಲಾಂಛನ ಇವೆ. ಹಾಗೆಯೇ ಶಿವನಿಗೆ ಜಟಾಮಂಡಲ ಮತ್ತು ಚಂದ್ರ, ವಿಷ್ಣುವಿಗೆ ಶ್ರೀವತ್ಸ ಜೈನಧರ್ಮದ ೨೪ ಜನ ತೀರ್ಥಂಕರಿಗೆ ಬೇರೆ ಬೇರೆ ರೀತಿಯ ಲಾಂಛನಗಳಿವೆ. ವಾಹನಗಳಿಂದ ದೇವದೇವತೆಗಳ ಮತ್ತು ಲಾಂಛನಗಳಿಂದ ತೀರ್ಥಂಕರರ ಶಿಲ್ಪಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

೫.೨ ಗಾಣಪತ್ಯ ಮೂರ್ತಿ ಶಿಲ್ಪಗಳು

೫.೨.೧ ಪೀಠಿಕೆ

ಗಣಗಳಿಗೆ ಪತಿ ಗಣಪತಿ, ಗಣಪತಿಯ ಹುಟ್ಟಿನ ಕುರಿತು ಶ್ವೇತಕಲ್ಪ ಮತ್ತು ಶಿವ ಪುರಾಣಗಳು ವಿಸ್ತಾರವಾಗಿ ಉಲ್ಲೇಖಿಸುತ್ತವೆ. ಗಣಪತಿಯನ್ನು ಶಿವಪಾರ್ವತಿಯ ಮಗನೆಂದು

ಪಾರ್ವತಿಯ ನಿಷ್ಠಾವಂತ ಸೇವಕನೆಂದು, ಭೂತಗಣಗಳ ನಾಯಕನೆಂದು ಕರೆಯಲಾಗುತ್ತದೆ. ಇದಲ್ಲದೆ ಗಣೇಶನನ್ನು ವಿನಾಯಕ, ವಿಘ್ನೇಶ್ವರ, ಏಕದಂತ, ಹೇರಂಬ, ಲಂಭೋದರ, ಗಜಾನನ, ಬಾಲಗಣಪತಿ, ತರುಣಗಣಪತಿ, ಭಕ್ತಿಗಣಪತಿ, ವೀರ ವಿಘ್ನೇಶ್ವರ, ಶಕ್ತಿಗಣೇಶ ಇತ್ಯಾದಿ ಹೆಸರುಗಳಿಂದಲೂ ಕರೆಯಲಾಗುತ್ತದೆ. ಗಣಪತಿ ಮೂರ್ತಿಯನ್ನು ಕುಳಿತ ಮತ್ತು ನಿಂತ ಭಂಗಿಯಲ್ಲಿ ಕೆತ್ತಿರುವರು. ಗಣಪತಿಯನ್ನು ಪದ್ಮಾಸನ ರೂಪದಲ್ಲಿಹಾಗೂ ಇಲಿಯ ಮೇಲೆ ಕುಳಿಸುತ್ತಾರೆ. ಅದು ದ್ವಿಭಂಗಿ ಮತ್ತು ಸಮಭಂಗಿಯಲ್ಲಿರುವುದು. ಗಣಪತಿ ಮೂರ್ತಿಗಳಿಗೆ ಕರಂಡಮಕುಟ, ಜಟಾಮಕುಟ, ರತ್ನಮಕುಟ, ರತ್ನಹಾರಗಳು, ಯಜ್ಞೋಪವೀತ, ಕಂಠಹಾರ, ನಾಗಯಜ್ಞೋಪವೀತ ಆಭರಣಗಳಿಂದ ಅಲಂಕರಿಸಲಾಗಿದೆ. ಪೌರಾಣಿಕ ಹಿನ್ನೆಲೆಯಲ್ಲಿ ಗಣಪತಿಯು ತ್ರಿಮೂರ್ತಿ ಮತ್ತು ಶಕ್ತಿದೇವತೆಗಳಿಂದ ಅಪಾರ ಶಕ್ತಿಯನ್ನು ವಿಘ್ನನಾಶಕ ಬಿರುದನ್ನು ಪಡೆದಿರುವ ಹಿನ್ನೆಲೆಯಲ್ಲಿ ಈ ದೇವತೆಯ ಆರಾಧನೆ ಜನಪ್ರಿಯವಾಗಿದೆ. ಗಣಪತಿಯ ಶಿಲ್ಪವನ್ನು ಕಾಲಾನುಕ್ರಮವಾಗಿ ಪೌರಾಣಿಕ ಹಿನ್ನೆಲೆಯಲ್ಲಿ ವರ್ಗೀಕರಿಸಲಾಗಿದೆ. ದ್ವಿಭುಜ ಗಣಪತಿ ಶಿಲ್ಪಗಳ ಕಾಲ ಕ್ರಿ.ಶ ೨–೩ನೇ ಶತಮಾನದಿಂದ ಚತುರ್ಭುಜ ಗಣಪತಿ ಶಿಲ್ಪಗಳ ಕ್ರಿ.ಶ ೫ ನೇ ಶತಮಾನದಿಂದ ಆರಂಭಗೊಂಡು ೧೪ನೇ ಶತಮಾನದವರೆಗೆ ಮುಂದುವರಿಯಿತು.

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಕಂಡುಬರುವ ದ್ವಿಭುಜ ಗಣಪತಿ ಶಿಲ್ಪಗಳು ಕ್ರಿ.ಶ ೨ ರಿಂದ ೪ನೇ ಶತಮಾನದಲ್ಲಿ ಕಂಡುಬರುತ್ತವೆ. (ಗೋಕರ್ಣ,ಇಡಗುಂದಿ) ಆದರೆ ಇತರೆ ಪ್ರದೇಶದಲ್ಲಿ ದೊರೆತಿರುವ ದ್ವಿಭುಜ ಗಣಪತಿ ಶಿಲ್ಪಗಳಲ್ಲಿಸ್ಥಳೀಯ ಪ್ರಭಾವವಿದ್ದಂತೆ ಕಂಡುಬರುತ್ತದೆ. ಗಣಪತಿ ಕೈಗಳಲ್ಲಿ ಮೋದಕ, ಅಂಕುಶ, ಪಾಶ, ಪರಶು, ಬಿಲ್ಲು, ದಂತ, ಗಧಾ, ಸರ್ಪ, ಸೊಂಟಕ್ಕೆ ಹುಲಿಯ ಚರ್ಮ ಇತ್ಯಾದಿ ಆಭರಣಗಳನ್ನು ಕೆತ್ತಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕುಮಟಾ ತಾಲೂಕಿನಲ್ಲಿರುವ ಪ್ರಾಚೀನ ಹಾಗೂ ಮಧ್ಯಕಾಲೀನ ಗಣಪತಿ ಮೂರ್ತಿ ಶಿಲ್ಪಗಳನ್ನು ಇಲ್ಲಿ ದಾಖಲಿಸಲಾಗಿದೆ.

೧. ಹೆಸರು – ಗಣಪತಿ[೧೫]
ಸ್ಥಳ – ಗೋಕರ್ಣ, ಶ್ರೀ ಮಹಾಗಣಪತಿ ದೇವಾಲಯದ ಗರ್ಭಗೃಹದಲ್ಲಿ
ಕಾಲ – ಕ್ರಿ.ಶ ೨–೩ ನೇ ಶತಮಾನ
ವಸ್ತು – ಕ್ಲೋರೈಟಿಕ್ ಸಿಸ್ಟ
ಅಳತೆ – ೬೨ ಸೆಂ.ಮೀ ಎತ್ತರ ೫೨ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಶಿಲ್ಪ ದ್ವಿಭುಜನಾಗಿದ್ದು ಯಜ್ಞೋಪವೀತ, ಮೋದಕ ಪಾತ್ರೆ ಒಡಿದಿದ್ದಾನೆ. ಕೈಬಳೆ, ಗೆಜ್ಜೆಸರ, ಸೊಂಟಕ್ಕೆ ಗೆಜ್ಜೆ, ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ತಲೆಯುಗೂದಲು ಬುಜದ ಮುಂಭಾಗದವರೆಗೂ ಇದೆ. ಮೂಲಾಕಾರದಲ್ಲಿ

ಮೊಣಕಾಲಿನವರೆಗೆ ಬರುವಂತೆ ಕಚ್ಚೆಹಾಕಿ ಧೋತಿತೊಟ್ಟಿರುವನು. ಸೊಂಡಿಲನ್ನು ಎಡಕ್ಕೆ ತಿರುವಿ ಮೋದಕ ಪಾತ್ರೆಯಲ್ಲಿ ಇಡಲ್ಪಟ್ಟಿದೆ.

೨. ಹೆಸರು – ಗಣಪತಿ
ಸ್ಥಳ – ಶಿರಗುಂಜಿ, (ಸದ್ಯ ಜಿ.ಸಿ. ಕಾಲೇಜು ಅಂಕೋಲಾ, ವಸ್ತು ಸಂಗ್ರಾಲಯದಲ್ಲಿದೆ.)ಬಿಡಿಶಿಲ್ಪ
ಕಾಲ – ಕ್ರಿ.ಶ ೧೦ನೇ ಶತಮಾನ
ವಸ್ತು – ಬೆಣಚು ಕಲ್ಲು
ಅಳತೆ – ೧೦೨ ಸೆಂ.ಮೀ ಎತ್ತರ ೭೪ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಮೂರ್ತಿ ದ್ವಿಭುಜನಾಗಿದ್ದಾನೆ. ಬಲಗೈ ಪದ್ಮ, ಎಡಗೈ ಭಗ್ನಗೊಂಡಿದೆ. ಈ ಶಿಲ್ಪವು ತ್ರುಟಿತಗೊಂಡಿದ್ದು ಸೊಂಡಿಲು ಭಗ್ನವಾಗಿದೆ. ವಜ್ರಪಂಜರ ಮಕುಟವನ್ನು,ಅಗಲವಾದ ಕಿವಿಯನ್ನು ಹೊಂದಿದೆ.

೩. ಹೆಸರು – ಗಣಪತಿ
ಸ್ಥಳ – ನಾಗೂರು, ವಿಷ್ಣು ದೇವಸ್ಥಾನ ಹತ್ತಿರ ಬಿಡಿಶಿಲ್ಪ
ಕಾಲ – ಕ್ರಿ.ಶ ೧೦–೧೧ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ
ಅಳತೆ – ೭೪ ಸೆಂ.ಮೀ ಎತ್ತರ, ೪೮ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲಿರುವ ಮೂರ್ತಿ ದ್ವಿಭುಜನಾಗಿದ್ದಾನೆ. ಬಲಗೈಯಲ್ಲಿ ಮೋದಕ, ಎಡಗೈಯಲ್ಲಿ ಮೋದಕಪಾತ್ರೆ ಇದೆ. ಸೊಂಡಿಲನ್ನು ಮೋದಕ ಪಾತ್ರೆಯಲ್ಲಿರುವಂತೆ ಕೆತ್ತಲಾಗಿದೆ. ಕಿರೀಟ ಮಕುಟ, ಆಭರಣಗಳನ್ನು ಧರಿಸಿರುವನು. ಈ ಶಿಲ್ಪವು ಉದರ ಬಂದ, ಸೊಂಟಪಟ್ಟಿ, ಯಜ್ಞೋಪವೀತದಿಂದ ಅಲಂಕರಿಸಲಾಗಿದೆ.

೪. ಹೆಸರು – ಗಣಪತಿ
ಸ್ಥಳ – ಕಲ್ಲಬ್ಬೆ, ನಂದಿಕೇಶ್ವರ ದೇವಾಲಯದ ಗರ್ಭಗೃಹದ ಹೊರಗೆ ಬಲಭಾಗದಲ್ಲಿ
ಕಾಲ – ಕ್ರಿ.ಶ. ೧೦–೧೧ ನೇ ಶತಮಾನ
ವಸ್ತು – ಬೆಣಚು ಕಲ್ಲು
ಅಳತೆ – ೨೨ ಸೆಂ.ಮೀ ಎತ್ತರ ೧೭ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಒಂದು ಕೈಯಲ್ಲಿ ದಂತವಿದೆ. ಇನ್ನೊಂದು ಕೈ ಅಂಕುಶ, ಎಡಗಡೆಯ ಒಂದು ಕೈಯಲ್ಲಿ

ಮೋದಕ ಪಾತ್ರೆ, ಇನ್ನೊಂದು ಕೈಯಲ್ಲಿ ಪಾಶವಿದೆ. ಶಿಲ್ಪ ಕಿರೀಟ ಮಕುಟ ಕೈಕಡಗ, ಕಾಲ್ಗಡಗಗಳಿಂದ ಅಲಂಕೃತಗೊಂಡಿದೆ.

೫. ಹೆಸರು – ಗಣಪತಿ[೧೬]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯಗರ್ಭಗ್ರಹದ ಹೊರಗೆ ಬಲಭಾಗದಲ್ಲಿನ ಮೊಗಸಾಲಿನಲ್ಲಿ,

ಕಾಲ – ಕ್ರಿ.ಶ. ೧೧ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೧೩ ಸೆಂ.ಮೀ ಎತ್ತರ ೧೧ ಸೆಂ.ಮೀ ಅಗಲ

ಈ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಒಂದು ಕೈಯಲ್ಲಿ ದಂತ, ಇನ್ನೊಂದು ಕೈ ಕೊಡಲಿ, ಎಡಗಡೆಯ ಒಂದು ಕೈ ಮೋದಕ ಪಾತ್ರೆ, ಇನ್ನೊಂದು ಕೈಗಧೆ ಹಿಡಿದಿದೆ. ಕೈಬಳೆ, ಕಾಲ್ಗಡಗ, ಧರಿಸಿದ್ದಾನೆ. ಉದರವು ಸರ್ಪಬಂಧದಿಂದ ಕೂಡಿದೆ.

೬. ಹೆಸರು – ಗಣಪತಿ

ಸ್ಥಳ – ಮಿರ್ಜಾನ, ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಗರ್ಭಗೃಹದ ಹೊರಗೆ

ಕಾಲ – ಕ್ರಿ.ಶ ೧೦–೧೨ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೫೬ ಸೆಂ.ಮೀ ಎತ್ತರ ೪೨ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಗಣಪತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈ ವರದ ಹಸ್ತ, ಇನ್ನೊಂದು ಕೈ ಅಂಕುಶ, ಎಡಗಡೆಯ ಒಂದು ಕೈಯಲ್ಲಿ ಮೋದಕ ಪಾತ್ರೆ, ಇನ್ನೊಂದು ಕೈಯಲ್ಲಿ ಪಾಶವಿದೆ. ಶಿಲ್ಪಿಯು ಸ್ಥಳೀಯ ಶೈಲಿ ಅಳವಡಿಸಿಕೊಂಡು ನಿರ್ಮಾಣಮಾಡಿದಂತಿದೆ.

೭. ಹೆಸರು – ಗಣಪತಿ[೧೭]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ಸಭಾ ಮಂಟಪ

ಕಾಲ – ಕ್ರಿ.ಶ ೧೧ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೯೦ ಸೆಂ.ಮೀ ಎತ್ತರ ೧೬ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈಯಲ್ಲಿ ದಂತವಿದೆ. ಎಡಗಡೆಯ ಒಂದು ಕೈಯಲ್ಲಿ ಮೋದಕ ಪಾತ್ರೆ, ಇನ್ನೊಂದು ಕೈಯಲ್ಲಿ ಕಲಶ ಇದೆ. ಉದರ ಹಾವಿನಿಂದ ಸುತ್ತಲ್ಪಟ್ಟಿದೆ. ಸೊಂಡಿಲ ತುದಿಯಲ್ಲಿ

ಮೋದಕ ಹಿಡಿದಿದ್ದಾನೆ. ಪದ್ಮ ಪೀಠದ ಮೇಲೆ ಆಸೀನವಾಗಿರುವ ಈ ಶಿಲ್ಪ, ಮಕರ ತೋರಣದ ಪ್ರಭಾವಳಿ, ಯಜ್ಞೋಪವೀತ, ಕಂಠಹಾರ ಕರಂಡ ಮಕುಟದಿಂದ ಅಲಂಕರಿಸಲ್ಪಟ್ಟಿದೆ.

೮. ಹೆಸರು – ಗಣಪತಿ[೧೮]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ಪುಷ್ಕರಣಿಯಲ್ಲಿದೆ.

ಕಾಲ – ಕ್ರಿ.ಶ. ೧೧ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೭೪ ಸೆಂ.ಮೀ ಎತ್ತರ ೫೫ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಈ ಮೂರ್ತಿಗೆ ಹತ್ತು ಕೈಗಳಿವೆ. ಬಲಭಾಗದ ಐದು ಕೈಗಳಲ್ಲಿ ಮೋದಕ, ತಂತಿವಾದ್ಯ, ಭಗ್ನದಂತ, ಕಬ್ಬು, ಅರಳಿದ ಪದ್ಮವಿದೆ. ಎಡಗೈಯಲ್ಲಿ ಹಿಡಿದಿರುವ ಆಯುಧ (?) ಇನ್ನು ಎಡ ಮೂರು ಕೈಗಳಲ್ಲಿ ಪುಸ್ತಕ, ದಾಳಿಂಬೆ ಮತ್ತು (?) ಕಿರೀಟಮಕುಟ, ಮೂರು ಎಳೆಗಳಲ್ಲಿ ಯಜ್ಞೋಪವೀತವಿದೆ. ಕೈಬಳೆ, ಮತ್ತು ಕಾಲ್ಗಡಗ, ಧರಿಸಿದ್ದಾನೆ. ತಲೆಯ ಮೇಲೆ ಕಿರೀಟವಿಲ್ಲ. ಕಿವಿಯೋಲೆ, ಅಗಲವಾದ ಕಂಠಾಭರಣ, ಕೈಬಳೆ, ಕಾಲ್ಗಡಗ ಧರಿಸಿದೆ.

೯. ಹೆಸರು – ಗಣಪತಿ

ಸ್ಥಳ – ಗೋಕರ್ಣ, ಈಶ್ವರ ದೇವಸ್ಥಾನದ ಮುಖಮಂಟಪದ ಬಲದಿಕ್ಕಿಗೆ

ಕಾಲ – ಕ್ರಿ.ಶ. ೧೧–೧೨ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೭೪ ಸೆಂ.ಮೀ ಎತ್ತರ ೫೨ ಸೆಂ.ಮೀ ಅಗಲ

ಪದ್ಮಾಸನ ಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈಯಲ್ಲಿ ಮೋದಕವನ್ನು, ಇನ್ನೊಂದು ಕೈಯಲ್ಲಿ ಪರಶುವನ್ನು, ಎಡಗಡೆಯ ಒಂದು ಕೈಯಲ್ಲಿ ದಂತ, ಇನ್ನೊಂದು ಕೈಯಲ್ಲಿ ತ್ರಿಶೂಲವನ್ನು ಹಿಡಿದಿದ್ದಾನೆ. ಮೇಲ್ಭಾಗದಲ್ಲಿ ಕೀರ್ತಿಮುಖವನ್ನೊಳಗೊಂಡ ಪ್ರಭಾವಳಿಯಿದೆ.ಇದು ಬಲಮುರಿ ಗಣಪತಿ.

೧೦. ಹೆಸರು – ಉಪ್ಪಿನ ಗಣಪತಿ[೧೯]

ಸ್ಥಳ – ಉಪ್ಪಿನ ಪಟ್ಟಣ

ಕಾಲ – ಕ್ರಿ.ಶ.೧೧–೧೨ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೪೪ ಸೆಂ.ಮೀ, ಎತ್ತರ ೨೨ ಸೆಂ.ಮೀ ಅಗಲ

ಲಲಿತ ಸವ್ಯಾಸನ ಭಂಗಿಯಲ್ಲಿರುವ ಈ ಮೂರ್ತಿ ದ್ವಿಭುಜನಾಗಿದ್ದಾನೆ.ಬಲಗಡೆಯ ಒಂದು ಕೈಯಲ್ಲಿ ದಂತವಿದೆ. ಇನ್ನೊಂದು ಕೈ ಪರಶು, ಎಡಗಡೆ ಕೈ ಮೋದಕ ಪಾತ್ರೆ, ಇನ್ನೊಂದು ಕೈಯಲ್ಲಿ ಪದ್ಮವನ್ನು ಹಿಡಿದುಕೊಂಡಿದ್ದಾನೆ. ಸೊಂಡಿಲು ಎಡಕ್ಕೆ ತಿರುವಿ ಮೋದಕ ಪಾತ್ರೆಯಲ್ಲಿದೆ. ಕಿರೀಟ ಮಕುಟ, ಭುಜಕೀರ್ತಿ, ತೋಳ್ಬಂದಿ, ಬೆರಳಿಗೆ ಉಂಗುರಗಳು, ಮಣಿ ಖಚಿತ ಕೈ ಮತ್ತು ಕಾಲ್ಗಡಗ ಧರಿಸಿದ್ದಾನೆ. ಮೂರೆಳೆಯ ಯಜ್ಞೋಪವೀತವನ್ನು ಧರಿಸಿದ್ದಾನೆ. ಧೋತ್ರದ ಮುಂದಿನ ನೆರಿಗೆ ಪೀಠದ ಮೇಲೆ ಇಳಿಬಿದ್ದಿದೆ.

೧೧. ಹೆಸರು – ಗಣಪತಿ
ಸ್ಥಳ – ಗಣಪತಿ ದೇವಾಲಯದ ಗರ್ಭಗೃಹ ಊಳ್ಳುರುಮಠ,
ಕಾಲ – ಕ್ರಿ.ಶ ೧೨–೧೩ ನೇ ಶತಮಾನ
ವಸ್ತು – ಬೆಣಚು ಕಲ್ಲು
ಅಳತೆ – ೬೫ ಸೆಂ.ಮೀ ಎತ್ತರ೪೮ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಈ ಮೂರ್ತಿ ಅಷ್ಟಪಟ್ಟಿಕೆಯ ಪೀಠದ ಮೇಲೆ ಇದೆ. ಈ ಮೂರ್ತಿ ನಾಲ್ಕು ಕೈಗಳನ್ನು ಹೊಂದಿದ್ದು,ಬಲಗಡೆಯ ಎರಡು ಕೈಯಲ್ಲಿದಂತಇದೆ. ಎಡಗಡೆಯ ಒಂದು ಕೈಯಲ್ಲಿ ಮೋದಕ ಪಾತ್ರೆ, ಇನ್ನೊಂದು ಕೈಯಲ್ಲಿ ಪಾಶವಿದೆ. ಲಲಿತ ಸವ್ಯಾವಸನದಲ್ಲಿ ಇರುವ ಮೂರ್ತಿ ಕಿರೀಟ ಮಕುಟ, ವೈಜಯಂತಿ ಹಾರ, ಮಣಿಸರ, ಯಜ್ಞೋಪವೀತ, ಕಾಲ್ಗಡಗ, ಸಾಂಪ್ರದಾಯಿಕ ಆಭರಣಗಳಿಂದ ಅಲಂಕರಿಸಲ್ಪಟ್ಟಿದೆ.

೧೨. ಹೆಸರು – ಗಣಪತಿ
ಸ್ಥಳ – ಬರ್ಗಿ, ಮಾಹಾಲಿಂಗೇಶ್ವರ ದೇವಸ್ಥಾನದ ಗರ್ಭಗೃಹದ ಹೊರಗೆ ಬಲಭಾಗದಲ್ಲಿ
ಕಾಲ – ಕ್ರಿ.ಶ ೧೨–೧೩ ನೇ ಶತಮಾನ
ವಸ್ತು – ಕ್ಲೋರೈಟಿಕ್ ಸಿಸ್ಟ
ಅಳತೆ – ೪೧ ಸೆಂ.ಮೀ ಎತ್ತರ ೪೬ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈ ಫಲ ಇನ್ನೊಂದು ಕೈ ಅಂಕುಶ, ಎಡಗಡೆಯ ಒಂದು ಕೈ ಮೋದಕ ಪಾತ್ರೆ, ಇನ್ನೊಂದು ಕೈ ಪಾಶ ಹಿಡಿದಿದೆ. ತಲೆಯ ಮೇಲೆ ಪದ್ಮವಿದ್ದು ಹಣೆಯ ಮೇಲೆ ಸಾಲಂಕೃತ ಮುತ್ತಿನ ಹಾರದಿಂದಅಲಂಕರಿಸಲ್ಪಟ್ಟಿದೆ. ನಿರಾಭರಣವಾಗಿರುವ ಈ ಶಿಲ್ಪದ ದೈಹಿಕ ಅಂಗಾಂಗಗಳು ಸಮ–ಪ್ರಮಾಣದಲ್ಲಿ ಇವೆ. ಉದ್ದವಾದ ಸೊಂಡಿಲು ಮೋದಕ ಪಾತ್ರೆಯ ಮೇಲಿದೆ.

೧೩. ಹೆಸರು – ಗಣಪತಿ
ಸ್ಥಳ – ಗೋಕರ್ಣ, ಪಟ್ಟವಿನಾಯಕ ದೇವಸ್ಥಾನದ ಗರ್ಭಗೃಹ

ಕಾಲ – ಕ್ರಿ.ಶ ೧೪ನೇ ಶತಮಾನ

ವಸ್ತು – ಕ್ಲೋರೈಟಿಕ್‌ಸಿಸ್ಟ

ಅಳತೆ – ೫೪ ಸೆಂ.ಮೀ, ಎತ್ತರ ೪೮ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಕೈ ಅಭಯ, ಇನ್ನೊಂದು ಕೈ ಪರಶು, ಎಡಗಡೆಯ ಕೈ ಮೋದಕ, ಇನ್ನೊಂದು ಕೈಯಲ್ಲಿ ಪಾಶವನ್ನು ಹಿಡಿದಿದ್ದಾನೆ. ಕಿರೀಟ ಮಕುಟ, ರತ್ನಪಟ್ಟಿ, ಮಣಿಸರ, ಕಟಿಸೂತ್ರ, ಪಾದಸರ ಧರಿಸಿದ್ದಾನೆ.

೧೪. ಹೆಸರು – ಗಣಪತಿ

ಸ್ಥಳ – ಸಿದ್ಧೇಶ್ವರ, ದೇವಸ್ಥಾನದ ಗರ್ಭಗೃಹದ ಹೊರಗೆ

ಕಾಲ – ಕ್ರಿ.ಶ ೧೪-೧೫ ನೇ ಶತಮಾನ

ವಸ್ತು – ಬೆಣಚು ಕಲ್ಲು

ಅಳತೆ – ೫೭.೦೬ ಸೆಂ.ಮೀ ಎತ್ತರ ೩೦.೪೮ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಒಂದು ಕೈ ಅಭಯ, ಇನ್ನೊಂದು ಕೈ ಪಾಶ,ಎಡಗಡೆಯ ಒಂದು ಕೈಯಲ್ಲಿ ಮೋದಕ ಪಾತ್ರೆ ಇನ್ನೊಂದು ಕೈಯಲ್ಲಿ ಪರಶುವಿದೆ. ಲಲಿತ ಸವ್ಯಾವಸನದಲ್ಲಿರುವ ಈ ಮೂರ್ತಿ ಕಿರೀಟ, ಕಂಠಹಾರ, ಉದರನಾಗಬಂದ, ಕೈಬಳೆ ಹಾಗೂ ಕಾಲ್ಬಳೆಯನ್ನು ಧರಿಸಿದೆ. ಕೆಳಗಡೆ ಇಲಿಯನ್ನು ಕೆತ್ತಲಾಗಿದೆ.

೧೫. ಹೆಸರು – ಗಣಪತಿ

ಸ್ಥಳ – ಹಿರೇಗುತ್ತಿ, ನಿಲೇಶ್ವರ ದೇವಾಲಯದ ಗರ್ಭಗೃಹದ ಹೊರಗೆ

ಕಾಲ – ಕ್ರಿ.ಶ ೧೫ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೫೯ ಸೆಂ.ಮೀ ಎತ್ತರ, ೪೦ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಗಣಪತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈಯಲ್ಲಿ ದಂತವನ್ನು., ಇನ್ನೊಂದು ಕೈಯಲ್ಲಿ ಚಕ್ರವನ್ನು, ಎಡಗಡೆಯ ಒಂದು ಕೈಯಲ್ಲಿ ಮೋದಕ, ಇನ್ನೊಂದು ಕೈಯಲ್ಲಿ ಪಾಶ ಹೊಂದಿದೆ. ಸೊಂಡಿಲು ಎಡಕ್ಕೆ ತಿರುಗಿದ್ದು ಮೋದಕದ ಮೇಲೆ ಇಟ್ಟಿದೆ. ಉದರ ನಾಗಬಂದದಿಂದ ಕೂಡಿದೆ. ಮಣಿಸರ, ಪ್ರಭಾಚಕ್ರ, ಕೀರ್ತಿಮುಖ ಪ್ರಭಾವಳಿಯನ್ನು ಹೊಂದಿದೆ. ಗಣಪತಿ ಮೂರ್ತಿಶಿಲ್ಪ ಕೈಕಡಗ, ಕಾಲ್ಬಳೆಯನ್ನು ಹೊಂದಿದೆ.

೧೬. ಹೆಸರು – ಗಣಪತಿ

ಸ್ಥಳ – ಬಂಗಣೆ, ಗಣಪತಿ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೫ ನೇ ಶತಮಾನ

ವಸ್ತು – ಬೆಣಚು ಕಲ್ಲು

ಅಳತೆ – –

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಗಣಪತಿ ದ್ವಿಭುಜನಾಗಿದ್ದಾನೆ. ಬಲಗೈಯಲ್ಲಿ ಕಮಲದ ಮೊಗ್ಗು, ಎಡಗೈಯಲ್ಲಿ ಮೋದಕ ಪಾತ್ರೆ ಇದೆ. ಗಂಟೆಗಳ ಸರ ಉದರದ ಸುತ್ತಲೂ ಕೆತ್ತಲಾಗಿದೆ. ಸೊಂಡಿಲು ಎಡ ಬದಿಯಲ್ಲಿ ತಿರುಗಿದ್ದು ಮೋದಕ ಪಾತ್ರೆಯಲ್ಲಿ ಇರುವಂತೆ ಇದೆ. ಶಿರಭಾಗದಲ್ಲಿ ಪ್ರಭಾಚಕ್ರವಿದೆ. ಹಿಂಭಾಗವು ಪದ್ಮಗಳಿಂದ ಅಲಂಕರಿಸಲ್ಪಟ್ಟಿದೆ. ಮೂರ್ತಿಯ ಕಿವಿಗಳು ಮತ್ತು ಇತರೇ ದೇಹದ ಭಾಗಗಳನ್ನು ಸಮಪ್ರಮಾಣದಲ್ಲಿ ರಚಿಸಲಾಗಿದೆ.

೧೭. ಹೆಸರು – ಗಣಪತಿ

ಸ್ಥಳ – ಯಾಣ ಗಣಪತಿ ದೇವಸ್ಥಾನದ ಗರ್ಭಗ್ರಹದಲ್ಲಿ

ಕಾಲ – ಕ್ರಿ.ಶ ೧೫ ನೇ ಶತಮಾನ

ವಸ್ತು – ಕ್ಲೊರೈಟಿಕ ಸಿಸ್ಟ

ಅಳತೆ – ೭೬ ಸೆಂ.ಮೀ ಎತ್ತರ ೪೫ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಗಣಪತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈಯಲ್ಲಿ ಕಮಲದ ಮೊಗ್ಗು, ಇನ್ನೊಂದು ಕೈಯಲ್ಲಿ ಪರಶು, ಎಡಗಡೆಯ ಒಂದು ಕೈಯಲ್ಲಿ ಮೋದಕ ಪಾತ್ರೆ, ಇನ್ನೊಂದು ಕೈಯಲ್ಲಿ ಪಾಶವನ್ನು ಹಿಡಿದುಕೊಂಡಿದೆ. ಸೊಂಡಿಲು ಎಡ ಬದಿಯಲ್ಲಿ ತಿರುಗಿದ್ದು, ಮೋದಕ ಪಾತ್ರೆಯಲ್ಲಿ ಇಡಲ್ಪಟ್ಟಿದೆ. ಕಿರೀಟ ಮಕುಟವನ್ನು ಹೊಂದಿದೆ. ಉದರದಲ್ಲಿ ನಾಗಭಂದ ಇದೆ ಕೊರಳ ಸುತ್ತಲೂ ಮಣಿಸರಗಳನ್ನು ಪೋಣಿಸಲಾಗಿದೆ, ಹಿಂಭಾಗದಲ್ಲಿ ಪ್ರಭಾವಳಿಯನ್ನು ಕೆತ್ತಲಾಗಿದೆ.

೧೮. ಹೆಸರು – ಗಣಪತಿ

ಸ್ಥಳ – ಅತಿಬೆಟ್ಟು ಯಾಣ, ಗಣಪತಿ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೫–೧೬ ನೇ ಶತಮಾನ

ವಸ್ತು – ಬೆಣಚು ಕಲ್ಲು

ಅಳತೆ – –

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಗಣಪತಿ ಚತುರ್ಭುಜನಾಗಿದ್ದಾನೆ. ಬಲ ಹಸ್ತವು ಅಭಯ ಸಂಕೇತವಾಗಿದೆ, ಇನ್ನೊಂದು ಹಸ್ತದಲ್ಲಿ ಪರಶು, ಎಡ ಹಸ್ತದಲ್ಲಿ ಮೋದಕ ಪಾತ್ರೆ, ಇನ್ನೊಂದು ಹಸ್ತ ಪಾಶ ಹಿಡಿದುಕೊಂಡಿದೆ. ಈ ಮೂರ್ತಿಯು ಕಿರೀಟ, ಕರ್ಣ ಕುಂಡಲ,

ಸಾಂಪ್ರದಾಯಿಕ ಆಭರಣಗಳಿಂದ ಅಲಂಕೃತಗೊಂಡಿದೆ. ಉದರದಲ್ಲಿ ನಾಗಬಂಧವಿದೆ. ಈ ಶಿಲ್ಪದಲ್ಲಿ ಕಂಡು ಬರುವ ಪ್ರತಿಮಾ ಲಕ್ಷಣಗಳು ಸ್ಥಳೀಯ ಕಲಾಗಾರಿಕೆಯ ಪ್ರಭಾವವನ್ನು ಸೂಚಿಸುತ್ತದೆ.

೧೯. ಹೆಸರು – ಗಣಪತಿ

ಸ್ಥಳ – ಗೋಕರ್ಣ, ಸ್ಮಶಾನಕಾಳಿ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ. ೧೫ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೩೪ ಸೆಂ.ಮೀ ಎತ್ತರ ೨೨ ಸೆಂ.ಮೀ ಅಗಲ

ಸುಖಾಸನ ಭಂಗಿಯಲ್ಲಿರುವ ಗಣಪತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈ ಅಭಯ ಮುದ್ರೆಯಲ್ಲಿದೆ ,ಇನ್ನೊಂದು ಕೈಯಲ್ಲಿ ಪರಶುವಿದೆ, ಎಡಗಡೆಯ ಒಂದು ಕೈಯಲ್ಲಿ ಮೋದಕವಿದೆ, ಇನ್ನೊಂದು ಕೈಯಲ್ಲಿ ಪಾಶವನ್ನು ಹಿಡಿದಿರುವನು. ಕಿರೀಟಮಕುಟ, ಕಂಠಹಾರ, ಉದರಬಂಧ, ಕಟಿಸೂತ್ರ, ಪಾದಸರ ಧರಿಸಿರುವನು.

೨೦. ಹೆಸರು – ಗಣಪತಿ

ಸ್ಥಳ – ಆಲಕೇರಿ, ಗಣಪತಿ ದೇವಸ್ಥಾನಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೫–೧೬ ನೇ ಶತಮಾನ

ವಸ್ತು – ಅಮೃತ ಶಿಲೆ

ಅಳತೆ – ೫೦ ಸೆಂ.ಮೀ ಎತ್ತರ, ೪೧ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಗಣಪತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈಯಲ್ಲಿ ಜಪಮಾಲೆ, ಇನ್ನೊಂದು ಕೈಯಲ್ಲಿ ಖಡ್ಗ, ಎಡಗಡೆಯ ಕೈಯಲ್ಲಿ ಮೋದಕ ಪಾತ್ರೆ, ಇನ್ನೊಂದು ಕೈ ಕಮಲದ ಮೊಗ್ಗನ್ನು ಹಿಡಿದುಕೊಂಡಿದೆ. ಉದರಬಂಧ, ತೋಳ್ಬಂದಿ, ಕಿರೀಟ ಮಕುಟವನ್ನುಧರಿಸಿದ್ದಾನೆ. ಸೊಂಡಿಲನ್ನು ಎಡಕ್ಕೆ ತಿರುವಿ ಮೋದಕ ಪಾತ್ರೆಯಲ್ಲಿಡಲಾಗಿದೆ.

೨೧. ಹೆಸರು – ಗಣಪತಿ

ಸ್ಥಳ – ದೀವಳ್ಳಿ, ರಾಯೇಶ್ವರ ದೇವಸ್ಥಾನದ ಗರ್ಭಗ್ರಹದ ಹೊರಗೆ

ಕಾಲ – ಕ್ರಿ.ಶ ೧೬ ನೇ ಶತಮಾನ

ವಸ್ತು – ಬೆಣಚು ಕಲ್ಲು

ಅಳತೆ – –

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಈ ಮೂರ್ತಿಗೆ ಎರಡು ಕೈಗಳಿವೆ. ಬಲಗೈಕಮಲದ ಮೊಗ್ಗು, ಎಡಗೈಯಲ್ಲಿ ಮೋದಕ ಪಾತ್ರೆ ಇದೆ. ಸೊಂಡಿಲನ್ನು ಎಡಕ್ಕೆ

ತಿರುವಿದ್ದು ಮೋದಕ ಪಾತ್ರೆಯಲ್ಲಿ ಇಡಲಾಗಿದೆ. ಈ ಮೂರ್ತಿ ಕಿರೀಟ ಮಕುಟ, ಯಜ್ಞೋಪವೀತ, ಕಾಲ್ಗಡಗ ಮುಂತಾದ ಸಾಂಪ್ರದಾಯಿಕ ಆಭರಣಗಳಿಂದ ಅಲಂಕರಿಸಲ್ಪಟ್ಟಿದೆ. ಉದರ ನಾಗಬಂಧದಿಂದ ಕೂಡಿದ್ದು ಸರ್ಪವು ಹೆಡೆಯೆತ್ತಿನಿಂತಂತೆ ಕೆತ್ತಲಾಗಿದೆ.

೨೨. ಹೆಸರು – ಗಣಪತಿ

ಸ್ಥಳ – ವಾಲಗಳ್ಳಿ, ಮಲ್ಲಿಕಾರ್ಜುನ ದೇವಸ್ಥಾನದ ಗರ್ಭಗೃಹದ ಹೊರಗೆ

ಕಾಲ – ಕ್ರಿ.ಶ ೧೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೪೫.೪೮ ಸೆಂ.ಮೀ ಎತ್ತರ ೩೦.೪೮ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈ ಅಭಯ, ಇನ್ನೊಂದು ಕೈಯಲ್ಲಿ ಪಾಶ, ಎಡಗಡೆಯ ಒಂದು ಕೈಯಲ್ಲಿ ಮೋದಕ ಪಾತ್ರೆ, ಇನ್ನೊಂದು ಕೈಯಲ್ಲಿ ತ್ರಿಶೂಲ ಇದೆ. ಪಿತಾಂಬರವನ್ನು ಧರಿಸಿದೆ. ಕಿರೀಟ, ಯಜ್ಞೋಪವೀತ, ಕಾಲ್ಗಡಗ, ಮುಂತಾದ ಸಾಂಪ್ರದಾಯಕ ಆಭರಣಗಳಿಂದ ಅಲಂಕರಿಸಲ್ಪಟ್ಟಿದೆ. ಉದರನಾಗಬಂಧದಿಂದ ಕೂಡಿದೆ.

೨೩. ಹೆಸರು – ಗಣಪತಿ

ಸ್ಥಳ – ಕತಗಾಲ ಹೈಸ್ಕೂಲ್‌ನಲ್ಲಿರುವ ಬಿಡಿಶಿಲ್ಪ,

ಕಾಲ – ಕ್ರಿ.ಶ ೧೬–೧೭ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೫೪ ಸೆಂ.ಮೀ ಎತ್ತರ ೪೬ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಕೈಯಲ್ಲಿ ದಂತ, ಇನ್ನೊಂದು ಕೈಯಲ್ಲಿ ಪರಶು, ಎಡಗಡೆಯ ಕೈಯಲ್ಲಿ ಮೋದಕ ಪಾತ್ರೆ, ಇನ್ನೊಂದು ಕೈಯಲ್ಲಿ (?) ಸೊಂಡಿಲು ಎಡಕ್ಕೆ ತಿರುವಿದ್ದುಮೊದಕ ಪಾತ್ರೆಯ ಮೇಲಿದೆ. ಈ ಮೂರ್ತಿ ಕಿರೀಟ ಕಂಠಹಾರ, ಮಣಿಸರ, ತೋಳ್ಬಂದಿ, ಗೆಜ್ಜೆಸರ, ಕೈಬಳೆ, ಕಟಿವಸ್ತ್ರ, ಯಜ್ಞೋಪವಿತ, ಧರಿಸಿದೆ. ಹಿಂಭಾಗ ಸುತ್ತಲೂ ಪ್ರಭಾವಳಿ ಇದೆ.

೨೪. ಹೆಸರು – ವಿಘ್ನೇಶ್ವರ

ಸ್ಥಳ – ಅಳವಳ್ಳಿ, ವಿಘ್ನೇಶ್ವರ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೮ ನೇ ಶತಮಾನ

ವಸ್ತು – ಕ್ಲೋರೈಟಿಕ್‌ಸಿಸ್ಟ

ಅಳತೆ – ೭೭ ಸೆಂ.ಮೀ ಎತ್ತರ ೫೧ ಸೆಂ.ಮೀ ಅಗಲ

ಲಲಿತ ಸವ್ಯಾವಸನ ಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಕೈ ಕಮಲದ ಮೊಗ್ಗು, ಇನ್ನೊಂದು ಕೈ ಪರಶು, ಎಡಗಡೆಯ ಒಂದು ಕೈ ಮೋದಕ ಪಾತ್ರೆ, ಇನ್ನೊಂದು ಕೈಪಾಶವನ್ನು ಹಿಡಿದಿದೆ. ಈ ಮೂರ್ತಿಕಿರೀಟಮಕುಟ, ಯಜ್ಞೋಪವೀತ, ಕಾಲ್ಗಡಗ, ಮತ್ತು ಉದರದ ಮೇಲೆ ನಾಗಬಂಧ ಇದೆ. ಸೊಂಡಿಲು ಎಡಕ್ಕೆ ತಿರುವಿದ್ದು ಮೋದಕ ಪಾತ್ರೆಯಲ್ಲಿದೆ.

೨೫. ಹೆಸರು – ಗಣಪತಿ

ಸ್ಥಳ – ಕತಗಾಲ, ಶಂಭುಲಿಂಗೇಶ್ವರ ದೇವಾಲಯದ ಗರ್ಭಗೃಹದ ಬಲಬದಿಗೆ

ಕಾಲ – ೧೮ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ៦೧ ಸೆಂ.ಮೀ ಎತ್ತರ, ೩೪ ಸೆಂ.ಮೀ ಅಗಲ

ಸುಖಾಸನ ಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ.ಬಲಗಡೆಯ ಕೈಯಲ್ಲಿ ಪರಶು, ಇನ್ನೊಂದು ಕೈ ದಂತವನ್ನು, ಎಡಗಡೆಯ ಒಂದು ಕೈ ಪಾಶ ಇನ್ನೊಂದು ಕೈಯಲ್ಲಿ ಫಲ ಇದೆ. ಸೊಂಡಿಲು ಬಲಮುರಿಯಾಗಿದೆ. ಬಲಗಾಲನ್ನು ಮಡಚಿ ಕುಳಿತಿದೆ, ಕೀರ್ತಿಮುಖ ಪ್ರಭಾವಳಿ ಹೊಂದಿದೆ. ಕಿರೀಟ ಮಕುಟ, ಕಂಠಹಾರ, ಯಜ್ಞೋಪವೀತ, ಉದರಬಂಧ, ಕಟಿಸೂತ್ರ, ಸರ್ಪಬಂಧ ಧರಿಸಿದ್ದಾನೆ.

೫.೩ ಶೈವ ಮೂರ್ತಿ ಶಿಲ್ಪಗಳು

ಶೈವ ಮೂರ್ತಿಗಳಲ್ಲಿ ಶಿವನ ಪ್ರಭಾವ ಅತ್ಯಂತ ಹೆಚ್ಚಿನದು. ತ್ರಿಮೂರ್ತಿಗಳಲ್ಲಿ ಮೂರನೆಯವನಾದ ಶಿವನನ್ನು ಮೂರ್ತಿ ರೂಪಕ್ಕಿಂತ ಅಮೂರ್ತವಾದ ಲಿಂಗ ರೂಪದಲ್ಲಿಯೇ ಹೆಚ್ಚಿನ ಮಟ್ಟಿಗೆ ಪೂಜಿಸುವ ಸಂಪ್ರದಾಯ ಬೆಳೆದು ಬಂದಿದೆ. ಶಿವ ಪ್ರಳಯ ಕರ್ತೃ.[೨೦] ಶಿವಲಿಂಗದಲ್ಲಿ ಎರಡು ವಿಧಗಳಿವೆ. ೧.ಚಲ ೨.ಅಚಲ. ಶಿವನು ಮುಖ್ಯವಾಗಿ ಸಂಹಾರಕಾರಕನಾಗಿದ್ದರೂ ಸಹ ಅವನು ಭಕ್ತಿಸ್ತೋಮ. ಅವನನ್ನು ಸೃಷ್ಠಿ ಹಾಗೂ ಸ್ಥಿತಿಯ ದೇವನೆಂದೂ ಹಾಡಿ ಹೊಗಳಿದ್ದಾರೆ. ಶೈವ ಪಂಥದ ಪ್ರಾಚೀನತೆಯನ್ನು ನೋಡಿದಾಗ ಸಿಂಧೂನಾಗರಿಕತೆ, ಹರಪ್ಪಾ, ಮಹೆಂಜೋದಾರೋ, ಮತ್ತು ಕಾಲಿಬಂಗಾನ್ ನೆಲೆಗಳಲ್ಲಿ ದೊರೆತ ಮಣ್ಣಿನ ಮುದ್ರಿಕೆಗಳ ಮೇಲೆ ಪಶುಪತಿಯ ಚಿತ್ರಗಳು ಸಿಗುತ್ತವೆ. ವೈದಿಕ ಸಾಹಿತ್ಯದಲ್ಲಿ ಶಿವನ ಉಲ್ಲೇಖ ಇದೆ.[೨೧]ಕರ್ನಾಟಕದಲ್ಲಿ ಇದರ ಪ್ರಾಚೀನತೆಯನ್ನು ನೋಡಿದಾಗ ಉತ್ತರಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಬೋಳೆ ಮತ್ತು ಮಹಾಕೂಟದಲ್ಲಿರುವ ಶಿವಲಿಂಗಗಳು ಶೈವ ಶಿಲ್ಪಗಳಿಗೆ ಸಾಕ್ಷಿಯಾಗಿವೆ.[೨೨] ಶಿವನಿಗೆ ರುದ್ರ, ಮಹಾದೇವ, ಮಹೇಶ್ವರ,

ಈಶ್ವರ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಶಿವನ ಅವತಾರ ಹಲವು. ಅವುಗಳನ್ನು ಈ ರೀತಿ ವಿಂಗಡಿಸಬಹುದು.

೧) ಸಂಹಾರ ಮೂರ್ತಿಗಳು ೨) ಸ್ಥಾನಿಕ ಅಥವಾ ನಿಂತಿರುವ ಮೂರ್ತಿಗಳು ೩) ಆಸೀನ (ಕುಳಿತಿರುವ) ಮೂರ್ತಿಗಳು ೪) ನೃತ್ಯ ಮೂರ್ತಿಗಳು ೫) ರುದ್ರ ಮೂರ್ತಿಗಳು ೬) ಭೈರವ ಮೂರ್ತಿಗಳು.

೨) ಯೋನಿಪೀಠದ ಮೇಲೆ ಸ್ಥಾಪಿಸಿದ ಲಿಂಗವೇ ಶಿವಲಿಂಗವಾಗಿದೆ. ಪ್ರಕೃತಿ ಪುರುಷನ ಸಮ್ಮಿಲನದ ಸಂಕೇತವಾದ ಶಿವ ಪಾರ್ವತಿಯ ರೂಪವೇ ಶಿವಲಿಂಗವೆಂದು ಹೇಳಲಾಗಿದೆ. ಪ್ರಾಚೀನಕಾಲದ ಲಿಂಗಗಳು ಪೀಠರಹಿತವಾಗಿದ್ದವು.ನಂತರದಲ್ಲಿ ಪೀಠದ ಮೇಲೆ ಪ್ರತಿಷ್ಠಾಪಿಸಲಿಕ್ಕೆ ಪ್ರಾರಂಭಿಸಿದರು. ಶಿವಲಿಂಗದ ಕೆಳಗಿನ ಚೌಕಾಕಾರದ ಪೀಠ ಬ್ರಹ್ಮಭಾಗ, ಅದರ ಮೇಲೆ ಸ್ಥಾಪಿಸಿದ ಯೋನಿಪೀಠ ವಿಷ್ಣುಭಾಗ, ಮೇಲಿನ ವರ್ತುಲಾಕೃತಿ ರುದ್ರಭಾಗವಾಗಿದೆ. ಶಿವಲಿಂಗಗಳನ್ನು ರತ್ನ, ಕಾಷ್ಟ (ಮರ), ಲೋಹ, ಶಿಲೆ ಮುಂತಾದ ವಸ್ತುಗಳಿಂದ ರಚಿಸಲಾದರೂ, ಶಾಸ್ತ್ರಗಳಲ್ಲಿ ಲಿಂಗಗಳನ್ನು ಅಮೃತಶಿಲೆ, ಬಿಳಿಶಿಲೆ, ರತ್ನಶಿಲೆ, ಕ್ಲೊರೈಟಿಕ್ ಸಿಸ್ಟ, ಹಳದಿ ಶಿಲೆಗಳಲ್ಲಿ ಪೂಜೆ ಮಾಡಿದರೆ ಶ್ರೇಷ್ಠ ಎಂದಿದೆ.[೨೩] ಪ್ರಸ್ತುತ ಕುಮಟಾ ತಾಲೂಕಿಗೆ ಸೀಮಿತ ಮಾಡಿಕೊಂಡು ಇಲ್ಲಿನ ಶಿವಲಿಂಗಶಿಲ್ಪಗಳನ್ನು ಇಲ್ಲಿ ದಾಖಲಿಸಲಾಗಿದೆ.

೫.೩.೧ ಶೈವಶಿಲ್ಪಗಳು

೧. ಹೆಸರು – ಶಿವಲಿಂಗ[೨೪]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ಗರ್ಭಗೃಹ

ಕಾಲ – ಕ್ರಿ.ಶ. ೧೧ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೯ ಸೆಂ.ಮೀ ಎತ್ತರ ೮ ಸೆಂ.ಮೀ ಅಗಲ

ಚೌಕಾಕಾರದ ಪೀಠದಲ್ಲಿ ಇದೆ. ಮೇಲ್ಭಾಗದ ತುದಿ ಅರ್ಧಸಪಾಟಾಗಿದ್ದು, ಮಧ್ಯಭಾಗ ಸ್ವಲ್ಪ ಚಪ್ಪಟೆಯಾಗಿದೆ.

೨. ಹೆಸರು – ಶಿವಲಿಂಗ[೨೫]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ಚಂದ್ರಶಾಲೆ

ಕಾಲ – ಕ್ರಿ.ಶ. ೧೧ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೫ ಸೆಂ.ಮೀ ಎತ್ತರ ೭ ಸೆಂ.ಮೀ ಅಗಲ

ಅರ್ಧ ಚಂದ್ರಾಕೃತಿಯಲ್ಲಿದೆ.

೩. ಹೆಸರು – ಮಲ್ಲಿಕಾರ್ಜುನ[೨೬]

ಸ್ಥಳ – ಧಾರೇಶ್ವರ

ಕಾಲ – ಕ್ರಿ.ಶ. ೧೧ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೨೬ ಸೆಂ.ಮೀ ಎತ್ತರ೧೨ ಸೆಂ.ಮೀ ಅಗಲ

ಚೌಕಾಕಾರದ ಪೀಠದ ಮೇಲಿದ್ದು ಮೇಲ್ಭಾಗ ಸಪಾಟಾಗಿದೆ ಮುಂಭಾಗದಲ್ಲಿ ಬ್ರಹ್ಮಸೂತ್ರವಿದೆ.

೪. ಹೆಸರು – ತ್ರೈಲೇಶ್ವರ[೨೭]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ಹೊರಗೆ ಮೊಗಸಾಲೆಯಲ್ಲಿದೆ,

ಕಾಲ – ಕ್ರಿ.ಶ. ೧೧ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೧೫ ಸೆಂ.ಮೀ ಎತ್ತರ ೧೧ ಸೆಂ.ಮೀ ಅಗಲ

ಎತ್ತರವಾದ ಚೌಕಾಕಾರದ ಪೀಠದ ಮೇಲಿದ್ದು ಶಿವಲಿಂಗದ ಮೇಲ್ಭಾಗ ಚಪ್ಪಟೆಯಾಗಿದೆ. ಮುಂಭಾಗದಲ್ಲಿ ಬ್ರಹ್ಮಸೂತ್ರವಿದೆ.

೫. ಹೆಸರು – ಚಂಡಿಕೇಶ್ವರ[೨೮]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ಉತ್ತರ ದಿಕ್ಕಿಗೆ ಹೊರ ಪ್ರಕಾರದಲ್ಲಿ ಇದೆ.

ಕಾಲ – ಕ್ರಿ.ಶ. ೧೧ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – –

ವರ್ತುಲಾಕಾರದ ಪೀಠದ ಮಧ್ಯದಲ್ಲಿ ಅರ್ಧಚಂದ್ರಾಕೃತಿಯಲ್ಲಿದೆ ಈ ಶಿವಲಿಂಗ.

೬. ಹೆಸರು – ಶಿವ ಯೋಗಿ[೨೯]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ಪಶ್ಚಿಮ ದಿಕ್ಕಿನ ಫಲಕ್ಕಕೆತಾಗಿದೆ.

ಕಾಲ – ಕ್ರಿ.ಶ. ೧೧ ನೇ ಶತಮಾನ

ವಸ್ತು – ಕ್ಲೋರೈಟಿಕ್‌ಸಿಸ್ಟ

ಅಳತೆ – ೮೪ ಸೆಂ.ಮೀ ಎತ್ತರ ೪೬ ಸೆಂ.ಮೀ ಅಗಲ

ಈ ಶಿಲ್ಪದ ಬಲಗಡೆಯ ಒಂದು ಕೈಯಲ್ಲಿ ರುದ್ರಾಕ್ಷಿ ಹಿಡಿದು, ಅಭಯ ಮುದ್ರೆಯಲ್ಲಿದೆ. ಇನ್ನೊಂದು ಕೈಯಲ್ಲಿ ತ್ರಿಶೂಲ, ಎಡಗಡೆಯ ಒಂದು ಕೈಯಲ್ಲಿ ಫಲ?

ಇನ್ನೊಂದು ಕೈಯಲ್ಲಿ ಡಮರುಗವಿದೆ. ಪ್ರಭಾವಳಿ ತುದಿಯಲ್ಲಿ ಕೀರ್ತಿಮುಖ ಸುತ್ತಲೂ ನಾಗತೋರಣದ ಅಲಂಕಾರವಿದೆ.

೭. ಹೆಸರು – ತಾಂಡವ ಶಿವ[೩೦]
ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ಉತ್ತರ ದಿಕ್ಕಿನ ಫಲಕಕ್ಕೆ ತಾಗಿದೆ
ಕಾಲ – ೧೧ ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ
ಅಳತೆ – ೮೪ ಸೆಂ.ಮೀ ಎತ್ತರ೧೨ ಸೆಂ.ಮೀ ಅಗಲ

ಈ ಶಿಲ್ಪದ ಬಲಗಡೆಯ ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ತ್ರಿಶೂಲ, ಎಡಗಡೆಯ ಒಂದು ಕೈಯಲ್ಲಿ ಪಾಣಿಪಾತ್ರೆ, ಇನ್ನೊಂದು ಕೈಯಲ್ಲಿ ಡಮರುಗವಿದೆ. ಜಟಾಮಕುಟ ಅಗಲವಾದ ಕಂಠಾಭರಣ, ವರ್ತುಲಾಕಾರದ ಕಿವಿಯೋಲೆ, ಹಾರ, ಕೈಬಳೆ, ಕಾಲ್ಗಡಗ ಧರಿಸಿದ್ದಾನೆ. ಪ್ರಭಾವಳಿಯ ತುದಿಗೆ ಕೀರ್ತಿಮುಖ ಎಡ–ಬಲಭಾಗದಲ್ಲಿ ಸ್ತಂಭವನ್ನೊಳಗೊಂಡ ನಾಗತೋರಣಾಲಂಕೃತವಾಗಿದೆ. ಎಡದಲ್ಲಿ ಅಂಜಲಿ ಮುದ್ರೆಯಲ್ಲಿರುವ ಭಕ್ತ ಮತ್ತು ಬಲಭಾಗದಲ್ಲಿ ಚಾಮರವನ್ನು ಹಿಡಿದ ಸೇವಕನ ಚಿತ್ರಣವಿದೆ.

೮. ಹೆಸರು – ಸಿದ್ದೇಶ್ವರ
ಸ್ಥಳ – ಸಿದ್ದೇಶ್ವರ, ದೇವಾಲಯದ ಗರ್ಭಗೃಹದಲ್ಲಿ
ಕಾಲ – ಕ್ರಿ.ಶ. ೧೫–೧೬ ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ
ಅಳತೆ – ೩೪ ಸೆಂ.ಮೀ ಎತ್ತರ, ೬೫ ಸೆಂ.ಮೀ ಸುತ್ತಳತೆ

ಚೌಕಾಕಾರದ ಪಾಣಿ ಪೀಠದ ಮೇಲೆ ಲಿಂಗವಿದೆ. ಮುಂಭಾಗ ಬ್ರಹ್ಮಸೂತ್ರವಿದೆ.

೯. ಹೆಸರು – ಶಿರಗುಂಜೇಶ್ವರ
ಸ್ಥಳ – ಶಿರಗುಂಜಿ, ಶಿರಗುಂಜೇಶ್ವರ ದೇವಸ್ಥಾನದ ಗರ್ಭಗೃಹದಲ್ಲಿ
ಕಾಲ – ಕ್ರಿ.ಶ. ೧೫–೧೬ ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ
ಅಳತೆ – ೩೨ ಸೆಂ.ಮೀ ಎತ್ತರ ೪೪ ಸೆಂ.ಮೀ ಸುತ್ತಳತೆ

ಸಿಲೆಂಡರಿನ ಆಕಾರದ ಲಿಂಗವಿದೆ. ಲಿಂಗಕ್ಕೆ ಬ್ರಹ್ಮಸೂತ್ರವಿದೆ.

೧೦. ಹೆಸರು – ಶಂಭುಲಿಂಗೇಶ್ವರ
ಸ್ಥಳ – ಮೂರೂರು, ಶಂಭುಲಿಂಗೇಶ್ವರ ದೇವಸ್ಥಾನದ ಗರ್ಭಗೃಹದಲ್ಲಿ
ಕಾಲ – ಕ್ರಿ.ಶ. ೧೫–೧೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೩೫ ಸೆಂ.ಮೀ ಎತ್ತರ ೩೮ ಸೆಂ.ಮೀ ಸುತ್ತಳತೆ

ಗರ್ಭಗೃಹದಲ್ಲಿ ಚೌಕಾಕಾರದ ಪಾಣಿ ಪೀಠದ ಮೇಲೆ ಗೋಲಾಕಾರದ ಶಿವಲಿಂಗವಿದೆ.

೧೧. ಹೆಸರು – ಈಶ್ವರಲಿಂಗ

ಸ್ಥಳ – ಮಿರ್ಜಾನ, ಈಶ್ವರ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ. ೧೫–೧೬ ನೇ ಶತಮಾನ

ವಸು – ಕ್ಲೋರೈಟಿಕ್ ಸಿಸ್ಟ

ಅಳತೆ – ೩೨ ಸೆಂ.ಮೀ ಎತ್ತರ ೬೨ ಸೆಂ.ಮೀ ಸುತ್ತಳತೆ

ಗರ್ಭಗೃಹದಲ್ಲಿ ದೊಡ್ಡದಾದ ಚೌಕಾಕಾರದ ಪೀಠದ ಮೇಲೆ ಆಯಾತಾಕೃತಿಯ ವಿನ್ಯಾಸಗಳುಳ್ಳ ಪೀಠವಿದ್ದು ನಡುವೆ ಗೋಲಾಕಾರದ ಶಿವಲಿಂಗವಿದೆ.

೧೨. ಹೆಸರು – ಮಹಾಲಿಂಗೇಶ್ವರ

ಸ್ಥಳ – ಹಿರೇಗುತ್ತಿ, ಮಹಾಲಿಂಗೇಶ್ವರ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ. ೧೫–೧೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೩೫ ಸೆಂ.ಮೀ ಎತ್ತರ ೮೦ ಸೆಂ.ಮೀ ಸುತ್ತಳತೆ

ಚೌಕಾಕಾರದ ಪೀಠದ ಮೇಲೆ ಗೋಲಾಕಾರದ ಲಿಂಗವಿದೆ.

೧೩. ಹೆಸರು – ಶಂಭುಲಿಂಗೇಶ್ವರ

ಸ್ಥಳ – ಕತಗಾಲ, ಶಂಭುಲಿಂಗೇಶ್ವರ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ. ೧೬–೧೭ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೫೪ ಸೆಂ.ಮೀ ಎತ್ತರ ೧೬ ಸೆಂ.ಮೀ ಸುತ್ತಳತೆ

ವರ್ತುಳಾಕಾರವಾಗಿದೆ. ವೃತ್ತಾಕಾರದ ಪಾಣಿಪೀಠದ ಮೇಲೆ ಶಿವ ಲಿಂಗವಿದೆ.

೧೪. ಹೆಸರು – ಬಂಕನಾಥೇಶ್ವರ

ಸ್ಥಳ – ಬಂಕಿಕೊಡ್ಲ ಗ್ರಾಮದ ಉತ್ತರ ದಿಕ್ಕಿನ ಗಡಿ ಭಾಗದಲ್ಲಿರುವ ಬಂಕನಾಥೇಶ್ವರ ದೇವಾಲಯದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ. ೧೬–೧೭ ನೇ ಶತಮಾನ

ವಸ್ತು – ಕ್ಲೋರೈಟಿಕ್‌ಸಿಸ್ಟ

ಅಳತೆ – ೨೨ ಸೆಂ.ಮೀ ಎತ್ತರ ೭೦ ಸೆಂ.ಮೀ ಸುತ್ತಳತೆ

ಚೌಕಾಕಾರದ ಪಾಣಿ ಪೀಠದ ಮೇಲೆ ವರ್ತುಲಾಕಾರದ ಶಿವಲಿಂಗವಿದೆ.

೧೫. ಹೆಸರು – ಈಶ್ವರಲಿಂಗ

ಸ್ಥಳ – ಬಡಾಳ ಗ್ರಾಮದ ಪ್ರಾರಂಭದಲ್ಲಿರುವ ಈಶ್ವರ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ. ೧೯–೨೦ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೨೧ ಸೆಂ.ಮೀ ಎತ್ತರ ೩೬ ಸೆಂ.ಮೀ ಸುತ್ತಳತೆ

ಗರ್ಭಗೃಹದ ಆಯಾತಾಕಾರದ ಯೋನಿ ಪೀಠದ ಮೇಲೆ ಅರ್ಧ ವರ್ತುಳಾಕಾರದ ಶಿವಲಿಂಗವಿದೆ. ಇದರ ಮೇಲೆ ಬ್ರಹ್ಮಸೂತ್ರವಿದೆ.

೧೬. ಹೆಸರು – ಈಶ್ವರಲಿಂಗ

ಸ್ಥಳ – ಅಬ್ಬೊಳ್ಳಿ ಗ್ರಾಮದ ಪ್ರಾರಂಭದಲ್ಲಿ ಇರುವ ಈಶ್ವರ ದೇವಸ್ಥಾನದ ಗರ್ಭಗೃಹ

ಕಾಲ – ಕ್ರಿ.ಶ. ೧೯–೨೦ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೧೬ ಸೆಂ.ಮೀ ಎತ್ತರ ೨೪ ಸೆಂ.ಮೀ ಸುತ್ತಳತೆ

ಚೌಕಾಕಾರದ ಪೀಠದ ಮೇಲೆ ಆಯಾತಾಕಾರದ ಪಾಣಿಪೀಠವಿದೆ. ಅದರ ಮೇಲೆ ಅರ್ಧ ವರ್ತುಲಾಕಾರದ ಲಿಂಗವಿದೆ. ಈ ಲಿಂಗದ ಮುಂಭಾಗದಲ್ಲಿ ಬ್ರಹ್ಮಸೂತ್ರವಿದೆ.

೫.೩.೨ ನಂದಿಶಿಲ್ಪಗಳು

ಶೈವ ಧರ್ಮದಲ್ಲಿ ಶಿವನಿಗೆ ಪ್ರಾತಿನಿಧ್ಯ ನೀಡಿದಂತೆ ಶಿವನ ವಾಹನವಾದ ನಂದಿಗೂ ಅಷ್ಟೇ ಮಹತ್ವವಾದ ಸ್ಥಾನ ನೀಡಲಾಗಿದೆ. ಪುರಾಣಗಳಲ್ಲಿ ನಂದಿಶಿಲ್ಪದ ಬಗ್ಗೆ ಪ್ರಸ್ತಾಪಗಳಿದ್ದು ವಿಷ್ಣುವಿನ ಬಲಭಾಗದಿಂದ ಹುಟ್ಟಿದನೆಂದು, ಶಿವನನ್ನೇ ಹೋಲುವನೆಂದು ಹೇಳಲಾಗಿದೆ. ಹೆಚ್ಚಿನ ಮಟ್ಟಿಗೆ ಶೈವ ದೇವಾಲಯದ ಗರ್ಭಗುಡಿಯ ಎದುರಿಗೆ ನಂದಿ ಶಿಲ್ಪ ಇರುತ್ತದೆ. ಶಿವನಂತೆ ಮೂರು ಕಣ್ಣುಗಳು, ನಾಲ್ಕು ಕೈಗಳಿರುತ್ತವೆ. ಎರಡು ಕೈಗಳಲ್ಲಿ ಪರಶು, ಮೃಗ, ಇನ್ನೆರಡು ಕೈಗಳು ಭಕ್ತಿಯಿಂದ ಅಂಜಲಿ ಮುದ್ರೆಯಲ್ಲಿರುವಂತೆ ತೋರಿಸಲಾಗುತ್ತದೆ.[೩೧] ಆದರೆ ಕುಮಟಾ ತಾಲೂಕಿನಲ್ಲಿ ಇಂತಹ ಶಿಲ್ಪಗಳಿಲ್ಲ. ಅವುಗಳೆಂದರೆ ಗೋಕರ್ಣ, ಸಿದ್ದೇಶ್ವರ, ಹಿರೇಗುತ್ತಿ, ಕಲ್ಲಬ್ಬೆ, ಮಿರ್ಜಾನ, ಮೂರೂರು, ಬಂಕಿಕೊಡ್ಲ, ಬಾಸೊಳ್ಳಿ, ಅಬ್ಬೊಳ್ಳಿ, ಬಡಾಳಗಳಲ್ಲಿ ನಂದಿಶಿಲ್ಪ ದಾಖಲಿಸಿದೆ.

೧. ಹೆಸರು – ನಂದಿ

ಸ್ಥಳ – ಗೋಕರ್ಣ, ಈಶ್ವರ ದೇವಸ್ಥಾನದ ಮುಖಮಂಟಪದ ಮಧ್ಯದಲ್ಲಿ

ಕಾಲ – ಕ್ರಿ.ಶ. ೧೧–೧೨ ನೇ ಶತಮಾನ

ವಸ್ತು – ಕ್ಲೋರೈಟಿಕ್‌ಸಿಸ್ಟ

ಅಳತೆ – ೬೭ ಸೆಂ.ಮೀ ಎತ್ತರ೩೨ ಸೆಂ.ಮೀ ಉದ್ದ

ಕರಿಶಿಲೆಯಿಂದ ಮಾಡಲಾಗಿದೆ. ನಂದಿಯು ಬಲಗಾಲನ್ನು ಮಡಚಿ ಕುಳಿತಿದೆ. ಎಡಗಾಲನ್ನು ಮುಂದೆ ಮಾಡಿದೆ. ಹಣೆಪಟ್ಟಿ ಗೆಜ್ಜೆಸರ, ಗಂಟಾಸರವನ್ನು ಧರಿಸಿದೆ. ಮುಂದೆ ಚಿಕ್ಕದಾದ ಲಿಂಗವಿದೆ.

೨. ಹೆಸರು – ನಂದಿ

ಸ್ಥಳ – ಸಿದ್ದೇಶ್ವರ, ದೇವಸ್ಥಾನದಲ್ಲಿರುವ ನವರಂಗದಲ್ಲಿ

ಕಾಲ – ಕ್ರಿ.ಶ. ೧೨–೧೩ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೬೦.೯೬ ಸೆಂ.ಮೀ ಎತ್ತರ ೮೮.೯ ಸೆಂ.ಮೀ ಉದ್ದ

ಬಲಗಾಲನ್ನು ಮಡಚಿಕೊಂಡು ಎಡಗಾಲನ್ನು ಮುಂದೆ ಹಾಕಿಕೊಂಡು ನಂದಿ ಕುಳಿತಿದೆ. ಘಂಟಾಸರದ ಹಣೆಪಟ್ಟಿ ಇದೆ.

೩. ಹೆಸರು – ನಂದಿ

ಸ್ಥಳ – ಹಿರೇಗುತ್ತಿ ,ಮಹಾಲಿಂಗೇಶ್ವರ ದೇವಸ್ಥಾನದ ನವರಂಗದಲ್ಲಿ

ಕಾಲ – ಕ್ರಿ.ಶ. ೧೫–೧೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೨೮ ಸೆಂ.ಮೀ ಎತ್ತರ ೩೭ ಸೆಂ.ಮೀ ಉದ್ದ

ತಲೆಗೆ ಹಣೆಪಟ್ಟಿ, ಚಿಕ್ಕ ಚಿಕ್ಕ ಗೆಜ್ಜೆಸರವನ್ನು ಒಂದು ದೊಡ್ಡ ಘಂಟಾಸರವನ್ನು ಧರಿಸಿದ್ದು ಮುಂದಿನ ಎರಡು ಕಾಲುಗಳನ್ನು ಮಡಚಿಕೊಂಡು ಕುಳಿತಿದೆ.

೪. ಹೆಸರು – ನಂದಿ

ಸ್ಥಳ – ಕಲ್ಲಬ್ಬೆ, ನಂದಿಕೇಶ್ವರ ದೇವಾಲಯದ ನವರಂಗದಲ್ಲಿ

ಕಾಲ – ಕ್ರಿ.ಶ. ೧೫–೧೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೨೧ ಸೆಂ.ಮೀ ಎತ್ತರ೩೮ ಸೆಂ.ಮೀ ಉದ್ದ

ನಂದಿಯು ಮುಂದಿನ ಎರಡು ಕಾಲುಗಳನ್ನು ಮಡಚಿಕೊಂಡು ಕುಳಿತಿದೆ. ಹಣೆಪಟ್ಟಿಯನ್ನು ಧರಿಸಿದೆ. ಕೊರಳಲ್ಲಿ ಚಿಕ್ಕದಾದ ಹಾಗೂ ದೊಡ್ಡದಾದ ಗಂಟೆಸರವನ್ನು ಧರಿಸಿದೆ.

೫. ಹೆಸರು – ನಂದಿ

ಸ್ಥಳ – ಮಿರ್ಜಾನ, ಈಶ್ವರ ದೇವಸ್ಥಾನದ ನವರಂಗದಲ್ಲಿ

ಕಾಲ – ಕ್ರಿ.ಶ. ೧೫–೧೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೭೧ ಸೆಂ.ಮೀ ಎತ್ತರ೮೮ಳ ಸೆಂ.ಮೀ ಉದ್ದ

ತನ್ನ ಎಡಗಾಲು ಮುಂದೆ ಚಾಚಿಕೊಂಡು ಬಲಗಾಲನ್ನು ಮಡಚಿ ಕುಳಿತಿದೆ. ಇದು ಹಣೆಪಟ್ಟಿ ಗೆಜ್ಜೆಸರ, ಘಂಟಾಸರ, ಮಣಿಸರವನ್ನು ಧರಿಸಿದೆ. ಮುಂದಿನ ಎರಡು ಕಾಲುಗಳ ನಡುವೆ ಚಿಕ್ಕದಾದ ಲಿಂಗವಿದೆ.

೬. ಹೆಸರು – ನಂದಿ

ಸ್ಥಳ – ಮೂರೂರು, ಶಂಭುಲಿಂಗೇಶ್ವರ ದೇವಸ್ಥಾನದ ನವರಂಗದಲ್ಲಿ

ಕಾಲ – ಕ್ರಿ.ಶ. ೧೫–೧೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೨೩ಸೆಂ.ಮೀ ಎತ್ತರ ೪೫ ಸೆಂ.ಮೀ ಉದ್ದ

ಶಿವನನ್ನು ನೋಡುತ್ತ ಕುಳಿತಿದೆ. ಘಂಟಾಸರ, ಗೆಜ್ಜೆಸರವಿದ್ದು ಹಣೆಪಟ್ಟಿಯನ್ನು ಧರಿಸಿದೆ. ಕಿವಿಗೆ ಆಭರಣವನ್ನು ಸಹ ಧರಿಸಿದೆ. ಮುಂದಿನ ಎರಡು ಕಾಲುಗಳನ್ನು ಮಡಚಿಕೊಂಡು ಕುಳಿತಿದೆ.

೭. ಹೆಸರು – ನಂದಿ

ಸ್ಥಳ – ಬಂಕಿಕೊಡ್ಲ ಗ್ರಾಮದ ಉತ್ತರ ದಿಕ್ಕಿನ ಗಡಿಭಾಗದಲ್ಲಿರುವ ಬಂಕನಾಥೇಶ್ವರ ದೇವಾಲಯದ ನವರಂಗದಲ್ಲಿ

ಕಾಲ – ಕ್ರಿ.ಶ. ೧೬–೧೭ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೩೫ ಸೆಂ.ಮೀ ಎತ್ತರ ೪೦ ಸೆಂ.ಮೀ ಉದ್ದ

ಈಶ್ವರಲಿಂಗದ ಮುಂಭಾಗದಲ್ಲಿ ನಂದಿಯ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ನಂದಿಯ ಹಣೆ ಹೂ ಬಳ್ಳಿಗಳಿಂದ ಅಲಂಕೃತವಾಗಿದೆ. ಕುತ್ತಿಗೆಗೆ ಎರಡು ಘಂಟಾಸರವನ್ನು ಧರಿಸಿದೆ. ಮುಂದಿನ ಬಲಗಾಲನ್ನು ಮಡಚಿಕೊಂಡು ಎಡಗಾಲನ್ನು ಹಿಂದಕ್ಕೆ ಚಾಚಿದೆ. ಕುತ್ತಿಗೆಯಲ್ಲಿ ದೊಡ್ಡ ಗಂಟೆ ಇಳಿಬಿಟ್ಟಿದೆ. ಗೆಜ್ಜೆಸರವನ್ನು ಧರಿಸಿ ಸರ್ವಾಲಂಕಾರ ಭೂಷಿತವಾಗಿದೆ.

೮. ಹೆಸರು – ನಂದಿ

ಸ್ಥಳ – ಬಾಸೊಳ್ಳಿ, ಗ್ರಾಮದ ಈಶ್ವರ ದೇವಸ್ಥಾನದ ನವರಂಗದಲ್ಲಿ

ಕಾಲ – ಕ್ರಿ.ಶ. ೧೬–೧೭ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – –

ನವರಂಗದಲ್ಲಿ ನಂದಿ ಮೂರ್ತಿ ಇದೆ. ನಂದಿಯು ಮುಂದಿನ ಎರಡು ಕಾಲನ್ನು ಮಡಚಿಕೊಂಡು ಕುಳಿತಿದೆ. ಹಣೆಗೆ ಹಣೆಪಟ್ಟಿ ಇದೆ. ಮಣಿಸರ, ಗಂಟಾಸರ, ಗೆಜ್ಜೆಸರವನ್ನು ಧರಿಸಿದೆ.

೯. ಹೆಸರು – ನಂದಿ

ಸ್ಥಳ – ಅಬೊಳ್ಳಿ, ಗ್ರಾಮದ ಪ್ರಾರಂಭದಲ್ಲಿರುವ ಈಶ್ವರ ದೇವಸ್ಥಾನದ ನವರಂಗದಲ್ಲಿ

ಕಾಲ – ಕ್ರಿ.ಶ. ೧೯–೨೦ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೨೩ ಸೆಂ.ಮೀ ಎತ್ತರ ೩೧ ಸೆಂ.ಮೀ ಉದ್ದ

ಮುಂದಿನ ಎರಡು ಕಾಲನ್ನು ಮಡಚಿಕೊಂಡು ಕುಳಿತಿದೆ. ಗೆಜ್ಜೆಸರ, ಗಂಟೆಸರವನ್ನು ಧರಿಸಿದೆ. ಹಣೆಪಟ್ಟಿ ಇದೆ.

೧೦. ಹೆಸರು – ನಂದಿ

ಸ್ಥಳ – ಬಡಾಳ, ಗ್ರಾಮದ ಪ್ರಾರಂಭದಲ್ಲಿರುವ ಈಶ್ವರ ದೇವಸ್ಥಾನದ ನವರಂಗದಲ್ಲಿ

ಕಾಲ – ಕ್ರಿ.ಶ. ೧೯–೨೦ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೩೪ ಸೆಂ.ಮೀ ಎತ್ತರ ೪೧ ಸೆಂ.ಮೀ ಉದ್ದ

ಮುಂದಿನ ಎರಡು ಕಾಲನ್ನು ಮಡಚಿಕೊಂಡು ಕುಳಿತಿದೆ. ಕೊರಳಲ್ಲಿ ಗೆಜ್ಜೆಸರ, ಗಂಟೆಸರವನ್ನು ಧರಿಸಿದೆ. ಕಾಲಲ್ಲಿಯೂ ಗೆಜ್ಜೆಸರವನ್ನು ಧರಿಸಿದೆ.

೫.೩.೩ ಭೈರವ ಶಿಲ್ಪಗಳು

ಶಿವಪುರಾಣದ ಪ್ರಕಾರ ಭೈರವನೆಂದರೆ ಭೂತ, ಪ್ರೇತ, ಪಿಶಾಚಿಗಳನ್ನು ಹೊಡೆದೊಡಿಸುವನೆಂದು ನಂಬಿಕೆ ಇದೆ. ಕೈಯಲ್ಲಿ ಕಪಾಲ ಹಿಡಿದು ದಂಡಪಾಣಿಯಾಗಿ, ಹಾವನ್ನು ಯಜ್ಞೋಪವೀತವಾಗಿ ಧರಿಸಿ ಯಾಗವನ್ನು ನಾಶಪಡಿಸುವ ಈತನನ್ನು ಕ್ಷೇತ್ರಪಾಲನೆಂದು ಕರೆಯುತ್ತಾರೆ. ಶಾರದಾತಿಲಕ ಕೃತಿಯಲ್ಲಿ ಸಾತ್ವಿಕ, ರಾಜಸಿಕ, ಮತ್ತು ತಾಮಸಿಕ ಪ್ರಕಾರಗಳಿದ್ದು, ಸಾತ್ವಿಕ ರೂಪದಲ್ಲಿ ಭೈರವನು ದ್ವಿಭುಜನಾಗಿ, ಬೆತ್ತಲೆಯಾಗಿ, ಹಸನ್ಮುಖಿಯಾಗಿದ್ದಾನೆ. ಈತನೊಂದಿಗೆ ನಾಯಿ ಇರುತ್ತದೆ.ರಾಜಸಿಕರೂಪದಲ್ಲಿ ನಾಲ್ಕು ಕೈಗಳನ್ನು, ತಾಮಸಿಕ ರೂಪದಲ್ಲಿ ಎಂಟು ಕೈಗಳನ್ನು ಹೊಂದಿದ್ದು, ಕೊರಳಲ್ಲಿ ರುಂಡಮಾಲೆ ಇದೆ. ಭೈರವ ಶಿಲ್ಪಗಳಲ್ಲಿ ಅನೇಕ ಪ್ರಕಾರಗಳಿವೆ.ಕಾಲಭೈರವ, ಉಗ್ರಭೈರವ, ಭೀಮರೂಪಭೈರವ, ತ್ರಿಪುರಾಂತಕಭೈರವ, ಪ್ರಮುಖವಾಗಿವೆ.[೨] ಪ್ರಸ್ತುತ ಕುಮಟಾ ತಾಲೂಕಿನಲ್ಲಿರುವ ೨ ಭೈರವ ಶಿಲ್ಪಗಳನ್ನು ಇಲ್ಲಿ ದಾಖಲಿಸಲಾಗಿದೆ.

೧. ಹೆಸರು – ಭೈರವ[೩೩]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ದಕ್ಷಿಣ ದಿಕ್ಕಿನ ಫಲಕಕ್ಕೆ ತಾಗಿದೆ.

ಕಾಲ – ಕ್ರಿ.ಶ. ೧೧ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೮೪ ಸೆಂ.ಮೀ ಎತ್ತರ ೪೧ ಸೆಂ.ಮೀ ಅಗಲ

ಶಿಲ್ಪ ಬೆತ್ತಲೆಯಾಗಿದ್ದು ಬಲಗೈಯಲ್ಲಿ ತ್ರಿಶೂಲ, ಕೆಳಗಿನ ಎಡಗೈಯಲ್ಲಿ ರುಂಡ (?) ಇದೆ. ಕರಂಡ ಮಕುಟ, ಅಗಲವಾದ ಕಂಠಾಭರಣ, ಕೈಬಳೆ, ಕಾಲ್ಗಡಗ, ರುಂಡಮಾಲೆ ಧರಿಸಿದ್ದಾನೆ. ಬಲಭಾಗದಲ್ಲಿ ಮೃದಂಗ ನುಡಿಸುತ್ತಿರುವಂತಿದೆ. ಪ್ರಭಾವಳಿಯ ತುದಿಯಲ್ಲಿ ಕೀರ್ತಿ ಮುಖವಿದೆ. ಪ್ರಭಾವಳಿ ನಾಗತೋರಣಾಲಂಕೃತವಾಗಿದೆ.

೨. ಹೆಸರು – ಕಾಲಭೈರವ

ಸ್ಥಳ – ಗೋಕರ್ಣ, ಕಾಲಭೈರವ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ. ೧೫–೧೬ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೫೪ಸೆಂ.ಮೀ ಎತ್ತರ ೩೮ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಮೂರ್ತಿಯು ಉಗ್ರಮುಖ ಭಾವವನ್ನು ಹೊಂದಿದೆ. ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ರಕ್ತ ಪಾತ್ರೆಯನ್ನು ಹಿಡಿದಿದ್ದಾನೆ. ಕಿರೀಟ ಮಕುಟ ಕಂಠಿಹಾರ ತೋಳುಬಂದಿ, ಉದರಬಂಧ, ಕಟಿಸೂತ್ರ, ರುಂಡಮಾಲೆ ಧರಿಸಿದ್ದಾನೆ. ಹಿಂದೆ ಕೀರ್ತಿಮುಖ ಪ್ರಭಾವಳಿ ಇದೆ.

೫.೩.೪ ವೀರಭದ್ರ ಶಿಲ್ಪಗಳು

ಶಿವನ ಉಗ್ರ ರೂಪವೇ ವೀರಭದ್ರ. ಒಮ್ಮೆ ದಕ್ಷ ಬ್ರಹ್ಮನು ಯಜ್ಞವನ್ನು ಮಾಡಬೇಕೆಂದು ನಿರ್ಧರಿಸಿ ಯಜ್ಞಕ್ಕೆ ಮಗಳು ದಾಕ್ಷಾಯಣಿಯನ್ನು ಹಾಗೂ ಅಳಿಯ ಶಿವನನ್ನು ಆಹ್ವಾನಿಸದೇ ಉಳಿದ ಎಲ್ಲಾ ಅಳಿಯಂದಿರನ್ನು, ದೇವದೇವತೆಯರನ್ನು ಆಹ್ವಾನಿಸಿದನು. ದಾಕ್ಷಾಯಣಿಯು ತನ್ನ ತಂದೆಯು ಯಜ್ಞಕ್ಕೆ ಕರೆಯದಿದ್ದರೂ ಕೂಡ ಪರಶಿವನನ್ನು ಒಪ್ಪಿಸಿ ಯಜ್ಞಕ್ಕೆ ಹೋದಳು. ಆಗ ತಂದೆಯ ವರ್ತನೆಯಿಂದ ಮನನೊಂದು ದಾಕ್ಷಾಯಣಿ ಅಲ್ಲಿ ನಡೆಯುವ ಯಜ್ಞಕುಂಡಕ್ಕೆ ಹಾರಿ ಪ್ರಾಣಬಿಟ್ಟಳು. ಇದರಿಂದ ಕೋಪಗೊಂಡ ಶಿವ ಅಲ್ಲಿಗೆ ಬಂದು ತನ್ನ ಜಡೆಯನ್ನು ನೆಲಕ್ಕೆ ಅಪ್ಪಳಿಸಿದಾಗವೀರಭದ್ರ ಹುಟ್ಟಿದನು. ಇದರಿಂದ ಶಿವನು ದಕ್ಷಬ್ರಹ್ಮನು ಮಾಡಲು ಆರಂಭಿಸಿದ ಯಜ್ಞವನ್ನು ಹಾಳುಮಾಡಿ ದಕ್ಷನ ಶಿರಚ್ಛೇದನ ಮಾಡಿದನು. ದಕ್ಷನ ಪತ್ನಿ ವೀರಭದ್ರನಿಗೆ ತನ್ನ ಪತಿಯನ್ನು ಬದುಕಿಸುವಂತೆ ಕೇಳಿಕೊಂಡಾಗ ಅಲ್ಲಿಯೇ ಇದ್ದ ಟಗರಿನ ಮುಖವೊಂದನ್ನು ದಕ್ಷನ ಶರೀರಕ್ಕೆ ಸೇರಿಸಿ ದಕ್ಷನನ್ನು ಬದುಕಿಸುತ್ತಾನೆ.[೩೪] ವೀರಭದ್ರ ೩ ಕಣ್ಣುಗಳಿರುವ ಭೀಕರ

ಮುಖವುಳ್ಳವನಾಗಿರುವಂತೆ ತೋರಿಸಲಾಗುತ್ತದೆ. ಬಿಲ್ಲು, ಬಾಣ, ಗಧೆ, ಖಡ್ಗ, ಕೊರಳಲ್ಲಿ ರುಂಡಮಾಲೆ, ಹಾವನ್ನು ಯಜ್ಞೋಪವೀತವಾಗಿ ಧರಿಸಿದ್ದಾನೆ. ಕಾಲಿಗೆ ಪಾದರಕ್ಷೆಯನ್ನು ಧರಿಸಿರುತ್ತಾನೆ. ವೀರಭದ್ರನು ವೀರಾಸನ ಇಲ್ಲವೇ ಸಮಭಂಗಿಯಲ್ಲಿರುತ್ತಾನೆ. ಪಾರ್ಶ್ವದಲ್ಲಿ ದಕ್ಷಬ್ರಹ್ಮ, ಮತ್ತು ಆತನ ಪತ್ನಿ ವೀರಾಣಿ ಅಂಜಲಿಮುದ್ರೆಯಲ್ಲಿ ನಿಂತಿರುತ್ತಾರೆ. ಪ್ರಸ್ತುತ ಕುಮಟಾ ತಾಲೂಕಿನಲ್ಲಿರುವ ಒಂದೇ ಒಂದು ವೀರಭದ್ರ ಶಿಲ್ಪವನ್ನು ಇಲ್ಲಿ ದಾಖಲಿಸಲಾಗಿದೆ.

೧. ಹೆಸರು – ವೀರಭದ್ರ
ಸ್ಥಳ – ಗೋಕರ್ಣ, ಈಶ್ವರ ದೇವಾಲಯದಹಿಂಭಾಗ ಇರುವ ವೀರಭದ್ರ ದೇವಸ್ಥಾನದ ಗರ್ಭಗೃಹದಲ್ಲಿ
ಕಾಲ – ಕ್ರಿ. ಶ. ೧೦ ನೇ ಶತಮಾನ
ವಸ್ತು – ಕ್ಲೋರೈಟಿಕ್ ಸಿಸ್ಟ
ಅಳತೆ – ೧೧೦ ಸೆಂ.ಮೀ ಎತ್ತರ ೬೨ ಸೆಂ.ಮೀ ಅಗಲ

ವೀರಾಸನ ಭಂಗಿಯಲ್ಲಿರುವ ಈ ಶಿಲ್ಪವು ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಗುರಾಣಿ, ಕೊರಳಲ್ಲಿ ರುಂಡಮಾಲೆ, ಹಾವನ್ನು ಯಜ್ಞೋಪವೀತವಾಗಿ ಮತ್ತು ಕಾಲಲ್ಲಿ ಪಾದರಕ್ಷೆ ಇದೆ. ಮುಖಚರ್ಯೆ ಉಗ್ರರೂಪವಾಗಿದೆ. ಕೀರಿಟ ಮಕುಟ, ಮತ್ತು ಕರ್ಣಕುಂಡಲಗಳನ್ನು ಧರಿಸಿದೆ. ಮೇಲೆ ಸೂರ್ಯ ಮತ್ತು ಚಂದ್ರರ ಸಂಕೇತ ಇರುವುದು ಸಾಮಾನ್ಯ ಲಕ್ಷಣಗಳಾಗಿವೆ.

೫.೪ ಶಾಕ್ತ ಮೂರ್ತಿ ಶಿಲ್ಪಗಳು

೫.೪.೧ ಪೀಠಿಕೆ

ಜನಸಾಮಾನ್ಯರಲ್ಲಿ ಬೇರುಬಿಟ್ಟ ಪಂಥ. ಪ್ರಾಚೀನ ಸಿಂಧೂನಾಗರೀಕತೆಯಲ್ಲಿ ಮಾತೃದೇವತಾಆರಾಧನೆ ಪ್ರಚಲಿತವಿದ್ದ ಬಗ್ಗೆ ಅನೇಕ ಕುರುಹುಗಳು ದೊರೆತಿವೆ. ಈಕೆ ಜಗತ್ತನ್ನು ಸೃಷ್ಟಿಸಬೇಕೆಂಬ ಬಯಕೆಯ ಮುನ್ನ ಇವಳು ಪಕೃತಿಯಲ್ಲಿ ತಾನೊಬ್ಬಳೇ ಅವ್ಯಕ್ತ ಸ್ವರೂಪದಲ್ಲಿದ್ದಳು. ತನ್ನ ಶರೀರದಿಂದಲೇ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸೃಷ್ಟಿಸಿದಳೆಂಬುದು ಪ್ರತೀತಿ.

ಸೃಷ್ಟಿಕರ್ತ ಬ್ರಹ್ಮ, ಸ್ಥಿತಕರ್ತ ವಿಷ್ಣು, ಲಯಕರ್ತ ಶಿವ, ಐಶ್ವರ್ಯ ನೀಡಲು ಲಕ್ಷ್ಮಿ, ವಿದ್ಯೆ ನೀಡಲು ಸರಸ್ವತಿ, ವಧಿಸಲು ದುರ್ಗಿ, ಐಶ್ವರ್ಯ ನಾಶಮಾಡಲು ಶಕ್ತಿ ಜ್ಯೇಷ್ಠಾದೇವಿಗಳಾಗುವಳೆಂದು ಶಾಸ್ತ್ರಗ್ರಂಥಗಳು ತಿಳಿಸುತ್ತವೆ. ಶಿವ ಮತ್ತು ವಿಷ್ಣುವಿಗೂ ಹಲವಾರು ಅವತಾರಗಳಿರುವಂತೆ ಶಕ್ತಿಗೂ ಹಲವಾರು ಅವತಾರಗಳಿವೆ. ಕರ್ನಾಟಕದಲ್ಲಿ ಶಕ್ತಿಯ ಅನೇಕ ರೂಪಗಳು ಕ್ರಿ. ಶ ೬ ನೇ ಶತಮಾನದಿಂದ ಕಾಣಿಸಿಕೊಂಡವು. ಇಂದ್ರಾಣಿ, ವೈಷ್ಣವಿ, ಕಾರ್ತಿಕ, ವರಾಹಿ, ಬ್ರಾಹ್ಮಿಣಿ, ನರಸಿಂಹ, ರೌದ್ರಿ, ಮಹೇಶ್ವರಿ ಪ್ರಧಾನ ೯ ದೇವತೆಗಳು

ಶಾಕ್ತ ದೇವತೆಗಳು ಎಂದು ಕರೆಯುತ್ತಾರೆ. ಈ ದೇವತೆಗಳ ಆಯುಧ-ಚಾವಟಿ, ಭರ್ಜಿ, ಈಟಿ, ಶಕ್ತಿ ಬಾಣ, ಕತ್ತಿ, ಧ್ವಜ, ದಂಡ, ಮುಂತಾದವುಗಳಾಗಿವೆ. ಈ ಶಕ್ತಿ ದೇವತೆಗಳಲ್ಲಿ ರೌದ್ರಿ ಹಾಗೂ ಮಹೇಶ್ವರಿ ದೇವತೆಗಳನ್ನು ಮುಂದೆ ಅಂಬಾಭವಾನಿ ಕಾಳಿ, ಚಂಡಿ, ದುರ್ಗಿ, ಮಹಿಷಮರ್ಧಿನಿ ಹೆಸರುಗಳಿಂದ ಕರೆಯಲಾಯಿತು.

ದೇವಿಯ ಉಗಮದ ಬಗ್ಗೆ ಹಲವಾರು ಐತಿಹ್ಯವಿದ್ದು ದಾಕ್ಷಾಯಣಿ ತಂದೆಯಾದ ದಕ್ಷ ಬ್ರಹ್ಮನು ತನ್ನ ಅಳಿಯ ಶಿವ, ಮಗಳು ದಾಕ್ಷಾಯಣಿಗೆ ಆಹ್ವಾನಿಸದೇ ಯಜ್ಞವನ್ನು ಕೈಗೊಂಡನು. ಆದರೆ ಆ ಯಜ್ಞಮಂಟಪಕ್ಕೆ ಮಗಳು ಹೋದಾಗ ದಕ್ಷನು ಅವಳನ್ನು ಅವಮಾನಿಸುತ್ತಾನೆ. ಕೂಡಲೇ ಅವಳು ಯಜ್ಞ ಕುಂಡದಲ್ಲಿ ಬಿದ್ದು ಮರಣ ಹೊಂದಿದಳು. ಆಗ ಇದನ್ನು ತಿಳಿದ ಶಿವನು ತನ್ನ ಪತ್ನಿಯ ಶವವನ್ನು ಹೊತ್ತುಕೊಂಡು ಹೋಗುತ್ತಿದ್ದಾಗ ವಿಷ್ಣು ಅವನನ್ನು ಸಮಾದಾನ ಪಡಿಸಲು ಆ ಶವವನ್ನು ಹೊಕ್ಕು ಅದನ್ನು ತುಂಡರಿಸಲು ಪ್ರಾರಂಭಿಸಿದನು. ಹೀಗೆ ತುಂಡರಿಸಲ್ಪಟ್ಟ ದೇಹದ ಭಾಗಗಳು ಬಿದ್ದ ಸ್ಥಳಗಳು ೧೦೮ ಶಕ್ತಿಪೀಠಗಳಾಗಿದುದರ ಬಗ್ಗೆ ಶಾಸ್ತ್ರಗಳಲ್ಲಿ ಉಲ್ಲೇಖಿತವಾಗಿದೆ.[೬೫]

ಶಕ್ತಿ ಹಲವಾರು ಅವತಾರಗಳಲ್ಲಿ ಪಾರ್ವತಿ, ಸರಸ್ವತಿ, ಲಕ್ಷ್ಮಿ, ದುರ್ಗೆ, ಮಹಿಷಾಸುರಮರ್ದಿನಿ ಇತರೆ ವಿವಿಧ ರೀತಿಯ ಹೆಸರುಗಳಿಂದ ಪೂಜಿಸಲಾಗುತ್ತದೆ.ಇಲ್ಲಿ ಪ್ರಾಚೀನ ಶಾಕ್ತಶಿಲ್ಪಗಳಿವೆ. ಗೋಕರ್ಣದ ಮಹಾಬಲೇಶ್ವರ ದೇವಾಲಯದ ಗರ್ಭಗೃಹದ ಹೊರಗೆ ಎಡಭಾಗದಲ್ಲಿರುವ ಮಹಿಷಾಸುರಮರ್ದಿನಿ ಶಿಲ್ಪ, ಕ್ರಿ.ಶ ೪ರಿಂದ ೫ನೇ ಶತಮಾನಕ್ಕೆ ಸೇರಿದೆ. ಉಪ್ಪಿನಗಣಪತಿ ದೇವಸ್ಥಾನದ ಗರ್ಭಗೃಹದ ಹೊರಗೆ ಎಡಭಾಗದಲ್ಲಿರುವ ಮಹಿಷಾಸುರಮರ್ದಿನಿ ಶಿಲ್ಪವು ೫ರಿಂದ ೬ನೇ ಶತಮಾನಕ್ಕೆ ಸೇರಿದ್ದಾಗಿದೆ. ಪ್ರಸ್ತುತ ಇಲ್ಲಿನ ಶಾಕ್ತಶಿಲ್ಪಗಳ ಪ್ರತಿಮಾಲಕ್ಷಣಗಳನ್ನು ಪ್ರಸ್ತಾಪಿಸಲಾಗಿದೆ.

೫.೪.೨ ಪಾರ್ವತಿ

ಶಿವನ ಪತ್ನಿ .ಅವಳನ್ನು ಪಾರ್ವತಿ, ಪರಮೇಶ್ವರಿ, ಗಿರಿಜಾ, ದಾಕ್ಷಾಯಿಣಿ, ಉಮಾ, ಅಪರ್ಣಾ, ಗೌರಿ, ಅಂಬಿಕಾ ಹೆಸರುಗಳಿಂದ ಕರೆಯಲಾಗುತ್ತಿದೆ. ಉತ್ತರಕಾಮಿಕಾಗಮದ ಪ್ರಕಾರ ಪಾರ್ವತಿಗೆ ನಾಲ್ಕು ಕೈಗಳು, ಮೂರು ಕಣ್ಣುಗಳಿರುತ್ತವೆ. ಮೇಲಿನ ಎರಡು ಕೈಗಳಲ್ಲಿ ಪಾಶ ಮತ್ತು ಅಂಕುಶಗಳನ್ನು, ಹಿಡಿದು ಕೆಳಗಿನ ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿರುತ್ತವೆ.[೬೬]

೧. ಹೆಸರು – ಪಾರ್ವತಿ
ಸ್ಥಳ – ಗೋಕರ್ಣ, ಪಾರ್ವತಿ ದೇವಾಲಯದ ಗರ್ಭಗೃಹದಲ್ಲಿದೆ.
ಕಾಲ – ಕ್ರಿ. ಶ. ೫–೭ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೬೪ ಸೆಂ.ಮೀ ಎತ್ತರ ೩೮ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ದ್ವಿಭುಜಧಾರಿಯಾಗಿದ್ದಾಳೆ. ಕೈಯಲ್ಲಿ ಹೂವಿನ ಹಾರವನ್ನು ಹಿಡಿದುಕೊಂಡಿದ್ದು ಎರಡು ಕೈಗಳು ಅಭಯ ಮುದ್ರೆಯಲ್ಲಿದೆ. ಮೂರ್ತಿಶಿಲ್ಪವನ್ನು ಮಕುಟಧಾರೆಯಾಗಿ ವಸ್ತ್ರಾಭರಣಗಳಿಂದ ಶೃಂಗರಿಸಲಾಗಿದೆ. ಶಿಲ್ಪದ ಅಕ್ಕ ಪಕ್ಕ ಎರಡು ಸ್ತಂಭ ಈ ಸ್ತಂಭವನ್ನು ಸಹ ಪಟ್ಟಿಕೆಗಳಿಂದ ಅಲಂಕೃತಗೊಳಿಸಲಾಗಿದೆ. ಎರಡು ಪಟ್ಟಿಯ ಮೇಲೆ ಪ್ರಭಾವಳಿಯನ್ನು ನಿರ್ಮಿಸಲಾಗಿದ್ದು ಪ್ರಭಾವಳಿಯೂ ಸಿಂಹಯಾಳಿಗಳಿಂದ ಮತ್ತು ಬಳ್ಳಿಗಳಿಂದ ಅಲಂಕೃತಗೊಳಿಸಲಾಗಿದೆ.

೨. ಹೆಸರು – ಗಂಗಾಮಾತೆ

ಸ್ಥಳ – ನಾಡುಮಾಸ್ಕೇರಿ, ಗಂಗಾ ದೇವಸ್ಥಾನದ ಗರ್ಭಗೃಹದಲ್ಲಿದೆ.

ಕಾಲ – ಕ್ರಿ. ಶ. ೧೧ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೪೮ ಸೆಂ.ಮೀ ಎತ್ತರ ೩೬ ಸೆಂ.ಮೀ ಅಗಲ

ಸುಖಾಸನ ಭಂಗಿಯಲ್ಲಿರುವ ಈ ಮೂರ್ತಿಶಿಲ್ಪ ಚತುರ್ಭುಜಳಾಗಿದ್ದಾಳೆ. ಬಲಗಡೆಯ ಕೈಯಲ್ಲಿ ಭತ್ತದ ತೆನೆ, ಇನ್ನೊಂದು ಕೈ ವರದ ಮುದ್ರೆಯಲ್ಲಿದೆ, ಎಡಗಡೆಯ ಒಂದು ಕೈಯಲ್ಲಿ ಫಲ, ಇನ್ನೊಂದು ಕೈಯಲ್ಲಿ ಕೊಡವನ್ನು ಹಿಡಿದಿದ್ದಾಳೆ. ಕಿರೀಟ ಮಕುಟ, ಪತ್ರಕುಂಡಲ, ಕಂಠಹಾರ, ಉದರಬಂಧ, ಕಟಿಸೂತ್ರ, ಪಾದಸರ ಧರಿಸಿದ್ದಾಳೆ. ಶಿಲ್ಪದ ಮೇಲ್ಭಾಗದಲ್ಲಿ ಅಲಂಕೃತ ಕೀರ್ತಿಮುಖವನ್ನೊಳಗೊಂಡ ಪ್ರಭಾವಳಿ ಇದೆ.

೩. ಹೆಸರು – ಶಾಂತಿಕಾ ಪರಮೇಶ್ವರಿ

ಸ್ಥಳ – ಊರಕೇರಿ, ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ. ಶ. ೧೨ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೩೯ ಸೆಂ.ಮೀ ಎತ್ತರ ೨೧ ಸೆಂ.ಮೀ ಅಗಲ

ಪದ್ಮಾಸನ ಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಒಂದು ಕೈಯಲ್ಲಿ ಪದ್ಮ, ಇನ್ನೊಂದು ಕೈಯಲ್ಲಿ ಪರಶು, ಎಡಗಡೆಯ ಒಂದು ಕೈಯಲ್ಲಿ ಫಲ, ಇನ್ನೊಂದು ಕೈಯಲ್ಲಿ ಗಧೆ ಇದೆ. ಕೀರಿಟ ಮುಕುಟ, ವೈಜಯಂತಿ ಹಾರ, ಪದಕ, ಕೈಗಡಗ, ಕಾಲ್ಗಡಗ, ಕರ್ಣಕುಂಡಲ, ಧರಿಸಿದ್ದಾಳೆ. ತಲೆಯ ಕುದಲು ಕುತ್ತಿಗೆಯ ಮೇಲೆ ಇಳಿಬಿಟ್ಟಂತೆ ತೋರಿಸಿದೆ.

೪. ಹೆಸರು – ಕೋಟೇಶ್ವರಿ

ಸ್ಥಳ – ನುಶಿಕೋಟೆ, ಕೋಟೇಶ್ವರಿ ದೇವಸ್ಥಾನದ ಗರ್ಭಗೃಹ

ಕಾಲ – ಕ್ರಿ. ಶ. ೧೫ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೩೫ ಸೆಂ.ಮೀ ಎತ್ತರ ೧೮ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿಗೆ ಎರಡು ಕೈಗಳಿವೆ. ಸ್ಥಳೀಯಪ್ರಭಾವ ಕಾಣುತ್ತದೆ. ದೇವತೆ ಉಗ್ರ ರೂಪದಲ್ಲಿದ್ದು ಸ್ಥಳೀಯ ಶೈಲಿಯ ವಿನ್ಯಾಸ ಆಭರಣಗಳಿಂದ ಅಲಂಕಾರ ಮಾಡಲಾಗಿದೆ. ಪ್ರಭಾವಳಿಯ ಎರಡು ಕಡೆ ನಾಗಗಳಿವೆ.

೫. ಹೆಸರು – ನಾರಾಯಣಿ

ಸ್ಥಳ – ಕುಮಟಾ, ನಾರಾಯಣಿ ದೇವಸ್ಥಾನದ ಗರ್ಭಗೃಹದಲ್ಲಿದೆ

ಕಾಲ – ಕ್ರಿ.ಶ ೧೫–೧೬ ನೇ ಶತಮಾನ

ವಸ್ತು – ಹಿತ್ತಾಳೆ

ಅಳತೆ – ೩೦ ಸೆಂ.ಮೀ ಎತ್ತರ ೧೮ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿಶಿಲ್ಪ ಚತುರ್ಭುಜಳಾಗಿದ್ದಾಳೆ. ಬಲಗಡೆಯ ಕೈಯಲ್ಲಿ ಡಮರು, ಇನ್ನೊಂದು ಕೈಯಲ್ಲಿ ಖಡ್ಗ, ಎಡಗಡೆಯ ಕೈಯಲ್ಲಿ ತ್ರಿಶೂಲ, ಇನ್ನೊಂದು ಕೈಯಲ್ಲಿ ಕಲಶ ಇದೆ. ಕಿರೀಟಮಕುಟ, ಕಿವಿಯೋಲೆ, ಕೈಬಳೆ, ತೋಳಬಂದಿ, ಕಂಠಹಾರ ಮತ್ತು ಸೀರೆಯನ್ನುಂಟುಕೊಂಡು ಅಲಂಕೃತಗೊಂಡಿದ್ದಾಳೆ. ಹಿಂಭಾಗದ ಸುತ್ತಲೂ ಪ್ರಭಾವಳಿ ಇದೆ.

೬. ಹೆಸರು – ಪಾರ್ವತಿ (ಶಾಂತಿಕಾಪರಮೇಶ್ವರಿ)

ಸ್ಥಳ – ಕೂಳಿಹಕ್ಕಲು, (ಕೂಜಳ್ಳಿ) ಶಾಂತಿಕಾಪರಮೇಶ್ವರಿ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ. ಶ. ೧೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೫೭ ಸೆಂ.ಮೀ ಎತ್ತರ ೪೧ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿಗೆ ಎರಡು ಕೈಗಳಿವೆ. ಪಾಣಿ ಪೀಠದ ಮೇಲೆ ನಿಂತುಕೊಂಡಿದೆ. ಬಲಗೈಯಲ್ಲಿ ಆಯುಧವಿದೆ. ಎಡಗೈ ಭಗ್ನಗೊಂಡಿದೆ. ಕಿವಿಯಲ್ಲಿ ರಂಧ್ರಗಳಿದ್ದು ಯಾವುದೇ ಆಭರಣಗಳಿಲ್ಲ. ದೇವಿಯ ವಸ್ತ್ರವು ನೆರಿಗೆಯಿಂದ ಅಲಂಕೃತಗೊಂಡಿದೆ. ದೇವಿಯ ಮೂರ್ತಿಯನ್ನು ಕಮಾನಿನಾಕಾರದ ಪ್ರಭಾವಳಿ ಇದೆ.ಹೂಬಳ್ಳಿಗಳಚಿತ್ತಾರವನ್ನು ಕಾಣಬಹುದು.

೭. ಹೆಸರು – ಪಾರ್ವತಿ

ಸ್ಥಳ – ಗೋಕರ್ಣದ ವೈತರಣಿ, ದೇವಾಲಯದ ಗರ್ಭಗೃಹದಲ್ಲಿದೆ,

ಕಾಲ – ಕ್ರಿ. ಶ. ೧೭ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೭೨ ಸೆಂ.ಮೀ ಎತ್ತರ, ೪೪ ಸೆಂ.ಮೀ ಅಗಲ

ಸುಖಾಸನ ಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜಳಾಗಿದ್ದಾಳೆ. ಆಯತ ಪೀಠ, ಮೂರು ಪಟ್ಟಿಕೆಗಳಿಂದ ಕೂಡಿದ್ದು ಅಲಂಕೃತವಾಗಿದೆ. ಈ ಪೀಠದ ಮೇಲೆ ಶಿವಲಿಂಗವಿದ್ದು, ಶಿವಲಿಂಗದ ಮೇಲೆ ಪಾರ್ವತಿ ಆಸೀನಳಾಗಿದ್ದಾಳೆ. ಬಲಗೈಯಲ್ಲಿ ಶಂಖ, ಎಡಗೈಯಲ್ಲಿ ಡಮರು ಹಿಡಿದುಕೊಂಡಿರುವಳು. ಕೀರಿಟ ಮಕುಟ ಧರಿಸಿರುವುದು ಸಾಮಾನ್ಯ ಲಕ್ಷಣಗಳಾಗಿವೆ.

೮. ಹೆಸರು – ಪಾರ್ವತಿ

ಸ್ಥಳ – ಬಾಡ, ಕಾಂಚಿಕಾ ಪರಮೇಶ್ವರಿ ದೇವಸ್ಥಾನದ ಗರ್ಭಗೃಹ

ಕಾಲ – ಕ್ರಿ. ಶ. ೧೯–೨೦ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೧೩೫ ಸೆಂ.ಮೀ ಎತ್ತರ ೪೫ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಪಾರ್ವತಿ ಚತುರ್ಭುಜಳಾಗಿದ್ದಾಳೆ. ದೇವಿಯ ಬಲಗೈ ಅಭಯ ಮುದ್ರೆಯಲ್ಲಿ, ಇನ್ನೊಂದರಲ್ಲಿ ಡಮರನ್ನು ಹಿಡಿದಿದ್ದಾಳೆ. ಎಡಗೈ ಖಡ್ಗ, ಇನ್ನೊಂದರಲ್ಲಿ ಶೂಲವನ್ನು ಹಿಡಿದಿದ್ದಾಳೆ. ಹುಲಿ ವಾಹನವಿದೆ. ದೇವಿಯು ಕಿರೀಟ ಮಕುಟ, ಪತ್ರಕುಂಡಲ, ಕಂಠಹಾರ, ಉದರಬಂಧ, ಕಟಿಸೂತ್ರ ಧರಿಸಿರಿವುದು ಸಾಮಾನ್ಯ ಲಕ್ಷಣಗಳಾಗಿವೆ.

೯. ಹೆಸರು – ಶಾಂತಿಕಾ ಪರಮೇಶ್ವರಿ

ಸ್ಥಳ – ನಾಡುಮಾಸ್ಕೇರಿ, ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಗರ್ಭಗೃಹ

ಕಾಲ – ಕ್ರಿ. ಶ. ೧೮ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೬೭ಸೆಂ.ಮೀ ಎತ್ತರ ೪೧ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜಳಾಗಿದ್ದಾಳೆ. ಬಲಗಡೆಯ ಕೈಯಲ್ಲಿ ತ್ರಿಶೂಲವನ್ನು, ಇನ್ನೊಂದು ಕೈಯಲ್ಲಿ ಖಡ್ಗವನ್ನು ಹಿಡಿದಿದ್ದಾಳೆ, ಎಡಗಡೆಯ ಕೈಯಲ್ಲಿ ಪಾಣಿಬಟ್ಟಲನ್ನು, ಇನ್ನೊಂದು ಕೈಯಲ್ಲಿ ಶೂಲವನ್ನು ಹಿಡಿದಿದ್ದಾಳೆ. ದೇವಿಯು ಕಿರೀಟ ಮಕುಟಧಾರಿಯಾಗಿದ್ದು, ಪತ್ರಕುಂಡಲ, ರತ್ನಪಟ್ಟಿ, ಕಂಠಹಾರ, ಕಟಿಸೂತ್ರ, ಕಂಕಣ, ಪಾದಸರ ಧರಿಸಿದ್ದಾಳೆ.

೧೦. ಹೆಸರು – ನಾರಾಯಣಿ

ಸ್ಥಳ – ಬಾವಿಕೊಡ್ಲ, ನಾರಾಯಣಿ ದೇವಸ್ಥಾನದ ಗರ್ಭಗೃಹ

ಕಾಲ – ಕ್ರಿ. ಶ. ೧೮–೧೯ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೭೧ ಸೆಂ.ಮೀ ಎತ್ತರ ೩೫ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಧರ್ಮದೇವಿಗೆ ನಾಲ್ಕು ಕೈಗಳಿವೆ. ದೇವಿಯು ತನ್ನ ಬಲಗಡೆಯ ಒಂದು ಕೈಯಲ್ಲಿ ಪುಷ್ಪ ಮಾಲೆಯನ್ನು, ಇನ್ನೊಂದು ಕೈಯಲ್ಲಿ ಚಕ್ರವನ್ನು ಹಿಡಿದಿದ್ದಾಳೆ, ಎಡಗಡೆಯ ಕೈಯಲ್ಲಿ ಶಂಖವನ್ನು, ಇನ್ನೊಂದರಲ್ಲಿ ಗಧೆಯನ್ನು ಹಿಡಿದಿದ್ದಾಳೆ. ಕಿರೀಟ ಮಧ್ಯದಲ್ಲಿ ಚಿಕ್ಕ ನಾಗಪ್ರತಿಮೆ ಇದೆ. ಕಿವಿಗೆ ಪತ್ರ ಕುಂಡಲವನ್ನು ಧರಿಸಿದ್ದಾಳೆ. ಕಾಸಿನಸರ, ಮಣಿಸರ, ಹವಳದಸರ, ಉದರಬಂಧವನ್ನು ಧರಿಸಿದ್ದಾಳೆ. ದೇವಿಯ ಹಿಂದೆ ಶಿಲೆಯಲ್ಲಿ ಮಾಡಿದ ಕೀರ್ತಿಮುಖ ಪ್ರಭಾವಳಿ ಇದೆ.

೧೧. ಹೆಸರು – ನಾರಾಯಣಿ

ಸ್ಥಳ – ಪಡುವಣಿ, ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಗರ್ಭಗೃಹ

ಕಾಲ – ಕ್ರಿ. ಶ. ೧೮ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೬೨ ಸೆಂ.ಮೀ ಎತ್ತರ ೩೭ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜಳಾಗಿದ್ದಾಳೆ. ಬಲಗಡೆಯ ಕೈ ಅಭಯ ಮುದ್ರೆ, ಇನ್ನೊಂದು ಕೈಯಲ್ಲಿ ಶಂಖವನ್ನು ಹಿಡಿದಿದ್ದಾಳೆ, ಎಡಗಡೆಯ ಕೈ ವರದ ಮುದ್ರೆಯಲ್ಲಿದ್ದು. ಇನ್ನೊಂದು ಕೈಯಲ್ಲಿ ಚಕ್ರವನ್ನು ಹಿಡಿದಿದ್ದಾಳೆ. ದೇವಿಯು ಮಂದಸ್ಮಿತ ಮುಖಭಾವವನ್ನು ಹೊಂದಿದ್ದು, ಕಿರೀಟಮಕುಟ, ಮೂಗುತಿ, ಪತ್ರಕುಂಡಲ, ಕಂಠಹಾರ, ಉದರಬಂಧ, ಕಟಿಸೂತ್ರ, ಪಾದಸರ ಧರಿಸಿದ್ದಾಳೆ.

೫.೪.೩ ಸರಸ್ವತಿ

ವಿದ್ಯಾದೇವತೆಯಾದ ಇವಳು ಸಹ ಮಾತ್ರದೇವತೆಯರಲ್ಲಿ ಒಬ್ಬಳು. ಬ್ರಹ್ಮನ ಮಡದಿಯಾದ ಇವಳನ್ನು ವಿದ್ಯಾದೇವಿ ಎಂದೂ ಕರೆಯುತ್ತಾರೆ. ಇವಳಿಗೆ ನೀಲಕಂಠೆ, ಚಂದ್ರಶೇಖರಿ, ತ್ರಿವೇಣಿ, ಪದ್ಮಾಸ್ತನಸ್ಥೆ, ಪುಸ್ತಕಧಾರಣಿ, ಅಕ್ಷಮಾಲಾ ಹೆಸರುಗಳಿಂದಲೂ ಕರೆಯಲಾಗಿದೆ.ಐತಿಹ್ಯದ ಪ್ರಕಾರ ವಿಷ್ಣುವಿಗೆ ಸರಸ್ವತಿ, ಲಕ್ಷ್ಮಿ ಮತ್ತು ಗಂಗಾ ಎಂಬ ಪತ್ನಿಯರಿದ್ದು ವಿಷ್ಣುವಿನ ಪ್ರೀತಿಯನ್ನು ಹೆಚ್ಚಾಗಿ ಪಡೆಯಲು ಗಂಗಾ ಮತ್ತು ಸರಸ್ವತಿಗೆ ಸ್ಪರ್ಧೆ ನಡೆದಾಗ ಲಕ್ಷ್ಮಿ ಅವರ ಜಗಳ ಬಿಡಿಸಲು ಬಂದಾಗ ಸರಸ್ವತಿ ಲಕ್ಷ್ಮಿಗೆ ಗಿಡವಾಗೆಂದು ಶಾಪವಿತ್ತಳು. ಆಗ ಇವರನ್ನು ಸಮದಾನಪಡಿಸಲು ವಿಷ್ಣು ಸರಸ್ವತಿಗೆ ಭೂಲೋಕದಲ್ಲಿ ನದಿಯಾಗಿ ಹುಟ್ಟುವಂತೆ ಹಾಗೂ ಬ್ರಹ್ಮನ ಮಡದಿಯಾಗುವಂತೆ ತಿಳಿಸಿದನು. ಗಂಗೆಗೆ ಭೂಲೋಕದಲ್ಲಿ ನದಿಯಾಗಿ ಹುಟ್ಟುವಂತೆ ಹಾಗೂ ಶಿವನ ಮಡದಿಯಾಗು ಎಂದನು. ಲಕ್ಷ್ಮಿಗೆ ತುಳಸಿ ಗಿಡವಾಗಿಯೂ ತನ್ನ ಪತ್ನಿಯಾಗಿರುವಂತೆ ಹೇಳಿದನು. ಹೀಗೆ ವೈದಿಕ ಯುಗದಲ್ಲಿ ಸರಸ್ವತಿಯ ಉಲ್ಲೇಖಗಳಿವೆ.[೩೬] ಪ್ರಸ್ತುತ ಈ ಭಾಗದಲ್ಲಿರುವ ಸರಸ್ವತಿ ಮೂರ್ತಿಶಿಲ್ಪ ಲಕ್ಷಣಗಳನ್ನು ದಾಖಲಿಸಲಾಗಿದೆ.

ಹೆಸರು – ಸರಸ್ವತಿ[೩೮]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದಗರ್ಭಗೃಹದ ಹೊರಗೆ ಎಡಭಾಗದಲ್ಲಿದೆ.

ಕಾಲ – ಕ್ರಿ. ಶ. ೧೧ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ್

ಅಳತೆ – ೭೮ ಸೆಂ.ಮೀ ಎತ್ತರ ೫೮ ಸೆಂ.ಮೀ ಅಗಲ

ಲಲಿತ ಸವ್ಯಾಸನ(ಪದ್ಮಾಸನ) ಭಂಗಿಯಲ್ಲಿರುವ ಸರಸ್ವತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಒಂದು ಕೈಯಲ್ಲಿ ಕಮಲ ಹಿಡಿದಿದ್ದಾಳೆ. ಇನ್ನೊಂದು ಕೈಯಲ್ಲಿ (?) ಎಡಗಡೆಯ ಕೈ ಅಂಕುಶ, ಇನ್ನೊಂದು ಕೈಯಲ್ಲಿ ಗಧೆ ಹಿಡಿದಿದ್ದಾಳೆ. ಕರಂಡ ಮಕುಟ, ವರ್ತುಲಾಕಾರದ ಕಿವಿಯೋಲೆ,ಕಂಠಹಾರ, ಮತ್ತು ಮೂಗುತಿ ಧರಸಿದ್ದಾಳೆ. ಪ್ರಭಾವಳಿ ನಾಗತೋರಣಾಲಂಕೃತವಾಗಿದ್ದು, ಮೇಲ್ಭಾಗದಲ್ಲಿ ಕೀರ್ತಿಮುಖವಿದೆ.

೫.೪.೪ ಲಕ್ಷ್ಮಿ

ಪುರಾಣಗಳ ಪ್ರಕಾರ ತನ್ನ ಮೊದಲ ಅವತಾರದಲ್ಲಿ ಅವಳು ಭೃಗು ಮತ್ತು ಖ್ಯಾತಿಯ ಮಗಳಾಗಿ ಹುಟ್ಟಿದಳು.[೩೯] ನಂತರ ಸಮುದ್ರ ಮಥನದ ಕಾಲದಲ್ಲಿ ಕ್ಷೀರಸಾಗರದಿಂದ ಹುಟ್ಟಿದಳು. ವಿಷ್ಣು ಅವಳನ್ನು ತನ್ನ ಪತ್ನಿಯಾಗಿ ಮಾಡಿಕೊಂಡನು. ನಂತರ ಲಕ್ಷ್ಮಿ ವಿಷ್ಣುವಿನ ಶಕ್ತಿಯೆಂಬ ಪರಿಕಲ್ಪನೆ ಮೂಡಿತು. ಋಗ್ವೇದದ ಶ್ರೀ ಸೂಕ್ತವು 'ಶ್ರೀ' ಅಥವಾ 'ಲಕ್ಷ್ಮಿ' ಒಂದೇ ಎಂಬುದನ್ನು ತಿಳಿಸುತ್ತದೆ.[೪೦] ವಿಷ್ಣುವಿನೊಂದಿಗೆ ಇವಳನ್ನು ತೋರಿಸುವಾಗ ಎರಡು ಕೈಗಳಿರಬೇಕು. ದೇವಾಲಯದಲ್ಲಿ ಪ್ರತ್ಯೇಕವಾಗಿ ಪೂಜಿಸುವಾಗ ನಾಲ್ಕು ಕೈಗಳಿದ್ದು ಅವುಗಳಲ್ಲಿ ಪದ್ಮ,ಶಂಖ, ಅಮೃತಕಲಶ, ಕೆಲವೊಮ್ಮೆ ಬಿಲ್ವದ ಹಣ್ಣಿಗೆ ಬದಲಾಗಿ ಮಹಾಲಿಂಗ (ಲಿಂಬೆ ಜಾತಿಯ ಒಂದು ಹಣ್ಣು) ಇಕ್ಕೆಲಗಳಲ್ಲಿ ಎರಡು ಆನೆಗಳು ಸೊಂಡಿಲುಗಳಲ್ಲಿ ಕುಂಭಗಳನ್ನು ಹಿಡಿದುಕೊಂಡು ಅಭಿಷೇಕ ಮಾಡುತ್ತಿರುವಂತಿರುತ್ತವೆ. ಇವಳನ್ನು ಮಹಾಲಕ್ಷ್ಮಿ, ಧನಲಕ್ಷ್ಮಿ, ಧಾನ್ಯಲಕ್ಷ್ಮಿ, ಧೈರ್ಯಲಕ್ಷ್ಮಿ, ವೀರಲಕ್ಷ್ಮಿ,ವಿದ್ಯಾಲಕ್ಷ್ಮಿ, ಸಂತಾನಲಕ್ಷ್ಮಿ, ಭಾಗ್ಯಲಕ್ಷ್ಮಿ ಎಂದು ಇವರನ್ನು ಅಷ್ಟಲಕ್ಷ್ಮಿಯರೆಂದು ಪೂಜಾಕಲ್ಪದಲ್ಲಿಯೂ ಕರೆಯುತ್ತಾರೆ.[೪೧] ಗಜಲಕ್ಷ್ಮಿಯನ್ನು ಬಾಗಿಲುಗಳ ಲಲಾಟಬಿಂಬದಲ್ಲಿ ರೂಪಿಸುವುದು ವಾಡಿಕೆ. ಎರಡು ಕೈಗಳಿದ್ದಾಗ ಅವಳನ್ನು ಸಾಮಾನ್ಯ ಲಕ್ಷ್ಮಿ ಅಥವಾ ಇಂದ್ರಲಕ್ಷ್ಮಿಯೆಂದು ಕರೆಯುವರು. ಎರಡು ಕೈಗಳಲ್ಲಿ ಕಮಲ ಹಿಡಿದುಕೊಂಡಿದ್ದು ಇನ್ನೆರಡು ಕೈಗಳಲ್ಲಿ ಅಭಯ ಮುದ್ರೆ ಮತ್ತು ವರದ ಮುದ್ರೆಯಲ್ಲಿದ್ದರೆ ಅವಳನ್ನು ವರಲಕ್ಷ್ಮಿ ಎಂದು ಕರೆಯುವರು. ಪ್ರಸ್ತುತ ಗೋಕರ್ಣದ ವೆಂಕಟರಮಣ ದೇವಾಲಯದಲ್ಲಿಯ ಲಕ್ಷ್ಮಿಯ ಲಕ್ಷಣ ಇಲ್ಲಿ ದಾಖಲಿಸಲಾಗಿದೆ.

ಹೆಸರು – ಲಕ್ಷ್ಮಿ

ಸ್ಥಳ – ಗೋಕರ್ಣ, ವೆಂಕಟ್ರಮಣ ದೇವಸ್ಥಾನದ ಸಭಾಂಗಣದ ಎಡಬದಿಗೆ

ಕಾಲ – ಕ್ರಿ. ಶ. ೧೫–೧೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೬೪ ಸೆಂ.ಮೀ ಎತ್ತರ ೪೧ ಸೆಂ.ಮೀ ಅಗಲ

ಸುಖಾಸನ ಭಂಗಿಯಲ್ಲಿರುವ ಲಕ್ಷ್ಮಿಗೆ ನಾಲ್ಕು ಕೈಗಳಿವೆ. ಬಲಗಡೆಯ ಒಂದು ಕೈ ಅಭಯ ಮುದ್ರೆಯಲ್ಲಿ, ಇನ್ನೊಂದು ಕೈಯಲ್ಲಿ ಶಂಖವನ್ನು ಹಿಡಿದಿದ್ದಾಳೆ, ಎಡಗಡೆಯ ಕೈ ವರದ ಮುದ್ರೆಯಲ್ಲಿ, ಇನ್ನೊಂದು ಕೈಯಲ್ಲಿ ಚಕ್ರವನ್ನು ಹಿಡಿದಿದ್ದು, ಸರ್ವಾಲಂಕಾರ ಭೂಷಿತಳಾಗಿದ್ದಾಳೆ.

೫.೪.೫ ದುರ್ಗೆ

ಸುಪ್ರಭೇದಾಗಮವು ಆದಿಶಕ್ತಿಯು ದುರ್ಗೆಯಾಗಿ ಮತ್ತು ವಿಷ್ಣುವಿನ ತಂಗಿಯಾಗಿ ಆವಿರ್ಭವಿಸಿದ್ದಾಳೆಂದು ಹೇಳುತ್ತದೆ. ಇದರ ಪ್ರಕಾರ ಆಕೆಗೆ ನಾಲ್ಕು ಅಥವಾ ಎಂಟು ಕೈಗಳಿರಬಹುದು. ಎಂಟು ಕೈಗಳಿದ್ದಾಗ ಅವುಗಳ ಕೈಗಳಲ್ಲಿ ಶಂಖ, ಚಕ್ರ, ಶೂಲ, ಡಮರು, ಬಾಣ, ಖಡ್ಗ, ಖೇತಕ ಮತ್ತು ಪಾಶ ಇವುಗಳನ್ನು ಹಿಡಿದಿರುತ್ತಾಳೆ.[೪೨] ಪ್ರಸ್ತುತ ಈ ಭಾಗದ ಶಕ್ತಿ ಮೂರ್ತಿಗಳ ವೈಶಿಷ್ಟ್ಯತೆ ದಾಖಲಿಸಲಾಗಿದೆ.

೧. ಹೆಸರು – ಭದ್ರಕಾಳಿ

ಸ್ಥಳ – ಗೋಕರ್ಣ, ಭದ್ರಕಾಳಿ ದೇವಾಲಯದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೫–೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೧೧೫ ಸೆಂ.ಮೀ ಎತ್ತರ ೩೭ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜಧಾರಿಯಾಗಿದ್ದಾಳೆ. ಬಲಗಡೆಯ ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ತ್ರಿಶೂಲ, ಎಡಗಡೆಯ ಒಂದು ಕೈಯಲ್ಲಿ ಡಮರು ಇದೆ. ಶಿಲ್ಪವು ಆಳೆತ್ತರದಲ್ಲಿ ಇದ್ದು ಕರಂಡ ಮಕುಟ, ಮಣಿಹಾರ, ರುಂಡಮಾಲೆಗಳಿಂದ ಅಲಂಕರಿಸಲ್ಪಟ್ಟಿದೆ. ಹರವಾದ ಕಿವಿ, ನೀಳವಾದ ಮೂಗು ೨ ದಾಡಿ ಹಲ್ಲು ಹೊರಚಾಚಿದ್ದು ಉಗ್ರಸ್ವರೂಪದ ಕಣ್ಣಿನ ಮುಖಭಾವ ಶಿಲ್ಪದ ಉಗ್ರತೆ ಸೂಚಿಸುತ್ತದೆ. ಕಟಿವಸ್ತ್ರವು ಮೊಣಕಾಲಿನವರೆಗೆ ಇಳಿಬಿಟ್ಟಿದೆ. ಅದರ ಮಡಿಕೆಗಳು ಸಮಪ್ರಮಾಣದಲ್ಲಿ ಇದೆ.

೨. ಹೆಸರು – ರುದ್ರಕಾಳಿ

ಸ್ಥಳ – ಗೋಕರ್ಣ, ಸ್ಮಶಾನಕಾಳಿ ದೇವಸ್ಥಾನದಗರ್ಭಗೃಹದಲ್ಲಿ

ಕಾಲ – ಕ್ರಿ. ಶ. ೧೫ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೪೭ ಸೆಂ.ಮೀ ಎತ್ತರ ೩೦ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜಧಾರಿಯಾಗಿದ್ದಾಳೆ. ಬಲಗಡೆಯ ಒಂದು ಕೈ ಅಭಯ ಮುದ್ರೆಯಲ್ಲಿ, ಇನ್ನೊಂದು ಕೈ ತ್ರಿಶೂಲ, ಎಡಗಡೆಯ ಒಂದು ಕೈ ಪಾಣಿಬಟ್ಟಲು, ಇನ್ನೊಂದು ಕೈಯಲ್ಲಿ ಢಮರನ್ನು ಹಿಡಿದಿದ್ದಾಳೆ. ಕಿರೀಟ, ಮಣಿಸರ, ಉದರಬಂಧ, ಕಟಿಸೂತ್ರ ಧರಿಸಿ ಉಗ್ರಸ್ವರೂಪಿಯಾಗಿರುವದು ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆ ಆಗಿದೆ.

೩. ಹೆಸರು – ಕಾಳಿ
ಸ್ಥಳ – ಗೋಕರ್ಣ, ಕಾಳಿ ದೇವಸ್ಥಾನ ಗರ್ಭಗೃಹದಲ್ಲಿ
ಕಾಲ – ಕ್ರಿ. ಶ. ೧೫ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ
ಅಳತೆ – ೫೬ ಸೆಂ.ಮೀ ಎತ್ತರ ೩೬ ಸೆಂ.ಮೀ ಅಗಲ

ಸಮಪಾದ ಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜಳಾಗಿದ್ದಾಳೆ. ಬಲಗಡೆಯ ಒಂದು ಕೈ ಅಭಯ ಮುದ್ರೆಯಲ್ಲಿ, ಇನ್ನೊಂದು ಕೈ ತ್ರಿಶೂಲ ಹಿಡಿದಿದ್ದಾಳೆ, ಎಡಗಡೆಯ ಕೈ ಪಾಣಿಬಟ್ಟಲು, ಇನ್ನೊಂದು ಕೈ ಢಮರೂ ಹಿಡಿದಿದ್ದಾಳೆ. ಉಗ್ರ ಸ್ವರೂಪಿಯಾಗಿದ್ದಾಳೆ. ಕಿರೀಟವನ್ನು ಧರಿಸಿಕೊಂಡು ದೊಡ್ಡದಾದ ಮಣಿಸರ, ಕಂಕಣ, ಉದರಬಂಧ, ಕಟಿಸೂತ್ರ ಧರಿಸಿರುವದು ಸಾಮಾನ್ಯ ಲಕ್ಷಣಗಳಾಗಿವೆ.

೪. ಹೆಸರು – ದುರ್ಗಾ
ಸ್ಥಳ – ಹನೆಹಳ್ಳಿ, ದುರ್ಗಾಂಬಿಕಾ ದೇವಸ್ಥಾನದ ಗರ್ಭಗೃಹದಲ್ಲಿ
ಕಾಲ – ಕ್ರಿ. ಶ. ೧೫–೧೬ ನೇ ಶತಮಾನ
ವಸ್ತು – ಬಿಳಿ ಬೆಣಚುಕಲ್ಲು
ಅಳತೆ – ೬೫ ಸೆಂ.ಮೀ ಎತ್ತರ, ೫೦ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜಳಾಗಿದ್ದಾಳೆ. ಬಲಗಡೆಯ ಒಂದು ಕೈ ಪದ್ಮ, ಇನ್ನೊಂದು ಕೈಯಲ್ಲಿ ಚಕ್ರ, ಎಡಗಡೆಯ ಒಂದು ಕೈಯಲ್ಲಿ ಫಲ, ಇನ್ನೊಂದು ಕೈಯಲ್ಲಿ ಗಧೆ ಇದೆ. ಕರ್ಣಕುಂಡಲ ಕಂಠಹಾರ, ಪಿತಾಂಬರಗಳಿಂದ ಅಲಂಕಾರಗೊಂಡಿದೆ ಮೇಲಿನ ಕೈಗಳಲ್ಲಿರುವ ಆಯುಧ ಮತ್ತು ಕಿರೀಟ ಪ್ರಭಾವಳಿಗೆ ಹೊಂದಿಕೊಂಡಿದೆ.

೫.೪.೬ ಮಹಿಷಾಸುರಮರ್ದಿನಿ

ಮಹಿಷಾಸುರನೆಂಬ ರಾಕ್ಷಸ ದೇವತೆಗಳನ್ನು ಕಾಡುತ್ತಿದ್ದಾಗ ಅವರೆಲ್ಲರ ಶಕ್ತಿಗಳನ್ನು ಒಗ್ಗೂಡಿಸಿದ ಫಲವಾಗಿ ರೂಪುಗೊಂಡವಳು. ಮಹಿಷಾಸುರನ ದುಷ್ಕೃತ್ಯಗಳಿಂದ ಕೆರಳಿದ ವಿಷ್ಣು, ಶಿವ. ಬ್ರಹ್ಮ, ಹಾಗೂ ಇನ್ನುಳಿದ ದೇವತೆಗಳ ಕೋಪದ ಫಲವಾಗಿ ದೇವಿಯು

ಹುಟ್ಟಿದಳು. ದೇವತೆಗಳ ಶಕ್ತಿಯಿಂದಲೇ ಅವಳ ಅಂಗಾಂಗಗಳು ರೂಪುಗೊಂಡವು. ಶಿಲ್ಪಶಾಸ್ತ್ರದ ಪ್ರಕಾರ ಇವಳಿಗೆ ಹತ್ತು ಕೈಗಳು, ಮೂರು ಕಣ್ಣುಗಳಿರುತ್ತವೆ.

ಗೌರಿಯು ಅರುಣಾಚಲದಲ್ಲಿ ಚುಟುಕುಗಳ ರಕ್ಷಣೆಯ ಧರ್ಮಕಾರ್ಯದಲ್ಲಿ ನಿರತರಾದಾಗ ಸೈನ್ಯದೊಂದಿಗೆ ಬಂದ ಮಹಿಷನು ಅವಳ ಸೌಂದರ್ಯಕ್ಕೆ ಮನಸೋತು ತನ್ನನ್ನು ಮದುವೆಯಾಗುವಂತೆ ತಿಳಿಸಿದನು. ಅವಳು ತಿರಸ್ಕರಿಸಿದಳು. ಆಗ ಮಾಯಾಪಾಶದಲ್ಲಿ ಸಿಲುಕಿ ಂಹಿಷನು ಚತುರೋಕ್ತಿಯಿಂದ ಅವಳನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದನು. ಅದೂ ಕೂಡ ಸಾಧ್ಯವಾಗದೇ ಇದ್ದಾಗ ರಾಕ್ಷಸ ಶಕ್ತಿಯ ಪ್ರಯೋಗಕ್ಕೆ ಮುಂದಾದನು. ಇದರಿಂದ ಇವರಿಬ್ಬರ ಮಧ್ಯೆ ಯುದ್ಧ ನಡೆದು ಯುದ್ಧದಲ್ಲಿ ಮಹಿಷಾಸುರ ಮರಣಹೊಂದಿದನೆಂದು ಸ್ಕಂಧ ಪುರಾಣವು ತಿಳಿಸುತ್ತದೆ.[೪೩]

ಮತ್ತೊಂದು ಐತಿಹ್ಯದ ಪ್ರಕಾರ ಮಹಿಷಾಸುರ ಸ್ತ್ರೀಯನ್ನು ಬಿಟ್ಟು ದೇವಗಂಧರ್ವರಾದಿಯಾಗಿ ಬೇರೆಯವರಿಂದಲೂ ತನಗೆ ಸಾವು ಬರಬಾರದೆಂದು ವರವನ್ನು ಪಡೆದು, ಮೂರು ಲೋಕಗಳನ್ನು ವಶಪಡೆಸಿ ದೇವತೆಗಳನ್ನು ಆತಂಕಕ್ಕೀಡುಮಾಡಿದನು. ಇದರಿಂದ ಅವಮಾನಕ್ಕೀಡಾದ ದೇವತೆಗಳು ತಮ್ಮ ಶಕ್ತಿಹೀನ ವೀರ್ಯಕ್ಕೆ ನಾಚಿಕೆಪಟ್ಟು ಅದನ್ನು ಹೊರಹಾಕಿದರು. ಅದು ಒಂದುಗೂಡಿ ಸುಂದರ ಹೆಣ್ಣಿನ ರೂಪಪಡೆದುಕೊಂಡಿತು. ಆ ಹೆಣ್ಣು ದೇವಿಯು ಮಹಿಷಾಸುರನ್ನು ಸಂವರಿಸಿ ಮಹಿಷಾಸುರ ಮರ್ದಿನಿಯಾದಳು[೪೪]

ಋಗ್ವೇದದ ಹತ್ತನೇ ಮಂಡಳದ ಭಾಗವತ ಪುರಾಣದಲ್ಲಿ ಮಹಿಷಾಸುರಮರ್ದಿನಿಯ ವರ್ಣನೆಗಳಿವೆ.[೪೫] ಶಾಸನಗಳಲ್ಲಿ ವಿದ್ಯಾವಾಹಿನಿ, ಮಹಾಮುನಿ ದೇವತೆಯೆಂದು ಹೇಳಲಾಗಿದ್ದು ಮಧುಕೈಟಬರು ರಾಕ್ಷಸರ ನಾಶಕ್ಕೆ ತಮೋಗುಣದ ಮಹಾಕಾಳಿಯಾದಳು. ಇಂದ್ರಾದಿ ದೇವತೆಗಳ ರಜೋಗುಣದ ಮಹಾಲಕ್ಷ್ಮಿ ರೂಪವನ್ನು ತಾಳಿ, ಮಹಿಷನನ್ನು ಕೊಂದು ಮಹಿಷಾಸುರಮರ್ದಿನಿಯಾದಳು. ಶುಂಭ, ನಿಶುಂಭರೆಂಬ ರಕ್ಕಸರನ್ನು ಮತ್ತು ಅವರ ಸೇನಾಧಿಪತಿಗಳಾದ ಚಂಡ, ಮುಂಡ ಮತ್ತು ರಕ್ತಬೀಜಾಸುರರನ್ನು ಸಂಹರಿಸಿ ಚಾಮುಂಡಿಯಾದಳು. ಸಿಂಹವಾಹಿನಿಯಾದ ಮಹಿಷನನ್ನು ಸಂಹರಿಸುವ ಸಂದರ್ಭದಲ್ಲಿ ಇವಳಿಗೆ ಎಂಟು ಕೈಗಳಿರುತ್ತವೆ. ಸ್ಥಾನಿಕ ಭಂಗಿಯಲ್ಲಿದ್ದಾಗ ನಾಲ್ಕು ಕೈಗಳಿರುತ್ತವೆ.ಬಾಣ , ಶೂಲ, ಖಡ್ಗ, ಚಕ್ರ, ಶಂಖ, ಧನಸ್ಸು, ಖೇಟಕ ಆಯುಧಗಳಾಗಿವೆ. ಮಹಿಷನ ದೇಹವನ್ನು ಮೆಟ್ಟಿ ಆತನ ತಲೆಯನ್ನು ಸಂಹರಿಸಿದ ಚಿತ್ರಣ, ಕೆಲವು ಶಿಲ್ಪಗಳಲ್ಲಿ ಮಹಿಷನ ತಲೆಯ ಮೇಲೆ ನಿಂತಿರುವಂತೆ ತೋರಿಸಲಾಗಿರುತ್ತದೆ.

೧. ಹೆಸರು – ಮಹಿಷಾಸುರ ಮರ್ದಿನಿ[೪೬]
ಸ್ಥಳ – ಉಪ್ಪಿನ ಗಣಪತಿ ದೇವಸ್ಥಾನದ ಗರ್ಭಗೃಹದ ಹೊರಗೆ ಎಡಭಾಗದಲ್ಲಿ

ಕಾಲ – ಕ್ರಿ.ಶ ೫–೬ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – –

ಈ ಮೂರ್ತಿ ಚತುರ್ಭುಜಳಾಗಿದ್ದಾಳೆ. ಬಲಗಡೆಯ ಕೈಯಲ್ಲಿ ತ್ರಿಶೂಲ ಹಿಡಿದು ಅಸುರನನ್ನು ಬೆನ್ನನ್ನು ಇರಿದಿದ್ದಾಳೆ. ಇನ್ನೊಂದು ಕೈಯಲ್ಲಿ ಶಂಖ, ಎಡಗಡೆಯ ಒಂದು ಕೈಯಲ್ಲಿ ಚಕ್ರ, ಇನ್ನೊಂದು ಕೈಯಲ್ಲಿ ಕೋಣನ ತಲೆಯುಳ್ಳ ಅಸುರನ ಮುಖವನ್ನು ಮೇಲಕ್ಕೆತ್ತಿ ಹಿಡಿದಿದ್ದಾಳೆ. ಈ ಶಿಲ್ಪವು ಮಹಿಷಾಸುರನ ಬೆನ್ನ ಮೇಲೆ ಮೆಟ್ಟಿ ನಿಂತಿದೆ. ಕಿರೀಟಮಕುಟ, ಕಂಠಹಾರ, ಭುಜಕೀರ್ತಿ, ಬಳೆಗಳಿಂದ ಅಲಂಕೃತಳಾಗಿದ್ದಾಳೆ. ಪಾದದವರೆಗೆ ಮೊಣಕಾಲಿನಿಂದ ಮೇಲಕ್ಕೆ ಅಡ್ಡ ನೆರಿಗೆಯುಳ್ಳ ಮತ್ತೊಂದು ಚಿತ್ರಿತ ವಸ್ತ್ರ, ತಲೆಕೂದಲೂ ಸುರಳಿಯಾಗಿ ಭುಜದ ಮೇಲೆ ಹರಡಿದೆ.

೨. ಹೆಸರು – ಮಹಿಷಾಸುರ ಮರ್ಧಿನಿ (ಕಾನಮ್ಮ ದುರ್ಗಾ ಪರಮೇಶ್ವರಿ)

ಸ್ಥಳ – ಹೆಗಡೆ, ಮಹಿಷಾಸುರ ಮರ್ಧಿನಿ ದೇವಾಲಯದ ಗರ್ಭಗೃಹದಲ್ಲಿ.

ಕಾಲ – ಕ್ರಿ. ಶ. ೧೦ ನೇ ಶತಮಾನ

ವಸ್ತು – ಕೆಂಪು ಮರಳುಶಿಲೆ

ಅಳತೆ – ೮೪ ಸೆಂ.ಮೀ ಎತ್ತರ ೪೪ಸೆಂ.ಮೀ ಅಗಲ

ವೀರಾಸನ ಭಂಗಿಯಲ್ಲಿರುವ ಈ ಮೂರ್ತಿ ಶಿಲ್ಪ ಚತುರ್ಭುಜಧಾರಿಯಾಗಿದ್ದು, ಬಲಗಡೆಯ ಕೈಯಲ್ಲಿನ ತ್ರಿಶೂಲದಿಂದ ಮಹಿಷನನ್ನು ತಿವಿಯುವಂತಿದೆ. ಇನ್ನೊಂದು ಕೈ ಚಕ್ರ, ಎಡಗಡೆಯ ಒಂದು ಕೈ ಮಹಿಷನ ಬಾಲವನ್ನು ಮೇಲೆತ್ತಿ ಹಿಡಿದಿದೆ, ಇನ್ನೊಂದು ಕೈಗಧೆ ಹಿಡಿದುಕೊಂಡಿದೆ. ಪಂಜರಕಿರೀಟ, ಕಂಠಹಾರ, ಕುಚಬಂದ, ಕರ್ಣಕುಂಡಲ, ಮಣಿಹಾರ, ಕೈಕಡಗ, ಬಳೆ, ಕಾಲ್ಗಡಗ ಸಾಂಪ್ರದಾಯಿಕ ಆಭರಣಗಳಿಂದ ಅಲಂಕರಿಸಲ್ಪಟ್ಟಿದೆ. ಬಲಗಾಲು ಮಹಿಷನ ಮೇಲೆ ಇದೆ.

೩. ಹೆಸರು – ಮಹಿಷಾಸುರ ಮರ್ದಿನಿ

ಸ್ಥಳ – ಗೋಕರ್ಣ, ಈಶ್ವರ ದೇವಾಲಯದಗರ್ಭಗೃಹದ ಹೊರಗೆ ಎಡಭಾಗಕ್ಕೆ

ಕಾಲ – ಕ್ರಿ.ಶ ೧೦–೧೨ ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೮೨ ಸೆಂ.ಮೀ ಎತ್ತರ ೪೦ ಸೆಂ.ಮೀ ಅಗಲ

ವೀರಾಸನ ಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ. .ಬಲಗಡೆಯ ಒಂದು ಕೈಯಲ್ಲಿನ ತ್ರಿಶೂಲದಿಂದ ಮಹಿಷನನ್ನು ತಿವಿಯುವಂತಿದೆ. ಇನ್ನೊಂದು ಕೈಯಲ್ಲಿ ಖಡ್ಗ, ಎಡಗಡೆಯ ಒಂದು ಕೈಮಹಿಷನ ಬಾಲವನ್ನು ಹಿಡಿದಿರುವಂತಿದೆ. ಇನ್ನೊಂದು

ಕೈಚಕ್ರವನ್ನು ಹಿಡಿದುಕೊಂಡಿದೆ. ಕಿರೀಟ ಮಕುಟ, ಕರ್ಣಕುಂಡಲ, ಕೈಬಳೆ, ಹಾರಗಳಿಂದ ಅಲಂಕರಿಸಲ್ಪಟ್ಟಿದೆ.

೪. ಹೆಸರು – ಮಹಿಷಾಸುರ ಮರ್ದಿನಿ
ಸ್ಥಳ – ಕತಗಾಲ, ಶಂಭುಲಿಂಗೇಶ್ವರ ದೇವಸ್ಥಾನದಗರ್ಭಗೃಹದ ಎಡ ದಿಕ್ಕಿಗೆ
ಕಾಲ – ಕ್ರಿ. ಶ. ೧೮ ನೇ ಶತಮಾನ
ವಸ್ತು – ಕ್ಲೋರೈಟಿಕ್ ಸಿಸ್ಟ
ಅಳತೆ – ೫೯ ಸೆಂ.ಮೀ ಎತ್ತರ ೪೨ ಸೆಂ.ಮೀ ಅಗಲ

ಈ ಮೂರ್ತಿ ಚತುರ್ಭುಜಳಾಗಿದ್ದಾಳೆ. ದೇವಿಯು ಉಗ್ರಸ್ವರೂಪಿಯಾಗಿದ್ದು ಬಲಗಡೆಯ ಕೈ ಚಕ್ರ, ಇನ್ನೊಂದು ಕೈ ತ್ರಿಶೂಲದಿಂದ ಮಹಿಷನನ್ನು ಚುಚ್ಚುತ್ತಿದ್ದಾಳೆ. ಎಡಗಡೆಯ ಕೈ ಚಕ್ರ, ಇನ್ನೊಂದು ಕೈ ಮಹಿಷನಕೊಂಬನ್ನು ಹಿಡಿದಿದ್ದಾಳೆ. ದೇವಿಯು ಕಿರೀಟಮಕುಟ, ಪತ್ರಕುಂಡಲ, ಕಂಠಹಾರ, ಉದರಬಂಧ, ಕಟಿಸೂತ್ರ, ಪಾದಸರವನ್ನು ಧರಿಸಿದ್ದಾಳೆ.

೫. ಹೆಸರು – ಮಹಿಷಾಸುರ ಮರ್ದಿನಿ
ಸ್ಥಳ – ಮಿರ್ಜಾನ, ಕೋಟೆಯಲ್ಲಿ ಮರದ ಕೆಳಗೆ
ಕಾಲ – ಕ್ರಿ.ಶ ೧೫ ನೇ ಶತಮಾನ
ವಸ್ತು – ಕ್ಲೋರೈಟಿಕ್ ಸಿಸ್ಟ
ಅಳತೆ – ೯೦ ಸೆಂ.ಮೀ ಎತ್ತರ ೬೫ ಸೆಂ.ಮೀ ಅಗಲ

ವೀರಾಸನ ಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜಧಾರಿಯಾಗಿದ್ದಾಳೆ. ಬಲಗಡೆಯ ಕೈಯಲ್ಲಿ ಶಂಖ, ಎಡಗಡೆಯ ಒಂದು ಕೈಯಲ್ಲಿ ಚಕ್ರವಿದೆ. ಕೆಳಗಿನ ಎರಡು ಎಡಬಲ ಕೈಗಳಿಂದ ಮಹಿಷಾಸುರಮರ್ದಿನಿ ತ್ರಿಶೂಲವನ್ನು ಹಿಡಿದುಕೊಂಡು ಮಹಿಷನನ್ನು ಸಂಹರಿಸುವಂತೆ ಚಿತ್ರಿಸಲಾಗಿದೆ. ವಜ್ರ ಮಕುಟ ಮತ್ತು ಇತರೇ ಸಾಂಪ್ರದಾಯಿಕ ಅಲಂಕಾರಗಳು ಸಾಮಾನ್ಯ ಲಕ್ಷಣಗಳಾಗಿವೆ.

೬. ಹೆಸರು – ಮಹಿಷಾಸುರ ಮರ್ದಿನಿ
ಸ್ಥಳ – ಕತಗಾಲ, ಹೈಸ್ಕೂಲಿನಲ್ಲಿರುವ ಬಿಡಿಶಿಲ್ಪ,
ಕಾಲ – ಕ್ರಿ.ಶ ೧೫ ನೇ ಶತಮಾನ
ವಸ್ತು – ಕ್ಲೋರೈಟಿಕ್ ಸಿಸ್ಟ
ಅಳತೆ – ೬೯ ಸೆಂ.ಮೀ ಎತ್ತರ, ೪೬ ಸೆಂ.ಮೀ ಅಗಲ

ವೀರಾಸನ ಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ. ಮೂಲ ದೇವಾಲಯವು ಪಾಳು ಬಿದ್ದುದರಿಂದ ಇದನ್ನು ತಂದು ಸದ್ಯಕ್ಕೆ ಊರಲ್ಲಿರುವ ಪ್ರೌಢಶಾಲೆಯಲ್ಲಿ ಸಂರಕ್ಷಿಸಲಾಗಿದೆ.

ಈ ಶಿಲ್ಪವು ಮಹಿಷಾಸುರನನ್ನು ಮರ್ದನ ಮಾಡಿ ಅದರ ಮೇಲೆ ನಿಂತುಕೊಂಡಿರುವ ಶಿಲ್ಪವಾಗಿದೆ. ಬಲಗಡೆಯ ಕೈಯಲ್ಲಿ ತ್ರಿಶೂಲ, ಇನ್ನೊಂದು ಕೈಯಲ್ಲಿ ಢಮರು, ಎಡಗಡೆಯ ಕೈಯಲ್ಲಿ ಮಹಿಷಾಸುರನ ತಲೆಎತ್ತಿಹಿಡಿದಂತಿದೆ. ಇನ್ನೊಂದು ಕೈಯಲ್ಲಿ ಶಂಖವನ್ನು ಹಿಡಿದುಕೊಂಡಿದೆ. ಶಿಲ್ಪವು ಕಾಲ್ಬಂದಿ, ತೋಳ್ಬಂದಿ, ಕಂಠಾಭರಣ, ಧರಿಸಿದ್ದಾಳೆ.

೭. ಹೆಸರು – ಮಹಿಷಾಸುರ ಮರ್ದಿನಿ

ಸ್ಥಳ – ಬರ್ಗಿ, ಮಹಾಲಿಂಗೇಶ್ವರ ದೇವಾಲಯದಲ್ಲಿನಗರ್ಭಗೃಹದ ಹೊರಗೆ ಎಡಭಾಗದಲ್ಲಿ

ಕಾಲ – ಕ್ರಿ.ಶ ೧೮ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೫೬ ಸೆಂ.ಮೀ ಎತ್ತರ ೩೪ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಕೈಯಲ್ಲಿ ತ್ರಿಶೂಲ, ಇನ್ನೊಂದು ಕೈಯಲ್ಲಿ ಢಮರು, ಎಡಗಡೆಯ ಕೈ ಅಂಜಲಿ ಮುದ್ರೆ, ಇನ್ನೊಂದು ಕೈಯಲ್ಲಿ ಶಂಖ, ಇದೆ. ಶಿಲ್ಪದ ಹಿಂದೆ ಪ್ರಭಾವಳಿ ಇದ್ದು ಗಿಡಬಳ್ಳಿಗಳಿಂದ ಅಲಂಕೃತಗೊಳಿಸಲಾಗಿದೆ. ಕಿರೀಟಮಕುಟ, ಕೈಬಳೆ, ಕಾಲ್ಗಡಗ ಕುತ್ತಿಗೆಯಲ್ಲಿ ಕಂಠಹಾರ ಇವು ಸಾಮಾನ್ಯ ಲಕ್ಷಣಗಳಾಗಿವೆ.

೮. ಹೆಸರು – ಮಹಿಷಾಸುರ ಮರ್ದಿನಿ (ಶಾಂತಿಕಾ ಪರಮೇಶ್ವರಿ)

ಸ್ಥಳ – ಹೆಗಡೆ, ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಗರ್ಭಗೃಹ

ಕಾಲ – ಕ್ರಿ.ಶ ೧೮–೧೯ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – –

ವೀರಾಸನ ಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಕೈಯಲ್ಲಿ ತ್ರಿಶೂಲ, ಇನ್ನೊಂದು ಕೈಯಲ್ಲಿ ಚಕ್ರ, ಎಡಗಡೆಯ ಒಂದು ಕೈಯಲ್ಲಿ ಪ್ರಾಣಿರೂಪದ ಮಹಿಷನನ್ನು ಹಿಡಿದಿದ್ದಾಳೆ, ಇನ್ನೊಂದು ಕೈಯಲ್ಲಿ ಶಂಖವನ್ನು ಹಿಡಿದಿದ್ದಾಳೆ. ಬಲಗಾಲಿನಿಂದ ಮಹಿಷನನ್ನು ತಿವಿಯುತ್ತಿದ್ದಂತೆ ಶಿಲ್ಪಿಯು ವಿಗ್ರಹವನ್ನು ರಚಿಸಿದ್ದಾನೆ.

೯. ಹೆಸರು – ಮಹಿಷಾಸುರ ಮರ್ದಿನಿ

ಸ್ಥಳ – ಕಲಬ್ಬೆ, ಕಲ್ಲಬೇಶ್ವರ ದೇವಾಲಯದ ಗರ್ಭಗೃಹದ ಎಡಭಾಗದಲ್ಲಿ

ಕಾಲ – ಕ್ರಿ. ಶ. ೧೮ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೩೧ ಸೆಂ.ಮೀ ಎತ್ತರ ೨೩ ಸೆಂ.ಮೀ ಅಗಲ

ದ್ವಿಭಂಗಿಯಲ್ಲಿರುವ ಈ ಮೂರ್ತಿ ನಾಲ್ಕು ಕೈಗಳಿವೆ. ಮಹಿಷಾಸುರನನ್ನು ಸಂಹಾರ ಮಾಡಿ ಅದರ ಮೇಲೆ ಕುಳಿತುಕೊಂಡಿರುವ ಶಿಲ್ಪವಾಗಿದೆ. ಈ ಶಿಲ್ಪದ ಬಲಗಡೆಯ ಕೈಯಲ್ಲಿ ತ್ರಿಶೂಲ, ಕತ್ತಿ, ಚಾಮರ, ಡಮರು ಎಡಗಡೆಯ ಕೈಯಲ್ಲಿ ಮಹಿಷನ ತಲೆಯನ್ನು ಎತ್ತಿ ಹಿಡಿದಿದೆ. ಮತ್ತೊಂದು ಕೈಯಲ್ಲಿ ಶಂಖವನ್ನು, ಇನ್ನೊಂದು ಕೈಯಲ್ಲಿಯ (?) ಈ ಶಿಲ್ಪವನ್ನು ವಸ್ತ್ರಾಲಂಕಾರಗಳಿಂದ ಅಲಂಕೃತಗೊಳಿಸಲಾಗಿದೆ. ಕೀರಿಟಮಕುಟ ಧರಿಸಿ ಶಿಲ್ಪದ ಹೊರಭಾಗದಲ್ಲಿ ಸುತ್ತಲೂ ಪ್ರಭಾವಳಿ ಇದ್ದು ಈ ಪ್ರಭಾವಳಿಯನ್ನು ಬಳೆಗಳಿಂದ ಅಲಂಕಾರಗೊಳಿಸಲಾಗಿದೆ. ಪ್ರಭಾವಳಿಯ ಮೇಲೆ ಕೀರ್ತಿಮುಖ ಇದೆ.

೫.೫ ವೈಷ್ಣವ ಮೂರ್ತಿ ಶಿಲ್ಪಗಳು

ತ್ರಿಮೂರ್ತಿಗಳಲ್ಲಿ ವಿಷ್ಣು ಎರಡನೆಯವನು. ಸೃಷ್ಟಿಸಲಾದ ವಸ್ತುವನ್ನು ರಕ್ಷಿಸುವುದು ಈತನ ಕೆಲಸ. ಮೂರು ಹೆಜ್ಜೆಗಳಿಂದ ಭೂಲೋಕ ಹಾಗೂ ಸ್ವರ್ಗಲೋಕಗಳನ್ನು ಅಳೆದು ಮೂರನೇ ಹೆಜ್ಜೆಯಿಂದ ಬಲಿಯನ್ನು ಪಾತಾಳಕ್ಕೆ ತಳ್ಳಿಬಿಟ್ಟಂತವನು. ವಿಷ್ಣುವಿನ ವಾಮನವತಾರದ ಕಥೆ ಎಲ್ಲರಿಗೂ ತಿಳಿದ ವಿಷಯವೇ ಮೂರ್ತಿಶಿಲ್ಪದ ಲಕ್ಷಣಗಳಿಗೆ ಸಂಬಂಧಿಸಿದಂತೆ.

ವಿಷ್ಣುಮೂರ್ತಿ ನಾಲ್ಕು ಕೈಗಳನ್ನು ಹೊಂದಿರುತ್ತವೆ. ಶಂಕ, ಚಕ್ರ, ಗದಾ ಹಾಗೂ ಪದ್ಮವನ್ನು ಕೈಯಲ್ಲಿ ಧರಿಸಿರುತ್ತವೆ. ಕೆಲವೊಮ್ಮೆ ಪದ್ಮದ ಬದಲು ಅಭಯ ಹಸ್ತ ಪದ್ಮವನ್ನು ತೋರಿಸಲಾಗುತ್ತದೆ. ವಿಷ್ಣುವಿನ ಮೂರ್ತಿಗಳಲ್ಲಿ ಅನೇಕ ಭಂಗಿಗಳನ್ನು ಕಾಣಬಹುದು. ೧) ಸ್ಥಾನಿಕ ೨) ಆಸೀನ ೩) ಶಯನ ೪) ನೃತ್ಯ

೧) ಸ್ಥಾನಿಕ ಭಂಗಿಯಲ್ಲಿರುವ ವಿಷ್ಣು ಮೂರ್ತಿಯ ಎಡ ಮತ್ತು ಬಲಗಳಲ್ಲಿ ಕ್ರಮವಾಗಿ ಲಕ್ಷ್ಮಿ ಮತ್ತು ಭೂದೇವಿಯ ಮೂರ್ತಿ ಕಾಣಬಹುದು.

೨) ಆಸೀನ ಭಂಗಿಯಲ್ಲಿರುವ ವಿಷ್ಣು ಮೂರ್ತಿಯ ಎಡಬದಿಯ ತೊಡೆಯ ಮೇಲೆ ಲಕ್ಷ್ಮಿಯನ್ನು ಕುಳ್ಳಿರಿಸಿಕೊಂಡಂತೆ ತೋರಿಸಲಾಗುತ್ತದೆ. ಬಲಭಾಗದಲ್ಲಿ ಕೆಳಗಡೆಅಂಜಲಿ ಮುದ್ರೆಯಲ್ಲಿರುವ ಗರುಡನನ್ನು ಚಿತ್ರಿಸಿರುತ್ತಾರೆ.

೩) ಶಯನ ಭಂಗಿಯಲ್ಲಿದ್ದರೆ ವಿಷ್ಣುವು ಆದಿಶೇಷನ ಮೇಲೆ ಅನಂತಶಯನನ್ನಾಗಿ ನಿದ್ರಿಸುವಂತೆಯೂ, ಅವನ ನಾಭಿಯಿಂದ ಬ್ರಹ್ಮನು ಕಮಲದಲ್ಲಿ ಹುಟ್ಟಿದಂತೆಯೂ ಲಕ್ಷ್ಮಿಯು ವಿಷ್ಣುವಿನ ಪಾದದ ಹತ್ತಿರ ಕುಳಿತಿರುವಂತೆಯೂ ತೋರಿಸಲಾಗುತ್ತದೆ.

ವಿಷ್ಣು ಕಿರೀಟ ಮಕುಟ, ಕರ್ಣಕುಂಡಲ, ಯಜ್ಞೋಪವೀತ ಕೇಯೂರ, ಕಟಿಸೂತ್ರ, ಕಂಕಣ, ಕಡಗ, ವೈಜಯಂತಿ ಹಾರ ಮುಂತಾದ ಆಭರಣಗಳನ್ನು ಧರಿಸಿರುವುದು ಸಾಮಾನ್ಯ ಲಕ್ಷಣಗಳಾಗಿರುತ್ತವೆ.

ಅವತಾರಗಳು

ವಿಷ್ಣುವಿನ ಅವತಾರದಲ್ಲಿ ಮೂರು ವಿಧವಿದೆ. ೧) ಅವತಾರ ೨) ಆವೇಶ ೩) ಅಂಶ. ರಾಮ ಮತ್ತು ಕೃಷ್ಣರು ಪೂರ್ಣಾವತಾರಕ್ಕೆ ಉದಾಹರಣೆ ತಾತ್ಕಾಲಿಕ ಅವತಾರ, ಆವೇಶಾವತಾರ ಉದಾಹರಣೆ ಪರಶುರಾಮ ಅವತಾರ. ದುಷ್ಟರಾದ ಕ್ಷತ್ರೀಯ ರಾಜರನ್ನು ಮರ್ಧನ ಮಾಡುವಷ್ಟು ಕಾಲ ಪರಶುರಾಮನಲ್ಲಿ ವಿಷ್ಣುಶಕ್ತಿ ನೆಲೆಗೊಂಡಿತು. ಆಮೇಲೆ ಆ ಶಕ್ತಿ ಮಾಯವಾಗಿ ಹನುಮಂತನಲ್ಲಿ ನೆಲೆಗೊಂಡಿತು. ಅವನು ಚೀರಂಜೀವಿಯಾದ. ಶಂಖ, ಚಕ್ರಗಳನ್ನು ಲೋಕೋದ್ಧಾರಕ್ಕಾಗಿ ಅವತಾರ ಮಾಡಿಸಿದಾಗ ಅದು ಅಂಶಾವತಾರವಾಯಿತು. ವಿಷ್ಣು ರಾಕ್ಷಸ ಸಂಹಾರಕ್ಕಾಗಿ ಆ ಅವತಾರ ಧರಿಸಿದ. ವಿಷ್ಣುವಿನ ದಶಾವತಾರಗಳು ಮತ್ಸ್ಯಾವತಾರ, ಕೂರ್ಮಾವತಾರ, ವರಾಹವತಾರ, ನರಸಿಂಹಾವತಾರ, ವಾಮನವತಾರ, ಪರಶುರಾಮ, ಶ್ರೀರಾಮ, ಕೃಷ್ಣ, ಬುದ್ದ, ಕಲ್ಕಿ ಅವತಾರಗಳಾಗಿವೆ.[೪೭]

ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ಕ್ರಿ.ಪೂ ೩ ನೇ ಶತಮಾನದಷ್ಟು ಹಿಂದಿನ ಇತಿಹಾಸವಿದೆ. ಇದಕ್ಕೆ ಹೆಲಿಯೋಡೋರಸ್ ವಿಧಿಸೆಯಲ್ಲಿ ಸ್ಥಾಪಿಸಿದ ಗರುಡ ಸ್ತಂಭ ಮಧ್ಯಪ್ರದೇಶದ ಭಿಲ್ಸಾ ನಗರದ ಹತ್ತಿರವಿದೆ. ಶಾತವಾಹನರ ರಾಣಿ ನಾಗಮೂಲನಿಕಾಳ ನಾನಾಘಾಟ ಗುಹಾಶಾಸನವು ದಖ್ಖನ ಭಾಗದಲ್ಲಿ ಕ್ರಿ.ಪೂ ೩ ನೇ ಶತಮಾನದಲ್ಲಿ ವೈಷ್ಣವ ಪಂಥವು ಅಸ್ತಿತ್ವದಲ್ಲಿದ್ದುದನ್ನು ತಿಳಿಸುತ್ತದೆ.[೪೮]ಕ್ರಿ. ಶ ಒಂದನೇ ಶತಮಾನದಲ್ಲಿ ರಾಜಸ್ಥಾನದ ಗೌಸುಂಧಿಯಲ್ಲಿ ನಾರಾಯಣನಿಗಾಗಿ ಕಟ್ಟಿದ ನಾರಾಯಣ ವಾಟಿಕಾದ ಉಲ್ಲೇಖವಿದೆ. ವಾಯುಪುರಾಣದಲ್ಲಿ ಪಂಚವೀರರ ಹೆಸರುಗಳಿವೆ. ಸಂಕರ್ಷಣ, ವಾಸುದೇವ, ಪ್ರದ್ಯುಮ್ನ,ಅನಿರುದ್ಧ ಮತ್ತು ಸಾಂಬ ಮೂರ್ತಿರೂಪದಿಂದ ಆರಾಧಿಸುತ್ತಿದ್ದ ಅಂಶವು ಪುರಾತತ್ವ ಕುರುಹುಗಳಿಂದ ಸ್ಪಷ್ಟವಾಗುತ್ತದೆ.[೪೯] ಬನವಾಸಿ ಕದಂಬರು, ತಲಕಾಡಿನ ಗಂಗರು ಬಾದಾಮಿ ಚಾಲುಕ್ಯರು ವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ ಇವರು ನಿರ್ಮಿಸಿದ ಗುಹಾ ದೇವಾಲಯಗಳಲ್ಲಿ ವಿಷ್ಣುವಿನ ಶಿಲ್ಪಗಳನ್ನು ಕಾಣಬಹುದಾಗಿದೆ.

ಪ್ರಸ್ತುತ ಉತ್ತರಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕ್ರಿ.ಶ ಎರಡನೇ ಶತಮಾನದ ಕೊನೆ ಮತ್ತು ಮೂರನೇ ಶತಮಾನದ ಆದಿಯಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ದ್ವಿಭುಜ ವಿಷ್ಣು ಶಿಲ್ಪ ಹೊನ್ನಾವರ ತಾಲೂಕಿನ ಕೊಂತಪಾಲದಲ್ಲಿ ದೊರೆತಿದೆ. ಇದು ಅತ್ಯಂತ ಪ್ರಾಚೀನವಾಗಿದೆ. (ಪ್ರಸ್ತುತ ಇದು ಶಿರಾಲಿ ವಸ್ತುಸಂಗ್ರಹಾಲಯದಲ್ಲಿದೆ) ಇದು ಚುಟು-ಆನಂದರ ಕಾಲಕ್ಕೆ ಸೇರಿದ್ದೆಂದು ಹೇಳಲಾಗಿದೆ.[೫೦] ಕ್ರಿ.ಶ. ೫ ರಿಂದ ೬ನೇ ಶತಮಾನಕ್ಕೆ ಸೇರಿದ ವಿಷ್ಣು ಶಿಲ್ಪ ಬನವಾಸಿಯಲ್ಲಿ ದೊರೆತಿದೆ, ಕಾರವಾರ ತಾಲೂಕಿನ ಸಿದ್ದರ, ಹೊನ್ನಾವರ ತಾಲೂಕಿನ ಬಳ್ಕೂರ[೫೧], ಸಿದ್ದಾಪುರ ತಾಲೂಕಿನ ಮುಗ್ದೂರ[೫೨], ಕುಮಟಾ ತಾಲೂಕಿನ ಬಂಗಣೆ ಇತ್ಯಾದಿ ಕಡೆ ನರಸಿಂಹ ಮೂರ್ತಿ ದೊರೆತಿದೆ. ಮಾಧವನ ರೂಪದಲ್ಲಿರುವ ಮೂರ್ತಿಗಳು

ಹೊನ್ನಾವರ ತಾಲೂಕಿನ ಹೈಗುಂದ[೫೩], ಕಾರವಾರ ತಾಲೂಕಿನ ಸುಂಕೇರಿ[೫೪], ಸಿದ್ದಾಪುರ ತಾಲೂಕಿನ ಮುಗ್ದೂರ[೫೫]ನಲ್ಲಿ ದೊರೆತಿವೆ. ಪ್ರಸ್ತುತ ಅಧ್ಯಯನ ಕುಮಟಾ ತಾಲೂಕಿಗೆ ಸಿಮೀತವಾಗಿದರಿಂದ ಈ ತಾಲೂಕಿನ ವೈಷ್ಣವ ಮೂರ್ತಿಶಿಲ್ಪಗಳ ಲಕ್ಷಣಗಳನ್ನು ಇಲ್ಲಿ ದಾಖಲಿಸಲಾಗಿದೆ.

೫.೫.೧ ವಿಷ್ಣು

೧. ಹೆಸರು – ವಿಷ್ಣು
ಸ್ಥಳ – ಮೂರೂರು, ವಿಷ್ಣು ದೇವಸ್ಥಾನದ ಗರ್ಭಗೃಹದಲ್ಲಿ
ಕಾಲ – ಕ್ರಿ.ಶ ೯–೧೦ ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ್
ಅಳತೆ – ೬೦ ಸೆಂ.ಮೀ ಎತ್ತರ ೩೮ ಸೆಂ.ಮೀ ಅಗಲ

ಸಮಭಂಗಿಯಲ್ಲಿದ್ದ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಕೈಯಲ್ಲಿ ಪದ್ಮ, ಇನ್ನೊಂದು ಕೈಯಲ್ಲಿ ಚಕ್ರ, ಎಡಗಡೆಯ ಒಂದು ಕೈಯಲ್ಲಿ ಗಧೆ, ಇನ್ನೊಂದು ಕೈಯಲ್ಲಿ ಶಂಖವಿದೆ. ಕಿರೀಟ ಮಕುಟ, ಕಂಠಹಾರ, ಯಜ್ಞೋಪವೀತ ಧರಿಸಿದ್ದಾನೆ.

೨. ಹೆಸರು – ವಿಷ್ಣು
ಸ್ಥಳ – ಊಳ್ಳುರಮಠ, ಗಣಪತಿ ದೇವಸ್ಥಾನದ ಗರ್ಭಗೃಹದ ಹೊರಗೆ ಮರದ ಕೆಳಗೆ
ಕಾಲ – ಕ್ರಿ.ಶ ೧೧–೧೨ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ
ಅಳತೆ – –

ಸಮಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ. ೩ ಕೈಗಳು ಭಗ್ನವಾಗಿದ್ದು ಮೇಲಿನ ಎಡಗೈಯಲ್ಲಿ ಗಧೆಯನ್ನು ಹಿಡಿದಿದೆ. ಈ ಶಿಲ್ಪವು ಕರಂಡಮಕುಟ, ಮಣಿಹಾರ, ಕೇಯೂರ ಯಜ್ಞೋಪವೀತ, ಸೊಂಟಪಟ್ಟಿ, ಕರ್ಣಕುಂಡಲ, ಕೈಕಡಗ, ವೈಜಯಂತಿ, ಮಾಲೆಗಳಿಂದ ಸುಂದರವಾಗಿ ಅಲಂಕೃತಗೊಂಡಿದೆ. ಧರಿಸಿದ ಪಿತಾಂಭರವು ಸಾಂಪ್ರದಾಯಿಕ ಶೈಲಿಯಲ್ಲಿ ಮೊಣಕಾಲಿನವರೆಗೆ ಇಳಿಬಿಟ್ಟದೆ.

೩. ಹೆಸರು – ವಿಷ್ಣು
ಸ್ಥಳ – ವಾಲಗಳ್ಳಿ, ವಿಷ್ಣು ದೇವಾಲಯದ ಗರ್ಭಗೃಹದಲ್ಲಿ
ಕಾಲ – ಕ್ರಿ.ಶ ೧೧–೧೨ನೇ ಶತಮಾನ
ವಸ್ತು – ಬೆಣಚು ಕಲ್ಲು
ಅಳತೆ – ೬೮ ಸೆಂ.ಮೀ ಎತ್ತರ ೩೫ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿಗೆ ಚತುರ್ಭುಜ ಇದೆ. ಬಲಗಡೆಯ ಒಂದು ಕೈಯಲ್ಲಿ (?) ಇನ್ನೊಂದು ಕೈಯಲ್ಲಿ ಚಕ್ರ, ಎಡಗಡೆಯ ಒಂದು ಕೈಯಲ್ಲಿ ಗಧೆ, ಇನ್ನೊಂದು ಕೈಯಲ್ಲಿ ಶಂಖ ಇದೆ.ಕೊರಳಿಗೆ ಹಾರ, ಕರ್ಣಕುಂಡಲ, ವೈಜಯಂತಿ ಹಾರ, ಧರಿಸಿದ್ದು ತೋಳಬಂದಿ, ಕೈಕಡಗ, ಕಾಲ್ಗಡಗ ಇದೆ. ಪಕ್ಕದಲ್ಲಿ ಶ್ರೀದೇವಿ ಮತ್ತು ಭೂದೇವಿ ವಿಗ್ರಹಗಳಿವೆ. ಯಜ್ಞೋಪವೀತ ಧರಿಸಿದೆ. ಸೊಂಟಕ್ಕೆ ಧರಿಸಿದ ವಸ್ತ್ರ ಮೊಣಕಾಲಿನವರೆಗೆ ಇದೆ.

೪. ಹೆಸರು – ವಿಷ್ಣು

ಸ್ಥಳ – ಉಂಚಗಿ ವಿಷ್ಣು ದೇವಸ್ಥಾನದ ಗರ್ಭಗೃಹದಲ್ಲಿ,

ಕಾಲ – ಕ್ರಿ.ಶ ೧೨ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೯೦ ಸೆಂ.ಮೀ ಎತ್ತರ, ೩೦ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈಯಲ್ಲಿ ಪದ್ಮ (ವರದ ಹಸ್ತ), ಇನ್ನೊಂದು ಕೈಯಲ್ಲಿ ಚಕ್ರ, ಎಡಗಡೆಯ ಒಂದು ಕೈಯಲ್ಲಿ ಗಧೆ, ಇನ್ನೊಂದು ಕೈಯಲ್ಲಿ ಶಂಖವಿದೆ. ಕರಂಡ ಮಕುಟ, ಮಣಿಹಾರ, ಕಟಿವಸ್ತ್ರಗಳಿಂದ ಅಲಂಕೃತಗೊಂಡಿದ್ದು ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

೫. ಹೆಸರು – ವಿಷ್ಣು

ಸ್ಥಳ – ಮೊರ್ಸೆ, ವಿಷ್ಣು ದೇವಾಲಯದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೪ನೇ ಶತಮಾನ

ವಸ್ತು – ಬೆಣಚು ಕಲ್ಲು

ಅಳತೆ – –

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ.ಬಲಗಡೆಯ ಕೈಯಲ್ಲಿ ಗಧೆ, ಇನ್ನೊಂದು ಕೈಯಲ್ಲಿ ಚಕ್ರ, ಎಡಗಡೆಯ ಒಂದು ಕೈಯಲ್ಲಿ ಧನಸ್ಸು, ಇನ್ನೊಂದು ಕೈಯಲ್ಲಿ ಶಂಖವಿದೆ. ಈಮೂರ್ತಿಶಿಲ್ಪ ಕಿರೀಟಮಕುಟ, ಕರ್ಣಕುಂಡಲ, ವೈಜಯಂತಿ ಹಾರ, ಕೈಕಡಗ ಮತ್ತು ಆಭರಣಗಳಿಂದ ಅಲಂಕಾರಗೊಂಡಿದೆ. ಕಟಿವಸ್ತ್ರ ಮೊಣಕಾಲಿನವರೆಗೆ ಇಳಿಬಿಟ್ಟಿದೆ. ವಿಷ್ಣುವಿನ ಎಡಬಲದಲ್ಲಿ ಶ್ರೀದೇವಿ ಮತ್ತು ಭೂದೇವಿಯ ಮೂರ್ತಿಗಳಿವೆ.

೬. ಹೆಸರು – ವಿಷ್ಣು

ಸ್ಥಳ – ಕೋಣಾರೆ, ಗ್ರಾಮದ ವಿಷ್ಣು ದೇವಾಲಯದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೫–೧೬ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೫೪ ಸೆಂ.ಮೀ ಎತ್ತರ ೩೬ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗೈ ಒಂದರಲ್ಲಿ (?), ಇನ್ನೊಂದು ಕೈ ಶಂಖವನ್ನು, ಎಡಗೈ ಒಂದರಲ್ಲಿ ಚಕ್ರ, ಇನ್ನೊಂದರಲ್ಲಿ ಗಧೆಯನ್ನು ಹಿಡಿದಿದ್ದಾನೆ. ಕಿರೀಟಮಕುಟ, ಪತ್ರಕುಂಡಲ, ಕಂಠಹಾರ, ಯಜ್ಞೋಪವೀತ, ಕೇಯೂರ, ಉದರಬಂಧ, ಕಟಿಸೂತ್ರ, ಪಾದಸರವನ್ನು ಧರಿಸಿ ಅಲಂಕೃತವಾಗಿದೆ.

೫.೫.೨ ಲಕ್ಷ್ಮಿ ವೆಂಕಟ್ರಮಣ

೧. ಹೆಸರು – ಲಕ್ಷ್ಮಿ ವೆಂಕಟ್ರಮಣ

ಸ್ಥಳ – ಕಾಗಲ, ಲಕ್ಷ್ಮಿ ವೆಂಕಟ್ರಮಣ ದೇವಾಲಯದ ಗರ್ಭಗೃಹದಲ್ಲಿದೆ.

ಕಾಲ – ಕ್ರಿ.ಶ ೧೦–೧೧ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ್

ಅಳತೆ – ೧೮೨.೮೮ ಸೆಂ.ಮೀ ಉದ್ದ, ೯೧.೪೪ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈ ಅಭಯ, ಇನ್ನೊಂದು ಕೈ ಚಕ್ರ, ಎಡಗಡೆಯ ಒಂದು ಕೈ ಸೊಂಟದ ಮೇಲಿದೆ, ಇನ್ನೊಂದು ಕೈಯಲ್ಲಿ ಶಂಖವಿದೆ. ಕಿರೀಟ ಮಕುಟ, ಕರ್ಣಕುಂಡಲ, ಕೊರಳಿಗೆ ಹಾರ, ಕೈಕಡಗ, ಕಾಲ್ಗಡಗವನ್ನು ಹೊಂದಿದೆ. ಸೊಂಟಕ್ಕೆ ಪಿತಾಂಬರವನ್ನು ಹೊಂದಿದ್ದು ಕಾಲಿನವರೆಗೆ ಇಳಿಬಿಟ್ಟಿದೆ. ಪ್ರಭಾವಳಿ ಹೊಂದಿದ್ದು. ಪಕ್ಕದಲ್ಲಿ ಶ್ರೀದೇವಿ ಮತ್ತು ಭೂದೇವಿಯರಿದ್ದಾರೆ.

೨. ಹೆಸರು – ಲಕ್ಷ್ಮಿವೆಂಕಟ್ರಮಣ

ಸ್ಥಳ – ಗೋಕರ್ಣ, ಲಕ್ಷ್ಮಿವೆಂಕಟ್ರಮಣ ದೇವಾಲಯದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೫ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೧೧೪ ಸೆಂ.ಮೀ ಎತ್ತರ ೪೮ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ.ಈತನ ಬಲಗಡೆ ಕೈ ಅಭಯ ಮುದ್ರೆಯಲಿದ್ದು, ಇನ್ನೊಂದು ಕೈಯಲ್ಲಿ ಶಂಖ ಹಿಡಿದಿದೆ. ಎಡಗಡೆಯ ಒಂದು ಕೈಯಲ್ಲಿ ಚಕ್ರ, ಇನ್ನೊಂದು ಕೈ ಗಧೆಯನ್ನು ಹಿಡಿದಿದೆ. ಈತನು ಕಿರೀಟಮಕುಟ, ಪತ್ರಕುಂಡಲ, ಕಂಠಹಾರ, ಯಜ್ಞೋಪವೀತ, ಉದರಬಂಧ, ಕಟಿಸೂತ್ರ, ಕೇಯೂರ, ಪಾದಸರ ಧರಿಸಿದ್ದಾನೆ. ಈತನ ಹಿಂದೆ ಹೂಲತೆ ಬಳ್ಳಿಗಳಿಂದ ಅಲಂಕೃತವಾದ ಪ್ರಭಾವಳಿಯಿದೆ.

೩. ಹೆಸರು – ವೆಂಕಟ್ರಮಣ

ಸ್ಥಳ – ಮಿರ್ಜಾನ, ವೆಂಕಟ್ರಮಣ ದೇವಸ್ಥಾನದಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೫–೧೬ನೇ ಶತಮಾನ

ವಸ್ತು – ಕ್ಲೊರೈಟಿಕ ಸಿಸ್ಟ

ಅಳತೆ – ೩೮ ಸೆಂ.ಮೀ ಎತ್ತರ ೪೫ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ ಬಲಗಡೆಯ ಒಂದು ಕೈಯಲ್ಲಿ ಶಂಖ, ಇನ್ನೊಂದು ಕೈ ಅಭಯ ಮುದ್ರೆಯಲ್ಲಿ ಇದೆ. ಎಡಗಡೆಯ ಒಂದು ಕೈಯಲ್ಲಿ ಚಕ್ರ, ಇನ್ನೊಂದು ಕೈಯಲ್ಲಿ ಪದ್ಮದಳ ಇದೆ. ಈತನು ಕಿರೀಟಮಕುಟ, ಹಾರ, ಯಜ್ಞೋಪವೀತ, ಉದರಬಂಧ, ಕಟಿಸೂತ್ರ ಧರಿಸಿ ಅಲಂಕಾರಭೂಷಿತನಾಗಿದ್ದಾನೆ.

೫.೫.೩ ಜನಾರ್ಧನ

೧. ಹೆಸರು – ಜನಾರ್ಧನ[೫೬]

ಸ್ಥಳ – ಧಾರೇಶ್ವರದ ಧಾರನಾಥ ದೇವಾಲಯ ಮೊಗಸಾಲೆಯಲ್ಲಿ

ಕಾಲ – ಕ್ರಿ.ಶ ೧೧ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೫೫ ಸೆಂ.ಮೀ ಎತ್ತರ ೩೨ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಜನಾರ್ಧನ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈಯಲ್ಲಿ ಪದ್ಮ ಹಿಡಿದು ಅಭಯ ಮುದ್ರೆಯಲ್ಲಿದ್ದಾನೆ, ಇನ್ನೊಂದು ಕೈ ಚಕ್ರ, ಎಡಗಡೆಯ ಒಂದು ಕೈಯಲ್ಲಿ ಗಧೆಯನ್ನು, ಇನ್ನೊಂದು ಕೈಯಲ್ಲಿ ಶಂಖವಿದೆ. ಕರಂಡ ಮಕುಟ, ಕಂಠಾಭರಣ, ಕಿವಿಯೋಲೆ, ಭುಜಬಂಧ, ಯಜ್ಞೋಪವೀತ, ಕೈಬಳೆ, ಕಾಲ್ಗಡಗ ಧರಿಸಿದ್ದಾನೆ. ಎಡಬಲಕ್ಕೆ ಚವರಿ ಹಿಡಿದಧಾರಿಣಿಯರಿದ್ದಾರೆ. ಪ್ರಭಾವಳಿಯ ತುದಿಯಲ್ಲಿರುವ ಕೀರ್ತಿಮುಖದ ಬಾಯಿಂದ ಹೊರ ಸೂಸಲ್ಪಡುವ ಮಣಿಯಾಕೃತಿಯ ಅಲಂಕರಣೆಯನ್ನೊಳಗೊಂಡಿದೆ.

೨. ಹೆಸರು – ಜನಾರ್ಧನ

ಸ್ಥಳ – ತಲಗೋಡ, ಜನಾರ್ಧನ ದೇವಾಲಯದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೨ನೇ ಶತಮಾನ

ವಸ್ತು – ಬೆಣಚು ಕಲ್ಲು

ಅಳತೆ – ೧೦೫ ಸೆಂ.ಮೀ ಎತ್ತರ ೨೨ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಕೈ (?) ಇನ್ನೊಂದು ಕೈ ಚಕ್ರ, ಎಡ ಒಂದು ಕೈ ಗಧೆ, ಇನ್ನೊಂದು ಕೈ ಶಂಖವಿದೆ. ವರ್ತುಲಾಕಾರದ ಪ್ರಭಾವಳಿಯು ಶಿಲ್ಪದ ಹೊರಭಾಗದ ಸುತ್ತಲೂ ಇದ್ದು, ಆಭರಣಗಳಿಂದ ಅಲಂಕೃತಗೊಳಿಸಲ್ಪಟ್ಟಿದೆ.

೫.೫.೪ ಕೇಶವ

೧. ಹೆಸರು – ಕೇಶವ

ಸ್ಥಳ – ಯಾಣ, ಕೇಶವ ದೇವಾಲಯದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೦–೧೧ನೇ ಶತಮಾನ

ವಸ್ತು – ಕ್ಲೋರೈಟಿಕ್‌ಸಿಸ್ಟ

ಅಳತೆ – ೬೨ ಸೆಂ.ಮೀ ಎತ್ತರ, ೪೮ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿಗೆ ಚತುರ್ಭುಜ ಇದೆ.ಬಲಗಡೆಯ ಕೈಯಲ್ಲಿ ಚಕ್ರ, ಇನ್ನೊಂದು ಕೈಯಲ್ಲಿ ಪದ್ಮ, ಎಡಗಡೆಯ ಒಂದು ಕೈಯಲ್ಲಿ ಗಧೆ, ಇನ್ನೊಂದು ಕೈಯಲ್ಲಿ ಶಂಖವಿದೆ. ಕಿರೀಟ ಮಕುಟ, ತೋಳಬಂದಿ, ಕಾಲ್ಗಡಗ ಮತ್ತು ಹಿಂಭಾಗದಲ್ಲಿ ಪ್ರಭಾವಳಿ ಇದೆ. ಅಕ್ಕಪಕ್ಕದಲ್ಲಿ ನಾಟ್ಯಮಾಡುವ ರೀತಿಯಲ್ಲಿದೆ. ಎಡಭಾಗದಲ್ಲಿ ಸಹಚರರಿದ್ದಾರೆ.

೨. ಹೆಸರು – ಕೇಶವ

ಸ್ಥಳ – ಕುಂದಗಣಿ, ಕೇಶವ ದೇವಾಲಯದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೦–೧೧ನೇ ಶತಮಾನ

ವಸ್ತು – ಬೆಣಚು ಕಲ್ಲು

ಅಳತೆ – ೬೦ ಸೆಂ.ಮೀ ಎತ್ತರ ೪೮ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಒಂದು ಕೈಯಲ್ಲಿ ಚಕ್ರ, ಇನ್ನೊಂದು ಕೈಯಲ್ಲಿ ಪದ್ಮ, ಎಡಗಡೆಯ ಒಂದು ಕೈಯಲ್ಲಿ ಗಧೆ, ಇನ್ನೊಂದು ಕೈಯಲ್ಲಿ ಶಂಖವಿದೆ. ಕಿರೀಟ ಮಕುಟ, ಕರ್ಣ ಕುಂಡಲ, ಯಜ್ಞೋಪವೀತ, ತೋಳಬಂದಿ, ಕೈಕಡಗ ಕಾಲ್ಗಡಗ ಸೊಂಟಕ್ಕೆ ಪಿತಾಂಬರ ಧರಿಸಿದೆ.

೫.೫.೫ ವೇಣುಗೋಪಾಲ

೧. ಹೆಸರು – ವೇಣುಗೋಪಾಲ[೫೭]

ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ಮೊಗ ಸಾಲೆಯಲ್ಲಿ

ಕಾಲ – ಕ್ರಿ.ಶ ೧೧ ನೇ ಶತಮಾನ

ವಸ್ತು – ಕ್ಲೋರೈಟಿಕ್ ಸಿಸ್ಟ

ಅಳತೆ – ೭೦ ಸೆಂ.ಮೀ ಎತ್ತರ ೪೦ ಸೆಂ.ಮೀ ಅಗಲ

ತ್ರಿಭಂಗಿಯಲ್ಲಿರುವ ವೇಣುಗೋಪಾಲ ದ್ವಿಭುಜನಾಗಿದ್ದಾನೆ. ಕೊಳಲು ನುಡಿಸುತ್ತಿದ್ದಾನೆ. ಕರಂಡ ಮಕುಟ, ವರ್ತುಲಾಕಾರದ ಕಿವಿಯೋಲೆ, ಅಗಲವಾದ ಕಂಠಾಭರಣ, ವೈಜಯಂತಿಹಾರ, ಭುಜಬಂಧ, ಕೈಬಳೆ, ಕಾಲ್ಗಡಗ, ಧರಿಸಿದ್ದಾನೆ. ಅಕ್ಕಪಕ್ಕದಲ್ಲಿ ಇರುವ ಎರಡು ಆಕಳುಗಳು ಗೋಪಾಲನು ನುಡಿಸುವ ಕೊಳಲನ್ನು ಮೇಲ್ಮುಖಮಾಡಿ ಆಲಿಸುವಂತಿದೆ.

ಪ್ರಭಾವಳಿಯ ತುದಿಯಲ್ಲಿ ಕೀರ್ತಿ ಮುಖವಿದ್ದು ಪ್ರಭಾವಳಿಯ ಸುತ್ತಲೂ ದಶಾವತಾರ ಕೆತ್ತನೆ ಇದೆ. ಶಿಲ್ಪದ ಪ್ರಭಾವಳಿಯ ಎಡಕ್ಕೆ ಚಕ್ರ, ಬಲಕ್ಕೆ ಗಧೆಯ ಸಂಕೇತ ಇದೆ.

೫.೫.೬ ಲಕ್ಷ್ಮಿನಾರಾಯಣ

೧. ಹೆಸರು – ಲಕ್ಷ್ಮಿನಾರಾಯಣ

ಸ್ಥಳ – ಕಬ್ಬರ್ಗಿ, ಲಕ್ಷ್ಮಿನಾರಾಯಣ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೨ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೯೨ ಸೆಂ.ಮೀ ಎತ್ತರ ೩೦ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಕೈಯಲ್ಲಿ ಪದ್ಮ, ಇನ್ನೊಂದು ಕೈ ಚಕ್ರ, ಎಡ ಒಂದು ಕೈಯಲ್ಲಿ ಗಧೆ, ಇನ್ನೊಂದು ಕೈ ಶಂಖವಿದೆ. ಕರಂಡಮಕುಟ, ಕರ್ಣಕುಂಡಲ, ಕಂಠಹಾರ, ಪಿತಾಂಬರಗಳಿಂದ ಅಲಂಕರಿಸಲ್ಪಟ್ಟಿದೆ. ಶಿಲ್ಪದ ಎಡಬಲಗಡೆ ಶ್ರೀದೇವಿ. ಮತ್ತು ಭೂದೇವಿಯರಿದ್ದಾರೆ.

೨. ಹೆಸರು – ಲಕ್ಷ್ಮಿನಾರಾಯಣ

ಸ್ಥಳ – ಹೆಬ್ಬೈಲ್, ಲಕ್ಷ್ಮಿನಾರಾಯಣ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೨ನೇ ಶತಮಾನ

ವಸ್ತು – ಬೆಣಚು ಕಲ್ಲು

ಅಳತೆ – ೪೮ ಸೆಂ.ಮೀ ಎತ್ತರ ೩೪ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಲಕ್ಷ್ಮಿನಾರಾಯಣ ಚತುರ್ಭುಜನಾಗಿದ್ದಾನೆ. ಬಲ ಒಂದು ಕೈ ಪದ್ಮ, ಇನ್ನೊಂದು ಕೈ ಚಕ್ರ, ಎಡಗಡೆಯ ಒಂದು ಕೈ ಗಧೆ, ಇನ್ನೊಂದು ಕೈಯಲ್ಲಿ ಶಂಖವಿದೆ. ಈ ಶಿಲ್ಪವು ಕರಂಡಮಕುಟ, ವೈಜಯಂತಿಹಾರ, ಕಟಿವಸ್ತ್ರಗಳಿಂದ ಅಲಂಕೃತಗೊಂಡಿದೆ. ಪ್ರಭಾವಳಿ ಕೀರ್ತಿಮುಖವನ್ನೊಳಗೊಂಡಿದೆ. ಶಿಲ್ಪದ ಅಕ್ಕಪಕ್ಕದಲ್ಲಿ ಶ್ರೀದೇವಿ ಮತ್ತು ಭೂದೇವಿಯರಿದ್ದಾರೆ.

೩. ಹೆಸರು – ಲಕ್ಷ್ಮಿನಾರಾಯಣ

ಸ್ಥಳ – ಯಾಣ, ಲಕ್ಷ್ಮಿನಾರಾಯಣ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೫–೧೬ನೇ ಶತಮಾನ

ವಸ್ತು – ಬೆಣಚು ಕಲ್ಲು

ಅಳತೆ – ೫೪ ಸೆಂ.ಮೀ ಎತ್ತರ ೨೩ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಲಕ್ಷ್ಮಿನಾರಾಯಣ ಚತುರ್ಭುಜನಾಗಿದ್ದಾನೆ. ಬಲಗಡೆಯ ಕೈ ಪದ್ಮ, ಇನ್ನೊಂದು ಕೈ ಚಕ್ರ, ಎಡಗಡೆಯ ಒಂದು ಕೈ ಗಧೆ, ಇನ್ನೊಂದು ಕೈ ಶಂಖ ಹಿಡಿದಿದೆ.

ಕಿರೀಟಮಕುಟ, ಮಣಿಹಾರ, ಕೈಕಡಗ, ಕಾಲ್ಗಡಗ ಆಭರಣ ಧರಿಸಿರುವ ಈ ಶಿಲ್ಪ ಹಿಂದೆ ಶಿಲ್ಪಪ್ರಭಾವಳಿ ಒಳಗೊಂಡಿದೆ. ಶಿಲ್ಪದ ಎಡ ಮತ್ತು ಬಲಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯರಿದ್ದಾರೆ.

೪. ಹೆಸರು – ಲಕ್ಷ್ಮಿನಾರಾಯಣ
ಸ್ಥಳ – ಮೊರಬಾ, ಲಕ್ಷ್ಮಿನಾರಾಯಣ ದೇವಸ್ಥಾನದ ಗರ್ಭಗೃಹದಲ್ಲಿ
ಕಾಲ – ಕ್ರಿ.ಶ ೧೮ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ
ಅಳತೆ – ೫೪ ಸೆಂ.ಮೀ ಎತ್ತರ ೨೩ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಕೈ ಅಭಯ ಮುದ್ರೆ, ಇನ್ನೊಂದು ಕೈಯಲ್ಲಿ ಶಂಖ ಹಿಡಿದಿದೆ. ಎಡಗಡೆಯ ಒಂದು ಕೈ ಲಕ್ಷ್ಮಿಯ ಸೊಂಟದ ಮೇಲಿದೆ. ಇನ್ನೊಂದು ಕೈಯಲ್ಲಿ ಚಕ್ರ ಹಿಡಿದಿದ್ದಾನೆ. ಕಿರೀಟಮಕುಟ, ಪತ್ರಕುಂಡಲ, ಕಂಠಹಾರ, ಕೇಯೂರ, ಉದರಬಂಧ, ಕಟಿಸೂತ್ರ, ಕಂಕಣ, ಪಾದಸರ, ಧರಿಸಿರುವುದು ಸಾಮಾನ್ಯ ಲಕ್ಷಣಗಳಾಗಿದೆ.

೫.೫.೭ ಗೋಪಾಲಕೃಷ್ಣ

೧. ಹೆಸರು – ಗೋಪಾಲಕೃಷ್ಣ
ಸ್ಥಳ – ಯಾಣ, ಗೋಪಲಕೃಷ್ಣ ದೇವಾಲಯದ ಗರ್ಭಗೃಹದಲ್ಲಿ
ಕಾಲ – ಕ್ರಿ.ಶ ೧೫ನೇ ಶತಮಾನ
ವಸ್ತು – ಬೆಣಚು ಕಲ್ಲು
ಅಳತೆ – ೬೧ ಸೆಂ.ಮೀ ಎತ್ತರ ೩೦ ಸೆಂ.ಮೀ ಅಗಲ

ತ್ರಿಭಂಗಿಯಲ್ಲಿರುವ ಗೋಪಾಲಕೃಷ್ಣ ದ್ವಿಭುಜನಾಗಿದ್ದು, ಕೊಳಲು ನುಡಿಸುತ್ತಿದ್ದಾನೆ. ಈ ಶಿಲ್ಪವು ಸಾಂಪ್ರದಾಯಕವಾದ ಆಭರಣಗಳಿಂದ ಅಲಂಕರಿಸಲ್ಪಟ್ಟಿದೆ. ಕರಂಡಮಕುಟ, ಮತ್ತು ಪಿತಾಂಬರ ಧರಿಸಿರುವ ಈ ಮೂರ್ತಿಹಿಂಭಾಗ ಮಕರ ತೋರಣದ ಪ್ರಭಾವಳಿಯನ್ನು ಹೊಂದಿದೆ. ಗೋವುಗಳು ಕೃಷ್ಣನ ಕೊಳಲಿನ ನಾದಕ್ಕೆ ಮೈಮರೆತಂತೆ ಶಿಲ್ಪಿಯು ಬಿಂಬಿಸಿದ್ದಾನೆ. ಶಿಲ್ಪದ ಪಕ್ಕದಲ್ಲಿ ವಾಹನ ಗರುಡನ ಶಿಲ್ಪವಿದೆ.

೨. ಹೆಸರು – ಗೋಪಾಲಕೃಷ್ಣ
ಸ್ಥಳ – ಹೆಗಡೆ, ಗೋಪಲಕೃಷ್ಣ ದೇವಾಲಯದ ಗರ್ಭಗೃಹ
ಕಾಲ – ಕ್ರಿ.ಶ ೧೫ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ
ಅಳತೆ – ೭೬ ಸೆಂ.ಮೀ ಎತ್ತರ ೪೬ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿಗೆ ನಾಲ್ಕು ಕೈಗಳಿವೆ. ಬಲಗಡೆಯ ಒಂದು ಕೈಯಲ್ಲಿ ಫಲ, ಇನ್ನೊಂದು ಕೈಯಲ್ಲಿ ಚಕ್ರ, ಎಡಗಡೆಯ ಒಂದು ಕೈಯಲ್ಲಿ ಗಧೆ, ಇನ್ನೊಂದು ಕೈಯಲ್ಲಿ ಶಂಖವಿದೆ. ಕಿರೀಟಮಕುಟ, ಕಂಠಹಾರ, ಕೈಕಡಗ, ಕಾಲ್ಗಡಗ ಮತ್ತು ಪಿತಾಂಬರಗಳಿಂದ ಅಲಂಕೃತಗೊಂಡಿದೆ

೫.೫.೮ ದೇವಕಿಕೃಷ್ಣ

೧. ಹೆಸರು – ದೇವಕಿ ಕೃಷ್ಣ

ಸ್ಥಳ – ಕಾಗಲ ದೇವಕಿ ಕೃಷ್ಣ ದೇವಸ್ಥಾನದಗರ್ಭಗೃಹದಲ್ಲಿ

ಕಾಲ – ಕ್ರಿ.ಶ ೧೫–೧೬ನೇ ಶತಮಾನ

ವಸ್ತು – ಕ್ಲೊರೈಟಿಕ್ ಸಿಸ್ಟ

ಅಳತೆ – ೯೧.೪೪ ಸೆಂ.ಮೀ ಉದ್ದ, ೬೦.೯೬ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ದ್ವಿಭುಜನಾಗಿದ್ದಾನೆ. ಬಲಗೈಯಲ್ಲಿ ಫಲ ಎಡಗೈ ಸೊಂಟದ ಮೇಲಿದೆ. ಈ ಶಿಲ್ಪವು ಕಿರೀಟಮಕುಟ, ಕಟಿವಸ್ತ್ರ ಕರ್ಣಕುಂಡಲಗಳಿಂದ ಅಲಂಕೃತವಾಗಿದೆ. ತಾಯಿ ದೇವಕಿ ಕೃಷ್ಣನನ್ನು ಸೊಂಟದ ಮೇಲೆ ಕೂರಿಸಿಕೊಂಡಂತೆ ಕಂಡರಿಸಲಾಗಿದೆ. ಈ ಶಿಲ್ಪವನ್ನು ಗಮನಿಸಿದಾಗ ಶಿಲ್ಪಿಯು ಈ ಮೂರ್ತಿಯನ್ನು ಜನಪದೀಯವಾಗಿ ನಿರ್ಮಾಣಮಾಡಿದ್ದು ಸ್ಥಳೀಯ ಪ್ರಭಾವ ಕಂಡು ಬರುತ್ತದೆ.

೫.೫.೯ ಸೂರ್ಯ ನಾರಾಯಣ

೧. ಹೆಸರು – ಸೂರ್ಯ ನಾರಾಯಣ

ಸ್ಥಳ – ಗೋಕರ್ಣ, ಸೂರ್ಯ ನಾರಾಯಣ ದೇವಸ್ಥಾನದ ಗರ್ಭಗೃಹದಲ್ಲಿ

ಕಾಲ – ಕ್ರಿ.ಶ.೮ನೇ ಶತಮಾನ

ವಸ್ತು – ಬಳಪದ ಕಲ್ಲು

ಅಳತೆ – ೩೦ ಸೆಂ.ಮೀ ಎತ್ತರ ೩೫ ಸೆಂ.ಮೀ ಅಗಲ

ದ್ವಿಭುಜಮೂರ್ತಿ. ಅಶ್ವಾ ರೂಡವಾದ ಈ ಶಿಲ್ಪ ಕಿರಿಟ, ಕರ್ಣಕುಂಡಲ, ಕಂಠಹಾರ ಯಜ್ಞೋಪವೀತ, ಕಟಿವಸ್ತ್ರ ಕೈಖಡಗಗಳನ್ನು ಹೊಂದಿದೆ. ಈ ಶಿಲ್ಪವು ಸಮಭಂಗಿಯಲ್ಲಿ ನಿಂತಿದೆ.ಪೀಠದಲ್ಲಿ ಸೂರ್ಯನ ಮುಂದೆ ಏಳು ಅಶ್ವಗಳನ್ನು ನಡೆಸುತ್ತಿರುವ ಸೂರ್ಯನ ಸಾರಥಿ ಇದೆ. ಸೂರ್ಯನ ಬಲಭಾಗದಲ್ಲಿ ಉಷಾದೇವಿ, ಎಡಭಾಗದಲ್ಲಿ ಪ್ರತ್ಯುಷಾ ಶಿಲ್ಪಗಳಿವೆ.

೫.೫.೧೦ ಶಂಕರ ನಾರಾಯಣ

ಶಂಕರ ನಾರಾಯಣ ಆರಾಧನೆ ಉತ್ತರಕನ್ನಡದ ಕರಾವಳಿ ಭಾಗದಲ್ಲಿ ಜನಪ್ರಿಯವಾಗಿದೆ. ಈ ಪರಂಪರೆ ಗೋಕರ್ಣದಲ್ಲಿ ಹೆಚ್ಚು ಪ್ರಚಲಿತವಿದೆ. ಶಂಕರ ನಾರಾಯಣ ಪರಿಕಲ್ಪನೆಯು ಶೈವ ಮತ್ತು ವೈಷ್ಣವ ಧರ್ಮದ ಸಾಮರಸ್ಯದ ಪ್ರತೀಕವಾಗಿ ಬೆಳೆದು ಬಂದಿತು.

ಈ ಪ್ರದೇಶದಲ್ಲಿ ಶೈವ ಧರ್ಮ ಜನಪ್ರಿಯವಾಗಿತ್ತು. ಆದರೆ ಕ್ರಿ.ಶ ೧೨ ನೇ ಶತಮಾನದ ಭಾಗದಲ್ಲಿ ವೈಷ್ಣವ ಪಂಥವು ಜನಪ್ರಿಯವಾಗ ತೊಡಗಿದಾಗ ಶೈವ ಮತ್ತು ವೈಷ್ಣವ ಪಂಥದ ಬೆಂಬಲಿಗರು ಎರಡು ದೇವತೆಗಳ ಆರಾಧನೆ ಪ್ರಾರಂಭಿಸಿದರ ದ್ಯೋತಕವಾಗಿ ಶಂಕರ ನಾರಾಯಣ ಹೆಚ್ಚು ಜನಪ್ರಿಯತೆಗಳಿಸಿತು.

೧. ಹೆಸರು – ಶಂಕರ ನಾರಾಯಣ
ಸ್ಥಳ – ಗೋಕರ್ಣ, ಶಂಕರನಾರಾಯಣ ದೇವಸ್ಥಾನದ ಗರ್ಭಗೃಹದಲ್ಲಿದೆ.
ಕಾಲ – ಕ್ರಿ.ಶ ೧೦–೧೧ನೇ ಶತಮಾನ
ವಸ್ತು – ಬೆಣಚು ಕಲ್ಲು
ಅಳತೆ – ೫೩ ಸೆಂ.ಮೀ ಎತ್ತರ ೫೩ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಚತುರ್ಭುಜನಾಗಿದ್ದಾನೆ. ಬಲಗಡೆಯ ಒಂದು ಕೈಯಲ್ಲಿ ಬಿಲ್ಲು, ಇನ್ನೊಂದು ಕೈಯಲ್ಲಿ,(?) ಎಡಗಡೆಯ ಒಂದು ಕೈಯಲ್ಲಿ(?), ಇನ್ನೊಂದು ಕೈಯಲ್ಲಿ ಶಂಖವಿದೆ. ವೈಜಯಂತಿ ಹಾರ, ಕೈಖಡಗ, ಕಟಿಬಂಧ ಇತರೇ ಆಭರಣಗಳಿಂದ ಅಲಂಕೃತಗೊಂಡಿದೆ. ಪ್ರಭಾವಳಿಯಲ್ಲಿ ಯಾವುದೇ ಅಲಂಕಾರವಿಲ್ಲ. ಈ ಮೂರ್ತಿ ಎತ್ತರವಾದ ಪಾಣಿಪೀಠದ ಮೇಲಿದೆ. ಪಕ್ಕದಲ್ಲಿ ಗಣಪತಿ ಮೂರ್ತಿ ಮತ್ತು ನಾಗಶಿಲೆ ಇದೆ.

೫.೫.೧೧ ಯೋಗನರಸಿಂಹ

೧. ಹೆಸರು – ಯೋಗ ನರಸಿಂಹ[೫೮]
ಸ್ಥಳ – ಧಾರೇಶ್ವರ, ಧಾರನಾಥ ದೇವಾಲಯದ ಮುಂದೆ ಪುಷ್ಕರಣಿ
ಕಾಲ – ಕ್ರಿ.ಶ. ೧೧ ನೇ ಶತಮಾನ
ವಸ್ತು – ಕ್ಲೊರೈಟಿಕ್ ಸಿಸ್ಟ
ಅಳತೆ – ೭೬ ಸೆಂ.ಮೀ ಎತ್ತರ, ೪೫ ಸೆಂ.ಮೀ ಅಗಲ

ಯೋಗಪಟ್ಟದಲ್ಲಿ ಈ ಮೂರ್ತಿಶಿಲ್ಪವಿದೆ. ಎರಡು ಕೈಗಳನ್ನು ಯೋಗಪಟ್ಟದಲ್ಲಿ ಮೊಣಕಾಲ ಮೇಲೆ ಇಟ್ಟಿದ್ದಾನೆ. ಎರಡು ಕೈಗಳೂ ಭಗ್ನವಾಗಿವೆ. ಕರಂಡ ಮುಕುಟ, ಅಗಲವಾದ ಕಂಠಾಭರಣ, ಭುಜಬಂದ, ಕೈಬಳೆ, ಕಾಲ್ಗಡಗ, ಉದರಬಂಧ, ಉದ್ದದ ಹಾರ, ಯಜ್ಞೋಪವೀತವನ್ನು ಧರಿಸಿದ್ದಾನೆ. ತೆರೆದ ಕಣ್ಣು, ತೆರೆದ ಬಾಯಿ, ಮುಖಭಾಗ ಯೋಗಪಟ್ಟದಲ್ಲಿದ್ದು ಉಗ್ರರೂಪದಲ್ಲಿದೆ.

೧. ಹೆಸರು – ದತ್ತಾತ್ರೇಯ
ಸ್ಥಳ – ಗೋಕರ್ಣ, ದತ್ತಾತ್ರೇಯ ದೇವಸ್ಥಾನದಗರ್ಭಗೃಹದಲ್ಲಿ
ಕಾಲ – ಆಧುನಿಕ
ವಸ್ತು – ಅಮೃತ ಶಿಲೆ
ಅಳತೆ – ೫೭ ಸೆಂ.ಮೀ ಎತ್ತರ ೨೦ ಸೆಂ.ಮೀ ಅಗಲ

ಸಮಭಂಗಿಯಲ್ಲಿರುವ ಈ ಮೂರ್ತಿ ಮೂರು ಮುಖಗಳನ್ನು ಹೊಂದಿದ್ದು, ಆರು ಕೈಗಳಿವೆ. ಇತನ ಬಲಗಡೆ ಕೈಯಲ್ಲಿ ಜಪಮಾಲೆ, ಎರಡನೇ ಕೈ ವರದ ಮುದ್ರೆ, ಮೂರನೇ ಕೈಯಲ್ಲಿ ಚಕ್ರವಿದೆ, ಎಡಗಡೆಯ ಒಂದನೇ ಕೈಯಲ್ಲಿ ಕಮಂಡಲ, ಎರಡನೇ ಕೈಯಲ್ಲಿ ತ್ರಿಶೂಲ, ಮೂರನೇ ಕೈಯಲ್ಲಿ ಶಂಖವನ್ನು ಹಿಡಿದುಕೊಂಡಿದ್ದಾನೆ. ಎಡ ತೋಳಲ್ಲಿ ಜೋಳಿಗೆ ಇದೆ. ಕೆಳಗೆ ಅನುಚರ ನಾಯಿ ಇದೆ. ಈತನು ಕಿರೀಟಮಕುಟ, ಕಂಠಹಾರ, ಕಾಸಿನಸರ, ಯಜ್ಞೋಪವೀತ, ಕಟಿಸೂತ್ರ, ಪಾದಸರಗಳನ್ನು ಧರಿಸಿದ್ದಾನೆ.

೫.೬ ಜೈನ ಮೂರ್ತಿಶಿಲ್ಪಗಳು

ಜೈನಧರ್ಮ ಕರ್ನಾಟಕದಲ್ಲಿ ಕ್ರಿ.ಪೂ ಕಾಲದಿಂದಲೇ ಪ್ರವಹಿಸಿತು. ಎಂಬುವುದಕ್ಕೆ ಶಾಸನ ಮತ್ತು ಸಾಹಿತ್ಯಿಕ ಆಧಾರಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಜೈನ ತಿರ್ಥಂಕರರೆಲ್ಲರೂ ಉತ್ತರ ಭಾರತದಲ್ಲೇ ಜನಿಸಿದರೂ ಜೈನಶಾಸ್ತ್ರ ಗ್ರಂಥಗಳನ್ನು ರಚಿಸಿದ ಆಚಾರ್ಯರಲ್ಲಿ ಹೆಚ್ಚಿನವರು ಕರ್ನಾಟಕದವರು. ಪ್ರಾಚೀನ ಕರ್ನಾಟಕದಲ್ಲಿ ಶ್ರವಣಬೆಳಗೊಳ, ಬನವಾಸಿ, ಕೊಪ್ಪಳ, ಹಲಸಿ ಮುಂತಾದ ಕಡೆಗಳಲ್ಲಿ ಜೈನ ಕೇಂದ್ರಗಳು ಪ್ರವರ್ಧಮಾನಕ್ಕೆ ಬಂದವು. ಕ್ರಿ.ಶ. ಆರಂಭದ ಕಾಲದಲ್ಲಿ ರಾಜಶ್ರಯ ದೊರೆತ್ತಿದ್ದರಿಂದ ಜೈನಧರ್ಮ ಇಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂದಿತು.

ಹಿಂದು ಮೂರ್ತಿಶಿಲ್ಪಕ್ಕೂ ಜೈನಮೂರ್ತಿಶಿಲ್ಪದ ಲಕ್ಷಣಗಳಿಗೂ ಭೇಧಗಳಿವೆ. ಪ್ರಸ್ತುತ ಜೈನಮೂರ್ತಿಶಿಲ್ಪಕ್ಕೆ ಸಂಬಂಧಿಸಿದಂತೆ ಮೂರ್ತಿ ಶಿಲ್ಪದ ವೈಶಿಷ್ಟತೆಯ ದೃಷ್ಟಿಯಿಂದ ಜೈನ ಮೂರ್ತಿ ಶಿಲ್ಪದಲ್ಲಿ ದ್ರುವಬೇರು ಮತ್ತು ಚಲಬೇರು ಎಂಬ ಪ್ರಭೇದಗಳಿವೆ. ಮೂರ್ತಿಶಿಲ್ಪದ ರಚನೆಗೆ ಸಂಬಂಧಿಸಿದಂತೆ ಬಿಳಿಕಪ್ಪು, ಕೆಂಪು, ಹಸಿರು, ಬಣ್ಣದ ಶಿಲೆಗಳಿಂದ ನಿರ್ಮಿಸುವುದು. ಶ್ರೇಷ್ಠವಾದುದಾಗಿದೆ.[೫೯] ಜೈನ ಮೂರ್ತಿ ಶಿಲ್ಪ ರಚನೆಯಲ್ಲಿ ೨ ಭಂಗಿ ಪ್ರಮುಖ. ೧. ಕಾರ್ಯೋತ್ಸಂಗ ಭಂಗಿ, ೨. ಖಡ್ಗಾಸನ ಭಂಗಿ, ಜಿನ ಪರಂಪೆರಯ ೨೪ ತೀರ್ಥಂಕರರಲ್ಲಿ ೨೧ ಜನ ತೀರ್ಥಂಕರು ಕಾರ್ಯೋತ್ಸಂಗ ಭಂಗಿಯಲ್ಲಿ ನಿಂತು ಮರಣ ಹೊಂದಿದ್ದಾರೆ ಉಳಿದ ತೀರ್ಥಂಕರರಾದ ಆದಿನಾಥ, ನೇಮಿನಾಥ, ಮಹಾವೀರ ಇವರು ಪಲ್ಯಂಕಾಸನ ಭಂಗಿಯಲ್ಲಿ ಕುಳಿತು ಮರಣ ಹೊಂದಿದ್ದಾರೆ. ಹೀಗಾಗಿ ಈ ಧರ್ಮದಲ್ಲಿ ಎರಡೇ ಭಂಗಿಗಳು ಹೆಚ್ಚು ಜನಪ್ರಿಯವಾದ್ದವು.[೬೦]

೨೪ ತೀರ್ಥಂಕರರಲ್ಲಿ ಅವರ ಲಾಂಛನ ಮತ್ತು ಯಕ್ಷ ಯಕ್ಷಿಯರು ಚಾಮರದಾರಿಯರು ಮತ್ತು ಪೀಠಗಳಲ್ಲಿ ವ್ಯತ್ಯಾಸಗಳಿವೆ. ದಿಗಂಬರ ಪಂಥದ ಸಂಹಿತೆಗಳ ಪ್ರಕಾರ ೨೪ ತೀರ್ಥಂಕರರ ಲಾಂಛನ ಯಕ್ಷ-ಯಕ್ಷಿಯರು ಹೀಗಿವೆ. [೬೧]

ಅ.ನಂ	ತೀರ್ಥಂಕರರು	ಲಾಂಛನಗಳು	ಯಕ್ಷ	ಯಕ್ಷಿಯರು
೧	ವೃಷಭನಾಥ	ಎತ್ತು	ಗೋಮುಖ	ಚಕ್ರೇಶ್ವರಿ
೨	ಅಜಿತನಾಥ	ಆನೆ	ಮಹಾಯಕ್ಷ	ರೋಹಿಣಿ
೩	ಶಂಭುನಾಥ	ಕುದುರೆ	ತ್ರಿಮುಖ	ಪ್ರಜ್ಞಪ್ತಿ
೪	ಅಭಿನಂದನಾಥ	ಮಂಗ	ಯಕ್ಷೇಶ್ವರ	ವಜ್ರಶಂಖಲಾ
೫	ಸುಮತಿನಾಥ	ಚಕ್ರವಾಕಪಕ್ಷಿ	ತುಂಬರು	ಪುರುಷದತ್ತ
೬	ಪದ್ಮಪ್ರಬನಾಥ	ಕಮಲ	ಕುಸುಮಾವರ	ಮನೋವೇಗ
೭	ಸುಪಾರ್ಶ್ವನಾಥ	ಸ್ವಸ್ತಿಕ	ವರನಂದಿ	ಕಾಳಿ
೮	ಚಂದ್ರಪ್ರಭನಾಥ	ಚಂದ್ರ	ಶ್ಯಾಮ	ಜ್ವಾಲಾಮಾಲಿನಿ
೯	ಪುಷ್ಪದಂತನಾಥ	ಮೊಸಳೆ	ಅಜಿತ	ಮಹಾಕಾಳಿ
೧೦	ಶೀತಲನಾಥ	ಕಲ್ಪವೃಕ್ಷ	ಬ್ರಹ್ಮ	ಮಾನವಿ
೧೧	ಶ್ರೇಯೊಂಸನಾಥ	ಖಡ್ಗಮೃಗ	ಈಶ್ವರ	ಗೌರಿ
೧೨	ವಾಸುಪೂಜ್ಯನಾಥ	ಕೋಣ	ಕುಮಾರ	ಗಾಂಧಾರ
೧೩	ವಿಮಲನಾಥ	ಹಂದಿ	ಷಣ್ಮುಖ	ವೈರೂಟಿ
೧೪	ಅನಂತನಾಥ	ಕರಡಿ	ಪಾತಾಲ	ಅನಂತ ಮಾತಿ
೧೫	ಧರ್ಮನಾಥ	ವಜ್ರ	ಕಿನ್ನರ	ಮಾನಸಿ
೧೬	ಶಾಂತಿನಾಥ	ಜಿಂಕೆ	ಗರುಡ	ಮಹಾಮಾನಸಿ
೧೭	ಕುಂಥನಾಥ	ಕುರಿ	ಗಂಧರ್ವ	ಜಯೆ
೧೮	ಅರನಾಥ	ಮೀನು	ಮಹೇಂದ್ರ	ವಿಜಯ
೧೯	ಮಲ್ಲಿನಾಥ	ಕುಂಭ	ಕುಬೇರ	ಅಪರಾಜಿತೆ
೨೦	ಮುನಿಸುವೃತನಾಥ	ಆಮೆ	ವರುಣ	ಬಹುರೂಪಿಣಿ
೨೧	ನಮಿನಾಥ	ನಾಲಕಮಲ	ವಿದ್ಯುತ್ಪ್ರಬ	ಚಾಮುಂಡಿ
೨೨	ನೇಮಿನಾಥ	ಶಂಖ	ಸರ್ವಾಹ್ಣ	ಕೂಷ್ಮಾಂಡಿನಿ
೨೩	ಪಾರ್ಶ್ವನಾಥ	ಸರ್ಪ	ಧರಣೇಂದ್ರ	ಪದ್ಮಾವತಿ
೨೪	ಮಹಾವೀರ	ಸಿಂಹ	ಮಾತಂಗ	ಸಿದ್ಧಾಯಿನಿ

ಪ್ರಸ್ತುತ ಕುಮಟಾ ತಾಲೂಕಿಗೆ ಸೀಮಿತವಾಗಿ ಎರಡು ಶಿಲ್ಪಗಳನ್ನು ಮಾತ್ರ ಇಲ್ಲಿದಾಖಲಿಸಲಾಗಿದೆ.

೧.	ಹೆಸರು –	ಶಾಂತೇಶ್ವರ ಸ್ವಾಮಿ
ಸ್ಥಳ –	ಬಸದಿಗದ್ದೆ (ಮೇದನಿ)
ಕಾಲ –	ಕ್ರಿ.ಶ. ೧೩–೧೪ ನೇ ಶತಮಾನ
ವಸ್ತು –	ಮರಳುಗಲ್ಲು
ಅಳತೆ –	೬೦ ಸೆಂ.ಮೀ ೩೧ ಸೆಂ.ಮೀ ಅಗಲ

ಕಾರ್ಯೋತ್ಸರ್ಗ ಭಂಗಿಯಲ್ಲಿರುವ ಈ ಶಿಲ್ಪವು ನಿರಾಭರಣವಾಗಿದೆ. ಇದು ಜೈನ ಯತಿಯನ್ನು ಹೋಲುವಂತಿದೆ. ಪಾಣಿಪೀಠದ ಮೇಲೆ ಇದೆ. ಹಿಂಭಾಗದಲ್ಲಿ ಪ್ರಭಾವಳಿಯಿದ್ದು ಶಿಲ್ಪದ ಅಕ್ಕ ಪಕ್ಕದಲ್ಲಿ ಸಹಚರರಾದ ಯಕ್ಷ ಮತ್ತು ಯಕ್ಷಿಯರಿದ್ದಾರೆ.

೨.	ಹೆಸರು –	ಆದೇಶ್ವರ
ಸ್ಥಳ –	ವಾಲಗಳ್ಳಿ, ಬಸದಿಯ ಗರ್ಭಗೃಹದಲ್ಲಿ
ಕಾಲ –	ಕ್ರಿ.ಶ. ೧೯ ನೇ ಶತಮಾನ
ವಸ್ತು –	ಅಮೃತ ಶಿಲೆ
ಅಳತೆ –	೩೦ ಸೆಂ.ಮೀ ಎತ್ತರ ೩೦ ಸೆಂ.ಮೀ ಅಗಲ

ಧ್ಯಾನ ಮುದ್ರೆ (ಪದ್ಮಾಸನ) ಯಲ್ಲಿರುವ ಈ ಶಿಲ್ಪವನ್ನು ಅಮೃತಶಿಲೆಯಿಂದ ನಿರ್ಮಿಸಲಾಗಿದೆ. ಪದ್ಮಾಸನದಲ್ಲಿದೆ. ಹಳೆಯ ಮೂರ್ತಿ ಬಿನ್ನವಾಗಿದ್ದ ಹಿನ್ನೆಲೆಯಲ್ಲಿ ಇದನ್ನು ಸ್ಥಾಪಿಸಲಾಗಿದೆ.

ಒಟ್ಟಿನಲ್ಲಿ ಈ ಅಧ್ಯಾಯದಲ್ಲಿ ಕುಮಟಾ ತಾಲೂಕಿನಲ್ಲಿ ಲಭ್ಯವಾಗಿರುವ ಮೂರ್ತಿಶಿಲ್ಪಗಳ ಕುರಿತು ವಿವರಿಸುವ ಪ್ರಯತ್ನ ಮಾಡಲಾಗಿದೆ. ಕ್ಷೇತ್ರಕಾರ್ಯದಲ್ಲಿ ದೇವಾಲಯಗಳಲ್ಲಿನ ಬಿಡಿ ಬಿಡಿಯಾಗಿ ದೊರೆತಿರುವ ಮೂರ್ತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅವುಗಳ ಪ್ರತಿಮಾ ಲಕ್ಷಣಗಳನ್ನು ಕಾಲಮಾನವನ್ನು ಅಧ್ಯಯನ ಮಾಡಲಾಗಿದೆ.

ಕುಮಟಾ ತಾಲೂಕಿನ ವ್ಯಾಪ್ತಿಯಲ್ಲಿ ಪುರಾಣಪ್ರಸಿದ್ಧ ಎರಡು ಕ್ಷೇತ್ರಗಳಾದ ಗೋಕರ್ಣ ಮತ್ತು ಧಾರೇಶ್ವರಗಳಿವೆ. ಗೋಕರ್ಣದಲ್ಲಿನ ದ್ವಿಭುಜ ಗಣಪತಿಯು ಕ್ರಿ.ಶ. ೨–೩ ನೇ ಶತಮಾನಕ್ಕೆ ಸೇರುತ್ತದೆ. ಕುಬ್ಜಯಕ್ಷ ರೂಪದಲ್ಲಿರುವ ಇದು ಗುಪ್ತ ಶೈಲಿಗೆ ಉತ್ತಮ ಮಾದರಿಯಾಗಿದೆ. ಕರ್ನಾಟಕದಲ್ಲಿ ಅತಿ ಪ್ರಾಚೀನ ಗಣೇಶ ಶಿಲ್ಪವಾಗಿದೆ. ಇದಕ್ಕೆ ಪೂರಕವಾಗಿ ಕೋಟಿ ತೀರ್ಥ ಬಳಿಯ ಸೂರ್ಯಶಿಲ್ಪ ಕೂಡ ಗುಪ್ತ ಶೈಲಿಗೆ ಮಾದರಿಯಾಗಿದೆ.


ಶೈವ ಮೂರ್ತಿಶಿಲ್ಪಗಳು ಈ ಪ್ರದೇಶದಲ್ಲಿ ಅತಿ ವಿರಳವಾಗಿ ದೊರೆತಿವೆ. ಬಹುತೇಕ ಶಿವನನ್ನು ಲಿಂಗರೂಪದಲ್ಲಿ ಆರಾಧಿಸುವ ಪರಂಪರೆ ಜನಪ್ರಿಯವಾಗಿತ್ತು. ವೀರಭದ್ರ, ಭೈರವ ಹೀಗೆ ಶಿವನ ವಿವಿಧ ಅವತಾರಗಳು ಪ್ರಚಲಿತದಲ್ಲಿದ್ದುದು ಮೂರ್ತಿಶಿಲ್ಪಗಳಿಂದ ಸ್ಪಷ್ಟವಾಗುತ್ತದೆ.

ಶಕ್ತಿಯ ಆರಾಧನೆ ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಜನಪ್ರಿಯವಾಗಿತ್ತು. ಗೋಕರ್ಣದ ಭದ್ರಕಾಳಿ, (ಕ್ರಿ.ಶ. ೫–೬ನೇ ಶತಮಾನ) ಮಹಿಷಾಸೂರಮರ್ದಿನಿ (ಕ್ರಿ.ಶ. ೮ನೇ ಶತಮಾನ) ಅತಿ ಪ್ರಾಚೀನ ಶಿಲ್ಪಗಳಾಗಿವೆ. ಧಾರೇಶ್ವರದ ಧಾರನಾಥ ದೇವಾಲಯದ ಪ್ರಾಕಾರದಲ್ಲಿರುವ ಸರಸ್ವತಿ ಕ್ರಿ.ಶ ೧೦ನೇ ಶತಮಾನಕ್ಕೆ ಸೇರುತ್ತದೆ.ಈ ಪ್ರದೇಶದಲ್ಲಿ ವೈಷ್ಣವ ಶಿಲ್ಪದ ಪ್ರಾಚೀನತೆಯು ಬೆಂಗಣೆಯ ದ್ವಿಭುಜ ನರಸಿಂಹ ಶಿಲ್ಪದಿಂದ ಆರಂಭವಾಗುತ್ತದೆ ತಲಗೋಡಿನ ಜನಾರ್ಧನ, ವಾಲಗಳ್ಳಿಯ ವಿಷ್ಣು ಕ್ರಿ.ಶ. ೧೧ನೇ ಶತಮಾನಕ್ಕೆ ಸೇರುತ್ತವೆ.

ಕ್ರಿ.ಶ. ೧೪ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ವಿಜಯನಗರ ಸಾಮ್ರಾಜ್ಯದ ಪ್ರಭುತ್ವ ಈ ಪ್ರದೇಶದ ಮೇಲೂ ಇತ್ತು. ಗೋಕರ್ಣ ಪ್ರದೇಶದಲ್ಲಿ ದೊರೆತಿರುವ ಲಕ್ಷ್ಮಿ–ನಾರಾಯಣ, ವೀರಭದ್ರ, ಶಿವಲಿಂಗಗಳು, ವಾಲಗಳ್ಳಿಯ ತೀರ್ಥಂಕರ ಶಿಲ್ಪಗಳು ಉತ್ತಮ ಉದಾಹರಣೆಗಳಾಗಿವೆ. ಕ್ರಿ.ಶ. ೧೫ನೇ ಶತಮಾನದ ನಂತರ ಮೂರ್ತಿಶಿಲ್ಪಗಳಲ್ಲಿ ಸಾಂಪ್ರದಾಯಿಕ ಮತ್ತು ಸ್ಥಳೀಯ ಶೈಲಿಗಳ ಸಮ್ಮಿಳನದ ಪ್ರಭಾವ ಕಂಡು ಬರುತ್ತದೆ. ಸಾಂಪ್ರದಾಯಿಕ ಶಾಸ್ತ್ರೋಕ್ತ ಕ್ರಮಬದ್ಧ ಪ್ರತಿಮೆಗಳ ರಚನೆ ವಿಜಯನಗರ ಕಾಲದವರೆಗೆ ಮುಂದುವರೆದು ನಂತರ ರಾಜಾಶ್ರಯದ ಕೊರತೆ ಪ್ರೋತ್ಸಾಹದ ಕೊರತೆಯಿಂದ ಕಲಾತ್ಮಕ ರಚನಾಕಾರ್ಯ ಕ್ಷೀಣಗೊಂಡಿತ್ತೆಂದು ಅಧ್ಯಯನದಿಂದ ತಿಳಿದುಬರುವ ಅಂಶವಾಗಿದೆ.

ಮೂರ್ತಿ ಶಿಲ್ಪಗಳ ವೈವಿಧ್ಯತೆ

೧	ಜೈನ ಶಿಲ್ಪಗಳು	೦೨
೨	ಗಾಣಪತ್ಯ ಶಿಲ್ಪಗಳು	೨೫
೩	ಶೈವ ಶಿಲ್ಪಗಳು	
	ಶಿವಲಿಂಗಗಳು	೧೬
	ನಂದಿಶಿಲ್ಪಗಳು	೧೦
	ಭೈರವಶಿಲ್ಪಗಳು	೦೨
	ವೀರಭದ್ರ	೦೧
೪	ಶಾಕ್ತ ಶಿಲ್ಪಗಳು	
	ಪಾರ್ವತಿ	೧೧
	ಸರಸ್ವತಿ	೦೧
	ಲಕ್ಷ್ಮೀ	೦೧
	ದುರ್ಗೆ	೦೪
	ಮಹಿಷಾಸುರಮರ್ಧಿನಿ	೦೯
೫	ವೈಷ್ಣವ ಶಿಲ್ಪಗಳು	
	ವಿಷ್ಣು	೦೬
	ಲಕ್ಷ್ಮೀ ವೆಂಕಟ್ರಮಣ	೦೩
	ಜನಾರ್ಧನ	೦೨
	ಕೇಶವ	೦೨
	ವೇಣುಗೋಪಾಲ	೦೧
	ಲಕ್ಷ್ಮೀನಾರಾಯಣ	೦೫
	ಗೋಪಾಲಕೃಷ್ಣ	೦೨
	ಯೋಗನರಸಿಂಹ	೦೧
	ಇತರೆ	೦೧



ಅಡಿ ಟಿಪ್ಪಣಿಗಳು

೧. ಕೆ.ಜಿ.ಭಟ್ಟ ಸೂರಿ., "ಕರ್ಕಿಯ ಐತಿಹಾಸಿಕ ಪರಂಪರೆ", ೨೦೧೬, ಪು.೭೬.

೨. ರಾಮಚಂದ್ರರಾವ್ ಎಸ್.ಕೆ., "ಮೂರ್ತಿಶಿಲ್ಪದ ನೆಲೆಹಿನ್ನೆಲೆ", ೧೯೭೫, ಪು. ೫೦.

೩. ಸುಂದರ ಅ., "ದೇವಾಲಯ ಮೂರ್ತಿಶಿಲ್ಪ ಚೈತ್ಯಾಲಯ ಒಂದು ವಿಶ್ಲೇಷಣೆ", ೧೯೯೪, ಪು. ೭೨.

೪. ಚಿದಾನಂದ ಮೂರ್ತಿ ಎಂ., "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ೧೯೭೯, ಪು. ೪೫೯.

೫. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ, ೧೯೭೫, ಪು. ೬೪.

೬. ಕುರಗುಂದ.ಟಿ,ಪಂಕಜಾಕ್ಷ., ಶಿಲ್ಪ ಸೌಂದರ್ಯ, ೨೦೦೬, ಪು. ೪–೬.

೭. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ, ೧೯೭೫, ಪು. ೬೪.

೮. ಕುರಗಂದ.ಟಿ,ಪಂಕಜಾಕ್ಷ., ಪೂರ್ವೋಕ್ತ, ೨೦೦೬, ಪು. ೧೮.

೯. ವೆಂಕೋಬರಾವ್ ಬಿ., ವಿಗ್ರಹರಾಧನೆಯೂ–ವಿಗ್ರಹಗಳು, ಶಿಲ್ಪಕಲಾ ಪ್ರಪಂಚ, ೧೯೫೯, ಪು. ೪೬.

೧೦. ರಾಮಚಂದ್ರರಾವ್.ಎಸ್.ಕೆ., ಪೂರ್ವೋಕ್ತ, ೧೯೭೫, ಪು. ೬೮.

೧೧. ಅದೇ. ಪು

೧೨. ಕುರಗುಂದ.ಟಿ. ಪಂಕಜಾಕ್ಷ., ಪೂರ್ವೋಕ್ತ, ೨೦೦೬, ಪು. ೩೨.

೧೩. ರಾಮಚಂದ್ರರಾವ್ ಎಸ್.ಕೆ, ಪೂರ್ವೋಕ್ತ, ೧೯೭೫, ಪು. ೭.

೧೪. ಕನ್ನಡ ವಿಷಯ ವಿಶ್ವಕೋಶ., (ಸಂ–೧) ೨೦೦೫, ಪು. ೯೧–೯೩

೧೫. ಸುಂದರ.ಅ, "ಕ್ಷೇತ್ರ ಗೋಕರ್ಣ ಮತ್ತು ಇಡಗುಂಜಿಯ ಶಿಲಾಗಣೇಶ ಶಿಲ್ಪದ ಪ್ರಾಚೀನತೆ" ಕರ್ನಾಟಕ ಭಾರತಿ ಸಂ.೮/೩, ೧೯೭೫.

೧೬. ಭಟ್‌ಸೂರಿ ಕೆ.ಜಿ,. "ಧಾರನಾಥ ದೇವಾಲಯ ಧಾರೇಶ್ವರ", ೧೯೯೬,ಪು. ೧೭.

೧೭. ಅದೇ. ಪು. ೧೬–೧೭

೧೮. ಅದೇ. ಪು. ೧೭.

೧೯. ಸುಂದರ ಅ., ಉಪ್ಪಿನಪಟ್ಟಣದ ಮೂರು ಗಮನಾರ್ಹ ಶಿಲ್ಪಗಳು, ಮಾನವಿಕಭಾರತಿ, ಸಂಪುಟ. ೪, ಸಂ. ೩–೪, ಪು. ೧–೬.

೨೦. ಭಟಸೂರಿ ಕೆ.ಜಿ., ಪೂರ್ವೋಕ್ತ, ೧೯೯೬, ಪು. ೧೩.

೨೧. ಸುಂದರ ಅ., (ಸಂ) ಕರ್ನಾಟಕ ಚರಿತ್ರೆ, ೧, ೧೯೯೭, ಪು. ೩೧೩.

೨೨. ಅದೇ. ಪು

೨೩. ಕುರಗುಂದ ಟಿ ಪಂಕಜಾಕ್ಷ., ಪೂರ್ವೋಕ್ತ, ಪು. ೩೩೧.

೨೪. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ, ೧೯೯೬,ಪು. ೧೩.

೨೫. ಅದೇ. ಪು.

೨೬. ಅದೇ. ಪು.

೨೭. ಅದೇ. ಪು. ೧೪.

೨೮. ಅದೇ. ಪು.

೨೯. ಅದೇ. ಪು. ೧೫.

೩೦. ಅದೇ. ಪು.

೩೧. ಸ್ವಾಮಿ ಹರ್ಷಾನಂದ (ಮೂಲ), ಹೆಚ್ ರಾಮಚಂದ್ರಸ್ವಾಮಿ (ಅನು)., ಹಿಂದು ದೇವದೇವಿಯರು, ೨೦೦೯, ಪು.೭೮.

೩೨. ರಾಮಚಂದ್ರರಾವ ಎಸ್ ಕೆ., ಪೂರ್ವೋಕ್ತ,೧೯೭೫, ಪು. ೧೨೪.

೩೩. ಅದೇ. ಪು. ೧೫.

೩೪. ಅದೇ, ಪು. ೧೨೫.

೩೫. ಅದೇ, ಪು. ೧೭೫-೧೭೬.

೩೬. Rama Rao M., –Saivite Deities of Andhradesa p,54

೩೭. ವಸಂತ ಲಕ್ಷ್ಮಿ ಕೆ., "ಕರ್ನಾಟಕದ ಸರಸ್ವತಿ ಶಿಲ್ಪಗಳು", ಇತಿಹಾಸ ದರ್ಶನ, ಸಂ. ೫, ೧೯೯೦, ಪು.೭೪.

೩೮. ಭಟ್‌ಸೂರಿ ಕೆ. ಜಿ., ಪೂರ್ವೋಕ್ತ, ೧೯೯೬, ಪು. ೧೬.

೩೯. ಸ್ವಾಮಿ ಹರ್ಷಾನಂದ (ಮೂಲ) ಹೆಚ್ ರಾಮಚಂದ್ರ ಸ್ವಾಮಿ (ಅನು)., ಪೂರ್ವೋಕ್ತ, ೨೦೦೯, ಪು. ೮೫.

೪೦. ಶ್ರೀಧರ ಮೂರ್ತಿ, ಮ., ದೇವತೆಗಳು ಮತ್ತು ಹಬ್ಬಗಳು, ೧೯೮೧, ಪು. ೨೧-೨೨.

೪೧. ಅದೇ ಪು.೨೭-೨೮.

೪೨. Gopinath Rao T.A-Hindu Iconography I -2 P-341-342.

೪೩. ನರಸಿಂಹ ಮೂರ್ತಿ ಪಿ.ಎನ್., ದುರ್ಗೆ, ತರಂಗ ವಾರ ಪತ್ರಿಕೆ,(೧ ನವಂಬರ ೨೦೦೧), ಪು. ೪೦.

೪೪. ಅದೇ, ಪು. ೪೧.

೪೫. ಅದೇ, ಪು ೪೦.

೪೬. ಸುಂದರ ಅ., ಉಪ್ಪಿನಪಟ್ಟಣದ ಮೂರು ಗಮನಾರ್ಹ ಶಿಲ್ಪಗಳು, ಪೂರ್ವೋಕ್ತ, ಪು. ೧-೬.

೪೭. ರಾಮಚಂದ್ರರಾವ ಎಸ್ ಕೆ., ಪೂರ್ವೋಕ್ತ, , ಪು. ೧೨೪-೧೨೫.

೪೮. ಸರ್ಕಾರ ಡಿ.ಸಿ.ಸಿಲೆಕ್ಟಡ್., ಇನ್ಸ್ಕ್ರಿಪ್‌ಶನ್ಸ ಬೆರಿಂಗ ಆನ್ ಇಂಡಿಯನ್ ಹಿಸ್ಟ್ರಿ, ಸಂ. I, ನಂ.೮೨ ಪು. ೧೯೩.

೪೯. ಶ್ರೀನಿವಾಸ ಪಾಡಿಗಾರ., ಬಾದಾಮಿ ಮತ್ತು ವೈಷ್ಣವ ಧರ್ಮ, ೧೯೮೯, ಪು. ೧೦೭.

೫೦. ಸುಂದರ ಅ., ಇತ್ತೀಚಿನ ಕೆಲವು ಪುರಾತತ್ವ ಶೋಧನೆಗಳು, ಕರ್ನಾಟಕ ಭಾರತಿ, ಸಂ.೮/೨,ಪು.೧೫.

೫೧. ಸುಂದರ ಅ., "ಪ್ರಾಚೀನ ಕರ್ನಾಟಕದಲ್ಲಿ ನರಸಿಂಹ ಶಿಲ್ಪದ ವಿಕಾಸ ಒಂದು ವಿವೇಚನೆ", ಸಂಶೋಧನೆ, ಪು. ೭೮೪-೭೯೩.

೫೨. ಗಣಪತಿ ಗೌಡ ಎಸ್., "ಮುಗ್ದೂರಿನ ಎರಡು ಪ್ರಾಚೀನ ಶಿಲ್ಪಗಳು", ಕರ್ನಾಟಕ ಭಾರತಿ, ಸಂ ೨೪/೩, ಪು. ೮೧-೮೪.

೫೩. ಸುಂದರ ಅ., "ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧನಗಳು", ಪೂರ್ವೋಕ್ತ, ಸಂ ೮/೨, ಪು. ೧೦-೧೨.

೫೪. ಸುಂದರ ಅ., ಸಿದ್ದರ ಮತ್ತು ಸುಂಕೇರಿ ಗ್ರಾಮಗಳಲ್ಲಿನ ಎರಡು ಅಪರೂಪದ ಶಿಲಾಮೂರ್ತಿಗಳು, ಕರ್ನಾಟಕ ಭಾರತಿ ಸಂ೨೧/೩, ಪು. ೧೨೧-೧೩೧.

೫೫. ಗಣಪತಿ ಗೌಡ ಎಸ್., ಪೂರ್ವೋಕ್ತ ಸಂ ೨೪/೩, ಪು. ೮೧-೮೪.

೫೬. ಅದೇ ಪು.

೫೭. ಅದೇ ಪು.

೫೮. ಭಟ್ ಸೂರಿ ಕೆ.ಜಿ., ಪೂರ್ವೋಕ್ತ, ೧೯೯೬, ಪು. ೧೯.

೫೯. ಶಾಂತಿರಾಜ ಶಾಸ್ತ್ರಿ ಎ., (ಸಂ) ಜಿನಸೇನಾಚಾರ್ಯ. ಗುಣಭದ್ರಾಚಾರ್ಯ ವಿರಚಿತಂ. ಮಹಾಪುರಾಣ, ಸಂ. ೧, ೧೯೮೧, ಪರ್ವ ಸಂ. ೨೧, ಪು. ೬೮, ೮೨೮, ೮೨೯.

೬೦. ಶೆಟ್ಟಿ ಎಸ್.ಡಿ., ಜೈನ ಬಸದಿಗಳು, ೧೯೯೯, ಪು.೩೬.

೬೧. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ ಪು. ೧೭೫-೧೭೬.

ಅಧ್ಯಾಯ ಆರು

ಸಾಂಸ್ಕೃತಿಕಸಾಮಾಜಿಕ ಆರ್ಥಿಕ ಧಾರ್ಮಿಕ ಸ್ಥಿತಿಗತಿಗಳು

'ಸಂಸ್ಕೃತಿ'ಪದ ಲ್ಯಾಟಿನ ಭಾಷೆಯ ಕಲ್ಟ್‌ಪದದಿಂದ ಬಂದಿದೆ. ಗೌರವಿಸು, ಸೇವಿಸು, ನಿಷ್ಠೆಮಾಡು, ಲಕ್ಷದಲ್ಲಿರಿಸಿಕೊ ಎಂದರ್ಥ.[೧] ಸಂಸ್ಕೃತಿ ಎಂದರೆ ಒಂದು ಜನಾಂಗದ ಜೀವನ ವಿಧಾನ, ಅವರವರ ಆಚಾರ-ವಿಚಾರಗಳು, ಸಂಪ್ರದಾಯಗಳು ಭಾಷೆ, ಧರ್ಮ ಕಲೆಗಳಾಗಿವೆ.[೨] ಒಂದು ಜನಾಂಗದ ಇತಿಹಾಸವೆಂದರೆ ಅವರು ಅನುಸರಿಸಿದ ಸಂಪ್ರದಾಯಗಳು, ಜಾತಿಗಳು, ಭಾಷೆ, ಧರ್ಮ, ಶಿಕ್ಷಣ, ಕಲೆ ಮೌಲ್ಯಗಳ ವಿವರಣೆಯೇ ಆಗಿದೆ. ಈ ಹಿನ್ನೆಲೆಯಲ್ಲಿ ಉತ್ತರಕನ್ನಡ ಜಿಲ್ಲೆಯ ಪ್ರಸ್ತುತ ಕುಮಟಾ ತಾಲೂಕಿಗೆ ಸೀಮಿತ ಮಾಡಿಕೊಂಡು ಅಲ್ಲಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಗಳ ಚಿತ್ರಣವನ್ನು ಒಂದೆಡೆ ಸೆರೆ ಹಿಡಿಯಲಾಗಿದೆ.

೬.೧ ಸಾಮಾಜಿಕ ವ್ಯವಸ್ಥೆ

ವೇದಯುಗದ ಉತ್ತರಾರ್ಧದಿಂದ ಪ್ರಾಚೀನ ಭಾರತೀಯ ಸಮಾಜ ವರ್ಣವ್ಯವಸ್ಥೆಯ ಚೌಕಟ್ಟಿನಲ್ಲಿ ಬೆಳೆದು ಬಂದಿದೆ. ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳನ್ನು ವಿಂಗಡಿಸಲಾಗಿದ್ದು, ಋಗ್ವೇದದ ಪುರುಷ ಸೂಕ್ತ ಮತ್ತು ಸಮಕಾಲೀನ ಸಾಹಿತ್ಯಿಕ ಕುರುಹುಗಳು ಇವನ್ನು ಮನದಟ್ಟು ಮಾಡುತ್ತವೆ.[೩]

೬.೧.೧ ಬ್ರಾಹ್ಮಣರು

ಪ್ರಾಚೀನ ಮತ್ತು ಮಧ್ಯಯುಗೀನ ಕಾಲದ ಸಮಾಜದಲ್ಲಿ ಬ್ರಾಹ್ಮಣರಿಗೆ ಉನ್ನತಸ್ಥಾನ ಇತ್ತು. ಹುಯೆನ್‌ತ್ಸಾಂಗನು ಅಂದಿನ ಸಮಾಜದಲ್ಲಿದ್ದ ನಾಲ್ಕು ವರ್ಣಗಳ ಬಗ್ಗೆ ಬರೆಯುತ್ತ ಬ್ರಾಹ್ಮಣರು ಪರಿಶುದ್ಧ ಜೀವನ ನಡೆಸುತ್ತಿದ್ದರೆಂದು ತತ್ವಗಳನ್ನು ಆಚರಣೆಯಲ್ಲಿ ತರುತ್ತಿದ್ದರೆಂದು, ಧರ್ಮಾಚರಣೆಯಲ್ಲಿ ತೊಡಗುತ್ತಿದ್ದರೆಂದು ಉಲ್ಲೇಖಿಸಿದ್ದಾನೆ.[೪] ಕ್ರಿ.ಶ ೧೧೬೭ರ ಅಡತಾರೆ ಶಾಸನವು ಕೆಚು ಸೋಮಯಾಜಿ ಮತ್ತು ಇತರ ಮಹಾಜನರಿಗೆ ಅಡತಾರೆ ಗ್ರಾಮವನ್ನು ಅಗ್ರಹಾರವನ್ನಾಗಿ ನೀಡಲಾಯಿತು ಎಂದು ಉಲ್ಲೇಖಿಸುತ್ತದೆ.[೫] ಮಹಾಜನರು ಎಂದರೆ ವಿವಿಧ ವಿಷಯಗಳಲ್ಲಿ ಪರಿಣಿತಿ ಪಡೆದ ಬ್ರಾಹ್ಮಣರೆಂದು ಹೇಳಬಹುದು. ಕ್ರಿ.ಶ ೧೧೭೮ರ ಕತಗಾಲ ಶಾಸನವು ಕಾಮದೇವನು ಹೈವೆ ಮತ್ತು ಬನವಾಸಿ ರಾಜ್ಯದ ಆಡಳಿತಗಾರನಾಗಿದ್ದು ಚಂದ್ರಿಕಾಪುರದಲ್ಲಿದ್ದಾಗ ಸಂಗಡಿ ಗ್ರಾಮವನ್ನು ಶಂಕರೋಪಾಧ್ಯಾಯ ಮತ್ತು ಕೆಲ ಬ್ರಾಹ್ಮಣರಿಗೆ ದಾನಕೊಟ್ಟನೆಂದು ಹೇಳಿದೆ.[೬] ಕ್ರಿ.ಶ ೧೨೫೫ರ ಗೋಕರ್ಣ ತಾಮ್ರಪಟ ಶಾಸನವು ಕಾಮದೇವನು ಮೂರುರು ಅಗ್ರಹಾರದಲ್ಲಿ ಬ್ರಾಹ್ಮಣರಿಗೆ ಭೂಮಿಯನ್ನು ದಾನ ನೀಡಿದನೆಂದು ಉಲ್ಲೇಖಿಸುತ್ತದೆ.[೭] ಕ್ರಿ.ಶ ೧೨೫೬ರ ಕತಗಾಲ ಶಾಸನವು ಚಂದಾವರ ಕಾದಂಬರಾಜ ಕಾಮದೇವನು ಹೈವೆ ಮತ್ತು ಬನವಾಸಿ ರಾಜ್ಯಗಳನ್ನು

ಆಳುತ್ತಿದ್ದಾಗ ಚಂದ್ರಿಕಾಪುರದ ಹಳ್ಳಿಯ ಸಂಗಡಿ ಬ್ರಹ್ಮಪುರಿಯನ್ನು ಗೋವಿಂದ ಪರಿಮಿತ, ತ್ರಿವಿಕ್ರಮ ನಾರಾಯಣ ಭಟ್ಟ, ವಿಷ್ಣು ಭಟ್ಟ, ಕೇಶವ ಪರಿಮಿತ ಮತ್ತು ದಾಮೋದರ ಭಟ್ಟರಿಗೆ ಕೊಡಲಾಯಿತೆಂದು ಉಲ್ಲೇಖಿಸುತ್ತದೆ.[೮] ಕ್ರಿ.ಶ ೧೫ನೇ ಶತಮಾನಕ್ಕೆ ಸೇರಿದ ಗೋಕರ್ಣದಲ್ಲಿ ದೊರೆತ ಶಾಸನ[೯] ಅಂಕೋಲಾ ತಾಲೂಕಿನ ಹೊಸೂರು ಗ್ರಾಮವನ್ನು ಗೋಕರ್ಣದ ತಾಮ್ರಗೌರಿದೇವಾಲಯದಲ್ಲಿ ಕಟ್ಟಿದ ಸತ್ರದ ನಿರ್ವಹಣೆಗೆಂದು ಮಹಾಪ್ರಧಾನ ಮಂಜು ನಾಯ್ಕರು ಮಹಾಬಲಭಟ್ಟರಿಗೆ ದಾನ ಕೊಟ್ಟಿದ್ದರೆಂದು ತಿಳಿಸುತ್ತದೆ.

ಬ್ರಾಹ್ಮಣರ ಆಹಾರ ಪದ್ಧತಿಯನ್ನು ಕೆಲವು ಶಾಸನಗಳು ಉಲ್ಲೇಖಿಸಿವೆ.[೧೦] ಅವುಗಳೆಂದರೆ –

೧) ತಾಳೆಯ ಮೇಲೋಗರ–ಬಹುಶಃ ಊಟದ ಹೊತ್ತಿಗೆ ನಂಜಿಕೊಳ್ಳಲು ಮಾಡಿದ ಪದಾರ್ಥ

೨) ತೊಯ – ಬೇಳೆಯನ್ನು ಬೇಯಿಸಿ ಮಾಡಿದ ಸಿದ್ಧ ಪದಾರ್ಥ

೩) ಕಲಸುಮೇಲೋಗರ– ಅನ್ನವನ್ನು ಕಲಸಿ ಊಟ ಮಾಡಲು ಸಾರಿನಂತಹ ಮಸಾಲೆ ಪದಾರ್ಥ

೪) ಪಳಿದ್ಯ– ಮಜ್ಜಿಗೆಯನ್ನು ಉಪಯೋಗಿಸಿ ಮಾಡುವ ಪದಾರ್ಥ

೫) ಸಾಸಿವೆ(ಸಾಸಿಮೆ)– ಸ್ಥಳೀಯವಾಗಿ ಲಭ್ಯವಾಗಿರುವ ಬಾಳೆ, ಮಾವಿನ ಹಣ್ಣನ್ನು ಉಪಯೋಗಿಸಿ ಮಾಡುವ ಒಂದು ಬಗೆಯ ಪದಾರ್ಥ

೬) ಕಜ್ಜಾಯ– ತೆಂಗಿನಕಾಯಿ, ತುರಿಬೆಲ್ಲ ಅಥವಾ ಸಕ್ಕರೆ ಹಾಕಿ ಮಾಡಿದ ಸಿಹಿ ತಿಂಡಿಯ ಬಗೆ

೬.೧.೨ ಕ್ಷತ್ರಿಯರು

ಬ್ರಾಹ್ಮಣರ ತರುವಾಯ ಸಮಾಜದಲ್ಲಿ ಕ್ಷತ್ರಿಯರು ಸ್ಥಾನ ಪಡೆದಿದ್ದರು. ಆಡಳಿತ ವ್ಯವಸ್ಥೆಯಲ್ಲಿ ಕ್ಷತ್ರಿಯ ರಾಜನು ಸರ್ವಾಧಿಕಾರಿ ಎನಿಸಿದ್ದನು. ರಾಜ್ಯ ಮತ್ತು ಪ್ರಜೆಗಳನ್ನು ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳಿಂದ ರಕ್ಷಿಸುವದು ಅವರ ಕರ್ತವ್ಯವಾಗಿತ್ತು. ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳಲ್ಲಿ ಇವರನ್ನು ಮಹಾಮಂಡಳೇಶ್ವರ[೧೧] ಮಹಾಪ್ರಧಾನ[೧೨] ಪುರವರಾಧೀಶ್ವರ[೧೩] ದಣ್ಣಾಯಕ[೧೪] ಮಹಾಸಾಮಂತಾಧಿಪತಿ[೧೫] ಹೆಸರುಗಳಿಂದ ಕರೆಯಲಾಗಿದೆ. ಇದರಲ್ಲಿ ಅನೇಕರು ಬೇರೆ ವರ್ಗಕ್ಕೆ ಸೇರಿದವರಿದ್ದರೂ ಹೆಚ್ಚಿನವರು ಈ ವರ್ಗದವರೇ ಆಗಿದ್ದರು. ಅವರು ತಮ್ಮ ಹೆಸರಿನ ಮುಂದೆ ನಾಯಕ ಪದವನ್ನು ಸೇರಿಸಿಕೊಳ್ಳುತ್ತಿದ್ದರು.[೧೬]

೬.೧.೩ ವೈಶ್ಯರು

ಸಾಮಾಜಿಕ ವ್ಯವಸ್ಥೆಯಲ್ಲಿ ವೈಶ್ಯರು ಮೂರನೇ ವರ್ಗಕ್ಕೆ ಸೇರಿದವರು. ಇವರ ಪ್ರಮುಖ ಉದ್ಯೋಗ ವ್ಯಾಪಾರ ಮತ್ತು ಕೃಷಿ. ವೈಶ್ಯರು ವರ್ತಕ ವರ್ಗದವರಾದ ಶೆಟ್ಟರ

ಜನಾಂಗದವರು[೧೭] ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುವವರಾಗಿದ್ದರು. ಹಾರುಮಾಸ್ಕೇರಿಯಲ್ಲಿ ದೊರೆತ ಶಾಸನ[೧೮] ಮಾದಿಶೆಟ್ಟಿಯ ಮಗ ಬೊಮ್ಮಣ್ಣಶೆಟ್ಟಿ ಭೂಮಿಯನ್ನು ಖರೀದಿಸಿ ಗೋಕರ್ಣದ ಮಹಾಬಲೇಶ್ವರ ದೇವರಿಗೆ ದಾನಕೊಟ್ಟನೆಂದು ಹೇಳಿದೆ. ಇದೇ ಶಾಸನ ಬೊಮ್ಮಣ್ಣಶೆಟ್ಟಿ ಆ ಭೂಮಿಯನ್ನು ಗೇಣಿಗೆ ಸಯಿಗನ ಹಳ್ಳಿಯ ಶೆಟ್ಟಿಕಾರ ವಜ್ರಶೆಟ್ಟಿಯ ಮಗ ಕಾಮಣ್ಣಶೆಟ್ಟಿಗೆ ೩೬ ಮೂಡೆ ಅಕ್ಕಿಯನ್ನು ಪ್ರತಿವರ್ಷ ವಾರ್ಷಿಕ ತೆರಿಗೆಯಾಗಿ ಮಾರ್ಗಶಿರಮಾಸದಲ್ಲಿ ಈಶ್ವರದೇವರಿಗೆ ನೀಡುವಂತೆ ತಿಳಿಸಿಕೊಟ್ಟರು ಎಂದು ತಿಳಿಸುತ್ತದೆ.

೬.೧.೪ ಶೂದ್ರರು

ವೈಶ್ಯರ ನಂತರ ಸ್ಥಾನವನ್ನು ಶೂದ್ರರು ಪಡೆದುಕೊಂಡರು. ಇವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಗಗಳ ಸೇವೆಯನ್ನು ಮಾಡುತ್ತಿದ್ದರೆಂಬುದು ಪ್ರತೀತಿ ಇದೆ. ಇವರು ಆರ್ಥಿಕವಾಗಿ ನಿರ್ಬಲರು ಆಗಿದ್ದರು. ಕುಂಬಾರಿಕೆ, ನೇಕಾರಿಕೆ, ಬಡಿಗಾರಿಕೆ, ಚಮ್ಮಾರಿಕೆ, ಶಿಲ್ಪಗಾರಿಕೆ ಹೀಗೆ ಮುಂತಾದ ಕರಕುಶಲವೃತ್ತಿಯನ್ನು ಮಾಡುತ್ತಿದ್ದರು. ಶಿಲ್ಪಿಗಳು ಶಾಸನಗಳನ್ನು ಕೆತ್ತುತ್ತಿದ್ದರು. ಕ್ರಿ.ಶ ೧೨೫೬ರ ಕತಗಾಲ ಶಾಸನದಲ್ಲಿ[೧೯] ಧಾರೇಶ್ವರದ ಬೊಮ್ಮಜ್ಜ ಶಿಲ್ಪಿಯ ಹೆಸರು ಉಲ್ಲೇಖಗೊಂಡಿದೆ.ಇವರು ಕರಕುಶಲ ಕೆಲಸದ ಜೊತೆಗೆ ವ್ಯವಸಾಯವನ್ನು ಮಾಡುತ್ತಿದ್ದರು.

೬.೧.೫ ಸ್ತ್ರೀಯರ ಸ್ಥಾನಮಾನ

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಸ್ತ್ರೀಯರಿಗೆ ಗೌರವಯುತವಾದ ಸ್ಥಾನವಿತ್ತು. "ಯತ್ರ ನಾರ್ಯಸ್ತು ಪೂಜ್ಯತೆ ತತ್ರದೇವತಾ" ಎಂದರೆ ಎಲ್ಲಿ ಸ್ತ್ರೀ ಪೂಜೆಗೆ ಒಳಪಡುವಳೋ ಅಲ್ಲಿ ದೇವತೆಯರು ನೆಲೆಸಿರುವರು ಎಂಬ ಮಾತಿದೆ. ವೇದಕಾಲದಲ್ಲಿ ಸ್ತ್ರೀಯರೂ ಪುರುಷರಂತೆ ಶಿಕ್ಷಣ ಪಡೆಯುತ್ತಿದ್ದರು.

ಸಮಾಜದಲ್ಲಿ ಉನ್ನತ ಸ್ಥಾನ ಹೊಂದಿದರು ಉದಾ: ಬಾದಾಮಿ ಚಾಲುಕ್ಯ ದೊರೆ ೨ನೇಪುಲಕೇಶಿಯ ಸೊಸೆ ವಿಜಯಭಟ್ಟಾರಿಕೆ ಕೌಮುದೀಮಹೋತ್ಸವವನ್ನು ಬರೆದು ಪ್ರಖ್ಯಾತ ಲೇಖಕಿಯಾಗಿದ್ದಳು.[೨೦] ಇಮ್ಮಡಿ ವಿಕ್ರಮಾದಿತ್ಯನ ಪತ್ನಿ ತ್ರೈಲೋಕ್ಯ ಮಹಾದೇವಿ ಪಟ್ಟದಕಲ್ಲಿನಲ್ಲಿ ಲೋಕೇಶ್ವರ ದೇವಾಲಯವನ್ನು ಕಟ್ಟಿಸಿ ದಾನ ನೀಡಿದಳು.[೨೧] ದ್ವಾರಸಮುದ್ರದ ಹೊಯ್ಸಳರ ಪ್ರಸಿದ್ಧ ದೊರೆ ವಿಷ್ಣುವರ್ಧನನ ರಾಣಿ ಶಾಂತಲೆ ಜೈನಧರ್ಮಿಯಳು, ಉತ್ತಮ ಆಡಳಿತಗಾರಳು ನೃತ್ಯವಿಶಾರದೆಯೂ ಆಗಿದ್ದಳು.[೨೨] ಗೋವೆಯ ಕದಂಬ ಅರಸ ಎರಡನೇ ಜಯಕೇಶಿಯ ರಾಣಿ ಮೈಳಲಾದೇವಿಯು ಹೈವೆ ಐಯ್ನೂರ ಕೊಂಕಣ ಒಂಭೈನೂರ ಹಲಸಿ ಪ್ರದೇಶಗಳನ್ನು ಆಳುತ್ತಿದ್ದಳೆಂದು ಧಾರವಾಡ ತಾಲೂಕಿನ ನರೇಂದ್ರ ಶಾಸನ ದಾಖಲಿಸುತ್ತದೆ.[೨೩]

ಪ್ರಸ್ತುತ ಕುಮಟಾ ತಾಲೂಕಿಗೆ ಸಂಬಂಧಿಸಿದಂತೆ ಹೇಳುವುದಾದರೆ ಮೊದಲು ಸ್ತ್ರೀಯರು ತಮ್ಮ ಪತಿಯ ವೀರಮರಣದ ಜ್ಞಾಪಕಾರ್ಥವಾಗಿ ಶಾಸನ ನಿಲ್ಲಿಸುತ್ತಿದ್ದರು. ಕ್ರಿ.ಶ ೧೦೭೯ರ ಹಳದಿಪುರ ಶಾಸನ[೨೪] ಗೋಕರ್ಣದ ನಾಗವರ್ಮರಸನಿಗೂ ೨ನೇಕಾಮದೇವರಸನಿಗೂ ನಡೆದ ಯುದ್ಧದ ಸಂದರ್ಭದಲ್ಲಿ ಮುದ್ದುಗಹಲಿತಾ ಎಂಬುವ ಯೋಧ ಸಾವನಪ್ಪಿರುವದರಿಂದ ಈತನ ಮಡದಿಯರೇ ಶಾಸನವನ್ನು ಬರೆಸಿದರು. ಕ್ರಿ.ಶ ೧೦೮೩ರ ಧಾರೇಶ್ವರದಲ್ಲಿ ದೊರೆತ ಶಾಸನದಲ್ಲಿ[೨೫] ಹೈವಣ್ಣರಸನ ರಾಣಿ ಚಟ್ಟಬರಸಿಯು ಧಾರೇಶ್ವರದ ದೇವಾಲಯಕ್ಕೆ ೨ ಅಗ್ರಹಾರಗಳನ್ನು ದಾನಕೊಟ್ಟಳೆಂದು ಮತ್ತು ಕೇಶವ ದೇವರಿಗೆ ಕಾಣಿಕೆಗಳನ್ನು ನೀಡಿದಳೆಂದಿದೆ. ಇದರಿಂದ ಮೇಲ್ವರ್ಗದ ಸ್ತ್ರೀಯರು ಆಕಾಲದಲ್ಲಿ ದೇವಾಲಯಕ್ಕೆ ದಾನ-ದತ್ತಿ ನೀಡುತ್ತಿದ್ದರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಒಟ್ಟಾರೆಯಾಗಿ ಈ ಪ್ರಾಂತದ ಸ್ತ್ರೀಯರೂ ಸಮಾಜಿಕವಾಗಿ ಸ್ಥಾನ ಹೊಂದಿದ್ದಾರೆಂದು ತಿಳಿಯಬಹುದು.

೬.೧.೬ ವೈವಾಹಿಕ ಸಂಬಂಧಗಳು

ಇದೊಂದು ಪವಿತ್ರ ಬಂದನವಾಗಿದ್ದು ವ್ಯಕ್ತಿಯು ಗ್ರಹಸ್ಥನಾಗಬೇಕಾದರೆ ಈ ಸಂಸ್ಕಾರವನ್ನು ಆಚರಿಸಬೇಕು. ನಂತರ ದಿನಗಳಲ್ಲಿ ವೈವಾಹಿಕ ಸಂಬಂಧಗಳು ರಾಜಕೀಯ ಸ್ವರೂಪವನ್ನು ಪಡೆದುಕೊಂಡವು. ರಾಷ್ಟ್ರಕೂಟ ದೊರೆ ೧ನೇ ಅಮೋಘವರ್ಷ ನೃಪತುಂಗ ವೈವಾಹಿಕ ಸಂಬಂಧದ ಮೂಲಕ ಸಾಮ್ರಾಜ್ಯವನ್ನು ರಕ್ಷಣೆ ಮಾಡಿದನು. ಹೀಗೆ ವೈವಾಹಿಕ ಸಂಬಂಧಗಳು ರಾಜ್ಯ ರಕ್ಷಣೆ ಮತ್ತು ವಿಸ್ತರಣೆಗೆ, ಉತ್ತಮ ಬಾಂದವ್ಯಕ್ಕೆ ಸಾಕ್ಷಿಯಾಗಿವೆ.

೬.೧.೭ ಬಹುಪತ್ನಿತ್ವ

ಪ್ರಾಚೀನ ಕರ್ನಾಟಕದ ಸಮಾಜದಲ್ಲಿ ಬಹುಪತ್ನಿತ್ವ ಪದ್ಧತಿ ಜಾರಿಯಲ್ಲಿತ್ತು. ಅರಸರಲ್ಲಿ ಈ ಪದ್ಧತಿ ಹೆಚ್ಚಿನದಾಗಿ ಪ್ರಾಶಸ್ತ್ಯವನ್ನು ಪಡೆದಿತ್ತು. ಆದರೆ ಸಾಮಾನ್ಯ ವರ್ಗದವರಲ್ಲಿ ಈ ಪದ್ಧತಿ ಅಷ್ಟೊಂದು ಪ್ರಮಾಣದಲ್ಲಿ ಜಾರಿಯಲ್ಲಿರಲಿಲ್ಲ ಕ್ರಿ.ಶ ೧೦೮೩ರ ಧಾರೇಶ್ವರದಲ್ಲಿ ದೊರೆತ ಶಾಸನದಲ್ಲಿ[೨೬] ಸಂನ್ಧಿವಿಗ್ರಹಿ ಹೈವಣ್ಣರಸನ ಹಿರಿಯ ರಾಣಿ ಚಟ್ಟಬ್ಬರಸಿ ಕುರಿತು ಉಲ್ಲೇಖಿಸಲಾಗಿದೆ. ಗೋಕರ್ಣದಲ್ಲಿ ದೊರೆತ ತ್ರುಟಿತ ಶಾಸನ ನಗಿರೆ ರಾಜ್ಯದ ಅರಸನ ರಾಣಿಯರಾದ ವೀರಾಂಬ ಮತ್ತು ಹೊನ್ನಾಬ್ಬೆ ಇವರು ಗೋಕರ್ಣ ಮಹಾಬಲದೇವರಿಗೆ ಭೂಮಿಯನ್ನು ದಾನ ನೀಡಿದ್ದನ್ನು ದಾಖಲಿಸಿದೆ[೨೭]

೬.೧.೮ ಆಹಾರ

ಇಲ್ಲಿ ದೊರೆತಿರುವ ಕೆಲವೊಂದು ಶಾಸನಗಳಲ್ಲಿ ಅಕ್ಕಿಯ ಉಪಯೋಗದ ಕುರಿತು ಉಲ್ಲೇಖಿಸಲಾಗಿದೆ. ಹಾರುಮಾಸ್ಕೇರಿಯಲ್ಲಿ ದೊರೆತ ಕಾಲ ಉಲ್ಲೇಖವಿಲ್ಲದ ಶಾಸನದಲ್ಲಿ ಸಯಿಗನ ಹಳ್ಳಿಯ ಶೆಟ್ಟಿಕಾರ ವಜ್ರಶೆಟ್ಟಿಯ ಮಗ ಕಾಮಣ್ಣ ಶೆಟ್ಟಿಗೆ ಬೊಮ್ಮಣ್ಣ ಶೆಟ್ಟಿಯರು ೬೦ ಮೂಡೆ ಭತ್ತ, ೩೦ ಮೂಡೆ ಅಕ್ಕಿ, ಬೆಳೆಯುವ ಭೂಮಿಯನ್ನು ಗೇಣಿಯಾಗಿ ನೀಡಿದ್ದ

ಉಲ್ಲೇಖವಿದೆ.[೨೮] ಕ್ರಿ.ಶ ೧೧೬೭ರ ಅಡತಾರೆಯಲ್ಲಿ ದೊರೆತ ಶಾಸನವು ಕೇಶವದೇವರ ಪೂಜಾವಿನಿಯೋಗಕ್ಕಾಗಿ ೩೬ ಮೂಡೆ ಭತ್ತವನ್ನು ಅಡತಾರೆ ಗ್ರಾಮದ ಜನರು ದಾನ ನೀಡಿದನ್ನು ಉಲ್ಲೇಖಿಸಿದೆ.[೨೯] ಇದರಿಂದ ಈ ಭಾಗದ ಶಾಸನದಲ್ಲಿ ಭತ್ತ ಮತ್ತು ಅಕ್ಕಿಯನ್ನು ಉಪಯೋಗಿಸಿದ್ದರೆಂಬುದು ಸ್ಪಷ್ಟವಾಗಿದೆ.

೬.೧.೯ ಅಗ್ರಹಾರಗಳು

ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ, ಊರು ಎಂದರ್ಥ. ಅಗ್ರಹಾರವೆಂದರೆ ರಾಜನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಪ್ರದೇಶವಾಗಿದೆ. ವಿದ್ಯಾಭ್ಯಾಸ ಕಾರ್ಯದಲ್ಲಿ ಅಗ್ರಹಾರಗಳು ಪ್ರಮುಖ ಪಾತ್ರವಹಿಸಿದ್ದವು.

ಒಂದು ಗ್ರಾಮವನ್ನು ಅಗ್ರಹಾರವಾಗಿ ಮಾಡಲು ಕಾರಣವೇನೆಂದರೆ ಪಂಡಿತರಾದ ಬ್ರಾಹ್ಮಣರು ಒಂದು ಕಡೆ ವಾಸಿಸುವಂತೆ ಮಾಡಿರುವುದರಿಂದ ವಿದ್ಯಾರ್ಜನೆಗೆ ಸಹಾಯವಾಗುತ್ತದೆ. ಅಗ್ರಹಾರವನ್ನು ದಾನವಾಗಿ ಪಡೆದ ಬ್ರಾಹ್ಮಣರೇ ಮಹಾಜನಗಳು, ಅವರು ಅಗ್ರಹಾರದ ಪ್ರಭುಗಳಾಗಿದ್ದರು. ಅಗ್ರಹಾರದಲ್ಲಿ ಬ್ರಾಹ್ಮಣರಲ್ಲದೇ ಬೇರೆ ಜಾತಿಯ ಜನರು ಇರಬಹುದಿತ್ತು. ಆದರೆ ಅಗ್ರಹಾರದ ಆದಾಯ ಬ್ರಾಹ್ಮಣರಿಗೆ ಸಲ್ಲುತ್ತಿತ್ತು.[೩೦]

ಕ್ರಿ.ಶ ೧೦೮೩ರ ಧಾರೇಶ್ವರದಲ್ಲಿ ದೊರೆತ ಶಾಸನದಲ್ಲಿ ಹೈವಣ್ಣರಸನ ಹಿರಿಯರಾಣಿ ಚಟ್ಟಬ್ಬರಸಿ ಧಾರೇಶ್ವರ ದೇವಾಲಯಕ್ಕೆ ಎರಡು ಅಗ್ರಹಾರಗಳನ್ನು ದಾನ ನೀಡಿದ ಉಲ್ಲೇಖವಿದೆ.[೩೧] ಕ್ರಿ.ಶ ೧೨೫೬ರ ಗೋಕರ್ಣದ ತಾಮ್ರಪಟ ಶಾಸನದಲ್ಲಿ ಚಂದಾವರ ಕಾದಂಬ ವೀರಕಾವದೇವರಸರು ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ವಿಶ್ವಾಮಿತ್ರ ಗೋತ್ರದ ಅಹಿತಾಗ್ನಿ ಶಂಕರ ಭಟ್ಟರ ಮಕ್ಕಳಾದ ಮಹೇಶ್ವರ ಭಟ್ಟರಿಗೆ ಹಾಗೂ ಇನ್ನು ಹಲವು ಬ್ರಾಹ್ಮಣರಿಗೆ ಸೇರಿ ಅನಾದಿ ಅಗ್ರಹಾರ ಮೂರೂರು ಗ್ರಾಮದ ಭೂಮಿಯನ್ನು ದಾನ ನೀಡಿದ್ದರೆಂದಿದೆ.[೩೨] ಕ್ರಿ.ಶ ೧೨೫೬ರ ಕತಗಾಲ ಶಾಸನದಲ್ಲಿ ಚಂದಾವರ ಕಾದಂಬ ಕಾಮದೇವನು ಸಂಗಡಿ ಗ್ರಾಮವನ್ನು ಶಂಕರ ಉಪಾಧ್ಯಾಯರಿಗೆ ಮತ್ತು ಅದರಲ್ಲಿಯ ಆರು ಭಾಗವನ್ನು ಗೋವಿಂದ, ಪರಿಮಿತ, ತ್ರಿವಿಕ್ರಮ, ನಾರಾಯಣ ಭಟ್ಟ, ವಿಷ್ಣು ಭಟ್ಟ, ಕೇಶವ ಪರಿಮಿತ ಮತ್ತು ದಾಮೋದರ ಭಟ್ಟರಿಗೆ ದಾನ ನೀಡಿದ ಉಲ್ಲೇಖವಿದೆ.[೩೩] ಹೀಗೆ ಈ ಪ್ರದೇಶದಲ್ಲಿ ದೊರೆತ ಶಾಸನಗಳಿಂದ ಇಲ್ಲಿ ಆಳ್ವಿಕೆ ನಡೆಸಿದ ರಾಜರು ಅಗ್ರಹಾರ ನಿರ್ಮಾಣ ಕಾರ್ಯಕೈಗೊಂಡಿದ್ದು ಅದರ ಮೂಲಕ ಶಿಕ್ಷಣ ನೀಡುವ ಕೆಲಸ ಮಾಡಿದ್ದರೆಂದು ಸ್ಪಷ್ಟವಾಗುತ್ತದೆ.

೬.೨ ಆಚರಣೆಗಳು

೬.೨.೧ ಬಂಡಿಹಬ್ಬದ ಆಚರಣೆ

ಕರಾವಳಿಯ ವಿಶೇಷ ಹಬ್ಬಗಳಲ್ಲಿ ಒಂದಾದ ಬಂಡಿಹಬ್ಬದಲ್ಲಿ ವಿಶಿಷ್ಟ ಆಚರಣೆಗಳಿವೆ. ಕಲಶ ಹೊರಡಿಸುವುದು. ಹೂವಿನ ಮಕ್ಕಳ ಕುಣಿತ, ಮುಖ ಆಡಿಸುವುದು, ಮಾಸ್ತಿ ಕುಣಿತ,

ಹಗರಣ ಮುಂತಾದ ಆಕರ್ಷಕ ಕಾರ್ಯಕ್ರಮಗಳಿವೆ. ಈ ಹಬ್ಬ ಊರ ಅಮ್ಮನವರ ದೇವಾಲಯಕ್ಕೆ ಸಂಬಂಧಿಸಿದ್ದು, ಪರಶುರಾಮನ ಸೃಷ್ಠಿಯ ಪ್ರದೇಶದಲ್ಲಿ ಮಾತ್ರ ಆಚರಿಸಲಾಗುತ್ತದೆ. ಈ ಹಬ್ಬ ಪ್ರತಿವರ್ಷ ಅಕ್ಷಯ ತೃತೀಯದಂದು ಆರಂಭವಾಗಿ ಬರುವ ಪೂರ್ಣಿಮೆಯಂದು ಕೊನೆಗೊಳ್ಳುತ್ತದೆ.ಈ ಅವಧಿಯಲ್ಲಿ ಕೃಷಿ ಕಾರ್ಮಿಕರಿಗೆ ಬಿಡುವಿನ ಸಮಯ ಈ ಸಮಯದಲ್ಲಿ ಜಾತಿ–ಧರ್ಮ, ಬಡವ–ಬಲ್ಲಿದ ಎಂಬ ಭೇದ ಮರೆತು ವಿಜ್ರಂಭಣೆಯಿಂದ ಸುಮಾರು ೧೨ ದಿನಗಳ ಕಾಲ ಕೆಲವು ಕಡೆ ೯ ದಿನಗಳ ಕಾಲ ಆಚರಿಸಲಾಗುತ್ತದೆ. ಪ್ರಸ್ತುತ ಕುಮಟಾ ತಾಲೂಕಿನಲ್ಲಿ ನಡೆಯುವ ಬಂಡಿಹಬ್ಬದ ಆಚರಣೆಯನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

೬.೨.೨ ಮಿರ್ಜಾನ ಬಂಡಿಹಬ್ಬ

ಇದು ಗ್ರಾಮೀಣ ಭಾಗದ ವಿಶಿಷ್ಟ ಹಬ್ಬಗಳಲ್ಲೊಂದಾಗಿದೆ. ಗ್ರಾಮದ ಆರಾಧ್ಯದೈವ, ಶಕ್ತಿಸ್ವರೂಪಿಣಿ ದೇವಿ ಶ್ರೀ ಶಾಂತಿಕಾ ಪರಮೇಶ್ವರಿಯನ್ನು ಗ್ರಾಮದ ಜನರು ತಮ್ಮ ಇಷ್ಟಾರ್ಥ ಸಿದ್ದಿಗಾಗಿ ಹರಕೆರೂಪದಲ್ಲಿ ಸೇವೆಸಲ್ಲಿಸುತ್ತಾರೆ. ೧೨ ದಿನಗಳ ಕಾಲ ನಡೆಯುವ ಬಂಡಿಹಬ್ಬವು ತಾಯಿಯ ಹುಟ್ಟುಹಬ್ಬದೊಂದಿಗೆ ಆರಂಭಗೊಳ್ಳುತ್ತದೆ. ಹಬ್ಬದಲ್ಲಿ ೧೨ ದಿನಗಳವರೆಗೆ ಕಲಶೋತ್ಸವವು ನಡೆಯುತ್ತದೆ. ಕಲಶದ ಜೊತೆ ವಿವಿಧ ದೇವರ ಮುದ್ರೆ ಹೊತ್ತದರ್ಶನ ಪಾತ್ರಧಾರಿಗಳು ೧೧ ದಿನವೂ ಕಲಶೋತ್ಸವದ ಸಂಗಡ ಹೋಗುತ್ತಾರೆ. ೧೧ ದಿನ ಪೂರ್ತಿ ಕಳೆದ ಮೇಲೆ ೧೨ನೇ ದಿನವೇ ಬಂಡಿಹಬ್ಬ ಅಂದು ಕಟ್ಟಿಗೆಯನ್ನು ಕೆಂಡ ಮಹಾಸತಿಯ ಎದುರುಗಡೆ ಹರಡಿ ಅದಕ್ಕೆ ಬೆಂಕಿ ಇಡಲಾಗುತ್ತದೆ. ಅಂದು ಶಾಂತಿಕಾ ಪರಮೇಶ್ವರಿ ದೇಗುಲದಲ್ಲಿ ಪೂಜೆ ಮುಗಿದ ಬಳಿಕ ಕಲಶವು ಭೈರವೇಶ್ವರ ಸನ್ನಿದಿಗೆ ಹೋಗಿ ಪುನಃ ದೇವಸ್ಥಾನದ ಆವಾರದಲ್ಲಿ ಬರುವಷ್ಟರಲ್ಲಿ ಸಂಜೆ ೬.೩೦ರ ಸಮಯವಾಗುತ್ತದೆ. ಆಗ ದೇಗುಲದ ಎದುರಿಗಿರುವ ಕೆಂಡದಲ್ಲಿ ಮಹಾಸತಿಯ ಎದುರು ಉರಿಯುತ್ತಿರುವ ಕೆಂಡವನ್ನು ಕಾಲಿನಿಂದ ತುಳಿಯುವಾಗ ಕೆಂಡವು ಹೂವಿನೊಪಾದಿಯಲ್ಲಿ ಗೋಚರಿಸುತ್ತದೆ.ಇದಾದ ನಂತರ ೩೫ ಅಡಿ ಎತ್ತರದ ಹೊಯ್ಲುಗಂಬದ ಮಧ್ಯಭಾಗದಲ್ಲಿ ಕಲಶಧಾರಿ ಅರ್ಚಕರು, ಸುತ್ತಲೂ ವಿವಿಧ ದೇವರ ಮುದ್ರೆ ಹೊತ್ತ ದರ್ಶನ ಪಾತ್ರಧಾರಿಗಳು ಕುಳಿತು ಉಯ್ಯಾಲೆ ತೂಗುವದೃಶ್ಯ ನೋಡುವವರಿಗೆ ನಿಜಕ್ಕೂ ಆಕರ್ಷಕ. ಈ ಸಂಪ್ರದಾಯ ಹಲವು ವರ್ಷಗಳಿಂದ ನಡೆದು ಬಂದಿದೆ.

೬.೨.೩ ಕುಮಟಾ ಬಂಡಿಹಬ್ಬ

ಕುಮಟಾ ಪಟ್ಟಣದ ಮಧ್ಯಭಾಗದ ದೇವರಹಕ್ಕಲಿನಲ್ಲಿರುವ ಶಾಂತಿಕಾ ಪರಮೇಶ್ವರಿ ದೇವಾಲಯ ಪ್ರಸಿದ್ಧಿ ಪಡೆದಿದೆ. ಹಿಂದಿನ ಕಾಲದಲ್ಲಿ ಅಲಂಕರಿಸಿದ ಬಂಡಿಯಲ್ಲಿ ಭೂದೇವಿಯ ಸಿಂಗರಿಸಿದ ಕಲಶಗಳನ್ನು ಇಟ್ಟು ಸಾಗಿಸುತ್ತಿದ್ದರಿಂದ ಈ ಹಬ್ಬ ಬಂಡಿಹಬ್ಬವೆಂದೇ ಖ್ಯಾತಿ ಪಡೆದಿವೆ. ಪ್ರಸ್ತುತ ಬಂಡಿಯ ಬದಲು. ಅರ್ಚಕರೇ ಕಲಶ ಹೊತ್ತು

ಸಾಗಿಸುತ್ತಾರೆ. ಈ ಹಬ್ಬದ ಕುತೂಹಲ ಭರಿತ ವೈಶಿಷ್ಟ್ಯ ಹಗರಣ. ಅದಕ್ಕೆ ಬಳಸುವ ಪರಿವಾರ ದೇವರ ಮುಖಗಳು. ಇಲ್ಲಿಯ ಬಸ್ತಿಪೇಟೆ ಜೈನ ಬಸದಿ ಪಕ್ಕದಲ್ಲಿ ಆಡುಕಟ್ಟೆ(ಹಗರಣ ಕಟ್ಟೆ) ಇದೆ. ರಾತ್ರಿ ವಾದ್ಯ ಮೇಳಗಳೊಂದಿಗೆ ದೇವಸ್ಥಾನದಿಂದ ಅಲಂಕೃತ ಮೂರು ಕಲಶ ಹೊತ್ತು ತಂದು ಅಲ್ಲಿ ಪ್ರತಿಷ್ಠಾಪಿಸುತ್ತಾರೆ.

ಗುನುಗರು ಅಲ್ಲಿ ಕಾಲಿಡುತ್ತಿದ್ದಂತೆ, ೧೬ ಮುಖವಾಡಗಳು ಗಮನ ಸೆಳೆಯುತ್ತವೆ. ಪರಿವಾರ ದೇವರ ಮುಖಗಳನ್ನು ಹಾಕಿಕೊಂಡು ಗುನುಗರು ಕುಣಿಯುವುದು ಬಂಡಿಹಬ್ಬದ ವಿಶೇಷಗಳಲ್ಲೊಂದಾಗಿದೆ ಪ್ರತಿವರ್ಷ ವೈಶಾಖ ಶುದ್ಧ ದ್ವಾದಶಿ ಅಥವಾ ತ್ರಯೋದಶಿಯಂದು ಬಂಡಿಹಬ್ಬ ಜರುಗುತ್ತದೆ. ಇದು ಒಟ್ಟು ೭ ದಿನಗಳ ಹಬ್ಬವಾಗಿದೆ.

೬.೨.೪ ವನ್ನಳ್ಳಿ ಬಂಡಿಹಬ್ಬ

ವನ್ನಳ್ಳಿ ಬಂಡಿಹಬ್ಬವು ಒಂದು ವಿಶೇಷವಾದ ಆಚರಣೆಯಾಗಿದೆ. ಇಲ್ಲಿ ಬಂಡಿಹಬ್ಬವನ್ನು ಒಂಭತ್ತು ದಿನಗಳ ಕಾಲ ಆಚರಿಸಲಾಗುತ್ತದೆ. ಈ ಹಬ್ಬದ ದಿನಗಳಲ್ಲಿ ಊರಿಗೆ ಊರೇ ಹಬ್ಬದ ವಾತಾವರಣದಲ್ಲಿ ಮುಳುಗಿರುತ್ತದೆ. ಮತಭೇದವಿಲ್ಲದೇ ಎಲ್ಲಾ ಧರ್ಮಕ್ಕೆ ಸೇರಿದವರು ಸುತ್ತಲಿನ ಜನರು ಬಂದು ತಮ್ಮ ಪೂಜೆಯನ್ನು ಸಲ್ಲಿಸುತ್ತಾರೆ. ಇದೊಂದು ಜಾತ್ರಾ ಉತ್ಸವದಂತೆ ನಡೆಯುತ್ತದೆ. ಈ ಹಬ್ಬ ಎಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ನಡೆಯುತ್ತದೆ.

ಇಲ್ಲಿಯ ಬಂಡಿಹಬ್ಬದಲ್ಲಿ ೨ ಕಲಶಗಳ ಮೆರವಣಿಗೆಯಾಗುತ್ತದೆ. ಕಲಶ ಹೊರುವ ಜವಬ್ದಾರಿಯನ್ನು ದೇವಸ್ಥಾನದ ಅರ್ಚಕರ ಕಾರ್ಯದಲ್ಲಿ ತೊಡಗಿದ್ದ ಗುನುಗ ವಂಶಜರು ವಹಿಸಿಕೊಂಡಿರುತ್ತಾರೆ. ಕಲಶ ಹೊರುವ ಮುಖ್ಯ ಗುನುಗರು ಬಂಡಿಹಬ್ಬದ ಪೂರ್ವಭಾವಿಯಾಗಿ ೯ ದಿನಗಳ ಕಾಲ ಉಪವಾಸ ಕೈಗೊಂಡು ಫಲಾಹಾರ ಸೇವನೆ ಮಾಡಿಕೊಂಡಿರುತ್ತಾರೆ. ಹೀಗೆ ಅನೇಕ ನಿಯಮಗಳನ್ನು ಪಾಲಿಸಿ ಕಲಶ ಹೊರುವ ಕಾರ್ಯಕ್ಕೆ ಸನ್ನದ್ಧರಾಗುತ್ತಾರೆ.

ಮುಖವಾಡ ಕುಣಿತ ಮತ್ತು ಶಾಲಿವಾಹನನ ಕಥೆ

ಶಾಲಿವಾಹನನ ತಾಯಿಗೂ ಕುಂಬಾರನಿಗೂ ಆದಂತ ಸರಸದಿಂದಾಗಿ ಶಾಲಿವಾಹನನ ಜನನವಾಯಿತು. ಕುಂಬಾರ ಮುಖವಾಡಗಳನ್ನು ತಯಾರಿಸಿ ಇಟ್ಟಿದ್ದ ಜಟಕ, ನಾಗಕನ್ಯೆ ಮೊದಲಾದ ಮುಖಗಳಿರುತ್ತವೆ. ಊರಿನಲ್ಲಿ ಯುದ್ಧ ನಡೆದಾಗ ಗುನುಗರು ಈ ಮುಖಗಳಿಗೆ ಜೀವ ತುಂಬಲಾಗಿ ಈ ಮುಖವಾಡಗಳೇ ನರ್ತಿಸಿ ಯುದ್ಧ ಮಾಡಿದವು ಎಂಬ ಪ್ರತೀತಿ ಇದೆ. ಇದರ ಸವಿನೆನಪಿಗಾಗಿ ಮುಖವಾಡಗಳನ್ನು ಕುಣಿಸಲಾಗುತ್ತದೆ. ನಾಲ್ಕನೇ ದಿನ ಕೂಡಾ ಹೀಗೆಯೇ ಮುಂದುವರಿಯುತ್ತದೆ. ಐದನೇ ದಿನ ದೇವರನ್ನು ಕರೆತರುವದು ಅಥವಾ ಅಮ್ಮನವರನ್ನು ಕರೆತರುವ ದಿನ. ಈ ದಿನ ಕಲಶವು ರಾತ್ರಿಯ ಬದಲಾಗಿ ಸಂಜೆ ಐದು

ಗಂಟೆಗೆ ಸಾಗುತ್ತದೆ. ಗುನುಗರಿಗೆ ದೇವರ ಆಹ್ವಾನವಾಗುತ್ತದೆ. ಕಡಲ ಕಿನಾರೆಯ ಶ್ರೀ ಬ್ರಹ್ಮ ದೇವರ ಗುಡಿಗೆ ಮುದ್ರೆ ಹಿಡಿಯುವವರ ಜೊತೆಗೆ ಕಲಶ ಕನ್ನಡಿ ಸಾಗುತ್ತದೆ. ಈ ದಿನ ಕಲಶ ಕನ್ನಡಿ ಹಿಡಿದ ಗುನುಗರ ಮೈಮೇಲೆ ಬರುವುದನ್ನು ನೋಡುವದು ವಿಶೇಷ. ಬ್ರಹ್ಮ ದೇವರ ಗುಡಿಯಿಂದ ಹೊನ್ನಪ್ಪ ಬೊಬ್ಬರ ದೇವರ ಗುಡಿಗೆ ಸಾಗಿ ಬಂಡಾರ ದೇಗುಲಕ್ಕೆ ಹೋಗುತ್ತದೆ. ಅದೇ ದಿನ ರಾತ್ರಿ ೭-೩೦ಕ್ಕೆ ಕಲಶ ಬಂಡಾರ ದೇಗುಲದಿಂದ ಗೋಳಿಬೀರಪ್ಪ ದೇವಸ್ಥಾನಕ್ಕೆ ಸಾಗಿ ಮುಖಕುಣಿತ ಪೂಜೆ ನಡೆಯುತ್ತದೆ.

ಆರನೇ ದಿನ ಬಿಡುವಿನ ದಿನ. ಏಳನೇ ದಿನ ಎಲ್ಲ ಗುತ್ತಿನ ಕಲ್ಲುಗಳಿಗೆ (ಗಡಿವಾರ ದೇವರು) ಬಂಡಿಹಬ್ಬಕ್ಕೆ ಆಹ್ವಾನ ನೀಡುವುದು. ಕುದುರೆ ಕಟ್ಟುವವನಿಂದ ಹಿಡಿದು ಹೂವುದಾರರು ಕಟ್ಟಿಗೆದಾರರಿಗೂ ಆಹ್ವಾನವನ್ನು ಇದೇ ದಿನ ನೀಡಲಾಗುತ್ತದೆ.

ಎಂಟನೇ ದಿನ ಬೆಳಿಗ್ಗೆಯಿಂದಲೇ ಸೇವೆ ಸಲ್ಲಿಸುವ ಭಕ್ತಾದಿಗಳು ಎಲ್ಲರೂ ದೇಗುಲಗಳಲ್ಲಿ ಸೇರುತ್ತಾರೆ. ಸಂಜೆ ೫ ಗಂಟೆಗೆ ಕಲಶವು ಭಂಡಾರ ದೇಗುಲದಿಂದ ಶ್ರೀ ಗೋಳಿಬೀರಪ್ಪ, ಬೊಬ್ರದೇವ, ಹೊನ್ನಪ್ಪ ದೇಗುಲಕ್ಕೆ ಸಾಗುತ್ತದೆ. ಬ್ರಹ್ಮದೇವರ ಗುಡಿಗೆ ಜಟಕದ ಮುಖ ಹೋಗಿ ಬರುವವರೆಗೆ ಕಲಶ ಸಮುದ್ರದ ಕಿನಾರೆಯಲ್ಲಿ ನಿಂತಿರುತ್ತದೆ. ತಮ್ಮ ತಮ್ಮ ಸಮಸ್ಯೆಗಳಿಗೆ ನೋವಿಗೆ ಪರಿಹಾರವನ್ನು ಕಲಶದ ಮುಂದೆ ಕೇಳಿಕೊಳ್ಳುತ್ತಾರೆ.

ಒಂಬತ್ತನೇ ದಿನ ಬಂಡಿಹಬ್ಬದ ಕೊನೆಯ ದಿನ ಭಕ್ತರ ಸೇವೆ ನಡೆಯುತ್ತದೆ. ಇದಾದ ನಂತರ ೧೫ ದಿನದವರೆಗೆ ದೇಗುಲದ ಬಾಗಿಲು ಮುಚ್ಚಿರುತ್ತದೆ.

ವನ್ನಳ್ಳಿ ಬಂಡಿಹಬ್ಬದ ಕುರಿತಾದ ಕೆಲವು ನಂಬಿಕೆಗಳು

ಕೆಲವು ವರ್ಷಗಳ ಹಿಂದೆ ಇಲ್ಲಿ ಮೂರು ಕಲಶಗಳ ಮೆರವಣಿಗೆ ನಡೆಯುತ್ತಿತ್ತು. ಮೂರು ಕಲಶಗಳಲ್ಲಿ ಒಂದು ಕಲಶ ಹಾಗೂ ಕಲಶ ಹೊತ್ತ ಮುಖ್ಯ ಗುನುಗರು ಬ್ರಹ್ಮಗುಡ್ಡದ ಪ್ರದಕ್ಷಿಣೆಗೆ ಹೋದ ಸಂದರ್ಭದಲ್ಲಿ ಅರಬ್ಬಿ ಸಮುದ್ರದಲ್ಲಿ ಬಿದ್ದರು. ಆ ದಿನದಿಂದ ಇಲ್ಲಿಯವರೆಗೆ ವನ್ನಳ್ಳಿ ಬಂಡಿಹಬ್ಬದಲ್ಲಿ ೨ ಕಲಶ ಮಾತ್ರ ಮೆರವಣಿಗೆ ಬರುತ್ತವೆ. ಈ ಎರಡು ಕಲಶ ಹೊತ್ತವರಿಗೆ ಪ್ರತಿವರ್ಷ ಬ್ರಹ್ಮಗುಡ್ಡಕ್ಕೆ ಮೆರವಣಿಗೆ ಹೋದ ಸಂದರ್ಭದಲ್ಲಿ ಸಮುದ್ರದಲ್ಲಿ ಬಿದ್ದ ಕಲಶ, ಕಲಶ ಹೊತ್ತ ಮುಖ್ಯಗುನುಗರ ಕಣ್ಣಿಗೆ ಕಾಣಿಸುತ್ತದೆ ಎಂಬ ನಂಬಿಕೆ ಇದೆ.

೬.೨.೫ ಕಡಿಮೆ ಬಂಡಿಹಬ್ಬ

ಅಮ್ಮನವರ (ದೇವಿಯ) ಚಿತ್ತಾಕರ್ಷಕ ಮುಖವರ್ಣಿಕೆ, ವಿವಿಧ ರೀತಿಯ ಸಾಂಪ್ರದಾಯಿಕ ಬೆಳ್ಳಿ ಬಂಗಾರದ ಆಭರಣಗಳು, ಬಣ್ಣ ಬಣ್ಣದ ಹೂವುಗಳಿಂದ ಅರ್ಚಕ ಸಮುದಾಯದವರು ಕೈಕುಸುರಿಯೊಂದಿಗೆ ಸುಂದರವಾಗಿ ಕಲಶವನ್ನು ನಿರ್ಮಿಸುತ್ತಾರೆ. ಬೃಹತ್ ಗಿಂಡಿಯಲ್ಲಿ ಸ್ಥಾಪಿತಗೊಂಡ ಕಲಶ ಬಂಡಿಹಬ್ಬದ ಪ್ರಮುಖ ಆಕರ್ಷಣೆ, ಭಕ್ತರ

ಮನಸ್ಸಿನಲ್ಲಿ ಭಕ್ತಿಯನ್ನುಂಟುಮಾಡುವ ಕಲಶ ಬಂಡಿಹಬ್ಬದ ಆಕರ್ಷಣೆಯ ಕೇಂದ್ರಬಿಂದು. ಕಲಶದ ತಯಾರಿ ಪೂರ್ಣಗೊಂಡ ನಂತರ ಅರ್ಚಕರು ಶುಚಿಯಾಗಿ ಶ್ರದ್ಧಾಭಕ್ತಿಯಿಂದ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಸಾಂಪ್ರದಾಯಿಕ ಮಡಿ ಬಟ್ಟೆಯನ್ನುಟ್ಟು, ತಲೆಗೆ ಕೆಂಪುಬಟ್ಟೆಯಿಂದ ಕಟ್ಟಿಕೊಂಡು, ನಂತರ ಶ್ರೀ ದೇವಿಯ ಕಲಶವನ್ನು ತಲೆಯ ಮೇಲೆ ಹೊತ್ತುಕೊಂಡು ಸಾಂಪ್ರದಾಯಿಕ ವಾದ್ಯಗಳೊಂದಿಗೆ ಕಟ್ಟಿಗೆದಾರರ ಸಮೇತ ಕಲಶದೇವಸ್ಥಾನದಿಂದ (ಅಮ್ಮನವರ) ಶ್ರೀ ಬೀರದೇವಸ್ಥಾನಕ್ಕೆ ಬರುತ್ತದೆ. ಅಲ್ಲಿ ಪ್ರದಕ್ಷಿಣೆ ಹಾಕಿ ಗಣಪತಿ ದೇವಸ್ಥಾನಕ್ಕೆ ಹೋಗುತ್ತದೆ. ಈ ನಡುವೆ ಕೆಲ ನಿರ್ದಿಷ್ಟ ಸ್ಥಳಗಳಲ್ಲಿ ದೇವರ ಹತ್ತಿರ ಅಪ್ಪಣೆ ಕೇಳಿ ತಮ್ಮ ಸಂಕೀರ್ಣ ಸಮಸ್ಯೆಗಳಿಗೆ ಶ್ರೀ ದೇವಿಯ ಉತ್ತರ ಪಡೆದು ಕೊಳ್ಳುತ್ತಾರೆ. ನಂತರ ಕಲಶ ಗೋಳಿಬೀರ ದೇವಸ್ಥಾನದಿಂದ ಅಮ್ಮನವರ ಮನೆಗೆ ಬಂದು ರಾತ್ರಿ ಸಮಯದಲ್ಲಿ "ಆಡು ಕಟ್ಟೆ" ಸ್ಥಳಕ್ಕೆ ಬರುತ್ತದೆ. ಬೇರೆ ಬೇರೆ ಪರಿವಾರ ದೇವರ ಮುಖಗಳನ್ನು ಹೊತ್ತು ಪಾದಹಸ್ತ ಚಲನೆಯೊಂದಿಗೆ ವಾದ್ಯದ ಶಬ್ದಕ್ಕೆ ಹೆಜ್ಜೆ ಹಾಕುವ ಪದ್ಧತಿಗೆ ಮುಖ ಆಡಿಸುವುದು ಎನ್ನುತ್ತಾರೆ. ಇದನ್ನು ಅರ್ಚಕ ಸಮುದಾಯದವರು ನಡೆಸಿಕೊಡುತ್ತಾರೆ. ಹೀಗೆ ಕಾರ್ಯಕ್ರಮ ಮುಗಿದ ನಂತರ ಕಲಶವು ಆಡುಕಟ್ಟೆಯಿಂದ ಮತ್ತೆ ಕಲಶದೇವಸ್ಥಾನಕ್ಕೆ ಬರುತ್ತದೆ.

ಎರಡನೇ ದಿನ ರಾತ್ರಿಯ ವೇಳೆಯಲ್ಲಿ ಕಲಶದೇವಸ್ಥಾನದಿಂದ ಆಡುಕಟ್ಟೆಗೆ ಹೋಗುತ್ತದೆ. ಮೊದಲನೇ ದಿನದಂತೆ ಅರ್ಚಕ ಸಮುದಾಯದವರು ಮುಖವನ್ನು ಆಡಿಸುತ್ತಾರೆ. ಮತ್ತೆ ಹಗರಣವು ನಡೆಯುತ್ತದೆ. ನಂತರ ಕಲಶ ಆಡುಕಟ್ಟೆಯಿಂದ ಪುನಃ ದೇವಸ್ಥಾನಕ್ಕೆ ಬರುತ್ತದೆ.

ಮೂರನೇ ದಿನ ಮತ್ತೆ ಕಲಶವನ್ನು ಹೂವು ಆಭರಣಗಳಿಂದ ಅಲಂಕರಿಸಿ ಪೂಜೆಯನ್ನು ಮಾಡಿ ನಂತರ ಕಟ್ಟಿಗೆದಾರರ ಜೊತೆಗೂಡಿ ಕಲಶ ದೇವಸ್ಥಾನದಿಂದ ಬೀರದೇವಸ್ಥಾನಕ್ಕೆ ಬಂದು ಪ್ರದಕ್ಷಿಣೆ ಹಾಕಿ "ಉಬ್ಬಲಬೀರ" ದೇವರನ್ನು ಕರೆಯಲು ಹೋಗುತ್ತದೆ. ಉಬ್ಬಲಬೀರದೇವಸ್ಥಾನದಲ್ಲಿ ಪೂಜೆ ಮುಗಿದ ಬಳಿಕ ಕಲಶ ಅಮ್ಮನವರ ದೇವಸ್ಥಾನಕ್ಕೆ ಬರುವಾಗ ಕೆಲವು ಜನರು ದೇವರಲ್ಲಿ ಅಪ್ಪಣೆಯನ್ನು ಕೇಳುತ್ತಾರೆ. ನಂತರ ಅಮ್ಮನವರ ದೇವಸ್ಥಾನಕ್ಕೆ ಬಂದು ಅಲ್ಲಿ ಮುಖವನ್ನು ಆಡಿಸುವರು. ಕೆಲ ಸಮಯದ ನಂತರ ರಾತ್ರಿ ವೇಳೆಯಲ್ಲಿ ಕಲಶ ಆಡುಕಟ್ಟೆಗೆ ಹೋಗುತ್ತದೆ. ಅಲ್ಲಿ ಮುಖವನ್ನು ಆಡಿಸುವರು ನಂತರ ಪುನಃ ಕಲಶ(ಅಮ್ಮನವರ) ದೇವಸ್ಥಾನಕ್ಕೆ ಬರುವುದು.ನಾಲ್ಕನೇ ದಿನ ರಾತ್ರಿಯ ವೇಳೆಯಲ್ಲಿ ಆಡುಕಟ್ಟೆಗೆ ಹೋಗಿ ಕಾರ್ಯಕ್ರಮ ಮುಗಿಸಿ ಬರುತ್ತಾರೆ.ಐದನೇ ದಿನ ಉಬ್ಬಲಬೀರದೇವರನ್ನು ಕರೆಯಲು ಹೋಗುತ್ತದೆ. ಅಲ್ಲಿ ಪೂಜೆ ಮುಗಿಸಿದ ನಂತರ ಕಲಶದ ದೇವಸ್ಥಾನಕ್ಕೆ ಬರುತ್ತದೆ. ರಾತ್ರಿಯಲ್ಲಿ ಆಡುಕಟ್ಟೆಗೆ ಹೋಗುತ್ತದೆ.

ಆರನೇಯ ದಿನ ರಾತ್ರಿಯ ವೇಳೆಯಲ್ಲಿ ಆಡುಕಟ್ಟೆಗೆ ಹೋಗುವುದು ಮಾತ್ರ ನಂತರ ಕಲಶ ದೇವಸ್ಥಾನಕ್ಕೆ ಬರುತ್ತದೆ. ಏಳನೇಯ ದಿನ ಹುಲಿ ದೇವರನ್ನು ಕರೆಯಲು ಹೋಗುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಜನ ಅಲ್ಲಿ ಸೇರುತ್ತಾರೆ. ಒಂದೊಂದು ದೇವರನ್ನು ಕರೆದುಕೊಂಡು ಬಂದಂತೆ ಆ ದೇವರ ಮುಖವನ್ನು ಆಡಿಸಬೇಕಾಗುತ್ತದೆ. ಆ ದಿನ ಮುಖ ಆಡಿಸುವದು ಕೊನೆಯಾಗುತ್ತದೆ. ಕಾರ್ಯಕ್ರಮ ಮುಗಿದ ನಂತರ ದೇವರು ಕಲಶ ದೇವಸ್ಥಾನಕ್ಕೆ ಬರುತ್ತದೆ. ಏಂಟನೆಯ ದಿನ ಕಲಶವು ಅಮ್ಮನವರ ದೇವಸ್ಥಾನದಿಂದ ಬೀರದೇವಸ್ಥಾನಕ್ಕೆ ಬಂದು ಪ್ರದಕ್ಷಿಣೆ ಹಾಕಿ ಗಣಪತಿ ದೇವಸ್ಥಾನಕ್ಕೆ ಹೋಗುತ್ತದೆ. ಅಲ್ಲಿ ಪೂಜೆ ಮುಗಿಸಿ ವಾಪಸ ಬರುವಾಗ ದೇವರಿಗೆ ಎಲ್ಲರ ಮನೆಯ ಮುಂದೆ ಆರತಿ ಕೊಡುತ್ತಾರೆ. ಹೀಗೆ ಆಡುಕಟ್ಟೆಗೆ ಬಂದಾಗ ಅಲ್ಲಿ ಬಂಡಿಯನ್ನು ತಯಾರಿಸಿ ಇಡಲಾಗುತ್ತದೆ. ನಂತರ ಬಂಡಿಯನ್ನು ಎಳೆದುಕೊಂಡು ಬಂದು ಬೀರ ದೇವಸ್ಥಾನದ ಮುಂದೆ ನಿಲ್ಲಿಸುತ್ತಾರೆ. ಕಲಶ ಆರತಿ ತೆಗೆದುಕೊಳ್ಳುತಲೇ ಹಿಂದಕ್ಕೆ ಬರುತ್ತದೆ. ನಂತರ ಬಂಡಿಯ ತುದಿಯಲ್ಲಿ ಇಬ್ಬರನ್ನು ಕುಳ್ಳರಿಸಿ ತಿರುಗಿಸುತ್ತಾರೆ. ನಂತರ ಎತ್ತರದ ಉಯ್ಯು (ಉಯ್ಯಾಲೆ) ಚಪ್ಪರದ ಮೇಲೆ ಕಲಶವನ್ನಿಡುತ್ತಾರೆ. ಮತ್ತೆ ಕಟ್ಟಿಗೆದಾರರು ಕುಳಿತುಕೊಳ್ಳುತ್ತಾರೆ. ನಂತರ ಉಯ್ಯಾಲೆಯನ್ನು ತಿರುಗಿಸುತ್ತಾರೆ. ನಂತರ ಕಲಶವನ್ನು ಅಮ್ಮನವರ ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿ ಇಡುತ್ತಾರೆ.ಮಾರನೇ ದಿನ ಕೋಳಿ–ಕುರಿಯನ್ನು ಬಲಿಕೊಡುವದು ರೂಢಿಯಲ್ಲಿದೆ.

೬.೨.೬ ಗೋಕರ್ಣ ಶ್ರೀ ಭದ್ರಕಾಳಿ ಮತ್ತು ಪರಿವಾರ ದೇವರ ಬಂಡಿಹಬ್ಬ

ಭೂಕೈಲಾಸ, ದಕ್ಷಿಣಕಾಶಿ ಎಂದು ಜಗತ್ಪ್ರಸಿದ್ದವಾದ ಪರಶಿವನ ಆತ್ಮಲಿಂಗವಿದ್ದ ಏಕೈಕ ಸ್ಥಳ ಗೋಕರ್ಣ. ಇಲ್ಲಿಯ ಶಕ್ತಿಶಾಲಿ ದೇವತೆಯಾದ ಶ್ರೀ ಭದ್ರಕಾಳಿ ಮತ್ತು ಪರಿವಾರ ದೇವರ ಬಂಡಿಹಬ್ಬ ೧೨ ದಿನಗಳ ಕಾಲ ನಡೆಯುತ್ತದೆ.

ಒಂದನೇಯ ದಿನ ಅವಾರಿ– (ಅನ್ನ ನೈವೇದ್ಯ ಮಾಡಿ ಪ್ರಸಾದ ರೂಪದಲ್ಲಿ ವಿತರಣೆ ಮಾಡುವುದು) ಅವಾರಿಯಿಂದ ಬಂಡಿಹಬ್ಬ ಪ್ರಾರಂಭವಾಗುತ್ತದೆ. ಶ್ರೀ ಭದ್ರಕಾಳಿ ಮತ್ತು ಅದರ ಪರಿವಾರ ದೇವರುಗಳಾದ

೧. ದೊಡ್ಡ ಕಡಬ ೨. ಸಣ್ಣ ಕಡಬ ೩. ಕೂಡ್ಲೇಬೀರ ೪. ಸಣ್ಣಹೊಸಬ ೫. ದೊಡ್ಡ ಹೊಸಬ ೬. ಉದ್ದಂಡ ೭. ದೇವತೆಯಮ್ಮ ೮. ಚಾಳಿದೇವಿ ೯. ಹುಲಿದೇವರು ೧೦. ಹೊನ್ನ ೧೧. ಹೊಲಿಯ ೧೨. ಮುರ್ಕುಂಡಿ ೧೩. ದೃಷ್ಟಿಪಾದ ೧೪. ಚಂಡ ೧೫. ಮುಂಡ ೧೬. ಹೊಲತಿ ಪಾದ ೧೭. ಸ್ಮಶಾನ ಕಾಳಿ ದೇವರಿಗೆ ಪೂಜೆ ಮಾಡಿ ಕಾಯಿ ಒಡೆದು ಅನ್ನ ನೈವೇದ್ಯ ಮಾಡಿ ನಂತರ ನೇರದ ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಗುತ್ತದೆ.ಎರಡನೇ ದಿನ ಬಿಡದಿನವಾಗಿರುತ್ತದೆ.ಮೂರನೇಯ ದಿನ ಶೇಷ ಹಾಕುವದು

ನಾಲ್ಕನೇಯ ದಿನ ಕಲಶದ ಮನೆಯಲ್ಲಿ ಗುನುಗರು ಕಲಶಕ್ಕೆ ಪೂಜೆಮಾಡಿ ಕಲಶ ಹೊತ್ತುಕೊಂಡು ಆಡುಕಟ್ಟೆಗೆ ಬರುತ್ತಾರೆ. ಅಲ್ಲಿ ಕಲಶ ನಿಂತಲ್ಲಿ ಬಿಡಗುನುಗ ಪೂಜೆಮಾಡಿ ನಿಂತಲ್ಲೆ ಕಾಯಿ ಒಡೆಯುವ ಪದ್ಧತಿ ಇದೆ. ನಂತರ ಕಲಶ ಅಲ್ಲಿಂದ ಗರ್ಭಗುಡಿಗೆ ಹೋಗಿ ಅಲ್ಲೇ ಇಡಲಾಗುತ್ತದೆ.

ಐದನೇ ದಿನ ಹೊಲೆಯಕ್ಕಿ ಎತ್ತುವದು ಮಧ್ಯಾಹ್ನ ಗರ್ಭಗುಡಿಯಲ್ಲಿ ಕಲಶಕ್ಕೆ ಪೂಜೆ ಮಾಡಿ ನಂತರ ಕಲಶ ಬಂಡಿಕೇರಿ ಮಾರ್ಗವಾಗಿ ಕೆಕ್ಕಾರ ಮಠಕ್ಕೆ ಹೋಗಿ ಅಲ್ಲಿಂದ ಚಿನ್ನದ ಕೇರಿಯ ಕೆಂಡಹೊಸಬ ದೇವಸ್ಥಾನಕ್ಕೆ ಹೋಗಿ ನಂತರ ಕಲಶ ಗರ್ಭಗೃಹಕ್ಕೆ ಬರುತ್ತದೆ. ರಾತ್ರಿ ಗರ್ಭಗುಡಿಯಿಂದ ಆಡುಕಟ್ಟೆಗೆ ಬಂದು ಆಡುಕಟ್ಟೆಯಲ್ಲಿ ಕುಳಿತು ಪೂಜೆ ಮಾಡಿದ ನಂತರ ಪರಿವಾರ ದೇವರುಗಳ ಮುಖ ಆಡಿಸುವರು. ನಂತರ ಗದ್ದೆ ಹೂಡಿ ಬೀಜ ಬಿತ್ತುವರು. ನಂತರ ಕಲಶಕ್ಕೆ ಪೂಜೆ ಮಾಡಿದ ನಂತರ ಪುನಹಃ ಗರ್ಭಗುಡಿಗೆ ಕಲಶ ಬರುತ್ತದೆ.

ಆರನೇಯ ದಿನ ಕಲಶ ಗರ್ಭಗುಡಿಯಿಂದ ಮಾಣೇಶ್ವರ ದೇವಸ್ಥಾನಕ್ಕೆ ಹೋಗಿ ಅಲ್ಲಿ ಕುಳಿತ ನಂತರ ಮಾಣೇಶ್ವರ ಮತ್ತು ಪರಿವಾರ ದೇವತೆಗೆ ಪೂಜೆ ಆದ ನಂತರ ಅಲ್ಲಿಂದ ಈಶ್ವರ ದೇವಸ್ಥಾನಕ್ಕೆ ಬಂದು ಪ್ರದಕ್ಷಿಣೆ ಹಾಕಿ ಶ್ರೀ ಭದ್ರಕಾಳಿ ದೇವಸ್ಥಾನಕ್ಕೆ ಬರುತ್ತದೆ. ಅಲ್ಲಿ ೧೮ ಗುತ್ತಕ್ಕೆ ಕಾಯಿ ಒಡೆದು ಪೂಜೆ ಮಾಡಿ ಪುನಹಃ ಕಲಶ ಗರ್ಭಗುಡಿಗೆ ಬರುತ್ತದೆ. ರಾತ್ರಿ ಕಲಶಕ್ಕೆ ಪೂಜೆ ಮಾಡಿ ನಂತರ ಅಲ್ಲಿಂದ ಆಡುಕಟ್ಟೆಗೆ ಬರುತ್ತದೆ. ಅಲ್ಲಿ ಮುಖ ಆಡಿಸುವರು. ನಂತರ ಅಲ್ಲಿಂದ ಪುನಹಃ ಕಲಶ ಗರ್ಭಗುಡಿಗೆ ಬರುತ್ತದೆ.

ಏಳನೇಯ ದಿನ ಕಡಬರ ಮುಖ ಎದರಗೊಳ್ಳುವದು. ಪ್ರಧಾನ ದೇವರು ಎನಿಸಿಕೊಂಡ ಕಡಬ ದೇವರ ಮುಖಕ್ಕೆ ಕಾಯಿ ಒಡೆದು ಪೂಜೆ ಮಾಡಿ ಬಲಿ ನೀಡುವರು. ನಂತರ ಕಲಶ ಗರ್ಭಗುಡಿಗೆ ವಾಪಸಾಗುತ್ತದೆ. ಏಂಟನೇಯ ದಿನ ಬಂಟರ ಮುಖ ಎದುರುಗೊಳ್ಳುವುದು. ಬಂಟರ ಮುಖ (ಅಂದರೆ ಹೊಲೆಟರ ಮುಖ) ಕ್ಕೆ ಕಾಯಿ ಒಡೆದು ಪೂಜೆ ಮಾಡಿ ಬಲಿ ನೀಡುವರು. ಒಂಬತ್ತನೇಯ ದಿವಸ ಈಡಮ ಕಟ್ಟುವದು (ಚಂಡ ಮುಂಡರ ಮುಖ ಕೋಲಿಗೆ ಕಟ್ಟಿ ತಿರುಗಿಸುವದು) ಗರ್ಭಗುಡಿಯಿಂದ ರಾತ್ರಿ ಕಲಶವು ಆಡುಕಟ್ಟೆಗೆ ಬರುವದು ಅಲ್ಲಿ ಕುಳಿತು ಪೂಜೆ ಮಾಡಿದ ನಂತರ ಚಂಡ ಮುಂಡರ ಮುಖ ಕೋಲಿಗೆ ಕಟ್ಟಿ ತಿರುಗಿಸುವರು. ನಂತರ ಪರಿವಾರ ದೇವರ ಮುಖ ಆಡಿಸುವದು. ಪೂಜೆ ಮಾಡಿದ ನಂತರ ಗರ್ಭಗುಡಿಗೆ ಕಲಶ ವಾಪಸ್ಸಾಗುವದು.

ಹತ್ತನೇ ದಿವಸ ಕೊಳ್ಳಿಹಾಕುವದು– ಚಂಡಮುಂಡರ ಮುಖ ತಲೆಕೆಳಗಾಗಿ ಕಟ್ಟುವರು. ಕೊಳ್ಳಿಮುಖಕ್ಕೆ ಪೂಜೆ ಮಾಡಿ ಕಾಯಿ ಒಡೆದು ನಂತರ ತೆಂಗಿನ ಮರದ ಕೊನೆಯ ಸಿಪ್ಪೆ ಆಗೇರರು ತಂದು ಅದಕ್ಕೆ ಬೆಂಕಿ ಹಚ್ಚಿದ ನಂತರ ಗುನುಗರು ಮತ್ತು ಇತರ ಹಕ್ಕುದಾರರು

ಅದನ್ನು ಕೊಳ್ಳಿ ಮುಂದೆ ಇಡುತ್ತಾರೆ. ನಂತರ ಕಲಶಕ್ಕೆ ಪೂಜೆ ಮಾಡಿದ ಮೇಲೆ ಜಯಘೋಷ ಹಾಕುತ್ತ ಕಲಶ ಭದ್ರಕಾಳಿ ದೇವಸ್ಥಾನಕ್ಕೆ ಬರುತ್ತದೆ.

ಹನ್ನೊಂದನೇ ದಿವಸ ವಿಜಯೋತ್ಸವ ಶ್ರೀ ಭದ್ರಕಾಳಿ ದೇವಸ್ಥಾನದಲ್ಲಿ ಕಲಶಕ್ಕೆ ಪೂಜೆಮಾಡಿ ಕಾಯಿ ಒಡೆದು ಹೂವಿನ ಮಕ್ಕಳ ಜತೆಗೂಡಿ ಕಲಶ ಗರ್ಭಗುಡಿಗೆ ಹೋಗುತ್ತದೆ. ಅಲ್ಲಿ ಪೂಜೆ ಮಾಡಿ ನಂತರ ಮಹಾಬಲೇಶ್ವರ ದೇವಸ್ಥಾನಕ್ಕೆ ಬಂದು ಪ್ರದಕ್ಷಿಣೆ ಹಾಕುತ್ತದೆ. ಅಲ್ಲಿಂದ ಬನಗರ್ತಿಯರು, ಬಂಡಿ, ಕಲಶದ ಜೊತೆ ಶ್ರೀ ಭದ್ರಕಾಳಿ ದೇವಸ್ಥಾನಕ್ಕೆ ಬರುತ್ತಾರೆ. ಅಲ್ಲಿ ಪೂಜೆ ಮಾಡಿದ ನಂತರ ಕಲಶದ ಮನೆಗೆ ಹೋಗುವರು .ಹನ್ನೆರಡನೇ ದಿವಸ ಭಕ್ತಾದಿಗಳು ಹರಕೆ ಒಪ್ಪಿಸುವರು. ಹೀಗೆ ಗೋಕರ್ಣ ಬಂಡಿಹಬ್ಬ ಉತ್ತರಕನ್ನಡ ಜಿಲ್ಲೆಯ ಬಂಡಿಹಬ್ಬಗಳಲ್ಲಿಯೇ ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ.

೬.೩ ಹಬ್ಬ ಮತ್ತು ಉತ್ಸವಗಳು

೧. ಮೂರುಕಟ್ಟೆ ರಥಬೀದಿ ಕುಮಟಾದಲ್ಲಿರುವ ಶ್ರೀ ಮಹಾಲಸಾ ನಾರಾಯಣೀ ಶಾಂತೇರಿ ದೇವಾಲಯ– ಚೈತ್ರ ಶುದ್ಧ ಪಂಚಮಿ ದಿನ ಶ್ರೀ ದೇವಿಯ ಬಿಂಬ ಪ್ರತಿಷ್ಠಾಪನೆಯ ಉತ್ಸವವಿರುತ್ತದೆ. ಆ ದಿನ ಕಲಾಭಿವೃದ್ಧಿ ಹವನ, ವಿಶೇಷ ಪೂಜೆ, ಪುನಸ್ಕಾರಗಳು ಇರುತ್ತವೆ. ಶ್ರಾವಣ ಮಾಸದಲ್ಲಿ ಪಂಚಾಮೃತ ಅಭಿಷೇಕ ನಡೆಯುವದು. ಬಾಳೆಯದಿಂಡಿನಿಂದ ರಂಗಮಂಟಪ ತಯಾರಿಸಿ ಹಲವು ಬಣ್ಣದ ಹೂವುಗಳಿಂದ ಅಲಂಕರಿಸುವರು. ಇದಕ್ಕೆ ಪುಷ್ಪಪೂಜೆ ಎನ್ನುತ್ತಾರೆ. ಪ್ರತಿ ಭಾದ್ರಪದ ಶುದ್ಧ ೪ ರಂದು ದೇವಸ್ಥಾನದಲ್ಲಿ ಶ್ರೀ ಗಣೇಶ ಉತ್ಸವ ನಡೆಯುವದು. ನವರಾತ್ರಿ ಉತ್ಸವ ಕೂಡ ಇಲ್ಲಿ ನಡೆಯುತ್ತದೆ.

ಆಶ್ವೀಜ ಚತುರ್ದಶಿಯಿಂದ ಕಾರ್ತಿಕ ಶುದ್ಧ ೧೫ರವರೆಗೆ ರಾತ್ರಿ ದೀಪೋತ್ಸವ ನಡೆಯುವದು. ಮಾರ್ಗಶಿರ ಶುದ್ಧ ಚಂಪಾಷಷ್ಠಿ ದಿನ ಹವನ, ಬ್ರಾಹ್ಮಣ ಸುಹಾಸಿನಿ ಸಂತರ್ಪಣೆ ಪೂಜೆ ಪುನಸ್ಕಾರಗಳು ನಡೆಯುವದು

ಶ್ರೀ ದೇವರಲ್ಲಿ ಪ್ರಸಾದ (ಮಳೀ) ಹಚ್ಚುವ ಪದ್ಧತಿ

ಶ್ರೀದೇವ ಮಂಡನದಲ್ಲಿಯ ಪ್ರಸಾದ ವಿಗ್ರಹವು ವರ್ಷಾರಂಭದ ಯುಗಾದಿಯಿಂದ ವರ್ಷಾಂತ್ಯದ ಪರ್ಯಂತ ನವರಾತ್ರಿ ಉತ್ಸವ, ರವಿವಾರ, ಮಂಗಳವಾರ, ಶುಕ್ರವಾರ, ಏಕಾದಶಿ, ದ್ವಾದಶಿ ಅಮವಾಸ್ಯೆ ಗ್ರಹಣಾದಿ ದಿನಗಳನ್ನು ಬಿಟ್ಟು ಉಳಿದ ಎಲ್ಲಾ ದಿನಗಳಲ್ಲಿ ಪ್ರಸಾದ ಹಚ್ಚುವ ಕ್ರಮ ಇದೆ. ಶ್ರೀದೇವಿಯ ಪ್ರಭಾವಳಿ, ಕೈ, ಭುಜ, ಎದೆ, ಮಸ್ತಕಾದಿ ವಿವಿಧ ಜಾಗದಲ್ಲಿ ಕರಮಲ ಪತ್ರದ ಚೌಕಾಕಾರದ ಎಲೆಗಳನ್ನು ಹಚ್ಚಿ ಪ್ರಶ್ನೆಗಳನ್ನು ಶ್ರೀ ದೇವಿಯ ಮುಂದೆ ಕೇಳಲಾಗುವುದು. ಸ್ವಲ್ಪ ಸಮಯದಲ್ಲಿ ಉತ್ತರದ ರೂಪದಲ್ಲಿ ಸಂಬಂಧಪಟ್ಟ ಚಿಗುರೆಲೆಗಳು ಪಟ-ಪಟನೆ ಬೀಳಲಾರಂಭಿಸುವವು. ಅದಕ್ಕೆ ಶಾಸ್ತ್ರಾಧಾರಿತ ಅರ್ಥವನ್ನು ಕಟ್ಟಿ

ಸಮಸ್ಯೆಗಳಿಗೆ ಪರಿಹಾರ ನೀಡುವ ಕ್ರಮವು ತುಂಬಾ ಪರಿಣಾಮಕಾರಿಯೂ ವಿಸ್ಮಯಕಾರಿಯೂ ಆಗಿದೆ.[೩೪]

೨. ಮೂರುಕಟ್ಟೆ ರಥಬೀದಿಯಲ್ಲಿರುವ ಶ್ರೀ ಶಾಂತೇರಿ ಕಾಮಾಕ್ಷಿ ರಾಮನಾಥ ಲಕ್ಷ್ಮಿನಾರಾಯಣ ದೇವಾಲಯದ ಉತ್ಸವ ಆಚರಣೆ– ಚೈತ್ರಶುದ್ಧ ಮೊದಲ ದಿನ ಶ್ರೀ ಶಾಂತೇರಿ ದೇವಿಯ ಉತ್ಸವವಿದ್ದು ಪಂಚಾಂಗ ಶ್ರವಣದಲ್ಲಿ ಅಷ್ಟಾವಧಾನ ಸೇವೆ ನಡೆಯುವದು, ವೈಶಾಖ ಶುದ್ಧ ಅಕ್ಷಯ ತದಿಗೆಯ ದಿವಸ ಪ್ರತಿಷ್ಠಾವರ್ಧಂತಿ ಉತ್ಸವ ನಡೆಯುವುದು.

ಶ್ರಾವಣ ಮಾಸದಲ್ಲಿ ಹೂವಿನ ಪೂಜೆ ನಡೆಯುವುದು. ಆಶ್ವೀಜ ಮಾಸದಲ್ಲಿ ಪ್ರತೀ ದಿನವೂ ಉತ್ಸವಗಳು ಜರುಗುತ್ತವೆ. ಆಶ್ವೀಜ ಶುದ್ಧ ಹತ್ತಕ್ಕೆ ಸೀಮೋಲಂಘನ ಉತ್ಸವ. ೧೨ರಂದು ಸಿಂಗರಿಸಿದ ಬೆಳ್ಳಿಯ ಮಂಟಪದಲ್ಲಿ ಶಾಂತೇರಿ ದೇವಿಯ, ಉತ್ಸವದ ಪ್ರತಿಮೆ ಇಟ್ಟು ಪೇಟೆಯಲ್ಲಿ ಮೆರವಣಿಗೆ ಮಾಡಿ ತಿರುಗಿತಂದು ದೇವಾಲಯದಲ್ಲಿ ಕಟ್ಟಿದ ಜೋಕಾಲಿಯ ಮೇಲೆ ದೇವಿಯನ್ನು ಕೂಡಿಸುವರು. ಕೀರ್ತನೆ ಅಷ್ಟಾವಧಾನ ಸೇವೆ ಮೊದಲಾದವು ನಡೆಯುವವು. ನಂತರ ರಜತ ರಥದಲ್ಲಿ ದೇವಾಲಯದ ಸುತ್ತ ಮೂರು ಸಲ ತಿರುಗಿಸಿ ಒಳಗೆ ತೆಗೆದುಕೊಂಡು ಹೋಗಿ ಮಂಗಳಾರತಿ ಮಾಡಿ ನಂತರ ಪ್ರಸಾದ ವಿತರಣೆ ಮಾಡುವರು.

ನವರಾತ್ರಿಯ ೯ ದಿನಗಳಲ್ಲಿ ದೇವಿಗೆ ವಿವಿಧ ರೀತಿಯ ಅಲಂಕಾರ ಮಾಡುವರು. ಹುಣ್ಣಿಮೆಯ ದಿವಸ ಮಧ್ಯಾಹ್ನ ಮಂಗಳಾರತಿ ಮಾಡಿದ ನಂತರ ಕುದಿಯುವ ಎಣ್ಣೆಯ ಕಾವಲಿಯಿಂದ ದರ್ಶನ ಪಾತ್ರಿಗಳು ಕೈಯಿಂದ ವಡೆ ತೆಗೆಯುವರು.[೩೫] ಮಾರ್ಗಶಿರ ಶುದ್ಧ ಐದನೇ ದಿನಕ್ಕೆ ದೀಪೋತ್ಸವ ಜರುಗುತ್ತದೆ. ಆಗ ಶ್ರೀ ಬೇತಾಳ ದೇವರ ಬಲದಲ್ಲಿ ಮಹಾಸತಿಯ ಮುಂದೆ ಕೆಂಡ ಮಾಡಿಸಿ ಉರಿಯುವ ಬಿಸಿ ಕೆಂಡಗಳನ್ನು ಕೈಯಿಂದ ತೆಗೆಯುವರು.

೩. ಹೆರವಟ್ಟಾ ಗ್ರಾಮದ ಶ್ರೀ ದೇವಕಿ ಕೃಷ್ಣ ರವಳನಾಥ ಮಹಾಲಕ್ಷ್ಮಿ ದೇವಾಲಯದಲ್ಲಿನ ಆಚರಣೆ – ಜ್ಯೇಷ್ಠ ಶುದ್ಧ ಬಿದಿಗೆಯಂದು ವರ್ಧಂತಿ ಉತ್ಸವ ನಡೆಯುವದು. ಈ ಉತ್ಸವದಲ್ಲಿ ದೇವರ ಪಾಲಕಿಯು ಹೆರವಟ್ಟಾದಿಂದ ಕುಮಟಾ ತನಕ ಹೋಗಿ ರಥ ಬೀದಿಯ ಬಸ್ತಿಪೇಟೆಯನ್ನು ಪ್ರದಕ್ಷಿಣೆ ಹಾಕಿ ತಿರುಗಿ ಬರುವುದು. ನಂತರ ಅಷ್ಟವಧಾನದ ಪೂಜೆ ನಡೆದ ನಂತರ ಪ್ರಸಾದ ಕೊಡಲಾಗುವದು. ಆಶ್ವೀಜ ಮಾಸದಲ್ಲಿ ವಿಶೇಷ ಪೂಜೆ ಇರುವದು. ಅದರಲ್ಲಿಯೂ ನವಮಿಯ ದಿವಸ ಅನ್ನ ಸಂತರ್ಪಣೆ, ರಾತ್ರಿ ಮಹಾಪೂಜೆ ನಡೆಯುತ್ತದೆ.

೪. ಕಾಗಲದ ದೇವಕಿಕೃಷ್ಣ ದೇವಾಲಯದ ಆಚರಣೆ – ಕ್ರಿ.ಶ.೧೯೭೨ರಿಂದ ಪ್ರತಿವರ್ಷ ರಥೋತ್ಸವ ಚೈತ್ರ ಶುದ್ಧ ಸಪ್ತಮಿಯಂದು ನಡೆಯುತ್ತದೆ. ವೈಶಾಖ ಶುದ್ಧ ಪೂರ್ಣಿಮೆಗೆ

ವರ್ಧಂತಿ ಉತ್ಸವ. ಆಶ್ವೀಜದಲ್ಲಿ ದಸರಾ ಉತ್ಸವ, ಆಶ್ವೀಜ ಶುದ್ಧ ಪಂಚಮಿಯಂದು ಗಣಗಳಿಗೆ ತೀರ್ಥಪ್ರಸಾದ ಕೊಡುವರು. ಮಾಘ ಶುದ್ಧ ಚತುರ್ದಶಿಯಂದು ಪಲ್ಲಕ್ಕಿ ಉತ್ಸವ ಅನ್ನ ಸಂತರ್ಪಣೆ ನಡೆಯುತ್ತದೆ.

೫. ಹಿರೇಗುತ್ತಿಯ ಮಹಾಲಕ್ಷ್ಮಿ ರವಳನಾಥ ದೇವಾಲಯದ ಆಚರಣೆ – ನವರಾತ್ರಿಯಲ್ಲಿ ಪ್ರತಿದಿನ ಉತ್ಸವಗಳು ಜರುಗುತ್ತವೆ. ಆಶ್ವೀಜ ಶುದ್ಧ ಚತುರ್ದಶಿಗೆ ಹರಿನಾಮ ಸಪ್ತಾಹ ನಡೆದು ಹುಣ್ಣಿಮೆಗೆ ಪಲ್ಲಕ್ಕಿ ಉತ್ಸವ, ನವಚಂಡಿ ಹವನ, ರಾತ್ರಿ ದರ್ಶನ ಮುಖಾಂತರ ಕವಲು ಪ್ರಸಾದ ಭಕ್ತರಿಗೆ ನೀಡಲಾಗುವುದು. ಫಾಲ್ಗುಣ ಮಾಸದಲ್ಲಿ ಪ್ರತಿವರ್ಷ ವರ್ಧಂತಿ ಉತ್ಸವ ವಿಜ್ರಂಭಣೆಯಿಂದ ನಡೆಯುವುದು.

೬. ಗೋಕರ್ಣದ ಭದ್ರಕಾಳಿ ದೇವಾಲಯದಲ್ಲಿನ ಆಚರಣೆ – ದಿನನಿತ್ಯ ೩ ಸಲ ಪೂಜೆ ನಡೆಯುತ್ತದೆ. ಬೆಳಗಿನ ಜಾವದಲ್ಲಿ ಅರ್ಚಕರು ಸಾಂಪ್ರದಾಯಿಕ ಪೂಜೆ ಮಾಡುವರು. ಅನ್ನವನ್ನು ನೈವೇದ್ಯ ಮಾಡಿಸುವರು ಮತ್ತು ಮಧ್ಯಾಹ್ನ ಹಾಗೂ ರಾತ್ರಿ ಸಮಯದಲ್ಲೂ ಪೂಜೆಯನ್ನು ಸಲ್ಲಿಸುತ್ತಾರೆ.ಮಂಗಳವಾರ ಹಾಗೂ ಶುಕ್ರವಾರ ದಿನಗಳಂದು ದೇವಿಗೆ ವಿಶೇಷ ಪೂಜೆಯನ್ನು ಮಾಡುತ್ತಾರೆ. ಬೆಳಗಿನ ಜಾವ ಅಭಿಷೇಕವನ್ನು ಮಾಡುತ್ತಾರೆ. ದೇವಿಗೆ ಆಭರಣಗಳಿಂದ ಶೃಂಗರಿಸುವರು.

ನವರಾತ್ರಿ ಪೂಜೆ – ಪಾಡ್ಯದಿಂದ ವಿಜಯದಶಮಿಯವರೆಗೆ ವಿಶೇಷ ಪೂಜೆ ಸಲ್ಲಿಸುವರು. ಈ ಸಂದರ್ಭದಲ್ಲಿ ದೇವಿಯನ್ನು ಪ್ರತಿದಿವಸ ಅಲಂಕಾರಗೊಳಿಸುವರು. ೯ನೇ ದಿವಸ ಚಂಡಿಹೋಮ ಮಾಡಲಾಗುತ್ತದೆ.

೭. ನೀಲಕೋಡದ ವನದುರ್ಗಾ ದೇವಾಲಯದಲ್ಲಿನ ಆಚರಣೆ – ಚೈತ್ರ ಶುದ್ಧ ಪಾಡ್ಯ ಸಾಯಂಕಾಲ ಯುಗಾದಿ ಫಲ ಹೇಳಲಾಗುವದು. ಮತ್ತು ಹಣ್ಣು ಕಾಯಿ ಸಾಮೂಹಿಕ ನೀಡಿದ ನಂತರ ವಸಂತ ಋತುವಿನಲ್ಲಿ ವಸಂತ ಪೂಜೆ ನಡೆಸುವರು.ಜ್ಯೇಷ್ಠ ಮಾಸದಲ್ಲಿ ಬರುವ ಮೊದಲನೇ ರವಿವಾರ ಮಧ್ಯಾಹ್ನ ಸಾಮೂಹಿಕ ಮಹಾಪೂಜೆ, ಅದೇ ದಿನ ರಾತ್ರಿ ಗಡಿ ರಕ್ಷಕ ಗಣಗಳಿಗೆ ಅನ್ನ ಬಲಿಕಾರ್ಯಕ್ರಮ ಇರುತ್ತದೆ. ಕಾರ್ತಿಕ ಶುದ್ಧ ಪಾಡ್ಯದಂದು ಮಧ್ಯಾಹ್ನ ಮಹಾಪೂಜೆ, ಮತ್ತು ಮಾರ್ಘಶಿರ ಶುದ್ಧ ದಶಮಿಯಂದು ದೇವಿಯ ಪ್ರತಿಷ್ಠಾಪನೆ, ಕಲಶಾಭಿವೃದ್ಧಿ ನಡೆಯುವದು. ಆ ದಿನ ಮಧ್ಯಾಹ್ನ ದೇವಿ ಪಾರಾಯಣ, ಮಹಾಪೂಜೆ ಮತ್ತು ಸಾಮೂಹಿಕ ಮಹಾಸಂತರ್ಪಣೆ, ಸಂಜೆ ಪಾರಾಯಣ, ಮಹಾಪೂಜೆ, ಮತ್ತು ಸಾಮೂಹಿಕವಾಗಿ ಮಹಾಸಂತರ್ಪಣೆ, ಸಾಮೂಹಿಕ ಮಹಾಪಂಚಕಜ್ಜಾಯ ಸಮರ್ಪಿಸಿ ಪೂಜೆ ಮಾಡಲಾಗುವದು.[೩೭]

೮. ದೇವರಹಕ್ಕಲು ಶಾಂತಿಕಾ ಪರಮೇಶ್ವರಿ ದೇವಾಲಯದಲ್ಲಿ ನಡೆಯುವ ಆಚರಣೆ – ಶಾಂತಿಕಾ ಪರಮೇಶ್ವರಿಗೆ ನಿತ್ಯವೂ ತ್ರಿಕಾಲ ಪೂಜೆ, ನೈವೇದ್ಯಾದಿಗಳು ನಡೆಯುತ್ತದೆ. ಯುಗಾದಿ ಪ್ರತಿಪದೆ ಹೊಸವರ್ಷ ಪ್ರಾರಂಭದ ದಿನವಾದ ಚೈತ್ರಶುದ್ಧ ಪ್ರತಿಪದೆಯ ದಿನ, ವಿಶೇಷ ಪೂಜೆ ನಡೆಯುತ್ತದೆ. ಆ ದಿನ ಸರ್ವಾಲಂಕಾರ ಪೂಜೆ ಮತ್ತು ವಿಶೇಷ ನೈವೇದ್ಯ ಮಾಡಲಾಗುವದು. ಆ ದಿವಸ ಎಲ್ಲ ಭಕ್ತರು ತಂಡೋಪತಂಡವಾಗಿ ಬಂದು ತಾಯಿಗೆ ಫಲಪುಷ್ಪ ಕಾಣಿಕೆ ನೀಡಿ ಪೂಜೆಮಾಡಿ ಪ್ರಾರ್ಥಿಸುವರು.

ಅಕ್ಷಯ ತೃತಿಯ ದಿನದಂದು – ಲೋಕಕಂಟಕನಾದ ಕುಂಭಾಸುರನನ್ನು ನಾಶಮಾಡಿದ ಶ್ರೀಶಾಂತಿಕಾಂಬಾದೇವಿಯನ್ನು ಸ್ವತಃ ದೇವತೆಗಳು ಸಂತುಷ್ಟಗೊಳಿಸುವ ದಿನವೆಂದು ಭಾವಿಸುತ್ತಾರೆ. ಈ ದಿನ ಯಾವುದೇ ಕಾರ್ಯ ಪ್ರಾರಂಭಿಸಿದರೆ ಸಿದ್ಧಿಯಾಗುತ್ತದೆಂದು ಪ್ರತೀತಿಯೂ ಇದೆ. ದೇವಿಯ ಮೂರ್ತಿಯ ಪ್ರತಿಷ್ಠಾಪನೆ ಫಾಲ್ಗುಣ ಮಾಸ ಶುಕ್ಲಪಕ್ಷದ ಅಷ್ಟಮಿಯಂದು ವಿಶೇಷ ಉತ್ಸವ ಹವನಗಳು ನಡೆಯುತ್ತವೆ. "ನವಚಂಡಿ" ಹವನವನ್ನು ಮಾಡುತ್ತಾರೆ. ನಂತರ ರಥೋತ್ಸವ ನಡೆಯುತ್ತದೆ.[೩೭]

೯. ಬಾಡದ ಕಾಂಚಿಕಾ ಪರಮೇಶ್ವರಿ ದೇವಾಲಯದಲ್ಲಿನ ಆಚರಣೆ – ಆಶ್ವೀಜ ಮಾಸದ ಶುಕ್ಲಪಕ್ಷದ ಪ್ರತಿಪದೆಯಿಂದ ದಶಮಿಯವರೆಗೆ ನವರಾತ್ರಿ ಉತ್ಸವ ನಡೆಯುತ್ತದೆ. ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನಿಟ್ಟು, ಪಲ್ಲಕ್ಕಿಯನ್ನು ಹೊತ್ತು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕುವಾಗ ಬಲಿಕಲ್ಲುಗಳಿಗೆ ಬಲಿಹಾಕುತ್ತಾರೆ. ನವರಾತ್ರಿಯ ೯ ದಿನಗಳಲ್ಲಿ ಊರಿನ ಜನರು ಸಪ್ತಶತಿ ಪಾರಯಣ, ರಂಗಪೂಜೆ, ಹೂವಿನಂಗಿ ಸೇವೆಗಳು ನಡೆಯುತ್ತವೆ. ದುರ್ಗಾಷ್ಟಮಿ, ಮಹಾನವಮಿಯಂದು ವಿಶೇಷ ಪೂಜೆ ನಡೆಯುತ್ತದೆ.

ಹೊಸನಬ್ಬ– (ಹೊಸತಿನ ಹಬ್ಬ) ಆಶ್ವೀಜ ಮಾಸದ ಶುಕ್ಲಪಕ್ಷದ ದಶಮಿಯಂದು ಶ್ರೀ ದೇವಿಯ ಪಲ್ಲಕ್ಕಿ ಭತ್ತದ ಹೊಲಕ್ಕೆ ಬಂದು ನಿಲ್ಲುತ್ತದೆ. ಭತ್ತದ ತೆನೆಗಳಿಗೆ ಶ್ರೀ ದೇವಿಯ ಅರ್ಚಕರಿಂದ ಪೂಜೆ ನಡೆಯುತ್ತದೆ. ನಂತರ ಭತ್ತದ ತೆನೆಗಳನ್ನು ಕೊಯ್ದು ಪಲ್ಲಕ್ಕಿಯಲ್ಲಿ ಇಟ್ಟು ದೇವಾಲಯಕ್ಕೆ ತಂದು ದೇವರ ಮುಂದೆ ಇಟ್ಟು ತಂದ ಕದ್ರದಿಂದ ಅಕ್ಕಿ ಮಾಡಿ, ಅದರಿಂದ ದೇವರಿಗೆ ನೈವೇದ್ಯ ಮಾಡಿ ಮಂಗಳಾರತಿ ನಂತರ ಭಕ್ತರಿಗೆ ಭತ್ತದ ತೆನೆಗಳನ್ನು ವಿತರಣೆ ಮಾಡುತ್ತಾರೆ.

ದೀಪೋತ್ಸವು – ಕಾರ್ತಿಕ ಮಾಸದಕೊನೆಯ ದಿನ ಅಮವಾಸ್ಯೆಯಂದು ಕಾಂಚಿಕಾ ಪರಮೇಶ್ವರಿಯ ದೇವಾಲಯದಲ್ಲಿ ದೀಪೋತ್ಸವ ನಡೆಯುತ್ತದೆ. ಚೈತ್ರ ಶುದ್ಧ ನವಮಿಯಂದು ರಥೋತ್ಸವ ನಡೆಯುತ್ತದೆ.[೩೮]

೧೦. **ತಲಗೋಡ ಜನಾರ್ಧನ ದೇವಾಲಯದಲ್ಲಿನ ಆಚರಣೆ–** ಪ್ರತಿವರ್ಷ ಫೆಬ್ರುವರಿಯಲ್ಲಿ ಹಸಿರುಪೂಜೆ ಹಾಗೂ ಕಾರ್ತಿಕ ಮಾಸದಲ್ಲಿ ದೀಪೋತ್ಸವವು ನಡೆಯುತ್ತದೆ. ಇಲ್ಲಿ ಯಾವುದೇ ಜಾತಿ ಜನಾಂಗ ಧರ್ಮ ಬೇದವಿಲ್ಲದೆ. ಎಲ್ಲ ಜನಾಂಗದವರು ಭಾಗವಹಿಸುತ್ತಾರೆ.

೧೧. **ಉಂಚಗಿ ವಿಷ್ಣುದೇವಾಲಯದಲ್ಲಿ ನಡೆಸಲಾಗುವ ಆಚರಣೆ** – ವಸಂತೋತ್ಸವ–ಕಲಶಾರೋಹಣ ಮಾಡಿದ (ಮೇ ೧೨ರಂದು) ದಿನದ ಸವಿನೆನಪಿನ ಕಾರ್ಯಕ್ರಮ ಮಾಡಲಾಗುತ್ತದೆ.

ಶ್ರೀಕೃಷ್ಣ ಜನ್ಮೋತ್ಸವ – ಈ ಉತ್ಸವವನ್ನು ಪ್ರತಿವರ್ಷದ ಶ್ರಾವಣ ಮಾಸದ ಬಹುಳದಲ್ಲಿ ನಡೆಯುವ ಕೃಷ್ಣಾಷ್ಟಮಿ ದಿನದಂದು ಆಚರಿಸಲಾಗುತ್ತದೆ.

ಭಜನೆ ದೀಪೋತ್ಸವ – ಪ್ರತಿವರ್ಷದ ಕಾರ್ತಿಕ ಮಾಸದ ಕೊನೆಯ ವಾರದಲ್ಲಿ ಪ್ರಾರಂಭಿಸಿ ಮಾರ್ಗಶಿರ ಮಾಸದ ಆರಂಭದ ವಾರದಲ್ಲಿ ಮುಗಿಸಲಾಗುತ್ತದೆ. ೧೫ ದಿನಗಳ ಕಾಲ ಭಜನೆ ಕಾರ್ಯಕ್ರಮ ನಡೆಯುತ್ತದೆ.

ವಾರ್ಷಿಕೋತ್ಸವ – ಪ್ರತಿವರ್ಷದ ಮಾಘ ಶುದ್ಧ ಷಷ್ಠಿಯಿಂದ ಆರಂಭವಾದ ಧಾರ್ಮಿಕ ಕಾರ್ಯಕ್ರಮಗಳು ಮಾರನೇ ದಿನ ಮಧ್ಯಾಹ್ನ ಪಾರಾಯಣ, ಅರ್ಚನೆ, ಮಹಾಪೂಜೆ, ಮಹಾಅನ್ನಸಂತರ್ಪಣೆ ಕಾರ್ಯಕ್ರಮಗಳು ನೆರವೇರುತ್ತವೆ.

೧೨. **ಬಸ್ತಿಪೇಟೆಯ ಹತ್ತಿರವಿರುವ ಶ್ರೀ ಶಂಕರನಾರಾಯಣ ದೇವಾಲಯದಲ್ಲಿನ ಆಚರಣೆ** – ಚೈತ್ರ ಶುದ್ಧ ಪಂಚಮಿ ಅಷ್ಟಬಂದ ಪ್ರಯುಕ್ತ ಪ್ರತಿಷ್ಠೆ ಉತ್ಸವ ಜರುಗುವದು, ಚೈತ್ರ ಶುದ್ಧ ಪ್ರತಿಪದೆ. ಚೈತ್ರ ಶುದ್ಧ ರಾಮನವಮಿಯ ದಿನ, ವೈಶಾಖ ಶುದ್ಧ ಅಕ್ಷಯ ತದಿಗೆಯ ದಿನ, ವಸಂತ ಪೂಜೆ ನಡೆಸಲಾಗುತ್ತದೆ. ಶ್ರಾವಣ ತಿಂಗಳ ಪ್ರತಿ ಸೋಮವಾರ ಭಕ್ತರ ಪೂಜೆ ನಡೆಯುವದು. ಆಶ್ವೀಜ ಶುದ್ಧ ದಶಮಿಯ ದಿನ ದಸರಾ ಪೂಜೆ ನಡೆಯುವದು. ಕಾರ್ತಿಕ ಬಹುಳ ಅಮವಾಸ್ಯೆ ದಿನದಂದು ದೀಪೋತ್ಸವ ಮಾಡಲಾಗುವದು.

೧೩. **ಬಸ್ತಿಪೇಟೆಯ ಪಾರ್ಶ್ವನಾಥ ಬಸದಿಯಲ್ಲಿನ ಆಚರಣೆ** – ಪ್ರತಿದಿನ ಪಂಚಕಲ್ಯಾಣಿ ಪೂಜೆ, ಮಹಾಕಾಳಿ ಪೂಜೆ, ನವಲಿಂಗ ಪೂಜೆ. ಕ್ಷೇತ್ರಪಾಲನಿಗೆ ವಿಶೇಷವಾದ ಪೂಜೆ ನಡೆಯುವುದು ಜೊತೆಗೆ ಅನೇಕ ಪ್ರಕಾರದ ಹರಕೆಗಳನ್ನು ಹೇಳಿಕೊಳ್ಳಲಾಗುತ್ತದೆ. ಕುಮಟಾ ಪರಿಸರದಲ್ಲಿ ಆಗ ಜೈನ ಧರ್ಮ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ.

೬.೪ ಆರ್ಥಿಕ ಸ್ಥಿತಿ

ದೇಶದ ಅಭಿವೃದ್ಧಿ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಆರ್ಥಿಕ ಕ್ಷೇತ್ರದಲ್ಲಿ ಏಳಿಗೆಗಾಗಿ ರಾಜ–ಮಹಾರಾಜರು ಆ ನಿಟ್ಟಿನಲ್ಲಿ ಪ್ರಯತ್ನಿಸಿದರು. ಪ್ರಸ್ತುತ ಈ ತಾಲೂಕಿನಲ್ಲಿ

ದೊರೆತಿರುವ ಶಾಸನಗಳ ಆಧಾರದ ಮೇಲಿಂದ ಇಲ್ಲಿಯ ಆರ್ಥಿಕ ಸ್ಥಿತಿಯನ್ನು ಅವಲೋಕನ ಮಾಡಲಾಗಿದೆ.

೬.೪.೧ ವ್ಯವಸಾಯ

ಪ್ರಾಚೀನ ಕಾಲದಿಂದ ಇಂದಿನವರೆಗೂ ವ್ಯವಸಾಯವೇ ಜನರ ಮೂಲ ಉದ್ಯೋಗವಾಗಿದೆ. ಪಸಲನ್ನು ಬೆಳೆಯುವ ರೈತರನ್ನು ಭೂತಾಯಿಯ ಮಕ್ಕಳಿಗೆ ಹೋಲಿಸಲಾಗಿದೆ.[೩೯] ಈ ಪ್ರದೇಶದಲ್ಲಿ ವ್ಯವಸಾಯ ಪ್ರಧಾನ ಉದ್ಯೋಗವಾಗಿದ್ದು ಇಲ್ಲಿಯ ಜನರು ಕೃಷಿಯನ್ನೆ ನಂಬಿಕೊಂಡು ಜೀವನ ಮಾಡುತ್ತಿದ್ದರು. ಇಲ್ಲಿ ದೊರೆತ ಶಾಸನಗಳಲ್ಲಿ ಕೃಷಿ ಭೂಮಿಯನ್ನು ದೇವಾಲಯಕ್ಕೆ, ಅಗ್ರಹಾರಕ್ಕೆ ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ ೧೨೫೬ ರ ಗೋಕರ್ಣದ ತಾಮಪಟ ಶಾಸನ[೪೦] ಮೂರೂರು ಅಗ್ರಹಾರಕ್ಕೆ ಭೂದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ ೧೧-೧೨ ನೇ ಶತಮಾನಕ್ಕೆ ಸಂಬಂಧಿಸಿದ ಗೋಕರ್ಣದ ಉಮಾಮಹೇಶ್ವರ ಪ್ರಬಾವಳಿ ಶಾಸನ[೪೧] ೧೩೨೭ರ[೪೨] ೧೪೭೫ರ[೪೩] ಗೋಕರ್ಣದಲ್ಲಿ ದೊರೆತ ಶಾಸನ ಇವೆಲ್ಲ ಭೂಮಿ ದಾನವನ್ನು ದಾಖಲಿಸಿದೆ.

೬.೪.೨ ಭೂಪ್ರಕಾರ

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಭೂಮಿಯನ್ನು ವಿಭಾಗಿಸಿದ್ದು ತಿಳಿದುಬರುತ್ತದೆ. ಈ ಭೂಮಿಯನ್ನು ಫಲವತ್ತತೆಯ ಆಧಾರದಲ್ಲಿ ವಿಂಗಡಿಸಲಾಗಿದ್ದು ಶಾಸನಗಳ ಆಧಾರದ ಮೇಲೆ ೨ ಪ್ರಕಾರಗಳಿವೆ.

೧) ಗದ್ದೆ ಭೂಮಿ

೨) ತೋಟದ ಭೂಮಿ

೧) ಗದ್ದೆ ಭೂಮಿ

ಪ್ರಸ್ತುತ ಕುಮಟಾ ತಾಲೂಕಿನಲ್ಲಿ ದೊರೆತಿರುವ ಶಾಸನಗಳಲ್ಲಿ ಗದ್ದೆಯ ಉಲ್ಲೇಖವಿದೆ. ಗದ್ದೆಯನ್ನು ಸಾಮಾನ್ಯವಾಗಿ ಹೊಲ ಎಂದೇ ಕರೆಯಲಾಗಿದೆ. ಗದ್ದೆ ಎಂಬ ಪದಕ್ಕೆ ಗರ್ಧೆ, ಗಳ್ದೆ, ಗದೆ ಪದ ರೂಢಿಯಲ್ಲಿದೆ.[೪೪] ಕ್ರಿ.ಶ ೧೧೭೭ರ ಗೋಕರ್ಣದಲ್ಲಿ ದೊರೆತ ಶಾಸನದಲ್ಲಿ[೪೫] ಬಟಗದ್ದೆ, ಕರಿಗದ್ದೆ, ಹಲಸಿನಗದ್ದೆ, ಕಪ್ಪಸೆಗದ್ದೆ, ಕಲುವಗದ್ದೆ ಉಲ್ಲೇಖವಿದೆ. ಕ್ರಿ.ಶ ೧೧-೧೨ ನೇ ಶತಮಾನಕ್ಕೆ ಸಂಬಂದಿಸಿದ ಗೋಕರ್ಣದಲ್ಲಿ ದೊರೆತ ಉಮಾಮಹೇಶ್ವರ ಪ್ರಭಾವಳಿ ಶಾಸನದಲ್ಲಿ[೪೬] ಮಕ್ಕಿಗದ್ದೆ ಎಂದು ದಾಖಲಿಸಿದೆ.

೨) ತೋಟದ ಭೂಮಿ

ಇಲ್ಲಿ ದೊರೆತಿರುವ ಶಾಸನಗಳಲ್ಲಿ ತೋಟದ ಉಲ್ಲೇಖವಿದೆ. ಕ್ರಿ.ಶ ೧೧೭೭ರ ಗೋಕರ್ಣದಲ್ಲಿ ದೊರೆತ ಶಾಸನದಲ್ಲಿ[೪೭] ತೋಟದ ಮನೆ ಎಂಬ ಉಲ್ಲೇಖವಿದೆ. ಕ್ರಿ.ಶ ೧೫೨೬ರ ಮಿರ್ಜಾನದಲ್ಲಿ ದೊರೆತ ಶಾಸನದಲ್ಲಿ[೪೮] ತೆಂಗಿನ ತೋಟದ ಉಲ್ಲೇಖವಿದೆ. ತೋಟಗಾರಿಕೆಯಲ್ಲಿ ವಾಣಿಜ್ಯ ಬೆಳೆಗಳಾದ ಅಡಿಕೆ, ತೆಂಗನ್ನು ಬೆಳೆಯುತ್ತಿದ್ದರು.

೬.೪.೩ ಭೂಮಾಪನ ಪದ್ಧತಿ

- **ಮೂಡೆಗದ್ದೆ**[೪೯] – ನಿರ್ದಿಷ್ಟ ಭೂಮಿಯಲ್ಲಿ ಇಂತಿಷ್ಟು ಮೂಡೆ ಭತ್ತ ಬೆಳೆಯುವ ಜಾಗವನ್ನು ಮುಡೆಗದ್ದೆ ಎನ್ನುವರು.
- **ಬೀಜವರಿ ಮೂಡೆ**[೫೦] – ನಿರ್ದಿಷ್ಟ ಪ್ರಮಾಣದಲ್ಲಿ ಮೂಡೆಗಳಲ್ಲಿ ಬೀಜ ಬಿತ್ತುವ ಸಾಮರ್ಥ್ಯವುಳ್ಳ ಭೂಮಿಯನ್ನು ಬೀಜವರಿ ಮೂಡೆ ಎನ್ನುವರು.
- **ಮತ್ತಂ**[೫೧](ಮತ್ತರು) – ಭೂಮಿಯನ್ನು ಅಳೆಯುವ ಒಂದು ಮಾನ
- **ಗೇಣಿ**[೫೨] – ಭೂಮಿ ಬೆಳೆ ಬೆಳೆಯಲು ಉಪಯೋಗಿಸುತ್ತಿದ್ದುದಕ್ಕೆ ಕೊಡುವ ಬಾಡಿಗೆ
- **ಕಾಣಿಕೆ**[೫೩] – ಉತ್ಸವ, ಸಮಾರಂಭಗಳ ಸಮಯದಲ್ಲಿ ನೀಡಬೇಕಾದ ಹಣ
- **ಬೀಳು ದಂಡ** – ಬಂಜರು ಭೂಮಿಯ ಮೇಲಿನ ತೆರಿಗೆ

೬.೪.೪ ಬೆಳೆಗಳು/ ತೋಟಗಳು

ಭೂಮಿಯಲ್ಲಿ ನೀರು ನಿಲ್ಲುವಂತೆ ಮಾಡಿ ಅದನ್ನು ಗದ್ದೆಯನ್ನಾಗಿ ಪರಿವರ್ತಿಸಿ ಅದರಲ್ಲಿ ಹಲವಾರು ಬೆಳೆಗಳನ್ನು ಬೆಳೆಯುತ್ತಿದ್ದರು. ಇಲ್ಲಿ ದೊರೆತ ಶಾಸನಗಳ ಆಧಾರದ ಮೇಲಿಂದ ಇಲ್ಲಿ ಬೆಳೆಯುತ್ತಿದ್ದ ವಿವಿಧ ಬೆಳೆಗಳ ಬಗ್ಗೆ ತಿಳಿದುಕೊಳ್ಳಬಹುದು. ಹಾರುಮಾಸ್ಕೇರಿಯಲ್ಲಿ ದೊರೆತ ಕಾಲ ಉಲ್ಲೇಖವಿಲ್ಲದ ಶಾಸನದಲ್ಲಿ[೫೪] ಭತ್ತ ಮತ್ತು ಅಕ್ಕಿಯ ಉಲ್ಲೇಖವಿದೆ. ಕ್ರಿ.ಶ ೧೦೮೩ರ ಧಾರೇಶ್ವರದಲ್ಲಿ ದೊರೆತ ಶಾಸನದಲ್ಲಿ[೫೫] ಭತ್ತವನ್ನು ಬೆಳೆಯುವ ಭೂಮಿ ದಾನ ನೀಡಿದ್ದು ದಾಖಲಿಸಿದೆ. ಕ್ರಿ.ಶ ೧೧೭೭ರ ಗೋಕರ್ಣದಲ್ಲಿ ದೊರೆತ ಶಾಸನದಲ್ಲಿ[೫೬] ಬಾಳೆಯ ಗುಂಡಿ ಎಂದು ಬಾಳೆಯ ಬೆಳೆಯ ಬಗ್ಗೆ ಕ್ರಿ.ಶ ೧೫೨೬ರ ಮಿರ್ಜಾನದಲ್ಲಿ ದೊರೆತ ಶಾಸನದಲ್ಲಿ[೫೭]ತೆಂಗಿನ ತೋಟದ ಉಲ್ಲೇಖವಿದೆ. ಶಾಸನಗಳ ಆಧಾರದಲ್ಲಿ ಇಲ್ಲಿ ಭತ್ತ ತೆಂಗು ಹಾಗೂ ಬಾಳೆಯನ್ನು ಬೆಳೆಯುತ್ತಿದ್ದರು.

೬.೪.೫ ಪಶುಪಾಲನೆ

ಪ್ರಾಚೀನ ಕಾಲದಿಂದಲೂ ವ್ಯವಸಾಯ ಪಶುಪಾಲನೆಯನ್ನು ಅವಲಂಬಿಸಿತ್ತು. ವ್ಯವಸಾಯಕ್ಕೆ ಹೈನುಗಾರಿಕೆಗೆ ಗೋವನ್ನು ಹೆಚ್ಚಾಗಿ ಬಳಸುತ್ತಿದ್ದರು. ಬಹಳಷ್ಟು ಜನರು ಗೋವು ೩ಕೋಟಿ ದೇವರಿಗೆ ಸಮಾನ ಎಂಬ ಭಾವನೆಯಿಂದ ಪೂಜಿಸುತ್ತಿದ್ದರು. ಕ್ರಿ.ಶ ೧೦೮೩ರ ಧಾರೇಶ್ವರದಲ್ಲಿ ದೊರೆತ ಶಾಸನದಲ್ಲಿ[೫೮] ಸಾವಿರ ಕಪಿಲೆಯ ವಧಿಸಿದ ದೋಷ, ಇದ ಪಾಲಿಸಿದರೆ ಸಾವಿರ ಕಪಿಲೆಯ ರಕ್ಷಣೆಯ ಪುಣ್ಯ ಲಭಿಸುತ್ತದೆ ಎಂದು ಶಾಸನ ದಾಖಲಿಸಿದೆ. ಕ್ರಿ. ಶ ೧೨೫೬ರ ಕತಗಾಲದಲ್ಲಿ ದೊರೆತ ಶಾಸನದಲ್ಲಿ[೫೯] ಗಂಗೆಯತಡಿಯಲ್ಲಿ ನೂರೊಂದು ಕವಿಲೆಯ ಕೊಂದ ಪಾಪ ಎಂಬ ಉಲ್ಲೇಖವಿದೆ.

೩.೪.೬ ಎಣ್ಣೆ ಕೈಗಾರಿಕೆ

ಪ್ರಾಚೀನ ಕಾಲದಿಂದಲೂ (ತೈಲೋದ್ಯಮ) ಗಾಣ ಎಣ್ಣೆ ತೆಗೆಯುವ ಉದ್ದಿಮೆ, ಕ್ರಿ.ಶ ೧೧೬೭ರ ಅಡತಾರೆಯಲ್ಲಿ ದೊರೆತ ಶಾಸನದಲ್ಲಿ[೬೦] ಶಿವ ಮತ್ತು ಕೇಶವ ದೇವರ ನಂದಾದೀಪಕ್ಕೆ ಎಣ್ಣೆ ದತ್ತಿ ನೀಡಿದ ಉಲ್ಲೇಖವಿದೆ. ಕ್ರಿ.ಶ ೧೦೮೩ರ ಧಾರೇಶ್ವರದಲ್ಲಿ ದೊರೆತ ಶಾಸನ[೬೧] ನಂದಾದೀಪಕ್ಕೆ ಎಣ್ಣೆ ದಾನ ನೀಡಿದ್ದನ್ನು ದಾಖಲಿಸಿದೆ.

ಶಿಲ್ಪಗಾರಿಕೆ

ಕ್ರಿ.ಶ ೧೧೭೭ರ ಅಮೃತೇಶ್ವರ ದೇವಾಲಯದಲ್ಲಿ ದೊರೆತ ಶಾಸನ[೬೨] ಲಕ್ಷಮಯ್ಯ ಶಿಲ್ಪಿಯ ಕುರಿತು ಉಲ್ಲೇಖಿಸುತ್ತದೆ. ಕ್ರಿ.ಶ ೧೨೫೬ರ ಕತಗಾಲದಲ್ಲಿ ದೊರೆತ ಶಾಸನದಲ್ಲಿ[೬೩] ಧಾರೇಶ್ವರದ ಬೊಮ್ಮಜ್ಜ ಶಿಲ್ಪಿಯ ಉಲ್ಲೇಖವಿದೆ. ಇಲ್ಲಿ ಕ್ರಿ.ಶ ೧೫ನೇ ಶತಮಾನಕ್ಕೆ ಸೇರಿದ ಶಾಸನ[೬೪] ಶಿಲ್ಪಿ ಸಣ್ಣಪ್ಪನ ಹೆಸರನ್ನು ದಾಖಲಿಸಿದೆ.

೩.೪.೭ ವರ್ತಕರು

ವ್ಯಾಪಾರವನ್ನೆ ವೃತ್ತಿಯನ್ನಾಗಿಸಿಕೊಂಡಿದ್ದರು. ಅವರಲ್ಲಿ ಕೆಲವರು ವ್ಯಾಪಾರ ವೃತ್ತಿಯನ್ನು ಮಾಡುವ ವಿನಿಮಯ ವರ್ತಕರು, ಮತ್ತು ಗುಡಿಕೈಗಾರಿಕೆಗಳ ಮೂಲಕ ಮಾರಾಟ ಮಾಡುವ ಉತ್ಪಾದಕರನ್ನು ವಿನಿಮಯ ವರ್ತಕರೆಂದು ವರ್ಗೀಕರಿಸಲಾಗಿದೆ. ಶಾಸನಗಳಲ್ಲಿ ಇಂತಹ ಅನೇಕ ವರ್ತಕರ ಹೆಸರುಗಳಿವೆ. ಹಾರುಮಾಸ್ಕೇರಿಯಲ್ಲಿ ದೊರೆತ ಕಾಲ ಉಲ್ಲೇಖವಿಲ್ಲದ ಶಾಸನದಲ್ಲಿ[೬೫] ವಜ್ರ ಶೆಟ್ಟಿ, ಕಾಮಣ್ಣಶೆಟ್ಟಿ, ಮಾದಿಶೆಟ್ಟಿ, ಬೊಮ್ಮಣ್ಣ ಶೆಟ್ಟಿಯರ ಉಲ್ಲೇಖವಿದೆ. ಕ್ರಿ.ಶ ೧೧–೧೨ನೇ ಶತಮಾನಕ್ಕೆ ಸೇರಿದ ಉಮಾಮಹೇಶ್ವರಿ ಪ್ರಭಾವಳಿ ಶಾಸನದಲ್ಲಿ[೬೬] ತರಕುಶೆಟ್ಟಿ, ವಾಣಿಶೆಟ್ಟಿ, ಚೆಂಬಿಶೆಟ್ಟಿ, ಮಾಸನಿಶೆಟ್ಟಿಯರನ್ನು ಹೆಸರಿಸಲಾಗಿದೆ.

೬.೪.೮ ತೂಕ ಮತ್ತು ಅಳತೆಗಳು

ಈ ಪ್ರದೇಶದಲ್ಲಿ ದೊರೆತ ಶಾಸನಗಳಿಂದ ವಿವಿಧ ಮಾದರಿಯ ತೂಕ ಮತ್ತು ಅಳತೆಯ ವಿಧಾನ ತಿಳಿದುಕೊಳ್ಳಬಹುದು. ಕ್ರಿ.ಶ ೧೦೮೩ರ ಧಾರೇಶ್ವರ ಶಾಸನದಲ್ಲಿ[೬೭]ಮೂಡೆಯ ಉಲ್ಲೇಖವಿದೆ. ಕ್ರಿ.ಶ ೧೧೭೭ರ ಗೋಕರ್ಣದಲ್ಲಿ ದೊರೆತ ಶಾಸನದಲ್ಲಿ[೬೮] ಧಾನ್ಯಗಳನ್ನು ಮೂಡೆಯ ಲೆಕ್ಕದಲ್ಲಿ ಅಳೆಯುತ್ತಿದ್ದರೆಂದಿದೆ. ಹಾರುಮಾಸ್ಕೇರಿಯಲ್ಲಿ ದೊರೆತ ಕಾಲವಿಲ್ಲದ ಶಾಸನದಲ್ಲಿ[೬೯] ನಲ್ವತ್ತು ಮೂಡೆ ಭತ್ತ, ಮೂವತ್ತಾರು ಮೂಡೆ ಅಕ್ಕಿಯ ಉಲ್ಲೇಖವಿದೆ. ಇದರಿಂದ ಭತ್ತ ಮತ್ತು ಅಕ್ಕಿಯನ್ನು ಮೂಡೆಯೆಂಬ ಅಳತೆಯ ಮಾಪನದಲ್ಲಿ ಅಳೆಯುತ್ತಿದ್ದರೆಂದು ಹೇಳಬಹುದು. ೧೧೬೭ರ ಅಡತಾರೆಯಲ್ಲಿ ದೊರೆತ ಶಾಸನದಲ್ಲಿ[೭೦] ಎಣ್ಣೆ ಕೊಳಗ ಪ್ರಸ್ತಾಪವಿದೆ. ಇದರಿಂದ ಎಣ್ಣೆಯನ್ನು ಅಳೆಯಲು ಕೊಳಗವನ್ನು ಬಳಸುತ್ತಿದ್ದರು.

ಸೊಲಗಿ[೨೧] – ದ್ರವಪದಾರ್ಥ ಅಳೆಯುವ ಅಳತೆ, ಪಾವು ಸೇರಿಗಿಂತ ಕಡಿಮೆ ,ಬಳ್ಳ[೨೨]– ೧/೪ ಸೇರಿಗೆ ಸಮ, ಒಂದು ಸಿದ್ದೆ – ೬ ಬಳ್ಳ, ನಾಲ್ಕು ಸಿದ್ದೆ – ೧ ಹಾನೆ, ಎರಡು ಹಾನೆ – ೧ ಕೊಳಗ, ಎರಡು ನಾಡಿ – ೧ ಕೊಳಗ, ಕೊಳಗ[೨೩]– ೪೨ ಸೇರಿಗೆ ಸಮ ಅಥವಾ ೬ ಸಿದ್ದೆ, ಒಂದು ಖಂಡುಗ – ೨೦ ಕೊಳಗ, ಒಂದು ಮೂಡೆ – ೨೦ ಕೊಳಗ ಕೆಲವೊಂದು ಕಡೆ ೧೫ ಕೊಳಗಕ್ಕೆ ಸಮ

ಮೂಡೆ[೨೪]– ಹುಲ್ಲಿನಿಂದ ಗುಮ್ಮಟಾಕಾರವಾಗಿ ನಿರ್ಮಿಸಿದ ಮೂಟೆಯಾಗಿದ್ದು ಇಪ್ಪತ್ತು ಕೊಳಗ ಧಾನ್ಯವನ್ನು ಶೇಖರಿಸಲು ಮಾಡುವ ಒಂದು ಮಾಪನ ಎಂದು ಹೇಳಬಹುದು.

೬.೩.೯ ನಾಣ್ಯಗಳು

ಪ್ರಾಚೀನ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ನಾಣ್ಯಗಳೇ ಈ ಭಾಗದಲ್ಲಿ ಬಳಕೆಯಲ್ಲಿದ್ದವೆಂದು ಹೇಳಬಹುದು. ನಾಣ್ಯಕ್ಕೆ ಬಳಸಿದ ಲೋಹದ ಆಧಾರದ ಮೇಲೆ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳಬಹುದು. ಕ್ರಿ.ಶ ೧೧೬೭ರ ಅಡತಾರೆಯ ಶಿವದೇವಾಲಯದಲ್ಲಿ ಇದ್ದ ಶಾಸನದಲ್ಲಿ 'ಗದ್ಯಾಣ' ನಾಣ್ಯದ ಉಲ್ಲೇಖವಿದೆ.[೨೫]

- ಗದ್ಯಾಣ[೨೬]– ಚಿನ್ನದ ನಾಣ್ಯ, ವರಹ[೨೭] – ಚಿನ್ನದ ನಾಣ್ಯ, ಹೊನ್ನು[೨೮] –ಚಿನ್ನದ ನಾಣ್ಯ, ಪೊನ್ನು[೨೯] – ಚಿನ್ನದ ನಾಣ್ಯ
- ಪಣ[೩೦]– ಚಿನ್ನದ ನಾಣ್ಯ ಇದರ ಮುಖ ಬೆಲೆ ಅತಿಕಡಿಮೆ. ಇದು ೫ ರಿಂದ ೬ ಗ್ರೇನಗಳಷ್ಟು ತೂಕವಿದ್ದು ವರಹದ ೧/೧೦ ನೇ ಭಾಗವಾಗಿದೆ.
- ಪಗೋಡ[೩೧], ಹಾಗ, ಬೇಳೆ – ಇವು ವಿಜಯನಗರ ಸಾಮ್ರಾಜ್ಯ ಅಧಿಕಾರ ಅವಧಿಯಲ್ಲಿ ಚಲಾವಣೆಯಲ್ಲಿದ್ದ ಚಿನ್ನದ ನಾಣ್ಯಗಳಾಗಿವೆ. ಹಾಗವು ೧/೪ ಪಣಕ್ಕೆ ಸಮವಾಗಿರುತ್ತದೆ. ಬೇಳೆಯು ಅರ್ಧ ಹಾಗಕ್ಕೆ ಸಮವಾಗಿದೆ.
- ಜಿತಲ ಮತ್ತು ಕಾಸು[೩೨]– ಇವು ತಾಮ್ರದ ಹಾಗೂ ಕಡಿಮೆ ಮುಖಬೆಲೆಯುಳ್ಳ ನಾಣ್ಯಗಳಾಗಿವೆ.

೬.೪ ಧಾರ್ಮಿಕ ಸ್ಥಿತಿ

ಸಮಾಜದ ಪ್ರಮುಖ ಅಂಗಗಳಲ್ಲಿ ಧರ್ಮವು ಒಂದು. ಕರ್ನಾಟಕ ಅನೇಕ ಧರ್ಮಗಳ ಏಳಿಗೆಗೆ ಶ್ರೇಷ್ಠ ಸ್ಥಾನವನ್ನು ನೀಡಿದೆ ಎನ್ನಬಹುದು. ಇಲ್ಲಿನ ರಾಜರು, ಸಾಮಂತರು, ಉನ್ನತ ಅಧಿಕಾರಿ ವರ್ಗದವರು ವಿವಿಧ ಧರ್ಮಗಳಿಗೆ ಪ್ರೋತ್ಸಾಹ ನೀಡಿದರು. 'ಧರ್ಮ' 'ಧೃ' ಎಂಬ ಧಾತುವಿಗೆ 'ರ್ಮ' ಎಂಬ ಪ್ರತ್ಯಯ ಸೇರಿಸುವುದರಿಂದ ಇದು ರೂಪಗೊಳ್ಳುತ್ತದೆ. ಧರ್ಮದ ಅರ್ಥ ಜಾತಿ ಪಂಗಡಗಳಿಗೆ ಸೇರಿದ ಆಚಾರ–ವಿಚಾರ ಹಾಗೂ ಭಕ್ತಿಯ ಔಚಿತ್ಯಎಂದರ್ಥ.[೩೩] ಧರ್ಮ ಆಯಾ ನಾಡಿನ ಜನರ ಸಾಮಾಜಿಕ ಆರ್ಥಿಕ ಜೀವನದ ಕಥನ[೩೪] "ಧರ್ಮೋ ರಕ್ಷತಿ ರಕ್ಷಿತ" ನಾವು ಧರ್ಮವನ್ನು ರಕ್ಷಿಸಿದರೆ ಧರ್ಮವು

ನಮ್ಮನ್ನು ರಕ್ಷಿಸುತ್ತದೆ.[೮೫] ಕುಮಟಾ ತಾಲೂಕಿನಲ್ಲಿ ದೊರೆತಿರುವ ಶಾಸನಗಳ ಆಧಾರದಲ್ಲಿ ಬೌದ್ಧ, ಜೈನ, ಶೈವ, ವೈಷ್ಣವ ಧರ್ಮಗಳ ಅವಲೋಕನವನ್ನು ಮಾಡಲಾಗಿದೆ.

೬.೫.೧ ಬೌದ್ಧ ಧರ್ಮ

ಗೌತಮ ಬುದ್ಧನಿಂದ ಸ್ಥಾಪಿತವಾದ ಬೌದ್ಧಧರ್ಮ ಭಾರತದ ಪ್ರಾಚೀನ ಮತ್ತು ಪ್ರಮುಖ ಧರ್ಮಗಳಲ್ಲಿ ಒಂದಾಗಿದೆ. ಬೌದ್ಧಧರ್ಮವು ಉತ್ತರ ಭಾಗದಲ್ಲಿ ಹೆಚ್ಚು ಜನಪ್ರಿಯವಾಗಿತ್ತು. ಕರ್ನಾಟಕದಲ್ಲಿ ಬೌದ್ಧಧರ್ಮದ ಪ್ರಸಾರ ಮೌರ್ಯ ದೊರೆ ಅಶೋಕನಿಂದ ಆರಂಭವಾಯಿತು. ರಾಜಧಾನಿ ಪಾಟಲಿಪುತ್ರದಲ್ಲಿ ಮೂರನೇ ಬೌದ್ಧ ಸಮ್ಮೇಳನ ನಡೆಸಿ. ಥೇರ ಮಹಾದೇವ ಮತ್ತು ಥೇರ ರಖ್ಖಿತರನ್ನು ಮಹಿಷಮಂಡಲ ಮತ್ತು ವನವಾಸಿ (ಬನವಾಸಿ)ಗೆ ಬೌದ್ಧಧರ್ಮ ಪ್ರಸಾರಕ್ಕಾಗಿ ಕಳುಹಿಸಿದನು[೮೬]. ಉತ್ತರ ಕನ್ನಡ ಜಿಲ್ಲೆಯಲ್ಲಿ ಬೌದ್ಧ ಧರ್ಮ ಪ್ರವೇಶಿಸಿತು. ಪ್ರಸ್ತುತ ಕುಮಟಾ ತಾಲೂಕಿಗೆ ಸಂಬಂಧಿಸಿದಂತೆ ಹೀರೇಗುತ್ತಿಯಲ್ಲಿ ದೊರೆತಿರುವ ಕ್ರಿ.ಶ ಸುಮಾರು ೬ನೇ ಶತಮಾನಕ್ಕೆ ಸೇರಿದ ಬೋಜ ಅರಸ ಅಶಂಕಿತನ ತಾಮ್ರಶಾಸನ[೮೭] ಇದರಲ್ಲಿ ಸುರಾಸುರರಿಂದ ವಂದಿತನೆಂದು ಅಪರಿಮಿತ ಗುಣ ನಿಧಿಯೆಂದು ಹಾಗೂ ನಿಷ್ಕರುಣವತ್ಸಲನೆಂದು ಭಗವಾನ ಬುದ್ದನ ಸ್ತುತಿ ಇರುವುದು ಕಂಡುಬರುತ್ತದೆ. ಇದೇ ಶಾಸನ ಅಶಂಕಿತ ರಾಜನು ತಾನೇ ಸ್ವತಃ ನಿರ್ಮಾಣ ಮಾಡಿದ ಬೌದ್ಧ ವಿಹಾರಕ್ಕೆ ದೀಪಕ ವಿಷಯದಲ್ಲಿ ಸುಂದರಿಕಾ ಗ್ರಾಮವನ್ನು ದತ್ತಿ ಕೊಟ್ಟಿದ್ದನ್ನು ದಾಖಲಿಸಿದೆ. ಗೋಕರ್ಣದ ಹತ್ತಿರ ಇರುವ ಪ್ರಸ್ತುತ ತೊರ್ಕೆಯಲ್ಲಿ ಬೌದ್ಧಗುರುಗಳು ಇದ್ದುದರ ಬಗ್ಗೆ ದಾಖಲಿಸಿದೆ. ಕೆ.ಜಿ ಕುಂದಣಗಾರ ಅಭಿಪ್ರಾಯದಲ್ಲಿ ಪ್ರಾಚೀನತಮತ್ಯಾರ್ಕಪುರ ನಗರವೇ ಈಗಿನ ತೊರ್ಕೆ ಆಗಿರುವ ಸಾಧ್ಯತೆ ಇದೆ.[೮೮]

೬.೫.೨ ಜೈನಧರ್ಮ

ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮವು ಪ್ರಬಲವಾದ ಧರ್ಮವಾಗಿತ್ತು. ಜಿನನಿಂದ ಬೋಧಿಸಲ್ಪಟ್ಟ ಧರ್ಮವೇ ಜೈನಧರ್ಮ[೮೯] ಜೈನಧರ್ಮದಲ್ಲಿ ೨೪ ತೀರ್ಥಂಕರರಿದ್ದರೆಂಬ ನಂಬಿಕೆಯಿದೆ. ಅವರಲ್ಲಿ ೧ನೇ ತೀರ್ಥಂಕರ ಋಷಬ. ಇನ್ನುಳಿದ ೨೧ ತೀರ್ಥಂಕರರ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ೨೩ನೇ ತೀರ್ಥಂಕರ ಪಾರ್ಶ್ವನಾಥ ಹಾಗೂ ೨೪ನೇ ತೀರ್ಥಂಕರ ಮಹಾವೀರ. ಮಹಾವೀರನು ಮೋಕ್ಷವನ್ನು ಪಡೆಯಬೇಕಾದರೆ ಸಮ್ಯಗ್‌ಜ್ಞಾನ, ಸಮ್ಯಗ್ ದರ್ಶನ, ಸಮ್ಯಗ್ ಚರಿತ್ರೆಯನ್ನು ಅನುಸರಿಸಬೇಕು ಎಂದು ಹೇಳಿದ್ದಾನೆ. ಇವು ಮೂರನ್ನು ತ್ರಿರತ್ನಗಳೆಂದು ಕರೆಯುತ್ತಾರೆ. ಎಲ್ಲ ಚರಾಚರ ವಸ್ತುಗಳಲ್ಲಿಯೂ ಆತ್ಮ(ಜೀವ) ಎದೆ ಎಂಬುದು ಇವರ ನಂಬಿಕೆ. ತಪಸ್ಸು, ಉಪವಾಸ, ದೇಹದಂಡನೆ ಅವುಗಳ ಮೂಲಕ ದೇಹ ಶುದ್ಧೀಕರಣವಾಗುತ್ತದೆ. ಇದರಿಂದ ಮೋಕ್ಷಸಾಧ್ಯ ಇದನ್ನೇ ಸಲ್ಲೇಖನಎನ್ನುವರು. ಅದರಂತೆ ಜೈನ ಸಾಹಿತ್ಯದ ಪ್ರಕಾರ ೧೨ ವರ್ಷಗಳ ಕಾಲ ಉತ್ತರ ಭಾರತದಲ್ಲಿ ಬರಗಾಲ ಸಂಬವಿಸಿದಾಗ ಮೌರ್ಯ ಸಾಮ್ರಾಜ್ಯದ ಚಕ್ರವರ್ತಿ ಚಂದ್ರಗುಪ್ತ ಮೌರ್ಯನಿಗೆ ಪ್ರಜೆಗಳಿಗೆ

ಸರಿಯಾಗಿ ಪರಿಹಾರ ನೀಡಲಿಕ್ಕೆ ಆಗದಿದ್ದಾಗ ಪ್ರಜೆಗಳು ಅನುಭವಿಸುವ ತೊಂದರೆಯನ್ನು ನೋಡಲಿಕ್ಕಾಗದೇ ಮನನೊಂದು ಜೈನಮುನಿ ಭದ್ರಬಾಹುವಿನೊಡನೆ ಶ್ರವಣಬೆಳಗೊಳದ ಚಂದ್ರಗಿರಿಗೆ ಬಂದು ಜೈನಧರ್ಮದ ಸಂಪ್ರದಾಯದಂತೆ ಸಲ್ಲೇಖನ ವ್ರತವನ್ನು ಕೈಗೊಂಡು ಮರಣಹೊಂದಿದನು. ಬನವಾಸಿ ಉತ್ಖನನದಲ್ಲಿ ದೊರೆತಿರುವ ಜೈನ ತೀರ್ಥಂಕರರ ಮೂರ್ತಿಶಿಲ್ಪ ಕ್ರಿ.ಶ ೫-೬ನೇ ಶತಮಾನಕ್ಕೆ ಸೇರುತ್ತದೆ. ಉತ್ತರಕನ್ನಡ ಜಿಲ್ಲೆಯ ಬನವಾಸಿ ಕದಂಬರ ಕಾಲದಲ್ಲಿ ಜೈನಧರ್ಮದ ಕೇಂದ್ರವಾಗಿತ್ತು.[೬೦]

ಪ್ರಸ್ತುತ ಕುಮಟಾ ತಾಲೂಕಿಗೆ ಸಂಬಂಧಿಸಿದಂತೆ ಇಲ್ಲಿ ಜೈನ ಬಸಿದಿಗಳಿವೆ. ತ್ರುಟಿತ ಶಾಸನದ ಪ್ರಕಾರ ಕುಂಬೇಶ್ವರ ದೇವಾಲಯದ ಹತ್ತಿರ ಬಸದಿ ಇದ್ದು ಗರ್ಭಗೃಹದಲ್ಲಿ ಪಾರ್ಶ್ವನಾಥ ತೀರ್ಥಂಕರನ ಮೂರ್ತಿಯ ಉಲ್ಲೇಖವಿದೆ.[೬೧] ಕ್ರಿ.ಶ ೧೨ನೇ ಶತಮಾನದ ಪಾರ್ಶ್ವನಾಥ ಬಸದಿಯಲ್ಲಿರುವ ಶಾಸನ ಮೂಲಸಂಘ ಸೂರಸ್ತಗಣ ಮತ್ತು ಚಿತ್ರಾಕೂಟ ಗಚ್ಚದ ಮುಕುಂದ ದೇವನು ಪಾರ್ಶ್ವನಾಥನ ಮೂರ್ತಿ ಸ್ಥಾಪಿಸಿದನೆಂದಿದೆ.[೬೨]

ಇದರಂತೆ ಈಗಲೂ ಇಲ್ಲಿ ಬಸದಿ ಇದ್ದು ಪ್ರಸ್ತುತ ಜಿರ್ಣೋದ್ಧಾರವಾಗಿದೆ. ವಾಲಗಳ್ಳಿಯ ಸಮೀಪದ ಕಲಕೇರಿಯಲ್ಲಿ ಶಾಂತಿನಾಥ ಬಸದಿ ಇದೆ. ಹಿರೇಗುತ್ತಿಯಲ್ಲಿಯೂ ಜೈನ ಬಸದಿ ಇತ್ತು ಎಂಬುದು ಸ್ಥಳೀಯ ಪ್ರತೀತಿ. ಇದಕ್ಕೆ ಪೂರಕವೆಂಬಂತೆ ಬಸದಿಯ ಅಧಿಷ್ಠಾನದ ಭಾಗವೂ ಅಲ್ಲಿದೆ. ಇಲ್ಲಿ ತೀರ್ಥಂಕರನ ಉಬ್ಬುಶಿಲ್ಪವಿದೆ. ಪದ್ಮಾಸನದಲ್ಲಿ ಕುಳಿತಿದ್ದು ಕೈಗಳು ಯೋಗಮುದ್ರೆಯಲ್ಲಿವೆ. ಸಂಪೂರ್ಣ ನಗ್ನನಾಗಿರುವ ಈತ ನಿರಾಭರಣನಾಗಿದ್ದಾನೆ. ಶಿರದ ಹಿಂಭಾಗದಲ್ಲಿ ಪ್ರಭಾವಲಯವಿದೆ. ತೀರ್ಥಂಕರರ ಇಕ್ಕೆಲೆಗಳಲ್ಲಿ ಚಾಮರಧಾರಿಗಳು ನಿಂತಿರುವರು. ಶಿಲ್ಪದ ಪೀಠದ ಮೇಲೆ ಶಾಸನ ಬಮ್ಮಿಶೆಟ್ಟಿ, ಆದಿನಾಥಸ್ವಾಮಿಯ ಪ್ರತಿಮೆಯನ್ನು ಮಾಡಿಸಿದನೆಂದು ತಿಳಿಸುತ್ತದೆ.[೬೩]

ಸಲ್ಲೇಖನ ವ್ರತ ಆಚರಿಸಿ ಮರಣ ಹೊಂದಿದ ನೆನಪಿಗಾಗಿ ನಿಷಿದಿಗಲ್ಲುಗಳನ್ನು ನೆಡುತ್ತಿದ್ದರು. ಪಾರ್ಶ್ವನಾಥ ಬಸದಿಯ ಎಡಭಾಗದಲ್ಲಿರುವ ಒಂದನೇ ಶಾಸನ ಚಂದಾವರ ಕಾದಂಬ ವೀರಕಾಮದೇವರಸನ ಕಾಲದಲ್ಲಿ ವರ್ದಮಾನ ಶೆಟ್ಟಿಯ ಮಗ ಚಂದ್ರಕೀರ್ತಿ ಭಟ್ಟಾರಕನ ಅನುಯಾಯಿಯಾಗಿದ್ದ ಸಾತಿ ಪೆದ್ದನು ಮರಣವನ್ನು ಹೊಂದಿದನೆಂದು ಉಲ್ಲೇಖಿಸುತ್ತದೆ.[೬೪] ಇದೇ ಸ್ಥಳದಲ್ಲಿ ದೊರೆತ ಕ್ರಿ.ಶ ೧೨ನೇ ಶತಮಾನದ ಕಾದಂಬಕಾಮದೇವನ ಕಾಲದ ತ್ರುಟಿತ ಶಾಸನ ಸೆಟ್ಟಿಯೊಬ್ಬನು ಮರಣ ಹೊಂದಿದ್ದನೆಂದು ದಾಖಲಿಸಿದೆ.[೬೫] ಕ್ರಿ.ಶ ೧೨ನೇ ಶತಮಾನದ ಶಾಸನದಲ್ಲಿ ಕಾದಂಬ ದೊರೆ ತ್ರಿಭುವನ ಬೀರನ ರಾಣಿ ಕೆಂಚಲಾದೇವಿಯು ಸಲ್ಲೇಖನ ವ್ರತ ಸ್ವೀಕರಿಸಿ ಮರಣ ಹೊಂದಿದಳೆಂದು ತಿಳಿಸುತ್ತದೆ.[೬೬] ಇಲ್ಲಿರುವ ಇನ್ನೊಂದು ಶಾಸನ ಶಂಕರ ಚಾಮುಪನ ಪತ್ನಿ ಶಾಂತಲೆಯು

ಸಲ್ಲೇಖನ ವ್ರತ ಸ್ವೀಕರಿಸಿ ಮರಣ ಹೊಂದಿದಳೆಂದು ಉಲ್ಲೇಖಿಸುತ್ತದೆ.[೯೭] ಇವು ಈ ಪ್ರದೇಶದಲ್ಲಿ ಜೈನಧರ್ಮ ಅಸ್ತಿತ್ವದಲ್ಲಿರುವುದಕ್ಕೆ ಸಾಕ್ಷಿಯಾಗಿದೆ.

೬.೫.೩ ಶೈವ ಧರ್ಮ

ಭಾರತದಲ್ಲಿ ಶೈವ ಧರ್ಮವು ಅತೀ ಪ್ರಾಚೀನವಾದ ಧರ್ಮವಾಗಿದೆ. ಶೈವಧರ್ಮದ ಇತಿಹಾಸ ವೇದಕಾಲಕ್ಕಿಂತಲೂ ಹಿಂದೆ ಹೋಗುತ್ತದೆ. ಕ್ರಿ.ಪೂ ೩೦೦೦ ವರ್ಷಗಳ ಹಿಂದಿನ ಹರಪ್ಪ ಮೆಹಂಜೋದಾರೋದಲ್ಲಿ ದೊರೆತ ಪಳಿಯುಳಿಕೆಗಳು ಪಶುಪತಿಮೂರ್ತಿ ಶೈವಧರ್ಮ ಅತಿ ಪುರಾತನವಾದುದೆಂದು ತಿಳಿಸುತ್ತದೆ.[೯೮] ಲಿಂಗವು ಶೈವಧರ್ಮದ ಚಿಹ್ನೆಯಾಗಿತ್ತು. ಋಗ್ವೇದಕಾಲದಲ್ಲಿ ಪಶುಪತಿಯು ರುದ್ರನೆಂದು ನಂತರ ಶಿವನೆಂಬ ಹೆಸರಿನಿಂದ ಪ್ರಧಾನ ದೇವತೆಯಾಗಿ ಪೂಜಿಸಲ್ಪಟ್ಟನು. ಶಿವನನ್ನು ಈಶ್ವರ, ಮಹಾದೇವ, ಜಗದೀಶ, ನೀಲಕಂಠ, ಸೋಮೇಶ್ವರ, ವಿಶ್ವನಾಥ, ಮಂಜುನಾಥ ಹೀಗೆ ವಿವಿಧ ಹೆಸರುಗಳಿಂದ ಕರೆಯಲಾಗಿದೆ. ಕರ್ನಾಟಕದಲ್ಲಿ ಶೈವಧರ್ಮಕ್ಕೆ ಸಂಬಂಧಿಸಿದಂತೆ ಸಿಕ್ಕಿರುವ ಅತೀ ಪ್ರಾಚೀನ ದಾಖಲೆಯೆಂದರೆ ಧಾರವಾಡ ಜಿಲ್ಲೆಯ ಕೊಣ್ಣೂರಿನ ಸಮೀಪ ವಾಸನದಲ್ಲಿ ದೊರೆತ ಶಾಸನ[೯೯] ಮಹಾದೇವ ಮತ್ತು ಚಂಡ ಶಿವಾಯತನನನ್ನು ಉಲ್ಲೇಖಿಸಿದೆ.

ಈ ಪ್ರದೇಶದಲ್ಲಿ ಶೈವಧರ್ಮ ಪ್ರಾಚೀನಕಾಲದಿಂದಲೂ ಅಸ್ತಿತ್ವದಲ್ಲಿತ್ತೆಂದು ಹೇಳಬಹುದು. ಕಾರಣ ರಾವಣನು ತಪಸ್ಸನ್ನು ಮಾಡಿ ಶಿವನಿಂದ ಆತ್ಮಲಿಂಗವನ್ನು ಪಡೆದು ಲಂಕೆಗೆ ತೆಗೆದುಕೊಂಡು ಹೋಗುವಾಗ ಮಾರ್ಗ ಮಧ್ಯದಲ್ಲಿ ಸಂಧ್ಯಾವಂದನೆಗಾಗಿ ತೆರಳುವುದಕ್ಕಾಗಿ ಲಿಂಗವನ್ನು ಸಮುದ್ರ ತೀರದ ಹತ್ತಿರ ಇದ್ದ ವಟುರೂಪಿ ಗಣಪತಿ ಕೈಗೆ ಕೊಡುತ್ತಾನೆ. ರಾವಣ ಸಂಧ್ಯಾವಂದನೆ ಮುಗಿಸಿ ಬರುವದರೊಳಗೆ ತಾನು ಮೊದಲು ನುಡಿದಂತೆ ಮೂರುಸಲ ಕರೆದರೂ ಬರಲಿಲ್ಲವೆಂದು ಗಣಪತಿ ಲಿಂಗವನ್ನು ಭೂಮಿಯ ಮೇಲೆ ಇಡುತ್ತಾನೆ. ಶಿವಲಿಂಗ ಅಲ್ಲಿಯೇ ಪ್ರತಿಷ್ಠಾಪನೆಯಾಗುತ್ತದೆ. ಇದು ಗೋಕರ್ಣದ ಕುರಿತು ಇರುವ ದಂತಕಥೆ. ರಾಮಾಯಣ ಕಾಲದಿಂದಲೂ ಗೋಕರ್ಣ ಶೈವಧರ್ಮದ ಪ್ರಮುಖ ಕೇಂದ್ರವಾಗಿತ್ತೆಂದು ಹೇಳಲಾಗಿದೆ. ಕದಂಬ ಅರಸರು ಶೈವ ಧರ್ಮಕ್ಕೆ ರಾಜಶ್ರಯ ನೀಡಿದರು. ಇಲ್ಲಿ ಅಧಿಕಾರ ನಡೆಸಿದ ಅನೇಕ ಅರಸು ಮನೆತನಗಳು ಗೋಕರ್ಣ ಮಹಾಬಲೇಶ್ವರನಿಗೆ ನಿತ್ಯ ಪೂಜೆಗಾಗಿ, ನಂದಾದೀಪಕ್ಕಾಗಿ, ನೈವೇದ್ಯಕ್ಕಾಗಿ, ಅಭಿಷೆಕ ಮಾಡುವದಕ್ಕಾಗಿ, ಅನ್ನ ಸಂತರ್ಪಣೆಗಾಗಿ ದಾನವನ್ನು ನೀಡಿದ್ದರ ಕುರಿತು ಶಾಸನ ದಾಖಲಿಸಿದೆ. ಕ್ರಿ.ಶ ೧೧೬೭ರ ಅಡತಾರೆ ಗ್ರಾಮದ ಶಿವದೇವಾಲಯದಲ್ಲಿರುವ ಶಾಸನ[೧೦೦] ಒಂದು ಗದ್ಯಾಣವನ್ನು ಆ ಗ್ರಾಮದವರು ನೀಡಬೇಕೆಂದು ಹೇಳಿದೆ. ಕ್ರಿ.ಶ ೧೦೮೩ರ ಧಾರೇಶ್ವರ ಶಾಸನವು[೧೦೧] ಹೈವಣ್ಣರಸನ ರಾಣಿ ಚಟ್ಟಬರಸಿಯು ಧಾರೇಶ್ವರದ ಧಾರನಾಥ ಮತ್ತು ಕಾಲೇಶ್ವರನಿಗಾಗಿ ಭೂಮಿ ದಾನ ಮಾಡಿದ್ದನ್ನು ದಾಖಲಿಸಿದೆ. ಗೋಕರ್ಣಶಾಸನ[೧೦೨] ತ್ರಿಭುವನಮಲ್ಲ ಕಾಮದೇವರಸನು ಕುಂಭೇಶ್ವರ ದೇವರಿಗೆ ಭೂಮಿ ದಾನ ಮಾಡಿದ್ದನ್ನು

ಉಲ್ಲೇಖಿಸಿದೆ. ಕ್ರಿ.ಶ ೧೨೪೫ರ ಕಬ್ಬರ್ಗಿ ಶಾಸನವು[೧೦೩] ಚಂದಾವರ ಕಾದಂಬ ದೊರೆ ಒಂದನೇಯ ಕಾಮದೇವ ಮತ್ತು ಕೀರ್ತಿ ನಾರಾಯಣ ದಂಡನಾಯಕರು ಸೇರಿ ಗೋಕರ್ಣದ ಮಹಾಬಲೇಶ್ವರನಿಗೆ ದತ್ತಿ ನೀಡಿದನ್ನು ತಿಳಿಸುತ್ತದೆ. ಕ್ರಿ.ಶ ೧೪ನೇ ಶತಮಾನಕ್ಕೆ ಸೇರುವ ಗೋಕರ್ಣ ಶಾಸನ[೧೦೪] ಗೋಕರ್ಣದ ವೇದೇಶ್ವರ ದೇವರ ನಿತ್ಯ ಪೂಜೆ ಮತ್ತು ನಂದಾದೀಪಕ್ಕಾಗಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.ಗೋಕರ್ಣ ಶಾಸನದಲ್ಲಿ[೧೦೫] ಬಿಳಗಿಯ ೩ನೇ ಸೋಮಶೇಖರ ನಾಯಕ ಬೇರೆ ಬೇರೆ ಮೂಲಗಳಿಂದ ಬಂದ ೪೫ ವರಹಗಳನ್ನು ಗೋಕರ್ಣದ ಮಹಾಬಲೇಶ್ವರ ದೇವರಿಗೆ ಏಕಾದಶಿ ಮತ್ತು ಶಿವರಾತ್ರಿ ಮಹಾಪೂಜೆಗಾಗಿ ದತ್ತಿ ನೀಡಿದ್ದ ಉಲ್ಲೇಖವಿದೆ.

ಪ್ರಸ್ತುತ ಈ ಅಧ್ಯಯನದಲ್ಲಿ ಶೈವಧರ್ಮಕ್ಕೆ ಸಂಬಂಧಿಸಿದ ಶಾಸನಗಳು ಹೆಚ್ಚಿನ ಮಟ್ಟಿಗೆ ದೊರೆತ್ತಿದ್ದು ಇಲ್ಲಿ ಆಳ್ವಿಕೆ ನಡೆಸಿದ ಅನೇಕ ರಾಜರು, ಸಾಮಂತರು, ದಂಡನಾಯಕರು ದೇವಾಲಯ ಜೀರ್ಣೋದ್ಧಾರಕ್ಕಾಗಿ, ನಿತ್ಯಪೂಜೆಗಾಗಿ, ನಂದಾದೀಪಕ್ಕಾಗಿ, ಅಮೃತ ಪಡಿಗಾಗಿ, ಅಭಿಷೇಕಕ್ಕಾಗಿ, ಅನ್ನ ಸಂತರ್ಪಣೆಗಾಗಿ ದಾನಗಳನ್ನು ನೀಡಿದ್ದ ಬಗ್ಗೆ ಸಾಕ್ಷಿಯನ್ನು ಸಾರಿಹೇಳುತ್ತವೆ.

೬.೫.೪ ವೈಷ್ಣವ ಧರ್ಮ

ಶಾತವಾಹನನ ರಾಣಿ ನಾಗಮೂಲನಿಕಾಳ ನಾನಾಘಾಟ ಗುಹಾಶಾಸನ ದಕ್ಷಿಣ ಭಾರತದಲ್ಲಿ ಕ್ರಿ.ಪೂ ೩ನೇ ಶತಮಾನದಲ್ಲಿ ವೈಷ್ಣವ ಪಂಥವು ಅಸ್ತಿತ್ವದಲ್ಲಿತ್ತೆಂದು ತಿಳಿಸುತ್ತದೆ.[೧೦೬] ಅ.ಸುಂದರರವರು ಬಂಗಣೆಯಲ್ಲಿನ ನರಸಿಂಹ ವಿಗ್ರಹ[೧೦೭] ಕ್ರಿ.ಶ. ೫–೬ನೇ ಶತಮಾನಕ್ಕೆ ಸೇರಿದ್ದೆಂದು ಅಭಿಪ್ರಾಯ ಪಟ್ಟಿದ್ದಾರೆ. ಕ್ರಿ.ಶ ೧೧೬೭ರ ಅಡತಾರೆಯಲ್ಲಿ ದೊರೆತ ಶಾಸನವು ಶೈವ ಶಾಸನವಾಗಿದ್ದರೂ ಅಲ್ಲಿಯ ಕೇಶವ ದೇವರಿಗೆ ಪ್ರತಿದಿನ ನೈವೇದ್ಯಕ್ಕೆ ವರ್ಷಕ್ಕೆ ೩೬ ಮೂಡೆ ಭತ್ತವನ್ನು, ನಂದಾದೀಪದ ಸಲುವಾಗಿ ೩೬ ಕೊಳಗ ಎಣ್ಣೆಯನ್ನು ನೀಡಬೇಕೆಂದು ಉಲ್ಲೇಖಿಸಿದೆ.[೧೦೮] ನಾಗೂರಿನ ವಿಷ್ಣು ದೇವಾಲಯದ ಶಾಸನ ವಿಷ್ಣು ದೇವರ ಶಾಂತಿಗಾಗಿ ದತ್ತಿ ಕೊಟ್ಟಿದನ್ನು ಸೂಚಿಸಿದೆ.[೧೦೯] ಕ್ರಿ.ಶ ೧೦೮೩ ರ ಧಾರೇಶ್ವರ ದೇವಾಲಯದಲ್ಲಿ ದೊರೆತ ಶಾಸನ[೧೧೦] ಹೈವಣ್ಣರಸನ ಹಿರಿಯ ರಾಣಿ ಪಟ್ಟಮಹಾದೇವಿ ಧಾರೇಶ್ವರ ದೇವಾಲಯದಲ್ಲಿರುವ ವಿಷ್ಣು ದೇವರ ಪೂಜಾ ಕಾರ್ಯಗಳಿಗೆ ತೆರಿಗೆ ಮುಕ್ತ ಭೂಮಿ ದಾನ ನೀಡಿದ್ದನ್ನು ಸೂಚಿಸುತ್ತದೆ. ಧಾರೇಶ್ವರ ಶಾಸನದಲ್ಲಿ[೧೧೧] ಊರಕೇರಿಯ ಜನಾರ್ಧನ ದೇವರ ಅಮೃತ ಪಡಿಗಾಗಿ ಮತ್ತು ಇತರ ಕಾರ್ಯಗಳಿಗಾಗಿ ದಾನ ನೀಡಿದ್ದ ಉಲ್ಲೇಖವಿದೆ. ಕ್ರಿ.ಶ ೧೫೨೬ರ ಮಿರ್ಜಾನ ಶಾಸನದಲ್ಲಿ[೧೧೨] ಗೋಪಣ್ಣ ಸೇನಬೋವನ ಮಗ ಮಹಾಬಲ ಸೇನಬೋವನು ಮಹಾಬಲದೇವರಸನಿಂದ ಭೂಮಿಯನ್ನು ಖರೀದಿಸಿ ಗೋಕರ್ಣದಲ್ಲಿ ರಘುನಾಥ ದೇವಾಲಯ ಕಟ್ಟಿಸಿದನೆಂದಿದೆ. ರಾಣಿ ಪದುವಲಾಮ್ಮಳು ಭೂಮಿಯನ್ನು ರಘುನಾಥ ದೇವರಿಗೆ ನಂದಾದೀಪ, ಅಮೃತಪಡಿ, ಅನ್ನಸಂತರ್ಪಣೆ, ಪುರಾಣ ಓದಲು

ಇತ್ಯಾದಿ ಸೇವಾಕಾರ್ಯಗಳಿಗಾಗಿ ದಾನ ನೀಡಿದ್ದಳು. ಗೋಕರ್ಣದ ಕೋಟಿತೀರ್ಥದ ಸಮೀಪ ದೊರೆತ ಶಂಕರ ನಾರಾಯಣ ದೇವಾಲಯದಲ್ಲಿರುವ ಮೂರ್ತಿ ಅರ್ಧಭಾಗ ಶಿವ, ಅರ್ಧಭಾಗ ವಿಷ್ಣುವಿನ ಸ್ವರೂಪವಿದೆ. ಇದರಿಂದ ಅಂದು ಗೋಕರ್ಣದಲ್ಲಿ ಶೈವ ಮತ್ತು ವೈಷ್ಣವ ಎರಡು ಪಂಥಗಳು ಅಸ್ತಿತ್ವದಲ್ಲಿದ್ದುದನ್ನು ದೃಢೀಕರಿಸುತ್ತವೆ.

ಒಟ್ಟಾರೆಯಾಗಿ ಈ ಅಧ್ಯಾಯದಿಂದ ತಿಳಿದು ಬರುವ ಅಂಶವೇನೆಂದರೆ ಬ್ರಾಹ್ಮಣರಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನವಿದ್ದು, ಧರ್ಮಾಚರಣೆಯಲ್ಲಿ ತೊಡಗಿರುತ್ತಿದ್ದರು. ಕ್ಷತ್ರಿಯರು ರಾಜ್ಯ ಮತ್ತು ಪ್ರಜೆಗಳನ್ನು ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳಿಂದ ರಕ್ಷಿಸುವುದು ಅವರ ಕರ್ತವ್ಯವಾಗಿತ್ತು. ವೈಶ್ಯರು ಉದ್ಯೋಗ ವ್ಯಾಪಾರ ಮತ್ತು ಕೃಷಿ ಇವರು ದೇವಾಲಯಕ್ಕೆ ಭೂಮಿಯನ್ನು ದತ್ತಿ ನೀಡಿದ್ದರು.

ಕೃಷಿ ಭೂಮಿಯನ್ನು ದೇವಾಲಯಕ್ಕೆ, ಅಗ್ರಹಾರಕ್ಕೆ, ದಾನ ನೀಡುತ್ತಿದ್ದರು. ಭೂಮಿಯಲ್ಲಿ ಗದ್ದೆ ಭೂಮಿ, ತೋಟದ ಭೂಮಿ ಎಂದು ಎರಡು ಪ್ರಕಾರಗಳಿವೆ. ಭಟ್‌ಗದ್ದೆ, ಕರಿಗದ್ದೆ, ಹಲಸಿನಗದ್ದೆ, ಕಪ್ಪಸಗದ್ದೆ, ಕಲವಗದ್ದೆ, ಮಕ್ಕಿಗದ್ದೆ ವೈವಿಧ್ಯತೆ ಇದ್ದು ಆರ್ಥಿಕತೆಗೆ ಸಂಬಂಧಿಸಿದಂತೆ . ತೂಕ ಮತ್ತು ಅಳತೆಗಳಲ್ಲಿ ಸೊಲಗಿ, ಬಳ್ಳ, ಸಿದ್ದೆ, ಹಾನೆ, ಕೊಳಗ, ಖಂಡುಗ, ಮಾಪನವಾಗಿತ್ತು. ನಾಣ್ಯಗಳಾದ ಗದ್ಯಾಣ, ಪೊನ್ನು, ಹೊನ್ನು ನಾಣ್ಯಗಳ ಚಲಾವಣೆ ಇತ್ತು. ಧಾರ್ಮಿಕತೆಗೆ ಸಂಬಂಧಿಸಿದಂತೆ ಬೌದ್ಧ, ಜೈನ, ಶೈವ, ವೈಷ್ಣವ ಪಂಥವು ಅಸ್ತಿತ್ವದಲ್ಲಿತ್ತೆಂಬುದು ಸ್ಪಷ್ಟವಾಗಿದೆ.

ಅಡಿಟಿಪ್ಪಣಿಗಳು

೧. ಗೋಪಾಲರಾವ್, ಎಚ್.ಎಸ್., "ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು – ಒಂದು ಸಾಂಸ್ಕೃತಿಕ ಅಧ್ಯಯನ", ೧೯೯೩, ಪು.೧೧.

೨. ಚಿದಾನಂದ ಮೂರ್ತಿ.ಎಂ., "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ೨೦೦೮, ಪು.೬.

೩. ಚಿದಾನಂದ ಮೂರ್ತಿ.ಎಂ., ಪೂರ್ವೋಕ್ತ, ೧೯೭೯ ಪು.೪೩೦–೪೩೧.

೪. ವಿನೋದ ಪಾಟೀಲ., "ಕರ್ನಾಟಕದ ಪರಂಪರೆ" ಸಂ. ೧, ೧೯೯೨, ಪು. ೨೬೨.

೫. ಗಣಪತಿಗೌಡ ಎಸ್., "ಮೈನರ ಡೈನಾಸ್ಟಿಸ್ ಆಪ್ ಉತ್ತರ ಕನ್ನಡ ರೀಜನ" (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ೧೯೯೩, ನಂ. ೧೧, ಪು.೬೫.

೬. ಗಣಪತಿ ಗೌಡ ಎಸ್., ಪೂರ್ವೋಕ್ತ, ೧೯೯೩, ಪು. ೩೫೩–೩೫೭.

೭. ಎ.ಎಂ.ಆರ್., ೧೯೨೮, ನಂ. ೧೧೨.

೮. ಕೆ.ಐ. (ಕರ್ನಾಟಕ ಇನ್ಸಸ್ಕ್ರಿಪಶನ್) ಸಂ. III, ಭಾಗ I, ನಂ ೯.

೯. ಎ.ಆರ್.ಐ.ಇ., (ಎನ್ಯುವಲ್ ರಿಪೋರ್ಟ್ ಆಫ್ ಇಂಡಿಯನ ಎಪಿಗ್ರಪಿ) ಸಂ. ೧೯೩೯–೪೦, ೧೯೪೨–೪೩ ಶಾ.ಸ, ೧೦೦ ಪು. ೨೩೬.

೧೦. ಭಟ್‌ಸೂರಿ ಕೆ.ಜಿ., "ಧಾರನಾಥ ದೇವಾಲಯ ಧಾರೇಶ್ವರ", ಅ.ನಂ II, ನಂ. ೨.

೧೧. ಡಿ.ಎಲ್.ಎಸ್.ಸಿ.ಐ., ೧೯೪೦–೪೧, ನಂ. ೬೭.

ಅದೇ, ೧೯೪೦-೪೧, ನಂ ೫೧.

೧೨. ಎ.ಆರ್.ಎಸ್.ಐ.ಇ., (ಎನ್ಯುವಲ್ ರಿಪೋರ್ಟ ಆಫ್ ಸೌತ ಇಂಡಿಯನ್ ಎಪಿಗ್ರಪಿ), ೧೯೩೯-೪೦, ನಂ ೧೦೪.

೧೩. ಡಿ.ಎಲ್.ಎಸ್.ಸಿ.ಐ., ೧೯೪೧-೪೨, ನಂ. ೩೩.

೧೪. ಕೆ.ಐ., (ಕರ್ನಾಟಕ ಇನ್ಸ್ಕ್ರಿಪ್ಶನ ಸಂ. III, ಭಾಗ I, ನಂ ೩.

೧೫. ಡಿ.ಎಲ್.ಎಸ್.ಸಿ.ಐ., ಅದೇ, ನಂ. ೧೭.

೧೬. ಕೆ.ಐ.ಸಂ. I, ನಂ, ೫೩.

೧೭. ಶೀಲಾಕಾಂತ ಪತ್ತಾರ., "ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಅಧ್ಯಯನ", ೨೦೦೦, ಪು. ೬೨.

೧೮. ಕೆ.ಐ., ಸಂ. ೬, ಶಾ.ಸಂ.೬೩, ಪು. ೧೭೩.

೧೯. ಗಣಪತಿಗೌಡ ಎಸ್., ಪೂರ್ವೋಕ್ತ, ೧೯೯೩, ಪು. ೩೯೩-೩೯೭.

೨೦. ಷೇಕಅಲಿ. ಬಿ(ಸಂ)., "ಕರ್ನಾಟಕ ಚರಿತೆ"., ಸಂ. ೫, ೧೯೯೭, ಪು. ೪೭೧.

೨೧. ಅದೇ, ಪು. ೪೫೬.

೨೨. ಅದೇ, ಸಂ. II, ಪು. ೨೬೩.

೨೩. ಎ.ಇ.,ಸಂ. XXIX, ಪು. ೨೯-೩೨.

೨೪. ಡಿ.ಎಲ್.ಎಸ್.ಸಿ.ಐ., ೧೯೪೧-೪೨, ಶಾ.ಸಂ ೨೦, ಪು. ೧೯.

೨೫. ಅದೇ, ೧೯೪೧-೪೨ ಶಾ.ಸಂ ೧೮, ಪು. ೧೭.

೨೬. ಭಟ್ ಸೂರಿ ಕೆ.ಜಿ., ಪೂರ್ವೋಕ್ತ, ೧೯೯೬, ಪು. ೨೨-೨೩

೨೭. ಡಿ.ಎಲ್.ಎಸ್.ಸಿ.ಐ., ಶಾ.ಸಂ. ೬೮, ಪು. ೨೪.

೨೮. ಕೆ.ಐ., ಸಂ.೬, ಶಾ.ಸಂ.೬೩, ಪು. ೧೭೨.

೨೯. ಗಣಪತಿಗೌಡ ಎಸ್., ಪೂರ್ವೋಕ್ತ, ೧೯೯೩, ಶಾ.ಸಂ. ೧೨ ಪು. ೩೯೦-೩೯೧.

೩೦. ಚಿದಾನಂದ ಮೂರ್ತಿ.ಎಂ., ಪೂರ್ವೋಕ್ತ, ಪು. ೨೩೦.

೩೧. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ, ೧೯೯೬, ಪು. ೨೨-೨೩.

೩೨. ಎಪಿಗ್ರಾಫಿಯಾ ಇಂಡಿಕಾ., ಸಂ. XXVII, ಪು. ೧೫೭-೧೬೩.

೩೩. ಗಣಪತಿ ಗೌಡ ಎಸ್., "ಶಿಸುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು", ೨೦೦೮, ಪು. ೭೧.

೩೪. ದೇವಾಲಯ ಧರ್ಮದರ್ಶಿಗಳಿಂದ ಮಾಹಿತಿ.

೩೫. ಅದೇ.

೩೬. ಅದೇ.

೩೭. ೩೭. ಅದೇ.

೩೮. ಅದೇ.

೩೯. ಎಸ್.ಐ.ಐ., ಸಂ ೩೦, ಶಾ.ಸಂ. ೪೦೪.

೪೦. ಎಪಿಗ್ರಾಫಿಯಾ ಇಂಡಿಕಾ, ಸಂ-೨೭, ಪು. ೧೫೭-೧೬೩.

೪೧. ಜನರಲ್ ಆಫ್ ಕರ್ನಾಟಕ ಯುನಿವರಸಿಟಿ ಸೋಶಯಲ್ ಸೈಯನ್ಸಸ್, ಸಂ. ೨೩.

೪೨. ಎ.ಆರ್.ಐ.ಎ., ೧೯೩೯-೪೦, ೪೨-೪೩, ಶಾ.ಸಂ III, ಪು. ೨೩೬.

೪೩. ಅದೇ, ಶಾ.ಸಂ ೧೧೩, ಪು. ೨೩೬.

೪೪. ಕೊಪ್ಪ.ಎಸ್.ಕೆ., "ತರ್ದವಾಡಿ ನಾಡು ಒಂದು ಅಧ್ಯಯನ", ೧೯೯೦, ಪು. ೨೦೩.
೪೫. ಎಪಿಗ್ರಾಪಿಯಾ ಇಂಡಿಕಾ., ದೆಹಲಿ. ಸಂ. ೨೮, ಪು. ೧೬೧
೪೬. ಜರ್ನಲ್ ಆಫ್ ಕರ್ನಾಟಕ ಯುನಿವರಸಿಟಿ ಸೋಶಯಲ್ ಸೈನ್ಸಸ್., ಸಂ.೨೩, ಪು. ೩೯-೪೩.
೪೭. ಎಪಿಗ್ರಾಪಿಯಾ ಇಂಡಿಕಾ., ಸಂ.೨೮, ಪು. ೧೬೧.
೪೮. ಕೆ.ಐ., ಸಂ.೬, ಶಾ.ಸಂ ೬೩, ಪು. ೧೮೩.
೪೯. ಎಂ.ಎ.ಆರ್., ೧೯೨೮, ನಂ. ೧೧೨.
೫೦. ಅದೇ ಪು
೫೧. ಕೆ.ಐ.,ಸಂ. III, ಭಾಗ I, ನಂ, ೧೭.
೫೨. ಕೆ.ಐ.,ಸಂ. VI, ನಂ ೬೩.
೫೩. ಕೆ.ಐ.,ಸಂ III, ಭಾಗ I, ನಂ, ೫೩.
೫೪. ಅದೇ, ಶಾ.ಸಂ ೬೩, ಪು. ೧೭೩.
೫೫. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ, ೧೯೯೬, ಪು. ೨೨.
೫೬. ಎಪಿಗ್ರಾಪಿಯಾ ಇಂಡಿಕಾ, ಸಂ.೨೮, ಪು. ೧೬೨.
೫೭. ಕೆ.ಐ., ಸಂ ೬, ಶಾ.ಸಂ ೬೩, ಪು. ೧೮೩.
೫೮. ಭಟಸೂರಿ ಕೆ.ಜಿ., ಪೂರ್ವೋಕ್ತ, ೧೯೯೬,ಪು. ೨೨.
೫೯. ಗಣಪತಿಗೌಡ ಎಸ್., ಪೂರ್ವೋಕ್ತ, ೧೯೯೩, ಶಾ.ಸಂ ೧೪, ಪು. ೩೯೮-೩೯೯.
೬೦. ಗಣಪತಿಗೌಡ ಎಸ್., ಪೂರ್ವೋಕ್ತ, ೧೯೯೩, ಶಾ.ಸಂ ೧೧, ಪು. ೩೮೫-೩೮೭.
೬೧. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ,೧೯೯೬, ಪು. ೨೨.
೬೨. ಎ.ಆರ್.ಐ.ಇ., ೧೯೩೯-೪೦ ರಿಂದ ೧೯೪೨-೪೩, ಶಾ.ಸಂ ೧೦೨, ಪು. ೨೩೬.
೬೩. ಗಣಪತಿಗೌಡ ಎಸ್., ಪೂರ್ವೋಕ್ತ, ೧೯೯೩,ಶಾ.ಸಂ ೧೪, ಪು. ೩೯೮-೩೯೯.
೬೪. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ, ೧೯೯೬, ಪು. ೨೫.
೬೫. ಕೆ.ಐ., ಸಂ. ೬, ಶಾ.ಸಂ. ೬೩.
೬೬. ಜನರಲ್ ಆಫ್ ಕರ್ನಾಟಕ ಯುನಿವರಸಿಟಿ ಆಫ ಸೋಶಯಲ್ ಸಾಯನ್ಸಸ್., ಸಂ ೨೩, ಪು. ೩೯- ೪೩.
೬೭. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ, ೧೯೯೬, ಪು. ೨೨.
೬೮. ಎಪಿಗ್ರಾಪಿಯಾ ಇಂಡಿಕಾ, ಸಂ. ೨೮, ಪು. ೧೬೧-೧೬೨.
೬೯. ಕೆ.ಐ., ಸಂ.೬, ಶಾ.ಸಂ. ೬೩.
೭೦. ಗಣಪತಿಗೌಡ ಎಸ್., ಪೂರ್ವೋಕ್ತ, ೧೯೯೩,ಶಾ.ಸಂ ೧೪, ಪು. ೩೯೮-೩೯೯.
೭೧. ಕೆ.ಐ.,ಸಂ. III, ಭಾಗ I, ನಂ. ೧೪.
೭೨. ಅದೇ, ನಂ. ೦೪.
೭೩. ಗಣಪತಿ ಗೌಡ ಎಸ್., ಪೂರ್ವೋಕ್ತ, ೧೯೯೩, ನಂ. ೧೧, ಪು. ೩೬೫.
೭೪. ಗಣಪತಿ ಗೌಡ ಎಸ್., ಪೂರ್ವೋಕ್ತ, ೧೯೯೩
೭೫. ಗಣಪತಿ ಗೌಡ ಎಸ್., ಪೂರ್ವೋಕ್ತ, ೧೯೯೩
೭೬. ಕೆ.ಐ.,ಸಂ, III, ಭಾಗ I, ನಂ. ೨.
೭೭. ಕೆ.ಐ.,ಸಂ, III, ಭಾಗ I, ನಂ. ೨.

೭೮. ಡಿ.ಎಲ್.ಎಸ್.ಸಿ.ಐ., ೧೯೪೦-೪೧, ನಂ. ೫೬.

೭೯. ಕೆ.ಐ.,ಸಂ. III, ಭಾಗ I, ನಂ. ೧.

೮೦. ಎ.ಕ., ಸಂ. V, ನಂ ೫೧, ಎ.ಇ.ಸಂ ೧೩, ಪು. ೫೮, ಕೆ.ಐ.ಸಂ VI, ನಂ ೬೨.

೮೧. ನರಸಿಂಹಮೂರ್ತಿ ಎ.ವಿ., "ದಿ ಕಾಯಿನ್ಸ ಆಫ್ ಕರ್ನಾಟಕ", ಪು. ೧೪೨.

೮೨. ಅದೇ, ಪು. ೧೪೧.

೮೩. ಎಸ್. ಐ.ಐ., ಸಂ. ೧೫, ಶಾ.ಸಂ ೪೯.

೮೪. ರಹಮತ್ ತರೀಕೆರೆ., "ಕರ್ನಾಟಕ ಕನ್ನಡಿ", ೧೯೯೯, ಪು. ೧೦೪.

೮೫. ವೆಂಕಟೇಶ ಜೋಯಿಸ್ "ವಿಜಯನಗರ ಚರಿತ್ರೆಯಲ್ಲಿ ಕೆಳದಿಯ ಅರಸರು", ೧೯೯೬, ಪು.೬೬.

೮೬. ಮಹಾವಂಶ., ಪಾಠ XII, ಪು. ೮೨.

೮೭. ಎ.ಇ., ಸಂ. XXIII ಪು. ೭೦-೭೫.

೮೮. ಅ.ಸುಂದರ., "ಉತ್ತರ ಕನ್ನಡ ಜಿಲ್ಲೆಯ ಕೆಲವು ಅಪೂರ್ವ ಶಿಲ್ಪಗಳು", ಮಾನವಿಕ ಭಾರತಿ, ಸಂ. ೩/೨, ಪು. ೧-೨

೮೯. ಶೆಟ್ಟಿ ಎಸ್ ಎಸ್, ಬನವಾಸಿ ಥ್ರೂ ದಿ ಏಜಸ್, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ) ಪು.೨೦೧.

೯೦. ಕೈಲಾಸಚಂದ್ರ ಸ್ವಾಮಿ (ಅನು) ಭುಜಬಲಶಾಸ್ತ್ರಿ ಜೈನಧರ್ಮ, ೧೯೮೧, ಪು. ೭೫.

೯೧. ಸೂರ್ಯನಾಥ ಕಾಮತ್ ಕ.ಸ್ಟೆ. ಗ್ಯಾಜಿಟಿಯರ ಉತ್ತರ ಕನ್ನಡ ಡಿಸ್ಟ್ರಿಕ್ಟ, ಪು. ೯೪೧.

೯೨. ಎ.ಆರ್.ಐ.ಇ, ೧೯೪೭-೪೮, ನಂ. ೨೩೭.

೯೩. ಜಯಶ್ರೀ ದೇಶಮಾನ್ಯ "ಹಿರೇಗುತ್ತಿಯ ಹೊಸ ಶಾಸನ" ಇತಿಹಾಸ ದರ್ಶನ, ಸಂ. ೨೩, ಪು. ೧೦೧-೧೦೨.

೯೪. ಎ.ಆರ್.ಐ.ಇ, ೧೯೪೭-೪೮, ನಂ. ೨೩೮.

೯೫. ಅದೇ, ನಂ. ೨೪೦.

೯೬. ಅದೇ, ನಂ. ೨೪೨.

೯೭. ಅದೇ, ನಂ. ೨೪೧.

೯೮. ಸತೀಶ ಕೆ., "ವಿಜಯನಗರ ಕಾಲದ ಶೈವ ದೇವಾಲಯಗಳು", ೨೦೦೪, ಪು. ೫೧.

೯೯. Krishna.K.G., Uttankita Sanskrit Vidya Aranya Epigraphs Vol II, ಸಂ. ೧೭೭.

೧೦೦. ಗಣಪತಿಗೌಡ ಎಸ್., ಪೂರ್ವೋಕ್ತ, ೧೯೯೩,ಶಾ. ಸಂ. ೧೧, ಪು. ೩೮೫-೩೮೭.

೧೦೧. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ, ೧೯೯೬, ಪು. ೪೧.

೧೦೨. ಎಚ್.ಆರ್.ರಘುನಾಥ ಭಟ್ಟ, "ಗೋಕರ್ಣದ ಉಮಾಮಹೇಶ್ವರ ಪ್ರಭಾವಳಿ ಇನ್ಸಕ್ರಿಪ್ಷನ್ಸ" ಜರ್ನಲ್ ಆಫ್ ಕರ್ನಾಟಕ ಯುನಿವರ್ಸಿಟಿ ಸೋಶಯಲ್ ಸಾಯನ್ಸಸ್ (ಜೆಕೆಯು) ಸಂ XXIII, ಪು. ೩೯-೪೩.

೧೦೩. ಜರ್ನಲ್ ಆಫ್ ದಿ ಕರ್ನಾಟಕ ಯುನಿವರಸಿಟಿ ಸೋಶಯಲ್ ಸಾಯನ್ಸಸ್, ಧಾರವಾಡ, ೧೯೭೫, ಸಂ. ೨೩, ಪು. ೩೯-೪೩.

೧೦೪. ಎ.ಆರ್.ಎಸ್.ಐ.ಇ., ೧೯೩೯-೪೦, ನಂ. ೧೦೧.

೧೦೫. ಎ.ಆರ್.ಎಸ್.ಐ.ಇ., ೧೯೪೦-೪೧ ಅಪೆ 'ಎ' ನಂ. ೭.

೧೦೬. ಸರ್ಕಾರ ಡಿ.ಸಿ ಸಿಲೆಕ್ಟಡ್ ಇನ್ಸ್ಕ್ರಿಪ್ಶನ್ ಬಿಯರಿಂಗ ಆನ್ ಇಂಡಿಯನ್ ಹಿಸ್ಟ್ರಿ ಸಂ. ೧, ನಂ.೮೨, ಪು.೧೯೩.

೧೦೭. ಅ.ಸುಂದರ., ಪೂರ್ವೋಕ್ತ, ನಂ. ೬೦.

೧೦೮. ಗಣಪತಿಗೌಡ ಎಸ್., ಪೂರ್ವೋಕ್ತ, ನಂ. ೧೧. ಪು. ೩೮೫–೩೮೮.

೧೦೯. ನಾಗೂರ ಶಾಸನ (ಅಪ್ರಕಟಿತ) ಅನುಬಂಧ, ನಂ. ೧೮೮.

೧೧೦. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ, ೧೯೯೬, ಪು. ೪.

೧೧೧. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ, ಅನು. II, ನಂ. ೪.

೧೧೨. ಕೆ.ಐ., ಸಂ. VI, ನಂ. ೬೯.

ಅಧ್ಯಾಯ ಏಳು

ಸಮಾರೋಪ

ಭಾರತೀಯ ಸಾಂಸ್ಕೃತಿಕ ಇತಿಹಾಸವನ್ನು ಪುನರಚಿಸಲು ಕರ್ನಾಟಕದ ಪಾತ್ರ ಅತಿಮಹತ್ವದ್ದು, ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು ಶಿರೋನಾಮೆಯಾದರೂ, ಇಲ್ಲಿನ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಸಾಂಸ್ಕೃತಿಕ ಇತಿಹಾಸದ ಮಜಲುಗಳಾಗಿವೆ. ಎಂಬುದರಲ್ಲಿ ಎರಡು ಮಾತಿಲ್ಲ. ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದ ಪರಿಕರಗಳನ್ನೆಲ್ಲಾ ಆಯ್ದುಕೊಂಡು ಈ ಅಧ್ಯಯನ ಕೈಗೊಳ್ಳಲಾಗಿದೆ.

ಕರ್ನಾಟಕದ ೩೦ ಜಿಲ್ಲೆಗಳಲ್ಲಿ ಒಂದಾದ ಉತ್ತರಕನ್ನಡ ಜಿಲ್ಲೆ ೧೧ ತಾಲೂಕುಗಳನ್ನು ಒಳಗೊಂಡಿದ್ದು ಕರಾವಳಿಯ ೫ ತಾಲೂಕುಗಳು ಮತ್ತು ಘಟ್ಟದ ಮೇಲಿನ ೬ ತಾಲೂಕುಗಳು ಇದರಲ್ಲಿ ಒಳಗೊಂಡಿದೆ. ಘಟ್ಟದ ಕೆಳಗಿನ ತಾಲೂಕುಗಳಲ್ಲಿ ಒಂದಾದ ಕುಮಟಾವನ್ನು ಮಾತ್ರ ಕೇಂದ್ರೀಕರಿಸಿಕೊಂಡು ಪ್ರಕಟಿತ ಆಕರಗಳೊಂದಿಗೆ, ಗ್ರಾಮಾವಾರು ಅನ್ವೇಷಣೆ ಮಾಡಿ ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು ಶಿರೋನಾಮೆಯಡಿ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನ ಇದಾಗಿದೆ.ಅನ್ವೇಷಣೆ ಮತ್ತು ಶೋಧನೆ ಗ್ರಾಮಗಳಿಂದ ಪ್ರಾರಂಭವಾದಾಗ ಮಾತ್ರ ವ್ಯವಸ್ಥಿತ ಅಧ್ಯಯನ ಮಾಡಲು ಹೆಚ್ಚು ಸಾಧ್ಯ. ಈ ಹಿನ್ನೆಲೆಯಲ್ಲಿ ಇತಿಹಾಸ ರಚಿಸಿದರೆ ಹೆಚ್ಚಿನ ಮಟ್ಟಿಗೆ ನ್ಯಾಯವನ್ನು ಒದಗಿಸಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಕುಮಟಾ ತಾಲೂಕಿಗೆ ಸಿಮೀತ ಮಾಡಿಕೊಂಡು, ಇಲ್ಲಿನ ಶಾಸನಗಳು ಮತ್ತು ದೇವಾಲಯಗಳಿಗೆ ಸೀಮಿತ ಮಾಡಿಕೊಂಡು, ಇಲ್ಲಿ ಒಟ್ಟು ೭ ಅಧ್ಯಾಯಗಳನ್ನು ಅನುಕೂಲತೆಯ ದೃಷ್ಟಿಯಿಂದ ವಿಂಗಡಿಸಿಕೊಳ್ಳಲಾಗಿದೆ.

ಅಧ್ಯಾಯ – ೧ ಅಧ್ಯಯನದ ಉದ್ದೇಶ , ವ್ಯಾಪ್ತಿ, ವಿಧಾನ ಮತ್ತು ಸ್ವರೂಪದ ಕುರಿತಿದೆ. ಕುಮಟಾ ತಾಲೂಕಿಗೆ ಸಂಬಂಧಿಸಿದಂತೆ ಲೇಖನಗಳು, ಕೃತಿಗಳು ಪ್ರಕಟವಾಗಿದ್ದರೂ ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳಿಗೆ ಸಂಬಂಧಿಸಿದಂತೆ ಈವರೆಗೆ ವ್ಯವಸ್ಥಿತ ಅಧ್ಯಯನ ನಡೆದಿಲ್ಲ. ತೆರೆಮರೆಯಲ್ಲಿ ಅಡಗಿದ್ದ ಇಲ್ಲಿನ ಶಾಸನಗಳು ಮತ್ತು ದೇವಾಲಯಗಳು ಅಂದಿನ ಸಂಸ್ಕೃತಿಯನ್ನು ಬಿಂಬಿಸುವ ಉದ್ದೇಶದಿಂದ ಮಾಡಿದ ಪ್ರಯತ್ನ ಇದಾಗಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಒಂದಾದ ಕುಮಟಾ ತಾಲೂಕು ಒಟ್ಟು ೧೨೦ ಗ್ರಾಮಗಳನ್ನು ಒಳಗೊಂಡಿದ್ದು ಪ್ರಕಟಿತ ಲೇಖನ ಮತ್ತು ಕೃತಿಗಳನ್ನು ಪೂರಕವಾಗಿಟ್ಟುಕೊಂಡು (ಕ್ಷೇತ್ರಕಾರ್ಯ ಕೈಗೊಂಡು) ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳ ಗ್ರಾಮಾವಾರು ಅನ್ವೇಷಣೆ ಮಾಡಿದ ಫಲಶೃತಿ ಇದಾಗಿದೆ.

ಅಧ್ಯಾಯ ೧ ಮಹಾಪ್ರಬಂಧದ ಪೀಠಿಕೆಯಾಗಿದ್ದು ಪ್ರಬಂಧದ ಉದ್ದೇಶ , ವ್ಯಾಪ್ತಿ ಮತ್ತು ಸ್ವರೂಪವನ್ನು ಹೇಳಲಾಗಿದೆ. ಈ ಅಧ್ಯಯನವನ್ನು ಮಾಡಲು ಪೂರಕವಾದ ತೆರತೆರನ

ಆಕರಗಳನ್ನು ಪೂರ್ವಾಧ್ಯಯನಗಳ ಸಮೀಕ್ಷೆಯಲ್ಲಿ ಹೇಳಲಾಗಿದೆ. ಸಂಶೋಧನಾ ಕೃತಿಗಳನ್ನು, ಐತಿಹ್ಯಗಳನ್ನು, ಸಂಶೋಧನಾ ಪ್ರಬಂಧಗಳನ್ನು, ಪಿಎಚ್.ಡಿ. ಮಹಾಪ್ರಬಂಧಗಳನ್ನು, ಸಂಶೋಧನಾ ಲೇಖನಗಳನ್ನು ಇಲ್ಲಿ ಅವಲೋಕನ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿಯಲ್ಲಿ ಕುಮಟಾ ತಾಲೂಕಿನ ಗ್ರಾಮಗ್ರಾಮಗಳಲ್ಲಿ ಅನ್ವೇಷಣೆ ಮಾಡಿ ಪ್ರಕಟಿತ ಆಧಾರಗಳೊಂದಿಗೆ ಇಲ್ಲಿನ ಐತಿಹಾಸಿಕ ಪುರಾವೆಗಳನ್ನು ಒಂದೆಡೆ ಸೆರೆಹಿಡಿಯಲಾಗುವದೆಂದು ವ್ಯಾಪ್ತಿಯಲ್ಲಿ ಹೇಳಲಾಗಿದೆ. ಅಧ್ಯಯನದ ವಿಧಾನದೊಂದಿಗೆ ಅಧ್ಯಾಯಗಳ ಅನುಕೂಲತೆಯ ದೃಷ್ಟಿಯಿಂದ ಏಳು ಅಧ್ಯಾಯಗಳನ್ನು ವಿಂಗಡಿಸಿರುವದರೊಂದಿಗೆ ಪೀಠಿಕಾ ಭಾಗದಲ್ಲಿ ಸ್ವರೂಪವನ್ನು ಪ್ರಸ್ತಾವನೆ ಮಾಡಲಾಗಿದೆ.

ಅಧ್ಯಾಯ – ೨ ಕುಮಟಾ ತಾಲೂಕಿನ ಸಂಕ್ಷಿಪ್ತ ಇತಿಹಾಸ ಮತ್ತು ಭೌಗೋಳಿಕ ಲಕ್ಷಣಗಳು, ಕುಮಟಾ ತಾಲೂಕಿನ ಭೌಗೋಳಿಕ ಲಕ್ಷಣಗಳಲ್ಲಿ ಒಂದಾದ ಪ್ರಾಕೃತಿಕ ಹಿನ್ನೆಲೆ ವಿಸ್ತೀರ್ಣ ಮತ್ತು ಮೇರೆಗಳನ್ನು ಹೇಳಲಾಗಿದೆ. ಕುಮಟಾ ತಾಲೂಕಿನ ಸಂಕ್ಷಿಪ್ತ ಇತಿಹಾಸದಲ್ಲಿ ಹೆಸರು, ನಿಷ್ಪತ್ತಿ ತಿಳಿಸಿ ಕುಂಬಟಂ ಹೆಸರು ಕುಂಬಟೆಯ ನಾಡಾಗಿ ನಂತರ ಕುಮಟಾ ಹೆಸರು ಬಂದಿತೆಂದು ಹೇಳಲಾಗಿದೆ. ಇದಕ್ಕೆ ಪೂರಕವಾದ ಶಾಸನಗಳು ಮತ್ತು ಪೋರ್ಚುಗೀಸ ದಾಖಲೆಗಳ ಆಕರಗಳನ್ನು ನೀಡಲಾಗಿದೆ. ಈ ಅಧ್ಯಾಯದಲ್ಲಿ ಕುಮಟಾ ತಾಲೂಕಿನಲ್ಲಿ ದೊರೆತ ಪ್ರಾಗೈತಿಹಾಸಿಕ ಕುರುಹುಗಳನ್ನು ತಿಳಿಸಿ ಇಲ್ಲಿನ ರಾಜಕೀಯ ಇತಿಹಾಸವನ್ನು ಶಾಸನಗಳ ಆದಾರದಲ್ಲಿ ಕಟ್ಟುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಆಳಿ ಅಳಿದ ಅರಸರಾದ ಭೋಜರು, ಕೈಕೇಯರು, ಗೋಕರ್ಣದ ಮಾಂಡಲಿಕ ಅರಸರು, ಶಿಶುಗಲಿಯ ಪಾಂಡ್ಯರು, ಚಂದಾವರ ಕಾದಂಬರು, ವಿಜಯನಗರ ಅರಸು ಮನೆತನಗಳು ನೇರವಾಗಿ ಆಳ್ವಿಕೆ ಮಾಡಿದ್ದಾರೆ. ಮೊದಲ ಹಂತದಲ್ಲಿ ಶಾತವಾಹನರು, ಬನವಾಸಿ ಕದಂಬರ ಆಳ್ವಿಕೆಗೆ ಒಳಪಟ್ಟಿದ್ದರೂ ಇಲ್ಲಿ ದೊರೆತಿರುವ ಕುರುಹುಗಳು ಭೋಜರ ಕಾಲದಿಂದ ದೊರೆತಿವೆ. ಅಂದರೆ ಈ ಪ್ರದೇಶಕ್ಕೆ ರಾಜಕೀಯವಾಗಿ ಹೆಚ್ಚು ಮಾನ್ಯತೆ ಸಿಕ್ಕಿದ್ದು ಭೋಜರು, ಕೈಕೇಯರು, ಗೋಕರ್ಣದ ಮಾಂಡಲಿಕ ಅರಸರು, ಶಿಶುಗಲಿಯ ಪಾಂಡ್ಯರು, ಚಂದಾವರ ಕಾದಂಬರು, ವಿಜಯನಗರ ಕಾಲದಲ್ಲಿ ಎಂದು ಹೇಳಬಹುದು. ಇಲ್ಲಿ ಆಳ್ವಿಕೆ ನಡೆಸಿದ ಭೋಜರು, ಕೈಕೇಯರು,ಗೋಕರ್ಣದ ಮಾಂಡಲಿಕ ಅರಸರು, ಶಿಶುಗಲಿಯ ಪಾಂಡ್ಯರು, ಚಂದಾವರ ಕಾದಂಬರು, ವಿಜಯನಗರ ಅರಸರು ಆಳಿ ಅಳಿದು ಅವರು ಬಿಟ್ಟು ಹೋದ ಕುರುಹುಗಳ ಆಧಾರದಲ್ಲಿ ರಾಜಕೀಯ ಇತಿಹಾಸವನ್ನು ಅಧ್ಯಾಯ ೨ ರಲ್ಲಿ ಸೆರೆಹಿಡಿಯಲಾಗಿದೆ.

ಅಧ್ಯಾಯ – ೩ ಶಾಸನಗಳ ವೈವಿಧ್ಯತೆಯ ಈ ಅಧ್ಯಾಯದಲ್ಲಿ ಶಾಸನಗಳ ವೈವಿಧ್ಯತೆಯನ್ನು ದಾನಶಾಸನಗಳು, ವೀರಗಲ್ಲುಗಳು, ತುರುಕಾಳಗ, ವ್ಯಕ್ತಿಪ್ರಾಣಿಗಳ ಹೋರಾಟಶಿಲ್ಪ, ಸ್ತಂಭವೀರಗಲ್ಲು, ಮಹಾಸತಿ ವೀರಶಿಲ್ಪಗಳ ವೈವಿದ್ಯತೆ ತೋರಿಸಲಾಗಿದೆ.

ಅಧ್ಯಯನುಕ್ಕುಣವಾಗಿ ಎಲ್ಲಾ ದಾನಶಾಸನಗಳನ್ನು ಒಂದೆಡೆ ಸೇರಿಸಿಹಿಡಿದು ವೈವಿಧ್ಯತೆಯನ್ನು ತೋರಿಸಿ, ಗಾಣಪತ್ಯ ದೇವಾಲಯಕ್ಕೆ ನೀಡಿದ ದಾನಶಾಸನಗಳು, ಶೈವ ದಾನಶಾಸನಗಳು, ಶಾಕ್ತ ದಾನಶಾಸನಗಳು, ವೈಷ್ಣವ ದಾನಶಾಸನಗಳು, ಜೈನ ದಾನಶಾಸನಗಳು, ಸತ್ರಕ್ಕೆ ನೀಡಿದ ದಾನಶಾಸನಗಳೆಂದು ವರ್ಗೀಕರಿಸಲಾಗಿದೆ.

ವೀರಗಲ್ಲುಗಳಲ್ಲಿ ವಿಷಯಾನುದೃಷ್ಟಿಯಿಂದ ಮತ್ತು ಅಂದಿನ ಕಲೆಯನ್ನು ಬಿಂಬಿಸುವ ದೃಷ್ಟಿಯಿಂದ ಶಾಸನಸಹಿತ ವೀರಗಲ್ಲು ಮತ್ತು ಶಾಸನರಹಿತ ವೀರಗಲ್ಲುಗಳೆಂದು ವರ್ಗೀಕರಿಸಿಕೊಂಡು ಇವುಗಳ ವೈಶಿಷ್ಟತೆಯನ್ನು ಒಂದೆಡೆ ಸೇರಿಸಿಹಿಡಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ದಾನಶಾಸನಗಳ ಜೊತೆಗೆ ಶಾಸನಶಿಲ್ಪಗಳು ಈ ಅಧ್ಯಯನದ ಇನ್ನೊಂದು ವಿಶೇಷತೆಯಾಗಿದೆ. ೧೧ ವೀರಗಲ್ಲು ಶಾಸನಗಳು, ೧ ತುರುಕಾಳಗ ಶಿಲ್ಪ, ೮ ಶಾಸನರಹಿತ ವೀರಗಲ್ಲು ಶಿಲ್ಪ, ೧ ವ್ಯಕ್ತಿಪ್ರಾಣಿಗಳ ಹೋರಾಟಶಿಲ್ಪ, ೭ ಮಹಾಸತಿ ಶಿಲ್ಪ, ೨ ನಿಷಿಧಿ ಶಿಲ್ಪಗಳನ್ನು ಅಳವಡಿಸಿ ಶಾಸನಶಿಲ್ಪಗಳ ವೈವಿಧ್ಯತೆಯ ವಿಶೇಷತೆಯನ್ನು ಈ ಅಧ್ಯಾಯದಲ್ಲಿ ತೋರಿಸಲಾಗಿದೆ.

ಸ್ಮಾರಕ ಶಿಲ್ಪಗಳು ಕುಮಟಾ, ಕೋನಳ್ಳಿ, ಶಿರಗುಂಜಿ, ಕಡೇಕೋಡಿ, ಧಾರೇಶ್ವರ, ಹೊಸಾಡ, ಹಳಕಾರ, ದೀವಳ್ಳಿ, ಹನೇಹಳ್ಳಿ, ಕಾಗಲ್, ವಾಲಗಳ್ಳಿ, ಹರವಳ್ಳಿಗಳಲ್ಲಿ ದೊರೆತಿದ್ದು ಇವು ಶಾಸನರಹಿತ ಮತ್ತು ಶಾಸನಸಹಿತ ಶಿಲ್ಪಗಳಾಗಿವೆ. ಬಂಕಿಕೊಡ್ಲದ ವ್ಯಕ್ತಿಪ್ರಾಣಿಗಳ ಹೋರಾಟದ ಶಿಲ್ಪ, ಕಾಗಲ, ವಾಲಗಳ್ಳಿ, ಗೋಕರ್ಣದಲ್ಲಿನ ಸ್ತಂಭವೀರಗಲ್ಲು, ಸಾಂತಗಲ್, ಬಂಕಿಕೊಡ್ಲ, ಹನೇಹಳ್ಳಿ, ಹಿಂಡಬೈಲ, ಮೇಗಿನಮೂಲೆಯಲ್ಲಿನ ಮಹಾಸತಿಶಿಲ್ಪಗಳು ಕುಮಟಾ, ಕತಗಾಲ, ವಾಲಗಳ್ಳಿಯಲ್ಲಿ ದೊರೆತಿರುವ ನಿಷಿಧಿಶಿಲ್ಪಗಳು ಅಂದಿನ ಆಚರಣೆ ಬಿಂಬಿಸುವ ಜೊತೆಗೆ ಕುಮಟಾ ತಾಲೂಕಿನ ಕಲ್ಯಾಣ ಚಾಲುಕ್ಯ, ಚಂದಾವರ ಕಾದಂಬ, ವಿಜಯನಗರ ಕಾಲದ ಶಾಸನಶಿಲ್ಪದ ವೈಶಿಷ್ಟ್ಯತೆಯನ್ನು ಪ್ರತಿಬಿಂಬಿಸಿದೆ.

ಮಹಾಸತಿಶಿಲ್ಪಗಳಿಗೆ ಸಂಬಂಧಿಸಿದಂತೆ ಅಂದಿನ ಅನುಗಮನ, ಸಹಗಮನ ಪದ್ಧತಿ ಇಂದು ನಿಕೃಷ್ಟ ಎನಿಸಿದರೂ ಇವು ಅಂದಿನ ಸಂಸ್ಕೃತಿಯನ್ನು, ಆಚರಣೆಯನ್ನು ಪ್ರತಿಬಿಂಬಿಸುತ್ತವೆ. ಮಹಾಸತಿಶಿಲ್ಪಗಳು ತ್ಯಾಗವನ್ನು ನಿರೂಪಿಸುವಂತಿದ್ದರೆ, ನಿಷಿಧಿಗಲ್ಲುಗಳು ಸಲ್ಲೇಖನ ವ್ರತವನ್ನು ಹೇಳುವಂತಿದ್ದರೆ, ದಾನಶಾಸನಗಳು ವಿಷಯಗಳನ್ನು ನಿರೂಪಿಸುವಲ್ಲಿ ಅಷ್ಟೇ ಮಹತ್ವದ ಪಾತ್ರ ವಹಿಸಿವೆ. ಶಾಸನಗಳ ಕಾಲ ನಮೂದಿಸಿಲ್ಲದಿದ್ದರೂ ಲಿಪಿದೃಷ್ಟಿಯಿಂದ, ಕಲಾದೃಷ್ಟಿಯಿಂದ ಸಾಂಪ್ರದಾಯಿಕವಾಗಿ ಇದೊಂದು ಮಹತ್ವದ ಕೊಡುಗೆ ಎನಿಸದೇ ಇರದು. ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ ವೀರಗಲ್ಲುಗಳು ವೀರಸ್ಮಾರಕವಾಗಿ ನಿಲ್ಲಿಸಲ್ಪಟ್ಟರೆ ದಾನಶಾಸನಗಳು ದಾನದತ್ತಿಯನ್ನು ತಿಳಿಸಲು ಬರೆಯಲ್ಪಟ್ಟಿವೆ. ಕಲೆ,

ಸಂಪ್ರದಾಯ ಅಂದಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವದೇ ಈ ಅಧ್ಯಾಯದ ಇನ್ನೊಂದುವಿಶೇಷತೆಯಾಗಿದೆ.

ಅಧ್ಯಾಯ – ೪ ದೇವಾಲಯಗಳ ಅಧ್ಯಯನದಲ್ಲಿ ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ರಾಜರು ಮತ್ತು ಮಹಾಮಂಡಳೇಶ್ವರರು ನೀಡಿದ ಪ್ರೋತ್ಸಾಹದಿಂದ ದೇವಾಲಯಗಳ ಬೆಳವಣಿಗೆಯಾಯಿತೆಂಬುದನ್ನು ಪ್ರಸ್ತಾಪಿಸಲಾಗಿದೆ. ಈ ತಾಲೂಕಿನಲ್ಲಿ ದೊರೆತ ಒಟ್ಟೂ ೧೬ ಗಾಣಪತ್ಯ ೩೫ ಶೈವ, ೩೫ ಶಾಕ್ತ, ೧೪ ವೈಷ್ಣವ ದೇವಾಲಯಗಳನ್ನು ವರ್ಗೀಕರಿಸಿ ಪರಿಚಯಿಸಲಾಗಿದೆ. ಒಂದೆರಡು ದೇವಾಲಯಗಳನ್ನು ಹೊರತುಪಡಿಸಿದರೆ ಹೆಚ್ಚಿನ ದೇವಾಲಯಗಳು ವಾಸ್ತುಶೈಲಿಯಿಂದ ದಾಕ್ಷಿಣಾತ್ಯ ಶೈಲಿಗಳೇ ಆಗಿವೆ. ದೇವಾಲಯಗಳು ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳನ್ನು ಒಳಗೊಂಡಿರುವುದು ಸಾಮಾನ್ಯ ಲಕ್ಷಣವಾಗಿವೆ. ಒಂದೆರಡು ಪ್ರಾಚೀನ ದೇವಾಲಯಗಳ ಗರ್ಭಗೃಹಗಳು ಚೌಕಾಕಾರವಾಗಿದ್ದು ಬಿಟ್ಟರೆ ಉಳಿದ ದೇವಾಲಯಗಳು ಆಯತಾಕಾರವಾಗಿವೆ. ಹೆಚ್ಚಿನ ದೇವಾಲಯಗಳ ಶಿಖರಗಳು ಕದಂಬ ನಾಗರಶೈಲಿಯಲ್ಲಿವೆ. ಸಾಂಸ್ಕೃತಿಕ ದೃಷ್ಟಿಯಿಂದ ದೇವಾಲಯವೆಂಬುದು ಸಮಾಜದಲ್ಲಿನ ಧಾರ್ಮಿಕ ಶೃದ್ಧೆ, ಭಕ್ತಿಯ ಪ್ರತೀಕವಾಗಿವೆ. ದೇವಾಲಯವು ಹಣಕಾಸಿನ ಸಂಸ್ಥೆಯಾಗಿ, ಕಲಾಕೇಂದ್ರವಾಗಿ, ವಿದ್ಯಾಕೇಂದ್ರವಾಗಿ, ಸತ್ರಗಳಾಗಿ, ನ್ಯಾಯಾಲಯಗಳಾಗಿ ಕೆಲಸ ನಿರ್ವಹಿಸಿರುವದನ್ನು ಇಂದಿಗೂ ಕಾಣುತ್ತೇವೆ.

ಗಾಣಪತ್ಯ ದೇವಾಲಯಗಳು ಗೋಕರ್ಣ, ಅಳವಳ್ಳಿ, ತಾರಮಕ್ಕಿ, ನೆಲ್ಲಿಕೇರಿ, ಊಳ್ಳುರಮಠ, ಉಪ್ಪಿನಪಟ್ಟಣ, ಊರಕೇರಿ, ಹಳೇಹೆರವಟ್ಟಾ, ಹಂದಿಗೋಣ, ಹಾರುಮಾಸ್ಕೇರಿ, ಚಿತ್ರಿಗಿ, ಹೆಗಡೆ, ಹೊಸಕೇರಿ, ಮಾದನಗೇರಿಗಳಲ್ಲಿದ್ದು ೧೦–೧೧ ಶತಮಾನದಿಂದ ಹಿಡಿದು ವಿಜಯನಗರ ವಿಜಯನಗರೋತ್ತರ ಮತ್ತು ಆಧುನಿಕ ಕಾಲಕ್ಕೆ ಸೇರಿದೆ. ಹೆಚ್ಚಿನ ದೇವಾಲಯಗಳು ಜೀರ್ಣೋದ್ಧಾರವಾಗಿದೆ.

ಶೈವ ದೇವಾಲಯಗಳು ಧಾರೇಶ್ವರ, ಗೋಕರ್ಣ, ಹನೇಹಳ್ಳಿ, ಮಿರ್ಜಾನ, ಹಿರೇಗುತ್ತಿ, ಬಂಕಿಕೊಡ್ಲ, ಮುರೂರು, ಅಬ್ಬೊಳ್ಳಿ, ಬಡಾಳ, ಅಂತ್ರವಳ್ಳಿ, ಕಲ್ಲಬ್ಬೆ, ದೀವಳ್ಳಿ, ಕೊಡ್ಕಣಿ, ಶಿರಗುಂಜಿ, ನಾಡುಮಾಸ್ಕೇರಿ, ಮಾಸೂರ, ಮಾಣಕೋಣ, ಹಂದಿಗೋಣ, ದುಂಡಕುಳಿ, ಕತ್‌ಗಾಲ, ಬರ್ಗಿ, ಬಾಸೊಳ್ಳಿ, ಬಸ್ತಿಕೇರಿ, ಕಲಬಾಗ ಗ್ರಾಮಗಳಲ್ಲಿ ಇವೆ. ಜೈನ ಬಸದಿಗಳಿಗೆ ಸಂಬಂಧಿಸಿದಂತೆ, ಕುಮಟಾ ಬಸ್ತಿಪೇಟೆಯ ಪಾರ್ಶ್ವನಾಥ ಕಲಕೇರಿಯ ಶಾಂತಿನಾಥ ಬಸದಿಗಳು ಮಾತ್ರ ಉಳಿದುಕೊಂಡಿವೆ. ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದಲ್ಲಿ ಕುಮಟಾ ತಾಲೂಕಿನಲ್ಲಿ ಒಟ್ಟಾರೆಯಾಗಿ ಗಾಣಪತ್ಯ ಶೈವ ದೇವಾಲಯಗಳೇ ಹೆಚ್ಚಿನದಾಗಿವೆ. ಇದು ಗಾಣಪತ್ಯ ಮತ್ತು ಶೈವಪಂಥ ಹೆಚ್ಚು ಅಸ್ತಿತ್ವದಲ್ಲಿತ್ತೆಂಬುದಕ್ಕೆ

ಸಾಕ್ಷಿಯಾಗಿದೆ. ಈ ಶೈವಪಂಥ ಇಲ್ಲಿ ದೇವಾಲಯಗಳು ಹೆಚ್ಚಿನ ಮಟ್ಟಿಗೆ ಕಲ್ಯಾಣ ಚಾಲುಕ್ಯ ಮತ್ತು ವಿಜಯನಗರ ಕಾಲಕ್ಕೆ ಸೇರಿವೆ.

ಶಾಕ್ತಪಂಥದ ದೇವಾಲಯಗಳಿಗೆ ಸಂಬಂಧಿಸಿದಂತೆ, ಇದು ಜನಸಾಮಾನ್ಯರಲ್ಲಿ ಬೇರುಬಿಟ್ಟ ಪಂಥ ಇದಾಗಿದೆ. ಮೂರುಕಟ್ಟೆ, ಹೆರವಟ್ಟಾ, ಕಾಗಲ್, ಹಿರೇಗುತ್ತಿ, ಗೋಕರ್ಣ, ನಾಡುಮಾಸ್ಕೇರಿ, ನೀಲಕೋಡ, ದೇವರಹಕ್ಕಲು, ಅಘನಾಶಿನಿ, ಬೆಟ್ಕುಳಿ, ಬಾವಿಕೊಡ್ಲ, ಹನೇಹಳ್ಳಿ, ಮಿರ್ಜಾನ, ಸಂತೇಗುಳಿ, ಸಾಂತಗಲ, ವಾಲಗಳ್ಳಿ, ಪಡುವಣಿ, ನುಶಿಕೋಟೆ, ಕೋಡ್ಕಣಿ, ಸಂಡಳ್ಳಿ ಮತ್ತು ಮುರೂರು ಗ್ರಾಮಗಳಲ್ಲಿ ಶಾಕ್ತಪಂಥದ ದೇವಾಲಯಗಳನ್ನು ಕಾಣಬಹುದು. ಇವೆಲ್ಲವೂ ವಿಜಯನಗರೋತ್ತರ ಆಧುನಿಕ ಕಾಲಕ್ಕೆ ಸೇರಿವೆ. ಹೆಚ್ಚಿನ ದೇವಾಲಯಗಳು ಜೀರ್ಣೋದ್ಧಾರವಾದರೂ ತಾಲೂಕಿನ ದೇವಾಲಯಗಳನ್ನು ಒಂದೆಡೆ ಸೆರೆಹಿಡಿಯುವ ದೃಷ್ಟಿಯಿಂದ ಮಹತ್ವದ್ದಾಗಿದೆ.

ಕುಮಟಾ ತಾಲೂಕಿನ ವೈಷ್ಣವ ದೇವಾಲಯಗಳು ವೈಷ್ಣವಪಂಥ ಇಲ್ಲಿ ಅಸ್ತಿತ್ವದಲ್ಲಿತೆಂಬುದಕ್ಕೆ ಸಾಕ್ಷಿಯಾಗಿದೆ. ಕೇಶವ, ಶಂಕರನಾರಾಯಣ, ಗೋಪಾಲಕೃಷ್ಣ ದೇವಾಲಯಗಳು ವೈಷ್ಣವಪಂಥದ ವೈವಿಧ್ಯತೆಯ ಸಂಕೇತಗಳಾಗಿವೆ. ವೈಷ್ಣವ ದೇವಾಲಯಗಳು ಗೋಕರ್ಣ, ಮಿರ್ಜಾನ, ತಲಗೋಡ, ಕುಂದಗುಣಿ, ಉಂಚಗಿ, ಬಸ್ತಿಪೇಟೆ, ಮುರೂರು, ಮೊರಬಾ, ಘೋರೆ, ಸಾಣೆಕಟ್ಟಾಗಳಲ್ಲಿ ಇದ್ದು, ಹೆಚ್ಚಿನಮಟ್ಟಿಗೆ ವಿಜಯನಗರ ಮತ್ತು ಆಧುನಿಕ ಕಾಲಕ್ಕೆ ಸೇರಿವೆ. ತುಲನಾತ್ಮಕ ಅಧ್ಯಯನ ಮಾಡಿನೋಡಿದಲ್ಲಿ ಗಾಣಪತ್ಯ, ಶೈವ, ಶಾಕ್ತ, ಪಂಥಗಳೇ ಹೆಚ್ಚು ಮಹತ್ವಪಡೆದಿತ್ತು ಎಂಬುದಕ್ಕೆ ಶಾಸನಗಳು ಮತ್ತು ದೇವಾಲಯಗಳು ಸಾಕ್ಷಿಯಾಗಿವೆ. ದೇವಾಲಯಗಳಿಗೆ ಹೆಚ್ಚಿನ ಮಟ್ಟಿಗೆ ಜಂಬಿಟ್ಟಿಗೆ ಬಳಸಲಾಗಿದೆ. ಜೀರ್ಣೋದ್ಧಾರ ಮಾಡುವಾಗ ಸ್ಥಳೀಯ ಪ್ರಭಾವ ಎದ್ದು ಕಾಣುತ್ತದೆ. ಕೆಲವೊಂದು ಕಲ್ಯಾಣ ಚಾಲುಕ್ಯರ ಶೈಲಿಯ ಸ್ಮಾರಕ ಹೊರತುಪಡಿಸಿದರೆ ಹೆಚ್ಚಿನ ದೇವಾಲಯಗಳು ವಿಜಯನಗರೋತ್ತರ ಮತ್ತು ಆಧುನಿಕ ಕಾಲಕ್ಕೆ ಸೇರಿವೆ.

ಅಧ್ಯಾಯ – ೫ ಮೂರ್ತಿಶಿಲ್ಪ, ಈ ಆಧ್ಯಯನವನ್ನು ಕೈಗೊಂಡಾಗ ಪ್ರಸ್ತುತ ಈ ಪ್ರದೇಶದಲ್ಲಿ ಬೌದ್ಧ, ಜೈನ, ಶೈವ, ಶಾಕ್ತ, ವೈಷ್ಣವ ಪಂಥದ ಕುರುಹುಗಳು ಇಲ್ಲಿದ್ದರೂ ಬೌದ್ಧ ಧರ್ಮಕ್ಕೆ ಸಂಬಂಧಿಸಿದಂತೆ ಹಿರೇಗುತ್ತಿಯ ತಾಮ್ರ ಶಾಸನ ಹೊರತುಪಡಿಸಿದರೆ, ಈವರೆಗೆ ಯಾವುದೇ ಮೂರ್ತಿಶಿಲ್ಪ ದೊರೆತಿಲ್ಲ. ದೇವಾಲಯಗಳು ಇದ್ದ ಮೇಲೆ ಅಲ್ಲಿ ಮೂರ್ತಿಶಿಲ್ಪ ಇರಲೇಬೇಕು. ದೇವಾಲಯ ಕಟ್ಟುವದೇ ಮೂರ್ತಿ ಪೂಜೆಗಾಗಿ. ಈ ಅಧ್ಯಾಯದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆಯನ್ನು ಪ್ರಸ್ತಾಪಿಸಿ ಶಿಲ್ಪಗಳಲ್ಲಿನ ಆಸನ, ಆಯುಧಗಳು, ಆಭರಣಗಳು. ಲಾಂಛನಗಳನ್ನು ಪ್ರಸ್ತಾಪಿಸಲಾಗಿದೆ. ಮೂರ್ತಿಶಿಲ್ಪಕ್ಕೆ ಸಂಬಂಧಿಸಿದಂತೆ ಅತೀ ಪ್ರಾಚೀನ ಮೂರ್ತಿಶಿಲ್ಪ ಗೋಕರ್ಣದ ಗಣಪತಿ, ಮೂರ್ತಿಶಿಲ್ಪ, ಇದರ ಕಾಲ ಕ್ರಿ.ಶ ೨–೩ ನೇ

ಶತಮಾನ ಗಾಣಪತ್ಯ ಶಿಲ್ಪಗಳು ಗೋಕರ್ಣ, ಶಿರಗುಂಜಿ, ನಾಗೂರ, ಕಲ್ಲಬ್ಬೆ, ದಾರೇಶ್ವರ, ಮಿರ್ಜಾನ, ಉಪ್ಪಿನಪಟ್ಟಣ, ಬರ್ಗಿ, ಸಿದ್ದೇಶ್ವರ, ಹಿರೇಗುತ್ತಿ, ಬಂಗಣೆ, ಯಾಣ, ಅತಿಬೆಟ್ಟು, ಆಲಕೇರಿ , ಕತಗಾಲ, ವಾಲಗಳ್ಳಿ, ದೀವಳ್ಳಿ, ಹರವಳ್ಳಿ ಗ್ರಾಮಗಳಲ್ಲಿ ದೊರೆತಿವೆ. ಗಣಪತಿಯನ್ನು ಪೂಜಿಸದ ಗ್ರಾಮವೇ ಇರಲಿಕ್ಕಿಲ್ಲ. ಗಣಪತಿಯನ್ನು ಎಲ್ಲಾ ಪಂಥದವರೂ ಪೂಜಿಸುತ್ತಾರೆ ಆರಾಧಿಸುತ್ತಾರೆ. ಇಲ್ಲಿ ಗಾಣಪತ್ಯ ಪಂಥ ಹೆಚ್ಚು ಪ್ರಚಲಿತದಲ್ಲಿತ್ತೆಂಬುದು ಇಲ್ಲಿ ಗಮನಿಸಬೇಕಾದ ಅಂಶ. ಶೈವ ಮೂರ್ತಿಶಿಲ್ಪಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಶಿವಲಿಂಗ, ನಂದಿಮೂರ್ತಿಶಿಲ್ಪ, ಭೈರವಶಿಲ್ಪ, ಕಾಲಭೈರವ, ವೀರಭದ್ರ ಇವು ಶೈವ ಧರ್ಮದಲ್ಲಿನ ಮೂರ್ತಿಶಿಲ್ಪ ವೈವಿದ್ಯತೆಗಳಾಗಿವೆ. ಶೈವ ಪಂಥಕ್ಕೆ ಸಂಬಂಧಿಸಿದಂತೆ ಶಿವನನ್ನು ಮೂರ್ತಿಶಿಲ್ಪ ಬದಲಾಗಿ ಲಿಂಗರೂಪದಲ್ಲಿ ಇರುವುದೇ ಹೆಚ್ಚಿನ ಸಂಖ್ಯೆಯಲ್ಲಿವೆ. ಶಿವನಿಗೆ ಲಿಂಗಪೂಜೆಯೇ ಹೆಚ್ಚು ಪ್ರಿಯವೆಂಬುದು ಪ್ರಚಲಿತದಲ್ಲಿದೆ. ಧಾರೇಶ್ವರ, ಮುರೂರು, ಶಿರಗುಂಜಿ, ಸಿದ್ದೇಶ್ವರ, ಮಿರ್ಜಾನ, ಹಿರೇಗುತ್ತಿ, ಕತಗಾಲ, ಬಂಕಿಕೊಡ್ಲ, ಬಡಾಳ, ಅಬ್ಬೊಳ್ಳಿಗಳಲ್ಲಿ ಇರುವುದು ಲಿಂಗಶಿಲ್ಪವೇ ಆಗಿದೆ. ನಂದಿಶಿಲ್ಪಗಳು ಗೋಕರ್ಣ, ಸಿದ್ದೇಶ್ವರ, ಹಿರೇಗುತ್ತಿ, ಕಲ್ಲಬ್ಬೆ, ಮಿರ್ಜಾನ, ಮುರೂರು, ಬಂಕಿಕೊಡ್ಲ, ಬಾಸೊಳ್ಳಿ, ಅಬ್ಬೊಳ್ಳಿ, ಬಡಾಳ ಗ್ರಾಮಗಳಲ್ಲಿ ದೊರೆತಿವೆ. ಭೈರವನ ಶಿಲ್ಪಗಳು ಧಾರೇಶ್ವರ, ಗೋಕರ್ಣಗಳಲ್ಲಿವೆ. ವೀರಭದ್ರಶಿಲ್ಪಗಳು ಗೋಕರ್ಣದಲ್ಲಿ ಮಾತ್ರ ದೊರೆತಿವೆ. ಇಲ್ಲಿನ ಶೈವಮೂರ್ತಿಗಳನ್ನೆಲ್ಲಾ ಹೆಚ್ಚಿನಮಟ್ಟಿಗೆ ಕಲ್ಯಾಣಚಾಲುಕ್ಯ, ವಿಜಯನಗರ, ವಿಜಯನಗರೋತ್ತರ ಮತ್ತು ಆಧುನಿಕ ಕಾಲಕ್ಕೆ ಸೇರಿವೆ. ಮೂರ್ತಿಶಿಲ್ಪಗಳಾದ ಪಾರ್ವತಿ, ಗಂಗಾಮಾತೆ, ಶಾಂತಿಕಾಪರಮೇಶ್ವರಿ, ಕೋಟೇಶ್ವರಿ, ನಾರಾಯಣಿ, ಸರಸ್ವತಿ. ಲಕ್ಷ್ಮಿ, ದುರ್ಗೆ, ಕಾಳಿ, ಮಹಿಷಾಸುರಮರ್ದಿನಿ ಹೀಗೆ ಶಾಕ್ತ ಮೂರ್ತಿಶಿಲ್ಪಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಇವು ಗೋಕರ್ಣ, ನಾಡುಮಾಸ್ಕೇರಿ, ಊರಕೇರಿ, ನುಶಿಕೋಟೆ, ಕುಮಟಾ, ಕೂಜಳ್ಳಿ, ಬಾವಿಕೊಡ್ಲ, ಬಾಡಾ, ಪಡುವಣಿ, ಧಾರೇಶ್ವರ, ಹನೇಹಳ್ಳಿ, ಉಪ್ಪನಪಟ್ಟಣ, ಹೆಗಡೆ, ಕತಗಾಲ, ಮಿರ್ಜಾನ, ಬರ್ಗಿ, ಕಲ್ಲಬ್ಬೆ ಗ್ರಾಮಗಳಲ್ಲಿ ದೊರೆತಿವೆ.

ಗಾಣಪತ್ಯ, ಶೈವ ಶಾಕ್ತ, ಪಂಥಗಳಂತೆ ವೈಷ್ಣವ ಪಂಥವು ಇಲ್ಲಿತ್ತೆಂಬುದು ಗಮನಿಸಬೇಕಾದ ಅಂಶ. ವೈಷ್ಣವ ಮೂರ್ತಿಶಿಲ್ಪಗಳಾದ ಲಕ್ಷ್ಮಿವೆಂಕಟರಮಣ, ಜನಾರ್ಧನ, ಕೇಶವ, ಯೋಗನರಸಿಂಹ, ವೇಣುಗೋಪಾಲ, ಗೋಪಾಲಕೃಷ್ಣ, ಲಕ್ಷ್ಮಿನಾರಾಯಣ, ದತ್ತಾತ್ರೇಯ, ಶಂಕರನಾರಾಯಣ, ಸೂರ್ಯನಾರಾಯಣ ಹೀಗೆ ವೈವಿಧ್ಯತೆಯ ಮೂರ್ತಿಶಿಲ್ಪಗಳು ಈ ತಾಲೂಕಿನಲ್ಲಿವೆ. ವೈಷ್ಣವ ಪಂಥ ಬೇರೂರಿತ್ತೆಂಬುದಕ್ಕೆ ಇಲ್ಲಿ ದೊರೆತ ವೈಷ್ಣವ ಮೂರ್ತಿಶಿಲ್ಪಗಳೇ ಸಾಕ್ಷಿಯಾಗಿವೆ. ಕಲ್ಯಾಣಚಾಲುಕ್ಯ, ವಿಜಯನಗರ ಆಧುನಿಕ ಕಾಲಕ್ಕೆ ಸೇರಿದೆ. ಈ ಮೂರ್ತಿಶಿಲ್ಪಗಳು ಇಲ್ಲಿನ ವೈಷ್ಣವ ಪಂಥ ಅಸ್ತಿತ್ವದಲ್ಲಿತ್ತೆಂಬುದಕ್ಕೆ ಸಾಕ್ಷಿಯಾಗಿವೆ. ವೈಷ್ಣವ ಪಂಥದ ಮೂರ್ತಿಶಿಲ್ಪಗಳು ಮುರೂರು, ಕಾಗಲ್. ಊರಕೇರಿ, ಊಳ್ಳೂರುಮಠ,

ಯಾಣ, ವಾಲಗಳ್ಳಿ, ಉಂಚಗಿ, ಧಾರೇಶ್ವರ, ಕಬ್ಬರ್ಗಿ, ಹೆಬ್ಬೈಲ್, ತಲಗೋಡ, ಮಾಸೂರ, ಹೆಗಡೆ, ಮಿರ್ಜಾನ, ಕೂಜಳ್ಳಿ, ಮೊರಬಾ, ಗೋಕರ್ಣ ಗ್ರಾಮಗಳಲ್ಲಿ ದೊರೆತಿದ್ದು ಇಲ್ಲಿ ವೈಷ್ಣವ ಆರಾಧಕರಿದ್ದರೆಂಬುದರ ಸಂಕೇತವಾಗಿದೆ.

ಕುಮಟಾ ತಾಲೂಕು ಗಾಣಪತ್ಯ, ಶೈವ, ಶಾಕ್ತ, ವೈಷ್ಣವ ಪಂಥಕಷ್ಟೇ ಸೀಮಿತವಲ್ಲ. ಇಲ್ಲಿ ಜೈನಪಂಥಕ್ಕೆ ಮಾನ್ಯತೆ ಇತ್ತೆಂಬುದು ಗಮನಿಸಬೇಕಾದ ಅಂಶ. ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ, ಜೈನ ಪಂಥದ ಮೂರ್ತಿಶಿಲ್ಪಗಳು ಇಲ್ಲಿ ಕಡಿಮೆ ದೊರೆತಿವೆ. ಕಲಕೇರಿಯ ಶಾಂತಿನಾಥ, ಬಸ್ತಿಪೇಟೆಯ ಪಾರ್ಶ್ವನಾಥ ಹಾಗೂ ಜೈನ ದಾನಶಾಸನಗಳು ಈ ಭಾಗದಲ್ಲಿ ಜೈನಧರ್ಮವನ್ನು ಕಡೆಗಣಿಸಿರಲಿಲ್ಲವೆಂಬುದಕ್ಕೆ ಸಾಕ್ಷಿಯಾಗಿವೆ. ಒಟ್ಟಾರೆಯಾಗಿ ಮೂರ್ತಿಶಿಲ್ಪಕ್ಕೆ ಸಂಬಂಧಿಸಿದಂತೆ ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ ಗಾಣಪತ್ಯ, ಶೈವ, ಶಾಕ್ತ, ಮೂರ್ತಿಶಿಲ್ಪಗಳು ಹೆಚ್ಚು ಮಹತ್ವ ಪಡೆದಿತ್ತೆಂಬುದನ್ನು ಸಾಬೀತುಪಡಿಸಿವೆ.

ಅಧ್ಯಾಯ – ೬ಸಾಂಸ್ರ್ಕತಿಕ– ಸಾಮಾಜಿಕ ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳು, ಸಂಸ್ಕೃತಿ ಪದದ ಅರ್ಥ ಬಹಳ ವಿಶಾಲವಾದದ್ದು ಇದಕ್ಕೆ ಮಿತಿಯೆಂಬುದಿಲ್ಲ. ಜನರ ಜೀವನ ವಿಧಾನ, ಸಂಪ್ರದಾಯ, ಭಾಷೆ, ಧರ್ಮ, ವಾಸ್ತುಕಲೆ ಇವೆಲ್ಲವೂ ಸಾಂಸ್ಕೃತಿಕ ಶಬ್ದಕ್ಕೆ ಅನ್ವಯವಾಗುತ್ತದೆ. ಪ್ರಸ್ತುತ ಕುಮಟಾ ತಾಲೂಕಿಗೆ ಸಿಮೀತಮಾಡಿಕೊಂಡು ಇಲ್ಲಿನ ಸಾಮಾಜಿಕ ಧಾರ್ಮಿಕ, ಆರ್ಥಿಕ,ಸ್ಥಿತಿಗತಿಗಳ ಚಿತ್ರಣ ಈ ಅಧ್ಯಾಯದಲ್ಲಿ ಸೆರೆಹಿಡಿಯಲಾಗಿದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರೀಯ, ವೈಶ, ಶೂದ್ರ ನಾಲ್ಕು ವರ್ಣಗಳನ್ನು ವಿಂಗಡಿಸಿದ್ದು ಬ್ರಾಹ್ಮಣರಿಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಚ್ಚಿನ ಸ್ಥಾನಮಾನವಿದ್ದುದು ಕಾಣಸಿಗುತ್ತದೆ. ಸ್ತ್ರೀಯರಿಗೂ ಗೌರವಯುತವಾದ ಸ್ಥಾನವಿತ್ತು. " ಯತ್ರ ನಾರ್ಯಸ್ತು ಪೂಜ್ಯತೇ ತತ್ರ ದೇವತಾ" ಎಂಬ ಮಾತಿದೆ. ಕುಮಟಾ ತಾಲೂಕಿಗೆ ಸಂಬಂಧಿಸಿದಂತೆ ಹೇಳುವುದಾದರೆ ಸ್ತ್ರೀಯರು ತಮ್ಮ ಪತಿಯ ಮರಣದ ನಂತರ ಜ್ಞಾಪಕಾರ್ಥವಾಗಿ ಶಾಸನ ನಿಲ್ಲಿಸುತ್ತಿದ್ದ ಉದಾಹರಣೆಗಳಿವೆ. ಗೋಕರ್ಣದ ನಾಗವರ್ಮರಸನಿಗೂ. ಎರಡನೇ ಕಾಮದೇವರಸನಿಗೂ ಯುದ್ಧ ನಡೆದಾಗ ಮುದ್ದುಗಹಲಿತಾ ಯೋಧ ಸಾವನ್ನಪ್ಪಿದನು. ಆಗ ಈತನ ಮಡದಿ ಶಾಸನವನ್ನು ಬರೆಯಿಸಿದಳು. ಹೈವಣ್ಣರಸನ ರಾಣಿ ಚಟ್ಟಬ್ಬರಸಿ ೧೧೦೮೩ ರಲ್ಲಿ ಧಾರೇಶ್ವರ ದೇವಾಲಯಕ್ಕೆ ಮತ್ತು ಕೇಶವ ದೇವರಿಗೆ ದಾನ ನೀಡಿದ್ದರು. ಗದ್ದೆಭೂಮಿ, ತೋಟದಭೂಮಿ ಭೂಪ್ರಕಾರಗಳನ್ನು ಮಾಡಲಾಗಿದ್ದು. ಮೂಡೆಗದ್ದೆ, ಬೀಜವರಿಮೂಡೆ, ಮತ್ತಂ, ಗೇಣಿ, ಕಾಣಿಕೆ, ಬೀಳುದಂಡ, ಭೂಮಾಪನ ಪದ್ಧತಿ ಮತ್ತು ತೆರಿಗೆಯ ಶಬ್ದಗಳು ಶಾಸನಗಳಲ್ಲಿ ಕಾಣಸಿಗುತ್ತವೆ.

ವ್ಯವಸಾಯ ಮತ್ತು ಹೈನುಗಾರಿಕೆಗೆ ಗೋವನ್ನು ಹೆಚ್ಚಾಗಿ ಬಳಸುತ್ತಿದ್ದರು. ತೂಕ ಮತ್ತು ಅಳತೆಯ ಮಾಪನವಾಗಿ ಮೂಡೆ, ಸೊಲಗೆ, ಸಿದ್ದೆ , ಕೊಳಗ ಶಬ್ದಗಳು ಶಾಸನಗಳಲ್ಲಿವೆ.

ಪ್ರಾಚೀನ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಗದ್ಯಾಣ, ಹೊನ್ನು, ವರಹ, ಪಣ, ಪಗೋಡ, ಪೊನ್ನು, ಬೇಳೆ, ಜೀತಲ ಮತ್ತು ಕಾಸು ಶಬ್ದಗಳು ಇಲ್ಲಿಯ ಶಾಸನಗಳಲ್ಲಿ ಇವೆ.

ಧಾರ್ಮಿಕ ಸ್ಥಿತಿಯನ್ನು ನೋಡಿದರೆ ಇಲ್ಲಿನ ಶಾಸನಗಳು ಜೈನಧರ್ಮ, ಶೈವಧರ್ಮ, ವೈಷ್ಣಧರ್ಮಗಳು ಅಸ್ತಿತ್ವದಲ್ಲಿತೆಂಬುದನ್ನು ಸಾಬೀತುಪಡಿಸಿವೆ. ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳೊಂದಿಗೆ, ಜನರ ಬದುಕನ್ನು ರೂಪಿಸಿದ ಪ್ರಬಲ ಶಕ್ತಿಗಳಲ್ಲಿ ಧರ್ಮವೂ ಒಂದಾಗಿದೆ. ಪ್ರಾಚೀನ ಕಾಲದಿಂದಲೂ ಧಾರ್ಮಿಕತೆಗೆ ಹೆಚ್ಚಿನ ಒಲವಿದೆ. ಇಲ್ಲಿನ ಒಟ್ಟಾರೆ ಸಾಮಾಜಿಕ ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳ ಅವಲೋಕನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಧಾರ್ಮಿಕ ಸ್ಥಿತಿಗತಿಗಳ ಅವಲೋಕನದ ಜೊತೆಗೆ ಹಬ್ಬದ ಆಚರಣೆಗಳನ್ನು ಒಂದೆಡೆ ಸೆರೆಹಿಡಿದು ಸಾಂಸ್ಕೃತಿಕ ರೂಪ ನೀಡಿರುವದು ಈ ಅಧ್ಯಾಯದ ಇನ್ನೊಂದು ವಿಶೇಷತೆಯಾಗಿದೆ.

ಒಟ್ಟಾರೆ ಮಹಾಪ್ರಬಂಧದಲ್ಲಿ ಗಮನಿಸಬೇಕಾದ ಅಂಶಗಳನ್ನು ಈ ರೀತಿಯಾಗಿ ಹೇಳಬಹುದು.

೧. ಕುಮಟಾ ತಾಲೂಕಿಗೆ ಸಿಮೀತವಾಗಿ ಅಧ್ಯಯನ ಮಾಡಿದಾಗ ಇಲ್ಲಿನ ಶಾಸನಗಳು ಇಲ್ಲಿ ಭೋಜರು, ಗೋಕರ್ಣದ ಮಾಂಡಲಿಕ ಅರಸರು ಶಿಶುಗಲಿಯ ಪಾಂಡ್ಯರು, ಚಂದಾವರ ಕಾದಂಬರ, ವಿಜಯನಗರ ಅರಸರ ನೇರವಾದ ಆಳ್ವಿಕೆಗೆ ಒಳಪಟ್ಟಿತ್ತೆಂಬುದು ಸ್ಪಷ್ಟವಾಗಿದೆ.

೨. ಶಾಸನ ವೈವಿಧ್ಯತೆಯಲ್ಲಿ ಹೆಚ್ಚು ದೊರೆತವು ದಾನಶಾಸನಗಳಾಗಿವೆ. ದೇವಾಲಯಗಳ ಜೋಣೋದ್ಧಾರಕ್ಕಾಗಿ, ಧೂಪ ದೀಪ ನೈವೇದ್ಯಕ್ಕಾಗಿ, ಅನ್ನಸತ್ರಕ್ಕಾಗಿ ಕೊಟ್ಟ ದಾನಶಾಸನಗಳು ಹೆಚ್ಚಿವೆ.

೩. ದಾನಶಾಸನಗಳ ಜೊತೆಗೆ ಶಾಸನಶಿಲ್ಪ ವೈಶಿಷ್ಟ್ಯತೆಯೂ ಇನ್ನೊಂದು ಕೊಡುಗೆಯಾಗಿದೆ. ವೀರಗಲ್ಲುಗಳು ಶಾಸನಸಹಿತ ಮತ್ತು ಶಾಸನರಹಿತ ವೀರಗಲ್ಲುಗಳು, ತುರುಕಾಳಗ, ವ್ಯಕ್ತಿಪ್ರಾಣಿಗಳ ಹೋರಾಟದ ಶಿಲ್ಪ, ವೀರಸ್ತಂಭ, ಮಹಾಸತಿ ಶಿಲ್ಪ, ನಿಷಿಧಿಶಾಸನಶಿಲ್ಪಗಳು ಅಂದಿನ ಸಾಮಾಜಿಕ ಪದ್ಧತಿಯನ್ನು, ಅಂದಿನ ಸಂಸ್ಕೃತಿಯನ್ನು ಕಲೆಯನ್ನು ಬಿಂಬಿಸಿವೆ.

೪. ದೇವಾಲಯಗಳ ಅಧ್ಯಯನದಲ್ಲಿ ಗಾಣಪತ್ಯ, ಶೈವ, ಶಾಕ್ತ ದೇವಾಲಯಗಳೇ ಹೆಚ್ಚಾಗಿವೆ. ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ ಶೈವಪಂಥ ಹೆಚ್ಚು ಮಹತ್ವ ಪಡೆದಿತ್ತೆಂಬುದು ಸ್ಪಷ್ಟವಾಗಿದೆ. ಇಲ್ಲಿ ಪಂಚಾಯತನ ದೇವಾಲಯಕ್ಕೆ ಒಂದೇ ಉದಾ: ಧಾರೇಶ್ವರದ ಧಾರಾನಾಥ ದೇವಾಲಯವಾಗಿದೆ.

೫. ಮೂರ್ತಿ ಶಿಲ್ಪ ಅಧ್ಯಯನ ಮಾಡಿ ನೋಡಿದಾಗ ಮೂರ್ತಿಶಿಲ್ಪಗಳಲ್ಲಿ ವೈವಿಧ್ಯತೆಯಿದ್ದರೂ ಇಲ್ಲಿ ಶಕ್ತಿ ಒಂದೇ ಎಂಬುದು ಗಮನಿಸಬೇಕಾದ ಅಂಶವಾಗಿದೆ.

೬. ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡಿದಲ್ಲಿ ಬ್ರಾಹ್ಮಣರು ಮತ್ತು ಸ್ತ್ರೀಯರು ಹೆಚ್ಚು ಮಹತ್ವದ ಸ್ಥಾನ ಪಡೆದಿದ್ದರೆಂಬುದಕ್ಕೆ ಶಾಸನಗಳು ಸಾಕ್ಷಿಯಾಗಿವೆ. ಇಲ್ಲಿನ ಆಚರಣೆಗಳು ಇಲ್ಲಿನ ಸಾಂಸ್ಕೃತಿಕ ಹಿರಿಮೆಗೆ ಸಾಕ್ಷಿಯಾಗಿವೆ.

೭. ಆರ್ಥಿಕ ಸ್ಥಿತಿಯನ್ನು ಗಮನಿಸಿದಾಗ ಗದ್ಯಾಣ, ಹೊನ್ನು, ವರಹ, ಪಣ, ಪಗೋಡ ನಾಣ್ಯಗಳು ಚಲಾವಣೆಯಲ್ಲಿದ್ದವು.

೮. ಧಾರ್ಮಿಕ ಸ್ಥಿತಿಯನ್ನು ಅವಲೋಕಿಸಿದಾಗ ಸಮಾಜದ ಪ್ರಮುಖ ಅಂಗಗಳಲ್ಲಿ ಧರ್ಮವೂ ಒಂದಾಗಿದೆ. ಎಂಬುದಕ್ಕೆ ಶಾಸನಗಳು ದೇವಾಲಯಗಳು, ಮೂರ್ತಿಶಿಲ್ಪಗಳು ಇದಕ್ಕೆ ಸಾಕ್ಷಿಯನ್ನು ಒದಗಿಸಿವೆ. ಒಟ್ಟಾರೆಯಾಗಿ ಕುಮಟಾ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು ಸಾಂಸ್ಕೃತಿಕ ಸಂಪತ್ತಿನ ಅಪೂರ್ವ ಕೊಡುಗೆಗಳಾಗಿವೆ. ದೇವಾಲಯಗಳಲ್ಲಿ ಹೆಚ್ಚಿನ ಪಾಲಿನವು ಶೈವಪಂಥಕ್ಕೆ ಸೇರಿವೆ. ವೈಷ್ಣವ, ಜೈನ ಪಂಥವನ್ನು ಕಡೆಗಣಿಸಲಿಲ್ಲವೆಂಬುದಕ್ಕೆ ಇಲ್ಲಿನ ಶಾಸನಗಳು ದೇವಾಲಯಗಳು, ಮೂರ್ತಿಶಿಲ್ಪಗಳು ಸಾಕ್ಷಿಯಾಗಿವೆ. ದೇವರುಗಳು ಸಾಕಷ್ಟಿದ್ದರೂ ಶಕ್ತಿ ಮಾತ್ರ ಒಂದೇ ಎಂಬುದು ಸ್ಪಷ್ಟ. ಋಗ್ವೇದದಲ್ಲಿನ "ಏಕಂ ಸತ್ ವಿಪ್ರಃ ಬಹುಧಾ ವದಂತಿ" ನಾಮ ಹಲವು ಶಕ್ತಿ ಒಂದೇ ಎಂಬುದು ಸತ್ಯ. ಕುಮಟಾ ತಾಲೂಕಿಗೆ ಸಂಬಂಧಿಸಿದ ಶಾಸನಗಳು ಮತ್ತು ದೇವಾಲಯಗಳು ಸಾಂಸ್ಕೃತಿಕ ಅಧ್ಯಯನದ ಭಾಗವಾದರೂ ಪರಿಪೂರಕ ಆಕರವೆಂಬುದನ್ನು ಮರೆಯುವಂತಿಲ್ಲ. ಶಾಸನಗಳು ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳೆಲ್ಲವೂ ಇವು ಹಿಂದಿನ ಸಂಸ್ಕೃತಿಯ ಇಂದಿನ ಬಹಿರಂಗದ ಪರಿಕರಗಳಾಗಿವೆ. ಇದರ ಅಧ್ಯಯನ ಮಾಡತೊಡಗಿದರೆ ಮಾತ್ರ ಇದರ ಬೆಳಕಿನ ಅರಿವಾಗುತ್ತದೆ. ಬೆಳಕಿನ ಅರಿವಿನ ಸತ್ವದಿಂದ ಸತ್ಯವನ್ನು ಕಂಡುಕೊಳ್ಳುವ ಪ್ರಯತ್ನ ಇದಾಗಿದೆ. ಶಾಸನಗಳು, ದೇವಾಲಯಗಳುಮೂರ್ತಿಶಿಲ್ಪಗಳ ವ್ಯಾಪ್ತಿ ಸಾಕಷ್ಟಿದ್ದರೂ, ಪ್ರಸ್ತುತ ಅಧ್ಯಯನವನ್ನು ಕುಮಟಾ ತಾಲೂಕಿಗೆ ಸಿಮೀತ ಮಾಡಿಕೊಂಡು ವ್ಯವಸ್ಥಿತ ಕ್ಷೇತ್ರ ಅಧ್ಯಯನವನ್ನು ಮಾಡಿದ ಪ್ರಯತ್ನ ಇದಾಗಿದೆ.

೯. ಕುಮಟಾ ತಾಲೂಕಿಗೆ ಸಂಬಂಧಿಸಿದಂತೆ ಒಟ್ಟೂ ೨೭೧ ಶಾಸನಗಳು ದೊರೆತಿದ್ದು ಅವುಗಳಲ್ಲಿ ೩ ಶಾಸನಗಳು ಹೊಸದಾಗಿವೆ. ದೊರೆತ ೪ ಶಾಸನಗಳಲ್ಲಿ ೩ ಶಾಸನಗಳು ಚಂದಾವರ ಕಾದಂಬರ ಕಾಲಕ್ಕೆ ಸೇರಿವೆ. ಇಲ್ಲಿನ ದಾನಶಾಸನಗಳು, ವೀರಗಲ್ಲುಶಾಸನಗಳು, ತುರುಗೋಳಶಾಸನ, ಮಾಸ್ತಿಗಲ್ಲು ಕುಮಟಾ ತಾಲೂಕಿನ ಶಾಸನಗಳ ವೈವಿಧ್ಯತೆ ಮತ್ತು ಅಂದಿನ ಕಲಾಪರಂಪರೆಯನ್ನು ಬಿಂಬಿಸುತ್ತವೆ.

'ಬೆಲ್ಲದ ಸಿಹಿ ಸವಿದವನೇ ಬಲ್ಲ' ಎಂಬ ನಾಣ್ನುಡಿಯಂತೆ, ಇದರ ಅಧ್ಯಯನ ಮಾಡ ತೊಡಗಿದರೆ ಈ ಸತ್ವದ ಬೆಳಕಿನ ಮಹತ್ವ ಅರಿವಾಗುತ್ತದೆ. ಹನಿ ಹನಿ ಕೂಡಿ ಹಳ್ಳ ಎಂಬಂತೆ ಇಲ್ಲಿನ ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪಗಳು,

ಸಂಶೋಧಕರಿಗೆ ಆಕರಗಳನ್ನು ಒದಗಿಸಿವೆ. ಪ್ರಕಟಿತ ಮಾಹಿತಿಯೊಂದಿಗೆ ಕ್ಷೇತ್ರಕಾರ್ಯ ಮಾಡಿ ಈ ಆಕರಗಳನ್ನು ವ್ಯವಸ್ಥಿತ ರೂಪದಲ್ಲಿಟ್ಟು ಇವುಗಳ ಸತ್ವವನ್ನು ಕಂಡುಕೊಳ್ಳುವ ಪ್ರಯತ್ನ ಈ ಮಹಾಪ್ರಬಂಧದ್ದಾಗಿದೆ.

ಅನುಬಂಧ

ಗ್ರಂಥಸೂಚಿ

ಲೇಖಕರು	ಪ್ರಕಟನಾ ವರ್ಷ	ಕೃತಿಯ ಹೆಸರು ಮತ್ತು ಪ್ರಕಾಶನ
ಅಚ್ಯುತ್ ಶ್ರೀಧರ ಕಾಮತ	೨೦೦೩	"ದೇವಕಿಕೃಷ್ಣ ಸಂಸ್ಥಾನದ ಚರಿತ್ರೆ", ಪ್ರಕಾಶಕರು ದೇವಕಿಕೃಷ್ಣ ಪ್ರತಿಷ್ಠಾನ ಮಂಡಳಿ, ಕಾಗಲ.
ಆನಂದ ಭೈರಾಪುರ	೨೦೦೭	"ರಾಯಲ್ ಸೀಮೆಯ ವಿಜಯನಗರ ಕಾಲದ ದೇವಾಲಯಗಳು", ವಾಸ್ತು ಮತ್ತು ಮೂರ್ತಿಶಿಲ್ಪಗಳ ಅಧ್ಯಯನ (ಅಪ್ರಕಟಿತ ಪಿಎಚ್, ಡಿ. ಮಹಾಪ್ರಬಂಧ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಕಲ್ಬುರ್ಗಿ ಎಂ.ಎಂ	೧೯೮೦	"ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು", ಸಪ್ನಾ ಬುಕ್ ಹೌಸ, ಬೆಂಗಳೂರು.
ಕಡಪಟ್ಟಿ ಎಂ.ಎನ್	೨೦೦೫	"ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ" (ಪ್ರಕಟಿತ ಮಹಾಪ್ರಬಂಧ) ಇತಿಹಾಸ ಸಂಶೋಧನಾ ಮಂಡಲ ಧಾರವಾಡ
ಕುರಗುಂದ ಟಿ. ಪಂಕಜಾಕ್ಷ	೨೦೦೬	"ಶಿಲ್ಪ ಸೌಂದರ್ಯ", ಕರ್ನಾಟಕ ಶಿಲ್ಪಕಲಾ ಅಕಾಡಮಿ, ಬೆಂಗಳೂರು.
ಕೆ.ಬಿ ಶಿವತಾರಕ	೨೦೦೧	ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಕೆಳದಿ ಗುಂಡಾ ಜೋಯಿಸ್ (ಪ್ರಧಾನ.ಸಂ) ಕೆಳದಿ ವೆಂಕಟೇಶ ಜೋಯಿಸ್ (ಸಹಾಯಕ. ಸಂ)	೨೦೦೮	ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ "ಗೋಕರ್ಣ ಇತಿಹಾಸ ಶಾಸನಗಳು" ಭಾಗ ೧, ಕರ್ನಾಟಕ. ರಾಜ್ಯಪತ್ರಗಾರ ನಿರ್ದೇಶನಾಲಯ, ಬೆಂಗಳೂರು.
	೨೦೦೯	"ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ" ಗೋಕರ್ಣ ಇತಿಹಾಸ ಶಾಸನಗಳು" ಭಾಗ ೨, ಕರ್ನಾಟಕ. ರಾಜ್ಯಪತ್ರಗಾರ ನಿರ್ದೇಶನಾಲಯ, ಬೆಂಗಳೂರು.
ಕೊಪ್ಪ ಎಸ್.ಕೆ	೧೯೯೦	"ತರ್ದವಾಡಿ ನಾಡು ಒಂದು ಅಧ್ಯಯನ", ಪ್ರತಿಭಾ ಪ್ರಕಾಶನ ಸಿಂದಗಿ ರೋಡ, ಇಂಡಿ.
ಗಣಪತಿ ದತ್ತಾತ್ರಯ ಭಟ್	೧೯೯೮	"ಕುಂಭೇಶ್ವರ ಪುರಾಣ", ಪ್ರಕಾಶಕರು, ಗಣಪತಿ ದತ್ತಾತ್ರಯ ಭಟ್.

ಗಣಪತಿ ಗೌಡ ಎಸ್	೨೦೦೮	"ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು" ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ.
ಗುರುವ ಆರ್. ಎನ್	೧೯೭೫	"ಕಾರವಾರ ಜಿಲ್ಲೆಯ ಶಾಸನಗಳು", ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಗೆಳೆಯರ ಬಳಗ	೨೦೧೧	"ಗೋಕರ್ಣ ಸ್ಥಳಪುರಾಣ", ಸಂಪಾದನ ಪ್ರಕಾಶನ, ಗೆಳೆಯರ ಬಳಗ ರಥಬೀದಿ ಗೋಕರ್ಣ.
ಗೋಪಾಲರಾವ್ ಎಚ್.ಎಸ್	೧೯೯೩	"ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ", ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
ಚಿದಾನಂದ ಮೂರ್ತಿ ಎಂ.	೧೯೭೯	"ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ಮೈಸೂರು ವಿಶ್ವವಿದ್ಯಾಲಯ , ಮೈಸೂರು.
	೧೯೮೪	"ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು", ಬೆಂಗಳೂರು, ವಿಶ್ವವಿದ್ಯಾಲಯ , ಬೆಂಗಳೂರು.
	೨೦೦೮	"ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ಬೆಂಗಳೂರು ವಿಶ್ವವಿದ್ಯಾಲಯ.
ತಿಪ್ಪೇರುದ್ರ ಸ್ವಾಮಿ.ಎಚ್	೧೯೯೭	"ಕರ್ನಾಟಕ ಸಂಸ್ಕೃತಿ ಸಮೀಕ್ಷೆ", ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
ದೇಸಾಯಿ ಪಿ.ಬಿ	೧೯೮೨	"ಕನ್ನಡ ನಾಡಿನ ಶಾಸನಗಳು" ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ನರಸಿಂಹ ಮೂರ್ತಿ ಎ.ವಿ	೧೯೭೩	"ಕರ್ನಾಟಕ ಶಾಸನ ಸಂಪತ್ತು", ಐ.ಬಿ.ಎಚ್. ಪ್ರಕಾಶನ ಬೆಂಗಳೂರು.
ನಾಯಕ ಹಾ.ಮಾ (ಸಂ)	೧೯೭೯	"ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ", ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
ಪರಮಶಿವ ಮೂರ್ತಿ ಡಿ.ವಿ.	೧೯೯೯	"ಕರ್ನಾಟಕ ಶಾಸನಶಿಲ್ಪ" ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಪ್ರಭಾಕರ ಎಂ.ಎನ್	೨೦೦೦	"ದೇವಾಲಯ ವಾಸ್ತು ಚಂದಿಕೆ", ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಪರಮೇಶ್ವರ ವಿಷ್ಣು ಶಾನಭಾಗ	೨೦೧೦	"ಉಂಚಗಿ ದೇವರು ನಿಂತ ನೆಲೆ", ನಿಸರ್ಗ ಪ್ರಕಾಶನ, ಹುಳಿಮಾವು ಬೆಂಗಳೂರು.
ಪಂಚಮುಖಿ ಆರ್. ಎಸ.	೧೯೬೭	ಕರ್ನಾಟಕ ಇತಿಹಾಸ (ಸಂ ೧) ಪವನಾಮ ಸದನ ಮಾಳಮಡ್ಡಿ, ಧಾರವಾಡ.

ಭಟ್‌ಸೂರಿ ಕೆ. ಈ.	೧೯೯೬	"ಧಾರನಾಥ ದೇವಾಲಯ" ಧಾರೇಶ್ವರ, ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
" (ಸಂ)	೨೦೧೧	ಶಾಸನ ಅಧ್ಯಯನ ಸಂ ೮, ಸಂಚಿಕೆ ೨, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
" (ಸಂ)	೨೦೧೬	"ಕರ್ಕಿಯ ಐತಿಹಾಸಿಕ ಪರಂಪರೆ" ಹವ್ಯಕ ಗ್ರಾಮ ಸಂಸ್ಥೆ, ಕರ್ಕಿ.
ಮಮತಾ ಮಚಗುಪ್ಪಿ	೧೯೯೯	ಕುಮಟಾ ತಾಲೂಕಿನ ಶಾಸನಗಳು ಒಂದು ಸಾಂಸ್ಕೃತಿ ಅಧ್ಯಯನ (ಕಿರುಪ್ರಬಂಧ, ಕ.ವಿ.ವಿ ಧಾರವಾಡ).
ಮಂಜುನಾಥ ಭಾಗ್ವತ್ ಹೊಸ್ತೋಟ	೨೦೧೨	"ಭೈರವ ಕ್ಷೇತ್ರ ಯಾಣ", ಪ್ರಕಾಶಕರು ಭೈರವೇಶ್ವರ ಟ್ರಸ್ಟ ಹಾಗೂ ಆಡಳಿತ ಮಂಡಳಿ, ಯಾಣ.
ರಾಮಚಂದ್ರರಾವ್ ಎಸ್. ಕೆ.	೧೯೭೫	"ಮೂರ್ತಿಶಿಲ್ಪದ ನೆಲೆ" ಬೆಂಗಳೂರು ವಿಶ್ವವಿದ್ಯಾಲಯ.
ರಾಮಚಂದ್ರರಾವ್‌ಎಸ್.ಕೆ.	೧೯೯೪	"ಗುಡಿ ಜನರ ಜೀವನಾಡಿ" ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
ರಹಮತ್ ತರಿಕೇರೆ	೧೯೯೯	"ಕರ್ನಾಟಕ ಕನ್ನಡಿ", ಕನ್ನಡ ವಿಶ್ವವಿದ್ಯಾಲಯ, ಹಂಪಿ.
ರಂಜನಾ ನಾಯ್ಕ	೨೦೧೧	ಗೋಕರ್ಣದ ಒಂದು ಸಾಂಸ್ಕೃತಿಕ ಅಧ್ಯಯನ (ಕಿರು ಪ್ರಬಂಧ) ಮಹಿಳಾ ವಿಶ್ವವಿದ್ಯಾಲಯ, ಬಿಜಾಪೂರ.
ವಿ. ಎಸ. ಕಾಮತ	೨೦೦೧	"ಕಾಂಚಿಕಾಂಬಾ ಸ್ಥಳ ಪುರಾಣ" ಪ್ರಕಾಶಕರು ವಿ.ಎಸ್.ಕಾಮತ, ಬಾಡ.
ವೆಂಕೋಬರಾವ್. ಬಿ	೧೯೫೯	"ವಿಗ್ರಹರಾಧನೆಯ ವಿಗ್ರಹಗಳು ಶಿಲ್ಪಕಲಾ ಪ್ರಪಂಚ" ಕರ್ನಾಟಕ ಸಂಘ, ಬೆಂಗಳೂರು.
ವೆಂಕಟರಂಗೋ ಕಟ್ಟಿ	೧೯೮೪	"ಧಾರವಾಡ, ಬೆಳಗಾಂವ, ಬಿಜಾಪುರ, ಕಾನಡಾ, ಜಿಲ್ಲೆಗಳ ಗ್ಯಾಜಿಟಿಯರ್ "ಏಶಿಯನ್ ಎಜ್ಯುಕೇಶನ ಸರ್ವಿಸಸ್, ನವದೆಹಲಿ.
ವೆಂಕಟೇಶ ಜೋಯಿಸ್ ಕೆ.ಜಿ.	೧೯೯೬	"ವಿಜಯನಗರ ಚರಿತ್ರೆಯಲ್ಲಿ ಕೆಳದಿಯ ಅರಸರು", ವಸ್ತು ಸಂಗ್ರಹಾಲಯ, ಸಂಶೋಧನಾ ಕೇಂದ್ರ ಮೈಸೂರು.

ಸತೀಶ ಕೆ.	೨೦೦೪	"ವಿಜಯನಗರ ಕಾಲದ ಶೈವ ದೇವಾಲಯಗಳು" (ಅಪ್ರಕಟಿತ ಪಿಎಚ್, ಡಿಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಶಾನಭಾಗ ಎಂ. ಆರ್	೧೯೮೫	"ಕಾರವಾರ ಜಿಲ್ಲೆಯ ಶಾಸನಗಳು" ಮಹಾಮಯಾ ಪ್ರಕಾಶನ ಕುಮಟಾ.
ಶಾಂತಿರಾಜ ಶಾಸ್ತ್ರಿ. ಎ. (ಸಂ)	೧೯೮೧	ಜಿನಸೇನಾಚಾರ್ಯ, ಗುಣಭದ್ರಾಚಾರ್ಯ, ವಿರಚಿತಂ ಮಹಾಪುರಾಣ, ಸಂ. ೧, ಪರ್ವಸಂ ೩೧
ಸ್ವಾಮಿ ಹರ್ಷಾನಂದ(ಮೂಲ)	೨೦೦೯	"ಹಿಂದೂ ದೇವದೇವಿಯರು", ರಾಮಕೃಷ್ಣ ಆಶ್ರಮ ಯಾದವಗಿರಿ, ಮೈಸೂರ.
ರಾಮಚಂದ್ರ ಸ್ವಾಮಿ ಹೆಚ್. (ಅನು)		
ಶಾಸ್ತ್ರಿ ಜಿ. ಜಿ	೨೦೧೨	"ಸ್ವಯಂಭೂ ವಿನಾಯಕ ದೇವರು" ಊರಕೇರಿ, ಪ್ರಕಾಶಕರು ಜಿ.ಜಿ .ಶಾಸ್ತ್ರಿ
ಶ್ರೀನಿವಾಸ ಪಾಡಿಗಾರ	೧೯೮೯	"ಬಾದಾಮಿ ಮತ್ತು ವೈಷ್ಣವಧರ್ಮ" ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಶ್ರೀನಿವಾಸ ರಿತ್ತಿ (ಸಂ.)	೨೦೦೦	"ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ" ಪ್ರಾಚ್ಯವಸ್ತು ಮತ್ತುಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
ಶೀಲಾಕಾಂತ ಪತ್ತಾರ	೨೦೦೦	"ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಅಧ್ಯಯನ", ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಸುಂದರ. ಅ. (ಸಂ)	೧೯೯೭	"ಕರ್ನಾಟಕ ಚರಿತ್ರೆ" (ಸಂ. ೧) ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ~~ಮೈಸೂರು~~ ಹಂಪಿ
ಸುಬ್ರಾಯ ಶಂಕರ. ಶೆಟ್ಟಿ		"ಗೋಕರ್ಣ ಕ್ಷೇತ್ರ ಮಹಾತ್ಮೆ", ಪ್ರಕಾಶಕರು,ಸುಬ್ರಾಯ ಶಂಕರ ಶೆಟ್ಟಿ
ಷೇಕ ಅಲಿ. ಬಿ. (ಸಂ)	೧೯೯೭	ಕರ್ನಾಟಕ ಚರಿತ್ರೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಶೆಟ್ಟಿ ಎಸ್ .ಡಿ.	೧೯೯೯	"ಜೈನ ಬಸದಿಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಶೇಷಾಶಾಸ್ತ್ರಿ .ಆರ್.	೧೯೮೨	"ಕರ್ನಾಟಕದ ವೀರಗಲ್ಲುಗಳು", ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
ಹಿರೇಮಠ ಎಸ್.ಎಂ.	೨೦೦೫	"ಶಾಸನ ಪರಿಭಾಷೆ", ವಿದ್ಯಾನಿಧಿ ಪ್ರಕಾಶನ, ಗದಗ.

English Books

Dhaky. M.A.	1977	Indian Temple Farmus In Karnataka Inscription And Architecture, New Dehli.
Gopinath Rao. T. A.	1968	Elements of Hindu Iconography Vol I-II, Edition II(Dehli Motilal Banarasidas)
Ganapati Gowda	1993	The Minor Dynasties of Uttara Kannada Region (An unpublished Ph.D. Thesis) Karnatak University, Dharwad.
Kamath Suryanath	1985	Uttara Kannada District Gazetteer, Bangalore.
K.G.Krishna	1889	Uttankita Sanskirit Vidya Aranya, Epigraphyphs, Vol. II, ASI Delhi.
Rama Rao.M.		Saivite deities of Andhradesa
Sircar D.C.	1965	Select Inscription Bearing on Indian History and Civilization Vol .I, University of Calcutta, Calcutta.
Shetty S.R.	1990	Banavasi Through the Ages (Unpublished Ph.D Thesis) Karnataka University, Dharwad

INSCRIPTIONS VOLUMES/JOURNALS

1. Corpus of Kadamba Inscriptions Vol-I
2. Epigraphia Indica Volumes . XXIII, XXVIII, XXIX, XXXI
3. Karnataka Inscriptions Volumes, I, III,V, VI,VIII
4. South Indian Inscriptions Volumes , 15,30
5. The Descriptive Lists Of Stone & Copper Plates, Inscriptions Examined by KRI During the year 1940-41 to 1942-43

ANNUAL REPORTS

1. Annual Reports on Indian Epigraphy, Mysore, 1939-40, 1942-43
2. Mysore Archaeological Report, 1928
3. Annual Report of south Indian Epigraphy-1939-40, 1940-41, 1945-46, 1947-48.

PROGRESS REPORT

Progress Reports Of Kannada Research In Bombay Province 1941-42.

ENGLISH JOURNALS

Journal of Karnataka University of Social science

ಕನ್ನಡ ನಿಯತಕಾಲಿಕೆಗಳು

೧. ಕರ್ನಾಟಕ ಭಾರತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಸಂ.೮/೨, ಸಂ.೨೧/೩, ಸಂ.೨೩/೩, ಸಂ.೨೪/೧, ಸಂ.೨೪/೩,ಸಂ.೨೪/೩/೪

೨. ಮಾನವಿಕ ಭಾರತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಸಂ.೧/೨, ಸಂ.೪/೩–೪

೩. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಬೆಂಗಳೂರು

೪. ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಮಂಡಳಿ, ಬೆಂಗಳೂರು ಸಂ.೫, ಸಂ.೨೦

೫. ಶಾಸನ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಸಂ.೮/೨, ಸಂ.೧/೨

ನಕಾಶೆಗಳು

೧. ಕರ್ನಾಟಕ ರಾಜ್ಯದ ನಕಾಶೆ

೨. ಉತ್ತರ ಕನ್ನಡ ಜಿಲ್ಲಾ ನಕಾಶೆ

೩. ಕುಮಟಾ ತಾಲೂಕಿನ ನಕಾಶೆ

ಕರ್ನಾಟಕದ ನಕ್ಷೆ




ಉ
ಬೀದರ
ಗುಲ್ಬರ್ಗಾ
ವಿಜಯಪುರ
ಯಾದಗಿರಿ
ಬಾಗಲ ಕೋಟೆ
ರಾಯಚೂರ
ಬೆಳಗಾವಿ
ಗದಗ
ಕೊಪ್ಪಳ
ಧಾರವಾಡ
ಬಳ್ಳಾರಿ
ಉತ್ತರ ಕನ್ನಡ
ಹಾವೇರಿ
ದಾವಣಗೇರೆ
ಶಿವಮೊಗ್ಗ
ಚಿತ್ರದುರ್ಗ
ಉಡುಪಿ
ಚಿಕ್ಕಮಂಗಳೂರು
ತುಮಕೂರು
ಚಿಕ್ಕಬಳ್ಳಾಪುರ
ಬೆಂಗಳೂರು ಗ್ರಾಮಾಂತರ
ಕೋಲಾರ
ಹಾಸನ
ದಕ್ಷಿಣ ಕನ್ನಡ
ಬೆಂಗಳೂರು ನಗರ
ಮಂಡ್ಯ
ರಾಮನಗರ
ಕೊಡಗು
ಮೈಸೂರು
ಚಾಮರಾಜನಗರ


ಉತ್ತರ ಕನ್ನಡ ಜಿಲ್ಲೆ



ಕುಮಟಾ ತಾಲೂಕ ನಕ್ಷೆ (ಉತ್ತರ ಕನ್ನಡ ಜಿಲ್ಲೆ)




ತಲನಕ್ಷೆಗಳು




ಆದಿ ದಾರನಾಥ ದೇವಾಲಯದ ನಕ್ಷೆ
(ಕೃಪೆ–ಕೆ.ಜಿ. ಭಟ್‌ಸೂರಿ)




ಆದಿ ದಾರನಾಥ ದೇವಾಲಯದ ಕೈಪಿಡಿ
(ಕೃಪೆ–ಕೆ.ಜಿ. ಭಟ್‌ಸೂರಿ)




ಗೋಕರ್ಣ ಮಹಾಭಲೇಶ್ವರ ದೇವಾಲಯದ ನಕ್ಷೆ




ದಾರನಾಥ ದೇವಾಲಯದ ನಕ್ಷೆ
(ಕೃಪೆ – ಕೆ.ಜಿ. ಭಟ್‌ಸೂರಿ)



ದಾರನಾಥ ದೇವಾಲಯದ
ಸಭಾಮಂಟಪದಲ್ಲಿನ ಸ್ತಂಭಗಳ ಮಾದರಿ





ದಾರನಾಥ ದೇವಾಲಯದ ಅಧಿಷ್ಠಾನ
(ಕೃಪೆ – ಕೆ.ಜಿ. ಭಟ್‌ಸೂರಿ)



ದಾರನಾಥ ದೇವಾಲಯದ ಔನ್ನತ್ಯ ನಕ್ಷೆ - ಪಶ್ಚಿಮಾಭಿಮುಖವಾಗಿ
(ಕೃಪೆ - ಕೆ.ಜಿ. ಭಟ್‌ಸೂರಿ)

ಗೋಕರ್ಣ ಮಹಾಭಲೇಶ್ವರ ದೇವಾಲಯದ ಔನತ್ಯ ನಕ್ಷೆ





ಶ್ರೀ ಮಹಾ ಗಣಪತಿ ದೇವಾಲಯದ ಔನತ್ಯ ನಕ್ಷೆ

ಅಪ್ರಕಟಿತ ಶಾಸನಗಳು

೧. ವೀರಗಲ್ಲು ಶಾಸನ

ಗ್ರಾಮ : ಹೊಸಾಡ

ಸ್ಥಳ : ಗೋಶಾಲೆ ಸಮೀಪ

ಲಿಪಿ ಮತ್ತು ಭಾಷೆ : ಕನ್ನಡ

ಕಾಲ : ಕ್ರಿ.ಶ. ೧೩ನೇ ಶತಮಾನ

೧[ಓಂ] ಸ್ವಸ್ತಿ ಸಮಧಿಗತ ಪಂಚಮಹಾಸ
೨ಬುದ ಮಹಾಮಂಡಲೇಶ್ವರಂ ಬ
೩ನವಾಸಿಪುರ ವರಾಧೀಸ್ವರಂ ಜಯ
೪ ಂತಿ ಮಧುಕೇಶ್ವರದೇವರಲಬ್ಧವರಪ್ರಸಾದ
೫ರುಂ । ಸಹಜಮ್ರಿಗಮದಾಮೋ
೬ ದರುಂ ಕಾದಂಬರಾಯಂ[ಶ್ರೀಮತ್]
೭ವೀರಕಾವದೇವರ್ಸ ಶ್ರೀಪಾದಪ–
೮ ದ್ಮೋಪಜೀವಿಯೆನಿಹ[ಥಾ?]
೯ [ಕ್ರಿ]ಯ ನಾಯ್ಕ ಕಲಿಗಳಂಕು
೧೦ ಶಂ ರಾಯ ಕಟಕ –[ವೀ]
೧೧ [ವಿ]ಜಂಗುಳಿನಾಯಕರ ಗಂಡ
೧೨ ೦ ದಾಳಗೌಡನ ಬೊ[ಂಥುನ?]
೧೩ ಪಾಳ[ಗೌಡ]ಕನೊಡನೆ ಕಾದಿ
೧೪ ದ ವೀರಗಂಬ ॥ ಮಂಗಳಮಹಾ
೧೫ಶ್ರೀ

೨. ವೀರಗಲ್ಲು ಶಾಸನ

ಗ್ರಾಮ : ಹಳಕಾರ (ಹೆಗಡೆ)

ಸ್ಥಳ : ಲಕ್ಷ್ಮಣ. ಈಶ್ವರ ಪಟಗಾರರವರ ತೆಂಗಿನ ತೋಟದಲ್ಲಿದೆ.

ಲಿಪಿ ಮತ್ತು ಭಾಷೆ : ಕನ್ನಡ

ಕಾಲ : ಕ್ರಿ.ಶ. ೧೩ನೇ ಶತಮಾನ

೧ [ಸ್ವಸ್ತಿ] ಸಮಧಿಗತ ಪಂಚಮಹಾಸಬ್ದ ಮಹಾಮಂಡಳೇಶ್ವರ ಬನವಾಸಿ ಪುರವರಾಧೀಶ್ವರ

೨ ಜಯಂತಿ ಮಧುಕೇಸ್ವರ ದೇವರ ದಿವ್ಯ ಶ್ರೀಪಾದಪದ್ಮಾರಾಧಕ ಪರ

೩ ಶ್ರೀಗೋಕರ್ಣ ಮಹಾಬಲದೇವರ ದಿವ್ಯ ಶ್ರೀಪಾದಪದುಮಾರಾಧಕ ಗಂಡರಡಾವ

೪ ಣಿ... ನ [ನಿಗಳಂಕ]ಮಲ್ಲ ಸತೃಪ ಕಲಿಗಿರಾಯ ಮುಖದಕಯಿ ರಾ

೫ ಯ_ ಶ್ರೀಕಾದಾಂಬ ಚಕ್ರವರ್ತಿ ಕಲಿಗಳಂಕುಸ

೬. ವೀರಕಾವದೇವರಸವಿಜಯರಾಜ್ಯಾಭ್ಯುದಯ ೪೮ನೇಯ [ಧಾನ್ಯ] ಸಂತ್ಸರದ ಜೇಷ್ಠಮಾಸ ಆ[ಷಾಢ*]ಬ

೭. ಹುಳ ೧೦ ವಡ್ಡವಾರದಲು ಕಾವದೇವರ ಮನಂಯಸಕವವಳ್ಳಿಯ ... ಯ

೮. ನೂ... ಕಾವರಸ[ಚಿಕ್ಕನಾಯಕ] ಆಯ..ಕಾದಿ

೩. ವೀರಗಲ್ಲು ಶಾಸನ

ಗ್ರಾಮ : ದಿವಗಿ

ಸ್ಥಳ : ಫರ್ನಾಂಡಿಸ್ ಅವರ ತೋಟದಲ್ಲಿದೆ

ಲಿಪಿ ಮತ್ತು ಭಾಷೆ : ಕನ್ನಡ

ಕಾಲ : ಕ್ರಿ.ಶ. ೧೨ನೇ ಶತಮಾನ

೧ ನಮಸ್ತುಂಗ ಶಿತ ಸ್ತೂಂಗ ಚ್ಯಾಂದ್ರ ಸವರತದ ತ್ರಯ ಲೋಕ್ಯ ನಗರಾರಂಭ ಮೂಲಸ್ತಂಭಯ ಸಂ

೨ .. ಮನ್ಯ ಚ ನಾರಾಯಣ ... ಯ ಕ

೩ . ಲು ...

೪ ರ ಕಲ್ಲ .. ನಳರುರಾಯವಾ

೫ [ಭಾಡ?] ಂಬವರಾಜತ್ತವೀರರ ಮನ್ಯದ[ಭೈರವ?]

೬ ಆ ದಂಡುನ ಬನಾವತಿ ಕಿತಳಿಯ [ನಾಯಕರು]

೭ ಬನನಹನುಪರಾಯ ವಾರ್ಗಮ..

೮ ..ಮಂಗಳ

ಛಾಯಾಚಿತ್ರಗಳ ಪಟ್ಟಿ

೨೯. ಗೋಕರ್ಣದ ಮಹಾಬಲೇಶ್ವರ ದೇವಾಲಯದ ಸಭಾಂಗಣದಲ್ಲಿರುವ ಮಹಿಷಾಸುರಮರ್ದಿನಿ
೩೦. ಕತಗಾಲದ ಮಹಿಷಾಸುರಮರ್ದಿನಿ
೩೧. ಗೋಕರ್ಣದ ಸ್ಮಶಾನಕಾಳಿ
೩೨. ಕಲ್ಲಬ್ಬೆಯ ದುರ್ಗಿ
೩೩. ಧಾರೇಶ್ವರದ ಸರಸ್ವತಿ
೩೪. ಹೆಗಡೆ ಗೋಪಾಲಕೃಷ್ಣ
೩೫. ಗೋಕರ್ಣದ ವೆಂಕಟ್ರಮಣ
೩೬. ಮೊರ್ಸೆ ವಿಷ್ಣು
೩೭. ಮೂರುರು ವಿಷ್ಣು
೩೮. ಊಳ್ಳುರು ಮಠದ ವಿಷ್ಣು
೩೯. ಕುಮಟಾದ ಶಂಕರನಾರಾಯಣ
೪೦. ಯಾಣದ ಗೋಪಾಲಕೃಷ್ಣ
೪೧. ಕೋಡಕಣಿ ನಂದಿ
೪೨. ಬಂಗಣೆ ನಂದಿ
೪೩. ಕತಗಾಲ ನಿಷಿಧಿಗಲ್ಲು
೪೪. ಬಸದಿಗದ್ದೆಯ ಶಾಂತೇಶ್ವರ ಸ್ವಾಮಿ
೪೫. ನುಶಿಕೋಟೆ ತಾಮ್ರಪಟ ಶಾಸನ
೪೬. ವಾಲಗಳ್ಳಿ ಆದೇಶ್ವರ
೪೭. ದೀವಗಿ ವೀರಗಲ್ಲು
೪೮. ಸಾಂತಗಲ್ ವೀರಗಲ್ಲು
೪೯. ಬಂಗಣೆ ಮಹಾಸತಿಗಲ್ಲು
೫೦. ಹಳಕಾರ ವೀರಗಲ್ಲು
೫೧. ಹನೇಹಳ್ಳಿ ಸತಿಗಲ್ಲು
೫೨. ಕೋನಳ್ಳಿಯ ವೀರಗಲ್ಲು ಶಾಸನ
೫೩. ಹೊಸಾಡ ವೀರಗಲ್ಲು ಶಾಸನ
೫೪. ಹರವಳ್ಳಿ ವೀರಗಲ್ಲು
೫೫. ಶಿರಗುಂಜಿ ಸತಿಗಲ್ಲು
೫೬. ಸಾಂತಗಲ್ಲು ವೀರಗಲ್ಲು



ಗೋಕರ್ಣ ಮಹಾಬಲೇಶ್ವರ ದೇವಾಲಯದ ಅಧಿಷ್ಠಾನ ಮತ್ತು ಭಿತ್ತಿ



ಗೋಕರ್ಣ ಮಹಾಬಲೇಶ್ವರ ದೇವಾಲಯದ ಹಿಂಭಾಗದ ನೋಟ



ಹಿರೇಗುತ್ತಿ ಮಹಾಲಿಂಗೇಶ್ವರ ದೇವಾಲಯದ ಹಿಂಭಾಗದ ನೋಟ



ಗೋಕರ್ಣದ ಭರತ ದೇವಾಲಯದ ಮುಂಭಾಗದ ನೋಟ



ಹಿರೇಗುತ್ತಿ ಮಹಾಲಿಂಗೇಶ್ವರ ದೇವಾಲಯದ ಮುಂಭಾಗ



ಹೆಬ್ಬೈಲ ಲಕ್ಷ್ಮಿನಾರಾಯಣ ದೇವಾಲಯದ ಹಿಂಭಾಗ



ಕುಮಟಾ ಶಾಂತೇರಿ ಕಾಮಾಕ್ಷಿ ರಾಮನಾಥ ದೇವಾಲಯದ ಮುಂಭಾಗ



ಕುಮಟಾ ಕಾಮಾಕ್ಷಿ ದೇವಾಲಯದ ಮುಂಭಾಗ



ಹೆಗಡೆ ಶಾಂತಿಕಾ ಪರಮೇಶ್ವರಿ ದೇವಾಲಯದ ಹಿಂಭಾಗ



ಕುಮಟಾ ಶಾಂತಿಕಾ ಪರಮೇಶ್ವರಿ ದೇವಾಲಯದ ಮುಂಭಾಗ



ಕುಮಟಾ ಮಹಾಲಸಾ ನಾರಾಯಣಿದೇವಾಲಯದ ಅಧಿಷ್ಠಾನ ಮತು ಭಿತಿ

ಮೂರ್ತಿಶಿಲ್ಪಗಳು



ಗೋಕರ್ಣದ ದ್ವಿಭುಜ ಗಣೇಶ



ದಿವಳ್ಳಿ ಗಣಪತಿ



ಕತಗಾಲ ಗಣಪತಿ



ಬಂಗಣೆ ಗಣಪತಿ



ಯಾಣ ಗಣಪತಿ



ಗೋಕರ್ಣದ ಆದಿಗೋಕರ್ಣೇಶ್ವರ



ಅತ್ತಿಬೆಟ್ಟು ಗಣಪತಿ



ಗೋಕರ್ಣದ ಕುಂಭಕರ್ಣೇಶ್ವರ



ಯಾಣದ ಭೈರವೇಶ್ವರ



ಗೋಕರ್ಣದ ಆತ್ಮಲಿಂಗ



ದೀವಳ್ಳಿಯ ರಾಯೇಶ್ವರ



ವಾಲಗಳ್ಳಿಯ ಮಲ್ಲಿಕಾರ್ಜುನ



ಗೋಕರ್ಣದ ಋಗ್ವೇಶ್ವರ



ಗೋಕರ್ಣದ ಸೂರ್ಯನಾರಾಯಣ



ಗೋಕರ್ಣದ ಪಾರ್ವತಿ



ಗೋಕರ್ಣದ ಭದ್ರಕಾಳಿ



ಹೆಗಡೆ ಶಾಂತಿಕಾ ಪರಮೇಶ್ವರಿ



ಗೋಕರ್ಣದ ಮಹಾಬಲೇಶ್ವರ ದೇವಾಲಯದ ಸಭಾಂಗಣದಲ್ಲಿರುವ ಮಹಿಷಾಸುರಮರ್ದಿನಿ



ಕತಗಾಲದ ಮಹಿಷಾಸುರಮರ್ದಿನಿ



ಗೋಕರ್ಣದ ಸ್ಮಶಾನಕಾಳಿ



ಕಲ್ಲಬ್ಬೆಯ ದುರ್ಗಿ



ಧಾರೇಶ್ವರದ ಸರಸ್ವತಿ



ಹೆಗಡೆ ಗೋಪಾಲಕೃಷ್ಣ



ಗೋಕರ್ಣದ ವೆಂಕಟ್ರಮಣ



ಮೊರ್ಸೆ ವಿಷ್ಣು



ಮೂರುರು ವಿಷ್ಣು



ಊಳ್ಳೂರು ಮಠದ ವಿಷ್ಣು



ಕುಮಟಾದ ಶಂಕರನಾರಾಯಣ



ಯಾಣದ ಗೋಪಾಲಕೃಷ್ಣ



ಕೋಡಕಣಿ ನಂದಿ



ಬಂಗಣೆ ನಂದಿ



ಕತಗಾಲ ನಿಷಿಧಿಗಲ್ಲು



ಬಸದಿಗದ್ದೆಯ ಶಾಂತೇಶ್ವರ ಸ್ವಾಮಿ



ನುಶಿಕೋಟೆ ತಾಮ್ರಪಟ ಶಾಸನ



ವಾಲಗಳ್ಳಿ ಆದೇಶ್ವರ



ದೀವಗಿ ವೀರಗಲ್ಲು



ಸಾಂತಗಲ್ ವೀರಗಲ್ಲು



ಹಳಕಾರ ವೀರಗಲ್ಲು



ಹನೇಹಳ್ಳಿ ಸತಿಗಲ್ಲು



ಕೋನಳ್ಳಿಯ ವೀರಗಲ್ಲು ಶಾಸನ



ಹೊಸಾಡ ವೀರಗಲ್ಲು ಶಾಸನ



ಹರವಳ್ಳಿ ವೀರಗಲ್ಲು



ಶಿರಗುಂಜಿ ಸತಿಗಲ್ಲು



ಸಾಂತಗಲ್ಲ ವೀರಗಲ್ಲು